# ಮಾನವಿಕ ಕರ್ಣಾಟಕ

ಸಂಪುಟ ೧೬ ಸಂಚಿಕೆ ೧

UNIVERSITY OF MYSORE

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೫

# ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

29/12/86

# ಮಾನವಿಕ ಕರ್ನಾಟಕ

PATTAR

ಸಂಪುಟ ೧೬ ಸಂಚಿಕೆ ೧

ದೇವೇಂದ್ರಕುಮಾರ. ಪಿ. ಪತ್ತಾರ.

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೫

29-12-86
(by Post

MANAVIKA KARNATAKA, Kannada quarterly of the University of Mysore, Volume 16, Number 1, November 1985
Edited by Dr. B.K. Gururaja Rao



ಪ್ರಧಾನ ಸಂಪಾದಕರು

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ|| ಬಿ. ಕೆ. ಗುರುರಾಜರಾವ್

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2ನೇ ಕ್ರಾಸ್, ಮೈಸೂರು - 1

*ದೇವೇಂದ್ರಕುಮಾರ. ಶಹಾಪುರ

# ವಿಷಯ ಸೂಚಿಕೆ

## ಈ ಸಂಚಿಕೆಯ ಲೇಖಕರು

| | | |
|---|---|---|
| 1 | ಎಂ. ಎಸ್. ಸುಮಿತ್ರಾ | ಸಹಾಯಕ ಸಂಪಾದಕಿ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–6 |
| 2 | ಸೀತಾರಾಮ ಜಾಗೀರ್‌ದಾರ್ | ಸಹಾಯಕ ಶಾಸನ ಶಾಸ್ತ್ರಜ್ಞ, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–6 |
| 3 | ಎಚ್. ಆರ್. ರಘುನಾಥಭಟ್ಟ | ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ–3 |
| 4 | ಸಿ. ಎಸ್. ರಾಮಚಂದ್ರ | ಕನ್ನಡ ಅಧ್ಯಾಪಕರು, ಪ್ರಾದೇಶಿಕ ಶಿಕ್ಷಣ ಶಾಸ್ತ್ರ ಮಹಾವಿದ್ಯಾಲಯ, ಮೈಸೂರು–6 |
| 5 | ಬಿ. ಕೃಷ್ಣ | ತತ್ವಶಾಸ್ತ್ರ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು–5 |
| 6 | ಕೆ. ಕೆಂಪೇಗೌಡ | ಪ್ರವಾಚಕರು, ಭಾಷಾಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–6 |
| 7 | ಕೆ. ಯಶೋಧರ | ಅಧ್ಯಾಪಕಿ, ಶಿಕ್ಷಣಶಾಸ್ತ್ರ, ಮಾನಸಗಂಗೋತ್ರಿ, ಮೈಸೂರು–6 |
| 8 | ಸಿ. ಕುಸುಮಾಕರ ಹೆಬ್ಬಾರ | ಅಧ್ಯಾಪಕ, ವಾಣಿಜ್ಯ ಮತ್ತು ವ್ಯವಹಾರಾಡಳಿತ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199 |
| 9 | ಎಚ್. ಎಸ್. ಆನಂದರಾಮ್ ಮತ್ತು ಜಿ. ಕುಮಾರಪ್ಪ | ಕೇಂದ್ರೀಯ ಪರಾಮರ್ಶನ ಗ್ರಂಥಾಲಯ ಕಲ್ಕತ್ತ–700027 |
| 10 | ಸಿ. ಮಹಾದೇವ | ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು–6 |
| 11 | ನಗುವನಹಳ್ಳಿ ಪಿ. ರತ್ನ | ಸಂಶೋಧನ ಸಹಾಯಕಿ, ಹಸ್ತಪ್ರತಿ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–6 |
| 12 | ಯಮುನಾಬಾಯಿ ಆರ್. ರಾವ್ | ಶ್ರೀ, ೪೦೯, ೧೨ ನೆಯ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು–6 |

ಎಂ. ಎಸ್. ಸುಮಿತ್ರಾ

# ಡಾ॥ ಎ. ಎನ್. ನರಸಿಂಹಯ್ಯ (1890-1980)

ಬಹುಭಾಷಾ ವಿಶಾರದ, ಉದ್ದಾಮ ಜ್ಯೋತಿಷಿ, ಸಮಾಜ ಸೇವಾಸಕ್ತ, ಲೇಖಕ ನರಸಿಂಹಯ್ಯನವರು ಮೈಸೂರಿನ ವಿದ್ವಜ್ಜನರಿಗೆ ಸುಪರಿಚಿತರು. ಅವರಿಗೆ ಸಂಸ್ಕೃತದಲ್ಲಿ ಅಸಾಧಾರಣ ಪಾಂಡಿತ್ಯವಿತ್ತು. ವಿದ್ಯಾ ಭಂಡಾರದಂತಿದ್ದ ಅವರು ವಿನಯ ಶೀಲರೂ ಕೂಡ.

ನರಸಿಂಹಯ್ಯನವರು ಯಳಂದೂರು ತಾಲ್ಲೂಕು ಅಗರಂನಲ್ಲಿ 23-5-1890 ರಂದು ಜನಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವಿ ಗಳಿಸಿದ ನರಸಿಂಹಯ್ಯನವರು ಒಂದು ವರ್ಷ ತಿರುವನಂತಪುರದಲ್ಲಿ ಕಾನೂನು ವಿದ್ಯಾಭ್ಯಾಸ ಮಾಡಿದರು. ಅದನ್ನು ಬಿಟ್ಟು ಮದ್ರಾಸು ವಿಶ್ವವಿದ್ಯಾಲಯದ ಸಂಸ್ಕೃತ ಎಂ. ಎ. ಪರೀಕ್ಷೆಗೆ ಖಾಸಗಿಯಾಗಿ ಕುಳಿತು ತೇರ್ಗಡೆ ಹೊಂದಿದರು.

ವಿದೇಶ ವ್ಯಾಸಂಗ ಅವರ ಮನ ಸೆಳೆಯಿತು. 1931ರಲ್ಲಿ ಬರ್ಲಿನ್ ವಿಶ್ವ ವಿದ್ಯಾಲಯಕ್ಕೆ ಹೋದರಾದರೂ ಅವರು ಅಲ್ಲಿ ಇದ್ದುದು ಒಂದು ತಿಂಗಳು ಮಾತ್ರ. ಲಂಡನ್ನಿನ 'ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್'ಗೆ ಸೇರಿಕೊಂಡರು. 'ದಿ ಗ್ರಾಮರ್ ಆಫ್ ದಿ ಓಲ್ಡೆಸ್ಟ್ ಕ್ಯಾನರೀಸ್ ಇನ್‌ಸ್ಕ್ರಿಪ್ಷನ್ಸ್' (ಆರು ಮತ್ತು ಏಳನೇ ಶತಮಾನದ ಶಾಸನಗಳು) ಮಹಾಪ್ರಬಂಧವನ್ನು ಬರೆದು 1933ರಲ್ಲಿ ಪಿಎಚ್.ಡಿ. ಪದವಿ ಪಡೆದುಕೊಂಡರು. ವಿದೇಶದಲ್ಲಿ ಕನ್ನಡದ ವಿಚಾರವಾಗಿ ಮಹಾ ಪ್ರಬಂಧ ಬರೆದು ಪಿಎಚ್.ಡಿ. ಪದವಿ ಗಳಿಸಿದವರಲ್ಲಿ ಮೊದಲಿಗರಾದ ಹಿರಿಮೆ ಇವರದು. ಮೈಸೂರು ವಿಶ್ವವಿದ್ಯಾಲಯದವರು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ದ್ದಾರೆ. (1941)

ಈ ಮಹಾಪ್ರಬಂಧವನ್ನು ಬರೆಯಲು ಮಾರ್ಗದರ್ಶನ ಮಾಡಿದವರು ಶಾಲೆಯ ನಿರ್ದೇಶಕರಾಗಿದ್ದ ಸರ್ ರಾಲ್ಫ್ ಎಲ್.ಟರ್ನರ್.

ಮಹಾಪ್ರಬಂಧವನ್ನು ನರಸಿಂಹಯ್ಯನವರು ಮೂರು ಭಾಗಗಳನ್ನಾಗಿ ವಿಂಗಡಿಸಿ ಕೊಂಡಿದ್ದಾರೆ. ಮೊದಲನೆಯ ಭಾಗದಲ್ಲಿ ಎರಡು ಉಪವಿಭಾಗಗಳಿವೆ. ಮೊದಲ ಉಪ ವಿಭಾಗದಲ್ಲಿ ಸ್ವರ ಮತ್ತು ವ್ಯಂಜನ ಗುಂಪುಗಳು ಮತ್ತು ದೀರ್ಘ ವ್ಯಂಜನಗಳ ಬಗ್ಗೆ ಬರೆದಿದ್ದಾರೆ. ಎರಡನೇ ಉಪವಿಭಾಗದಲ್ಲಿ ನಾಮಪದಗಳು, ಗುಣವಾಚಕಗಳು, ಸರ್ವ

ನಾಮಗಳು, ಸಂಖ್ಯಾವಾಚಕಗಳು, ನಿಷ್ಪನ್ನ ನಾಮ ಪದಗಳ ರಚನೆ, ಕ್ರಿಯಾಪದಗಳು, ಕ್ರಿಯಾವಿಶೇಷಣಗಳು, ಸಮುಚ್ಚಯಗಳು ಮತ್ತು ಪದ (ಶಬ್ದ) ಕ್ರಮ ಇವುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಎರಡನೆಯ ಭಾಗ ಶಾಸನಗಳ ಮೂಲ ಪಾಠಗಳನ್ನು ಒಳಗೊಂಡಿದೆ. ಮೂರನೆಯದು ಸೂಚಿ, ಪರಿಶಿಷ್ಟಗಳ ಭಾಗ. ಪರಿಶಿಷ್ಟಗಳು ಹೀಗೆ ಬಂದಿವೆ; ಪದ್ಯ ಶಾಸನಗಳು, ಶಾಸನಗಳಲ್ಲಿ ಆಲಂಕಾರಿಕ ಶಬ್ದಗಳು, ಕನ್ನಡ ಶಾಸನಗಳಲ್ಲಿ ಸಂಸ್ಕೃತ ಪದ್ಯಗಳು, ಇಂಡೋ ಆರ್ಯನ್‌ನಿಂದ ಎರವಲು ಪಡೆದ ಪದಗಳು, ಕೊನೆಗೆ ಗ್ರಂಥ ಸೂಚಿ (Bibliography).

ಮಹಾಪ್ರಬಂಧದ ಎರಡನೆಯ ಭಾಗವಾಗಿ 'ವರ್ಡ್ ಆರ್ಡರ್ ಇನ್ ಸ್ಯಾನ್ಸ್ಕ್ರಿಟ್ ಪ್ರೋಸ್' ಎಂಬ ಗ್ರಂಥವನ್ನು ಬರೆದರು. ಆದರೆ ಅದು ಅಚ್ಚಾಗಿಲ್ಲ.

ಇವರ ಉದ್ಯೋಗ ಜೀವನ ಮರಿಮಲ್ಲಪ್ಪ ಶಾಲೆಯ ಉಪಾಧ್ಯಾಯ ವೃತ್ತಿಯಿಂದ ಆರಂಭವಾಯಿತು. ಟ್ರೈನಿಂಗ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದರು. ಇನ್ಸ್ಪೆಕ್ಟರ್ ಆಫ್ ಸ್ಕೂಲ್ಸ್ ಆಗಿದ್ದರಲ್ಲದೆ ಸೆಕ್ರೆಟರಿ ಆಫ್ ಟೆಕ್ಸ್ಟ್ ಬುಕ್ ಕಮಿಟಿ ಸಹಾ ಆಗಿದ್ದರು. ವಿದೇಶದಿಂದ ಮರಳಿದ ಮೇಲೆ ಮೈಸೂರು ವಿಶ್ವವಿದ್ಯಾಲಯ ಗ್ರಂಥಭಂಡಾರದ ಗ್ರಂಥಪಾಲರಾಗಿದ್ದು ಜೊತೆಗೆ ಭಾಷಾ ಶಾಸ್ತ್ರದ ಅಲ್ಪಾವಧಿ ಪ್ರಾಧ್ಯಾಪಕರೂ ಆಗಿದ್ದರು. ನಿವೃತ್ತಿಗೆ ಆರು ವರ್ಷ ಮುಂಚೆ ಸಂಸ್ಕೃತ ಮಹಾಪಾಠಶಾಲೆಯ ಪ್ರಾಚಾರ್ಯರಾಗಿದ್ದರು.

ತಮಿಳು ಅವರ ಮಾತೃ ಭಾಷೆ. ಅದಲ್ಲದೆ ಕನ್ನಡ, ತೆಲುಗು, ಸಂಸ್ಕೃತ, ಪಾಲಿ, ಪ್ರಾಕೃತ, ಮಲಯಾಳ, ಹಿಂದಿ, ಮರಾಠಿ, ಬಂಗಾಳಿ, ಜರ್ಮನ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಅನಾವೃತ ಪಾಂಡಿತ್ಯವಿತ್ತು. ಅವರು ಬಂಗಾಳೀ ಕಲಿತ ಪ್ರಸಂಗ ಸ್ವಾರಸ್ಯಕರವಾಗಿದೆ. ನರಸಿಂಹಯ್ಯನವರು ಒಮ್ಮೆ ಕಲ್ಕತ್ತಾಗೆ ಹೋಗಿದ್ದರು. ಬಂಗಾಳೀ ಕಲಿಯುವ ಆಸೆ ಅವರಿಗೆ ಆಯಿತು. ಪರಿಚಿತರೊಬ್ಬರನ್ನು ತಮಗೆ ಬಂಗಾಳೀ ಕಲಿಸುವಂತೆ ಕೇಳಿಕೊಂಡರು. ಆತ ನಿರಾಕರಿಸಿದ್ದು ನರಸಿಂಹಯ್ಯನವರಲ್ಲಿ ಛಲ ಉಂಟು ಮಾಡಿತು. ಬಂಗಾಳೀ ಬಾಲಬೋಧೆ ಕೊಂಡುತಂದರು. ಸ್ವಾಧ್ಯಯನ ಮಾಡಿ ಬಂಗಾಳಿಯಲ್ಲಿ ಎಷ್ಟು ಪರಿಣತಿ ಪಡೆದರೆಂದರೆ ಕಲ್ಕತ್ತಾ ವಿಶ್ವವಿದ್ಯಾಲಯದ ಪಿಎಚ್.ಡಿ ಮಹಾಪ್ರಬಂಧಗಳನ್ನು (ಬಂಗಾಳೀ) ಮೌಲ್ಯಮಾಪನಕ್ಕಾಗಿ ಇವರಿಗೆ ಕಳುಹಿಸುತ್ತಿದ್ದರು.

ಸಾಹಿತ್ಯ ರಚನೆಯತ್ತ ಇವರಿಗೆ ಒಲವಿತ್ತು. 'ಮನವೇ ಗಂಗಾ ಮನೆಯೇ ಕಾಶಿ, ಎಂಬ ಸಣ್ಣ ಕತೆ ಇವರ ಮೊದಲ ಬರೆಹ. ಕನ್ನಡ ಪ್ರಥಮ ವ್ಯಾಕರಣದ ಕರ್ತೃ ಇವರು 'ಶಿವ' ಎನ್ನುವ ಕಾವ್ಯನಾಮವನ್ನು ಇಟ್ಟುಕೊಂಡು 'ಶಿವನ ಕಾಗ್ದ' ರಚಿಸಿದ್ದಾರೆ. ಪುಸ್ತಕ ವಿಮರ್ಶೆಗಳು, ಭಾಸ್ಕರಾಚಾರ್ಯರನ್ನು ಕುರಿತು ಲೇಖನ ಮುಂತಾದ ಅನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ.

ಅನುವಾದದಲ್ಲಿ ಇವರು ಸಿದ್ಧಹಸ್ತರು. ಬಂಗಾಳದ ಖ್ಯಾತ ಸಾಹಿತಿ ಗಿರೀಶ್

ಚಂದ್ರಘೋಷರ 'ತಪೋಬಲ' ಅನುವಾದಿಸಿದ್ದಾರೆ. ಅಲ್ಲದೆ ರವೀಂದ್ರನಾಥ ಠಾಕೂರರ 'ಸಾಹಿತ್ಯ'ವನ್ನು ಭಾಷಾಂತರಿಸಿದ್ದಾರೆ. ಕಾವ್ಯಾಲಯದವರು ಇದರ ಪ್ರಕಾಶಕರು.

ಗ್ರಂಥಸಂಪಾದನೆಗೂ ನರಸಿಂಹಯ್ಯನವರು ಕೈ ಹಾಕಿದರು. ಕಳಲೆ ನಂಜರಾಜನ 'ಸಂಗೀತ ಗಂಗಾಧರ' ಹಾಗೂ 'ಶಿವಪಾದರೇಣುಕಾ ಸಹಸ್ರ'ಗಳನ್ನು ಸಂಪಾದಿಸಿದ್ದಾರೆ. ಪೂನಾದ ಡೆಕ್ಕನ್ ಕಾಲೇಜಿನವರು ಪ್ರಕಟಿಸಿದ 'ಕಾಶಕತ್ನ ಶಬ್ದಕಲಾಪಧಾತುಪಾಠಃ' ಎನ್ನುವ ಸಂಸ್ಕೃತ ನಿಘಂಟಿನ ಸಂಪಾದಕರು ಇವರು.

ಲಲಿತಾ ಸಹಸ್ರನಾಮಕ್ಕೆ ಭಾಸ್ಕರಾಚಾರ್ಯರು ಬರೆದಿದ್ದ ವ್ಯಾಖ್ಯಾನದ ಮೇಲೆ ಇವರು 'ಸೌಭಾಗ್ಯ ರತ್ನಾಕರ' ಎನ್ನುವ ಟೀಕೆ ಬರೆಯಲಾರಂಭಿಸಿದ್ದರು. ಆದರೆ ಅದನ್ನು ಪೂರ್ಣ ಮಾಡಲಿಲ್ಲ.

ತಮ್ಮದೇ ಆದ ರೀತಿಯಲ್ಲಿ ನರಸಿಂಹಯ್ಯನವರು ಸಮಾಜ ಸೇವೆ ಕೂಡಾ ಮಾಡಿದರು. ಪರವೂರಿನಿಂದ ತಮ್ಮ ಬಳಿ ಕಲಿಯಲು ಬಂದವರನ್ನು ಮನೆಯಲ್ಲೇ ಇರಿಸಿಕೊಂಡು ಆದರದಿಂದ ಊಟೋಪಚಾರ, ವಸತಿ ಕಲ್ಪಿಸಿಕೊಡುತ್ತಿದ್ದರು. ಸ್ನೇಹಿತರಲ್ಲಿ ಜಾತಿಭೇದ ಎಣಿಸುತ್ತಿರಲಿಲ್ಲ. ಬಡವರನ್ನು ಕನಿಕರದಿಂದ ಕಂಡು, ಕೈಲಾದಷ್ಟು ಸಹಾಯ ಮಾಡುತ್ತಿದ್ದರು.

ವಿದ್ಯಾದಾನಕ್ಕೆ ಅವರೆಂದೂ ಕೃಪಣತನ ಮಾಡಿದವರಲ್ಲ. ಪ್ರತಿಫಲಾಪೇಕ್ಷೆ ಇಲ್ಲದೆ, ಯಾರು ಬಂದು ಕೇಳಿದರೂ, ಹೇಳಿಕೊಡುತ್ತಿದ್ದರು. ತಮಗಾಗುವ ದೇಹಶ್ರಮವನ್ನು ಲೆಕ್ಕಿಸುತ್ತಿರಲಿಲ್ಲ.

ಅಷ್ಟೇ ಅಲ್ಲ, ಸದ್ವಿದ್ಯಾ ಪಾಠಶಾಲೆ, ಶಿಶುವಿಹಾರ, ಸಾರ್ವಜನಿಕ ಗ್ರಂಥಾಲಯ ಸಮಿತಿಗಳಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ತತ್ತ್ವನಿಷ್ಠ ಜೀವನ ಅವರದು. ಉಡುಪು ಸರಳ, ಎಲ್ಲದರಲ್ಲೂ ಅಚ್ಚುಕಟ್ಟು; ಕಾಲಕ್ಕೆ ಸರಿಯಾಗಿ ಕೆಲಸ ಮಾಡಬೇಕು ; ಮೈಗಳ್ಳತನವನ್ನು ಅವರು ಸಹಿಸುತ್ತಿರಲಿಲ್ಲ; ನಿಬಂಧನೆಗಳಿಗೊಳಪಟ್ಟು ನಡೆಯಬೇಕು ಎನ್ನುತ್ತಿದ್ದರು. ಅವರೆಂದೂ ಆಡಂಬರಪ್ರಿಯರಾಗಿರಲಿಲ್ಲ. ದೈವ ಭಕ್ತರು, ಜಪ ಮಾಡುತ್ತಿದ್ದರು.

'ಕೀಪ್ ಫಿಟ್' ಎನ್ನುವ ಮಾತಿನಲ್ಲಿ ಅಚಲ ನಂಬಿಕೆ ಇತ್ತು ಅವರಿಗೆ. ಕಾಲಕ್ಕೆ ಸರಿಯಾಗಿ ಕ್ಲುಪ್ತವಾಗಿ ಆಹಾರ ಸೇವನೆ, ಬಹುದೂರದವರೆಗೆ ತಿರುಗಾಡಿಕೊಂಡು ಬರುವುದು, ವ್ಯಾಯಾಮ ಎಲ್ಲವನ್ನೂ ಕ್ರಮತಪ್ಪದೆ ಮಾಡುತ್ತಿದ್ದರು. ತೊಂಬತ್ತನೆಯ ವರ್ಷದ ಹುಟ್ಟುಹಬ್ಬದ ದಿವಸವೇ 20-5-1980 ರಂದು ತೀವ್ರ ಹೃದಯಾಘಾತದಿಂದ ಅವರು ನಿಧನರಾದರು. ಇಂತಹ ಅದ್ವಿತೀಯ ವಿದ್ವಾಂಸರ ನಿಧನದಿಂದ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಿಂಚಿಮರೆಯಾದ ನಾಟಕಕಾರ 'ಸಂಸ' ಇವರ ತಮ್ಮ.

## ಕನ್ನಡದಲ್ಲಿ ಭಾಷಾಂತರಗಳು

ಕನ್ನಡ ಸಾಹಿತ್ಯ ತನ್ನ ಸಾವಿರ ವರ್ಷಗಳ ಇತಿಹಾಸದಲ್ಲಿ ಉದ್ದಕ್ಕೂ ಭಾಷಾಂತರಗಳಿಂದ ಪುಷ್ಟವಾಗಿದೆ. ಈ ಭಾಷಾಂತರ ಪರಂಪರೆಯನ್ನು ಕವಿರಾಜ ಮಾರ್ಗದ ಕಾಲದಿಂದಲೂ ಗುರುತಿಸಬಹುದು. ಹಿಂದೆ ಸಂಸ್ಕೃತ, ಪ್ರಾಕೃತಗಳಿಂದ, ಈ ಯುಗದಲ್ಲಿ ವಿಶೇಷವಾಗಿ ಇಂಗ್ಲಿಷಿನಿಂದ ಭಾಷಾಂತರಗಳು ಬಂದಿವೆ. ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಭಾಷಾಂತರವೆಂದು ಹೇಳುವುದುಂಟು. ಇದು ಪೂರ್ಣ ಸತ್ಯವಲ್ಲ. ಹಿಂದಿನ ಕನ್ನಡ ಕವಿಗಳು ಸಂಸ್ಕೃತ ಪ್ರಾಕೃತಗಳಿಂದ ವಸ್ತುವನ್ನು ಸ್ವೀಕರಿಸುತ್ತಿದ್ದರೆಂಬ ಬಹು ಸ್ಥೂಲವಾದ ಅರ್ಥದಲ್ಲಿ ಅವರ ಕೃತಿಗಳನ್ನು ಭಾಷಾಂತರವೆನ್ನಬಹುದು. ಆದರೆ ಅವರು ತಮ್ಮ ಪ್ರತಿಭೆ, ಸ್ವೋಪಜ್ಞತೆಗಳನ್ನು ತಮ್ಮ ಕಾವ್ಯದಲ್ಲಿ ಮೇಳವಿಸುತ್ತಿದ್ದರು. ಅವರಲ್ಲಿ ಭಾಷಾಂತರ ಎನ್ನುವುದು ಕೇವಲ ಒಂದು ಅಂಗವಾಗಿತ್ತಷ್ಟೆ. ಆದ್ದರಿಂದ ಹಿಂದಿನ ಕನ್ನಡ ಕಾವ್ಯಗಳನ್ನು ಬರಿಯ ಭಾಷಾಂತರಗಳೆನ್ನದೆ ಸ್ವತಂತ್ರ ಕೃತಿಗಳೆಂದೂ ಪರಿಗಣಿಸಬೇಕಾಗುತ್ತದೆ. ಪಂಪ, ಕುಮಾರ ವ್ಯಾಸರ ಭಾರತಗಳನ್ನು ಒಂದರ್ಥದಲ್ಲಿ ಭಾಷಾಂತರಗಳೆನ್ನಬಹುದಾದರೂ ಮತ್ತೊಂದು ದೃಷ್ಟಿಯಿಂದ ಅವು ಸ್ವತಂತ್ರ ಕಾವ್ಯಗಳೇ. ಇಂದು ಭಾಷಾಂತರವೆಂದರೆ ಯಾವ ನಿಷ್ಕೃಷ್ಟವಾದ, ಖಚಿತವಾದ ಕಲ್ಪನೆಯಿದೆಯೋ ಅದು ಹಿಂದಿನವರಿಗಿರಲಿಲ್ಲ. ಭಾಷಾಂತರಿಸುವುದು ಅವರ ಉದ್ದೇಶವಲ್ಲ. ಆದರೆ ಇಂದಿನ ಅರ್ಥದಲ್ಲಿ ಕೂಡ ಭಾಷಾಂತರದ ಅಂಶಗಳನ್ನು ಪ್ರಾಚೀನ ಕನ್ನಡ ಸಾಹಿತ್ಯ ವಿಪುಲವಾಗಿ ತೋರಿಸಿಕೊಡುತ್ತದೆ ಎಂಬುದು ಗಮನಾರ್ಹ ಸಂಗತಿ. ರೂಪಾಂತರ, ಭಾವಾನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ, ನಿಕಟಾನುವಾದ ಮುಂತಾದ ಬಗೆಗಳಿಗೆಲ್ಲ ಅದರಲ್ಲಿ ನಿದರ್ಶನಗಳಿವೆ. ನಮ್ಮ ಹಿಂದಿನ ಕವಿಗಳು ಯಾವುದೋ ಒಂದು ಆಕರವನ್ನು ಆಧಾರವಾಗಿಟ್ಟುಕೊಂಡಿದ್ದರೂ ಅದಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ವರ್ಣನಾವಸರದಲ್ಲಿ ನಾನಾ ಮೂಲಗಳಿಂದ ಅನುವಾದಿಸುವುದೂ ಉಂಟು ; ಒಟ್ಟಿನಲ್ಲಿ ಪ್ರಾಚೀನ ಕನ್ನಡ ಕೃತಿಗಳು ಸ್ಥೂಲವಾಗಿ ಅಂಶಶಃ ಭಾಷಾಂತರಗಳಾಗಿವೆ. ನಿಯತವಾದ ಅರ್ಥದಲ್ಲಿ ಅಸ್ಸಟ ಭಾಷಾಂತರಗಳನ್ನು ನಾವು ನೋಡುವುದು ಆಧುನಿಕ ಕಾಲದಲ್ಲೇ.

ಕರ್ನಾಟಕ ವಿಷಯ ವಿಶ್ವಕೋಶ
ಪುಟ ೧೬೦–೬೧

ಶ್ರೀ ಸೀತಾರಾಮ ಜಾಗೀರ್‌ದಾರ್

ಡಾ। ಎಚ್. ಆರ್. ರಘುನಾಥ ಭಟ್

# ಕನ್ನಡ ಶಾಸನದಲ್ಲಿ ಜಿನಸೇನ ಹಾಗೂ ಗುಣಭದ್ರರು

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಕ್ಕೆಂದು ಹಾಸನ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನ ಗಂಡಸಿಗ್ರಾಮಕ್ಕೆ ಹೋದಾಗ ನಮಗೊಂದು ಆಶ್ಚರ್ಯಕಾದಿತ್ತು.[1] ಸ್ವಲ್ಪ ತೀವ್ರವಾಗಿಯೇ ಆ ಊರನ್ನು ತಲುಪಿದ ನಾವು ಶಂಭುಲಿಂಗೇಶ್ವರನ ದರ್ಶನಕ್ಕೆಂದು ಮೊದಲು ದೇಗುಲಕ್ಕೆ ಹೋದೆವು. ಅದು ಪ್ರಾಚೀನ ದೇಗುಲವೆಂದು ಸ್ಥಳೀಯ ಪ್ರತೀತಿ. ಅದರ ಬಾಗಿಲುವಾಡ, ಸ್ತಂಭ ಮುಂತಾದವನ್ನು ಸೂಕ್ಷ್ಮವಾಗಿ ಪರಿಶೀಲಿ ಮತ್ತೆ ದೇಗುಲದ ಒಳಗೆ ನಡೆದ ನಮ್ಮನ್ನು ನಮ್ಮ ತಲೆಯ ಮೇಗಡೆಯೇ ಇದ್ದ ತೊಲೆಯೊಂದು ಆಕರ್ಷಿಸಿತು. ಅದಕ್ಕೆ ಸುಣ್ಣ ಬಳಿದಿದ್ದರೂ ಕಾಣುತ್ತಿದ್ದ ಲಿಪಿ ಸಾಕಷ್ಟು ಪ್ರಾಚೀನವಾದದ್ದೆಂದು ಸ್ಪಷ್ಟವಾಗಿತ್ತು. ಈ ಶಾಸನವನ್ನು ಬಿ. ಎಲ್. ರೈಸರು ಈ ಹಿಂದೆಯೇ ಸಂಪಾದಿಸಿದ್ದು ಎಪಿಗ್ರಾಫಿಯ ಕರ್ನಾಟಿಕಾದ ಐದನೆಯ ಸಂಪುಟದಲ್ಲಿ ಪ್ರಕಟಿಸಿದ್ದರು.[2] ಅವರು ಅದನ್ನು ಸಂಪಾದಿಸುವಾಗ ಶಾಸನ ಸ್ತಂಭ ಗಂಡಸಿಗ್ರಾಮದ ಉತ್ತರದ ಬಾಗಿಲಬಳಿ ಇತ್ತು. ಈ ದೇಗುಲವನ್ನು ಜೀರ್ಣೋದ್ಧಾರ ಮಾಡುವ ಕಾಲಕ್ಕೆ ಆ ಶಾಸನಕಂಬವನ್ನೇ ತಂದು, ಅಲ್ಲಲ್ಲಿ ಪೊಳೆಯಾಡಿಸಿ ಕಳಾಸಕ್ಕೆ ಒಗ್ಗುವಂತೆಮಾಡಿ, ತೊಲೆಯಾಗಿ ಬಳಸಿಕೊಳ್ಳಲಾಗಿದೆ! ಹೀಗಾಗಿ ಶಾಸನದ ಎರಡು ಮೈಯ ಪಾಠಗಳು ಮಾತ್ರ ನೋಡಸಿಗುತ್ತವೆ. ಉಳಿದ ಮೈಯ ಪಾಠವನ್ನು ಪಡೆಯುವುದು ಸಧ್ಯಕ್ಕೆ ಸಾಧ್ಯವಾಗಲಿಲ್ಲ. ನಮಗೆ ಗೋಚರಿಸುವ ಶಾಸನಪಾಠದ ಪಡಿಯಚ್ಚನ್ನು ಪರಿಶ್ರಮದಿಂದ ತೆಗೆದುಕೊಂಡು ಓದಲು ಆರಂಭಿಸಿದಾಗ ನಮ್ಮ ಕುತೂಹಲ ಇನ್ನಷ್ಟು ಕೆರಳಿತು. ಬಿ. ಎಲ್. ರೈಸರು ಶಾಸನದ ಪಾಠವನ್ನು[3] ಹಾಗೂ ಕಾಲವನ್ನು ಅಷ್ಟು ಸರಿಯಾಗಿ ನಿರ್ಧರಿಸಲಿಲ್ಲ ಎಂಬುದು ತಿಳಿದುಬಂತು. 970 ಕ್ರಿಸ್ತಶಕ ರದ್ದೆಂದು ತಿಳಿದ ರೈಸರು ನೀಡಿದ ಶಾಸನ ಪಾಠ ಇಂತಿದೆ :

**ಮುಂಭಾಗ**

1. ಶ್ವರಣನ . . . . .
2. ಸಮೇತರಪ್ಪ . .
3. ಜಿನಸೇನ ಭ . . .
4. ಸಿಮ್ಮರ್ ಗೊಣ . . .

5. ದೇವರವರ ಸಿ . . .
6. ಕಾದಬ್ಬೆ ಕನ್ತಿಯ . . .
7. ಆರನ್ವಯ ಮೆ
8. ಸ್ವಸ್ತಿ ಸತ್ಯವಾಕ್ಯ
9. ಕೊಙ್ಗುಣಿ ವರ್ಮ್ಮ ಧ
10. ವರ್ಮ್ಮ ಮಹಾರಾಜಾ

ಹಿಂಭಾಗ

14. ಕಾದಬ್ಬೆ ಕನ್ತಿ
15. ಯ ಈ ಬಾಸ
16. ಯ್ಯ ಬಲ್ಲಹ
17. ನ ಬೆಸದೊಳು
18. ವಾವಿಗ
19. . . ಬಹ
20. . . . . . . . .

(ಎರಡು ಪಂಕ್ತಿಗಳು ಹೋಗಿವೆ)

ಈ ಶಾಸನದ ಒಂದು ಮರು ವಿಶ್ಲೇಷಣೆಯನ್ನು ಮಾಡಿ, ಅವರ ಕಾಲ ಮತ್ತು ಮಹತ್ವವನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ:

ಜಿನಸೇನ–ಗುಣಭದ್ರ–ಈ ಯಮಳರು ಜೈನ ಮಹಾಪುರಾಣವನ್ನು (ಜಿನಸೇನ–ಪೂರ್ವಪುರಾಣ, ಗುಣಭದ್ರ–ಉತ್ತರ ಪುರಾಣ) ಸಂಸ್ಕೃತದಲ್ಲಿ ವಿಸ್ತೃತವಾಗಿ, ಸುಂದರವಾಗಿ ರಚಿಸಿದ ಮಹನೀಯರು. ಕನ್ನಡದ ಆದಿಕವಿ ಎನಿಸಿಕೊಂಡ ಆದಿಪುರಾಣದ ಕರ್ತೃ ಪಂಪ ತನ್ನ ಕಾವ್ಯದ ವಸ್ತುವನ್ನು ಎತ್ತಿಕೊಂಡುದ್ದು ವಿಶೇಷವಾಗಿ ಜಿನಸೇನರ ಸಂಸ್ಕೃತ ಕೃತಿಯಾದ ಪೂರ್ವಪುರಾಣ ಕಾವ್ಯದಿಂದ.

ಪುರುದೇವಾದಿ ಜಿನೇಂದ್ರಮಾಳೆಗಣ ಭೃತ್ಸಂತಾನಮೆಂದೀಪರಂ
ಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯಪರ್ಯಂತಮಾ
ಗಿರೆ ಬಂದೀಕಥೆ ಗುಣ್ಪುವೆತ್ತುದವರುಂ ಜ್ಞಾನರ್ಥಿಸಂಪನ್ನರಿಂ
ದಿರದಾಂ ಧೃಷ್ಟನೆನೀ ಕಥಾಬ್ಧಿಯುಮನೇನೀಸಲ್ಕನಂದಂದೆನೋ ||4

ಚಾವುಂಡರಾಯ ತಾನು ತ್ರಿಷಷ್ಟಿಲಕ್ಷಣಮಹಾಪುರಾಣ ಗ್ರಂಥವನ್ನು ಇವರ ಸಂಸ್ಕೃತ ಕೃತಿಯಿಂದಲೇ ಅನುವಾದಿಸಿ ಕನ್ನಡದಲ್ಲಿ ಬರೆದುದಾಗಿ ತಿಳಿಸಿದ್ದಾನೆ:

ಕವಿಪರಮೇಶ್ವರರ್ ಒರೆದುದಂ ಜಿನಸೇನ ಮಹಾಮುನೀಶರೀ
ಯುವಸಿಗೆ ಪೇಳ್ದು ಮಾಣೆ ಗುಣಭದ್ರ ಮುನೀಶ್ವರರೆಯ್ದೆ ಪೇಳ್ದುಪ
ಲ್ಲವಿಸಿದುದಂ ತ್ರಿಷಷ್ಟಿಪುರುಷ ಪ್ರತಿಬದ್ಧ ಪುರಾಣಮಂ ಮಹೋ
ತ್ಸವದೊಳೆ ಭವ್ಯ ಕೋಟಿಗಱಿಪುಲ್ ಒರೆದಂ ಗುಣರತ್ನ ಭೂಷಣಂ ||5

ಹೀಗೆ ಜಿನಸೇನ–ಗುಣಭದ್ರಯತಿಪುಂಗವರನ್ನು ಸ್ಮರಿಸದ ಜೈನ ಆಸ್ತಿಕರು ವಿರಳವೆನ್ನಬಹುದು. (ಪ್ರಾಯಶಃ ಜೈನಲೇಖಕರು ಅನಂತರದಲ್ಲಿ ಒಬ್ಬರಲ್ಲ ಒಬ್ಬ ಖ್ಯಾತಯತಿಗೆ ನಮಿಸದೆ ತಮ್ಮ ಗ್ರಂಥಗಳನ್ನು ಬರೆದು ಮುಗಿಸಿಲ್ಲವೇನೋ.6)

ಗುಣಭದ್ರರನ್ನು ಕಾವ್ಯಾವಲೋಕನ ಹಾಗೂ ಶಬ್ದಮಣಿದರ್ಪಣಗಳಲ್ಲೂ ಕ್ರಮವಾಗಿ ಹೀಗೆ ಸ್ತುತಿಸಲಾಗಿದೆ :

ಕಿಡಿಗಳ್ ಜಾತಿಜರಾದಿಗಳ್ಗೆ ದುರಘವ್ರಾತಾಯುಧಕ್ಕಳ್ಕದು
ರ್ಕುಡಿಗಳ್ ಪುಣ್ಯದ ಬೀತು ಬಿಟ್ಟಗುಡಿಗಳ್ ಧರ್ಮಾರ್ಥಿಗಳ್ಗಪ್ಪ ಕೈ
ಪಿಡಿಗಳ್ ಜೈನಗ್ರಹಕ್ಕೆ ಸಿಲ್ಕಿಪಡಿಗಳ್ ಸಂಸಾರವಾರಾಶಿಯಾ
ತಡಿಗಳ್ ಶ್ರೀ ಗುಣಭದ್ರದೇವರಡಿಗಳ್ ನಿಲ್ಕೆಮ್ಮ ಹೃತ್ಪದ್ಮದೊಳ್ ||7

ಬಲ್ಲಿದು ಬಲ್ಲವಾಡಿ ನೆಜಿಅನಂಬಿದಾರ್ಹತಮಂ ಜಿನೇಂದ್ರನಂ
ತಿರ್ದ ಮಹಾಪುರಾಣಕವಿಗಳ್‌ಗುರುಗಳ್ ಗುಣಭದ್ರದೇವರುಂ
ತಿರ್ದಿದರೆನ್ನ ಪೇಟ್ದ ಕೃತಿಯಂ ಕೃತಿಬಂಧನುನಾವ ದೋಷಮಂ
ಪೊರ್ದದು ಪೊರ್ದದೆಂತಣಮೆ ಪಾಪದಸಂತತಿ ವಾರಣಾಸಿಯಂ ||8

ಈ ಕೆಲಪದ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಗುಣಭದ್ರದೇವರು ಕರ್ನಾಟಕದಲ್ಲಿ ಕನ್ನಡ ಜನತೆಯಲ್ಲಿ ವಿಶೇಷ ಆದರಕ್ಕೆ ಪಾತ್ರರಾಗಿದ್ದರೆಂದು ತಿಳಿದುಬಂದೀತು. ಅವರ ಸಮಕಾಲೀನ ಕನ್ನಡ ಕೃತಿಗಳು ಉಳಿದು ಬರದೆ ಇದ್ದುದು ಒಂದು ದೊಡ್ಡ ಹಾನಿ. ಹಾಗೆಯೇ ಇನ್ನೊಂದು ದೊಡ್ಡ ನಷ್ಟವೆಂದರೆ ಈಗ ನೋಡಸಿಗುವ ಗಂಡಸಿಯ ಶಾಸನ ತ್ರುಟಿತವಾಗಿರುವುದು ಹಾಗೂ ಅದು ತೊಲೆಯಾಗಿ ಹೋಗಿದ್ದರಿಂದ ಉಳಿದ ಭಾಗ ನೋಡಸಿಗದಿರುವುದು. ಉಪಲಬ್ಧ ಶಾಸನದ ಪಡಿಯಚ್ಚನ್ನಾಧರಿಸಿ ಓದಿದ ಪರಿಷ್ಕೃತ ಪಾಠವು ಹೀಗಿದೆ.9

| ಮುಂಭಾಗ | ಬದಿಭಾಗ |
|---|---|
| 1. ಸಿಷ್ಯರ್ ಗೊಣ [ಭ] . | 1. ಕಾಡಬ್ಬೆಕನ್ತಿ |
| 2. ದೇವರವರ ಸಿ [ಷ್ಯ] . | 2. ಯರು ಬಾಸ |
| 3. ಕಾಡಬ್ಬೆ ಕನ್ತಿಯ . . . | 3. ಯ್ಯ ಬಲ್ಲಹ |
| 4. . ರನ್ಪಯ ಮೇ [ಣ್ಟೆ] . | 4. [ರ] ಬೆಸದೊಳೆ |
| 5. ಸ್ವಸ್ತಿ ಸತ್ಯವಾಕ್ಯ | 5. . . ವಾವಿಗೆ |
| 6. ಕೊಜಿಙ್ಗೊಣಿ ವರ್ಮ್ಮರ ಧ | 6. ವಿ ಬಾದವೆ |
| 7. ರ್ಮ್ಮ . . . . . | 7. . . . . . . . . |

ಬಿ. ಎಲ್. ರೈಸರು ಶಾಸನ ಕಾಲ ನಿರ್ಧರಿಸುವಲ್ಲಿ ತಪ್ಪಿದ್ದರೂ ಅಂದು ಈ ಶಾಸನವನು, ಸಂಪಾದಿಸದೆ ಹೋಗಿದ್ದಿದ್ದರೆ ಇಲ್ಲಿನ ಗುಣಭದ್ರದೇವರ ಬಗೆಗೆ ಇದಮಿತ್ಥಂ ಎಂದು ಹೇಳಲೂ ಕಷ್ಟಸಾಧ್ಯವಾಗುತ್ತಿತ್ತೇನೊ. ಗಂಡಸಿ ಶಾಸನೋಕ್ತ ಜಿನಸೇನ-ಗುಣಭದ್ರರು ಜೈನಪರಂಪರೆಯಲ್ಲೇ ಪ್ರಸಿದ್ಧರಾದವರು. ಇಲ್ಲಿ ಬರುವ ಗುಣಭದ್ರರ ಶಿಷ್ಯತಿ

ಕಾಡಬ್ಬೆಕನ್ತಿ 'ಅನ್ವಯ ಮೇಣ್ಟಿ'ಯಾಗಿದ್ದು, ಆರ್ಯನಾಮಿಕಾ (ಕಸ್ತಿಯುರ) ಸಮುದಾಯಕ್ಕೇ ಮುಖ್ಯಸ್ಥಳಾಗಿದ್ದಳೆಂದು ತೋರುತ್ತದೆ. ಆದರೆ ಈ ಶಾಸನದಲ್ಲಿ ಗುಣಭದ್ರರ ಉಲ್ಲೇಖನೊಂದಿಗೆ ಅವರ ಪ್ರಿಯ ಶಿಷ್ಯ ಲೋಕಸೇನರನ್ನು ಹೆಸರಿಸಿಲ್ಲದಿರುವುದು ಗಮನಾರ್ಹವಾಗಿದೆ. ಕಾಡಬ್ಬೆಕನ್ತಿ ಲೋಕಸೇನಯತಿಗಳಿಗೆ ಶಿಷ್ಯತಿಯಾಗಿದ್ದಿಲ್ಲವಾದ್ದರಿಂದ ಹೀಗಾಗಿರಬಹುದು. ಅದೇನಿದ್ದರೂ ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿ ಜೈನ ಮಹಾಪುರಾಣವನ್ನು ಆನೆಯ ಮೇಲಿಟ್ಟು ಮೆರೆಸಿದ ಈ ಲೋಕಸೇನ ಯತಿಸಮೂಹದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾನೆ. ಒಬ್ಬ ಯತಿಯ ಶಿಷ್ಯನಾಗಿದ್ದವನು ಬೆಳೆದು ಶ್ರೇಷ್ಠ ಯತಿ ಎನ್ನಿಸಿಕೊಳ್ಳಬೇಕಾದರೆ ಆತ ಸಾಕಷ್ಟು ಪ್ರೌಢನಾಗಿರಬೇಕಲ್ಲವೆ? (ಕನಿಷ್ಠ ಇಪತ್ತೈದು ವರ್ಷಗಳಷ್ಟಾದರೂ ವಯಸ್ಸಿನ ವ್ಯಕ್ತಿಯಾಗಿರಬೇಕು) ಕ್ರಿ.ಶ. 878ರಲ್ಲಿ ಮಹಾಪುರಾಣವನ್ನು ಮೆರೆಸಿದ ಘಟನೆ ಸ್ಪಷ್ಟವಾಗಿದೆ.[10] ಇದಕ್ಕಿಂತ ಇಪ್ಪತ್ತೈದು ವರ್ಷಗಳಷ್ಟು ಹಿಂದೆ (ಅಂದರೆ ಸುಮಾರು 853ರ ಎಡಬಲದಲ್ಲಿ) ಲೋಕಸೇನಯತಿ ಜನಿಸಿದ್ದಿರಬೇಕು. ಆತನೂ ಮಹಾಪುರಾಣವನ್ನು ಬರೆಯುವಲ್ಲಿ ಸಹಾಯಕನಾಗಿದ್ದನೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಂಡರೆ,[11] ಕ್ರಿ.ಶ. 878ರ ಹೊತ್ತಿಗಾಗಲೆ ಈತ ಸಾಕಷ್ಟು ಪ್ರೌಢ ವ್ಯಕ್ತಿಯಾಗಿದ್ದಿರಬೇಕೆಂದು ಭಾವಿಸಬಹುದು.

ಇನ್ನು ಜಿನಸೇನರ ಪ್ರಸಕ್ತಿ ಇಲ್ಲಿ ಪ್ರಾಸಂಗಿಕವಾಗಿ ಬಂದಿರುವುದರಿಂದ ಅವರು ಆ ಕಾಲಕ್ಕಾಗಲೇ ನಿರ್ವಾಣಪಡೆದಿದ್ದಿರಬಹುದೆಂದೂ ಅನ್ನಿಸುತ್ತದೆ.

ಈ ಶಾಸನದಲ್ಲಿ ಬರುವ ಸತ್ಯವಾಕ್ಯ ರಾಚಮಲ್ಲ ಕ್ರಿ.ಶ. 843ಕ್ಕೂ ಹಿಂದೆ ಇದ್ದ ರಾಚಮಲ್ಲ-I (816-843) ನಾಗಿರಬಹುದು. ಇಲ್ಲಿರುವ 'ಬಲ್ಲಹ' ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನಾಗಿರಬಹುದು. ಈ ಎಲ್ಲ ಕಾರಣಗಳಿಂದಾಗಿ ಪ್ರಸ್ತುತ ಶಾಸನದ ಕಾಲಾವಧಿ ಕ್ರಿ.ಶ. ಸುಮಾರು 837-43ರ ಮಧ್ಯದಲ್ಲಿರಬಹುದೆಂದು ಹೇಳಬಹುದು.

ಜಿನಸೇನ-ಗುಣಭದ್ರಯತಿದ್ವಯರ ಮತ್ತೊಂದು ಸಮಕಾಲೀನ ಶಿಲಾಶಾಸನ ಇದುವರೆಗೂ ದೊರಕದೆ ಇದ್ದ ಹಿನ್ನೆಲೆಯಲ್ಲಿ ಈಗ ವಿಶ್ಲೇಷಿಸಿರುವ ಗಂಡಸಿಯ ಈ ಕನ್ನಡ ಶಾಸನ ಜಿನಸೇನ-ಗುಣಭದ್ರರ ಜೀವನ ಚರಿತ್ರೆಯ ಮೇಲೆ ಹೊಸಬೆಳಕನ್ನು ಚೆಲ್ಲುವಂಥದ್ದಾ ದೆ.

## ಅಡಿ ಟಿಪ್ಪಣಿಗಳು

1. ದಿನಾಂಕ 23-8-82ರಂದು ಪ್ರಚಾರೋಪನ್ಯಾಸ ನೀಡಲು ಕಳಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೂ, ಅಂದು ಗಂಡಸಿಯಲ್ಲಿ ಸಹಕರಿಸಿದ ಶಂಭುಲಿಂಗೇಶ್ವರ ಪ್ರೌಢಶಾಲೆಯ ಮುಖ್ಯ ಹಾಗೂ ಇತರ ಉಪಾಧ್ಯಾಯರಿಗೂ ನಮ್ಮ ಕೃತಜ್ಞತೆಗಳು.
2. ನೋಡಿ ಎ.ಕ. V ಅರಸಿಕೆರೆ-೧೬೪.

3. ಅದೇ ಪು. ೫೫೦ (ಕನ್ನಡ), ಪು. ೧೮೧ (ಇಂಗ್ಲಿಷ್).
4. ನರಸಿಂಹಾಚಾರ್, ಎಸ್. ಜಿ. (ಸಂ.), ಆದಿಪುರಾಣಂ, ಮೈಸೂರು ೧೯೦೦, ೮, ೧-೩೫ ಪು. ೬
5. ಕಮಲಾಹಂಪನಾ ಮತ್ತು ಶೇಷಗಿರಿ ಕೆ. ಆರ್. (ಸಂ.), ಚಾವುಂಡರಾಯ ಪುರಾಣಂ ಅಥವಾ ತ್ರಿಷಷ್ಟಿ ಲಕ್ಷಣ ಮಹಾ ಪುರಾಣಂ, ಬೆಂಗಳೂರು, ೧೯೮೩, ಪು. ೭.
6. ಕ್ರಿ.ಶ. ೯-೧೦ನೆಯ ಶತಮಾನದಲ್ಲಿ ಯಾಪನೀಯರು ಬೇರೆ ಪಂಥದವ ರಂತೆ ವರ್ತಿಸುತ್ತಿದ್ದಾಗ ಈ ರೂಢಿ ನೋಡಸಿಗದು.
7. ಕಾವ್ಯಾವಲೋಕನಂ (ಮೈಸೂರು ವಿಶ್ವವಿದ್ಯಾನಿಲಯ) ತೃತೀಯ ಮುದ್ರಣ ೧೯೬೭, ಪದ್ಯ ೮೯, ಪು. ೨೨.
8. ಭೀಮಸೇನರಾವ್ ಡಿ. ಕೆ. (ಸಂ.) ಶಬ್ದಮಣಿದರ್ಪಣಂ, ಮೈಸೂರು ೧೯೭೭, ಪು. xvii, ೫೧.
9. ಶಾಸನದ ಪಡಿಯಚ್ಚನ್ನಾಧರಿಸಿ ಓದಲಾಗಿದೆ.
10. ನೋಡಿ, ಉತ್ತರಪುರಾಣ (ಪುಷ್ಟಿಕಾಗದ್ಯ)
(ಇದರ ಕಾಲ ಕ್ರಿ.ಶ. ೮೭೮ಕ್ಕೂ ಮುಂಚೆ ಎಂಬುದನ್ನು ಪಂಡಿತ ನಾಥೂರಾಮ ಪ್ರೇಮಿಯವರು ನಿರ್ಣಯಿಸಿದ್ದಾರೆ, ನೋಡಿ, ಜೈನ ಸಾಹಿತ್ಯ ಔರ್ ಇತಿಹಾಸ್, ದೆಹಲಿ, ೧೯೫೬ ಪು. ೧೪೧). Srikanthas astri S., *Sources of Karnataka History*, Vol. I, Mysore, 1940, P. 109.
11. ವಿದಿತ ಸಕಲಶಾಸ್ತ್ರೋ ಲೋಕಸೇನೋ ಮುನೀಶಃ
ಕವಿರವಿಕಲವೃತ್ತಃ ತಸ್ಯ ಶಿಷ್ಯೇಷು ಮುಖ್ಯಃ
ಸತತಮಿಹಪುರಾಣೋ ಪ್ರಾಪ್ಯಸಾಹಾಯ್ಯಮುಚ್ಚೈಃ
ಗುರುವರ ಮುನೀಷಾಂ ಮಾನ್ಯತಾಂ ಸ್ವಸ್ಯಸದ್ಭಿಃ

## ಜಿನಸೇನಾಚಾರ್ಯ : ಸು. 838

ಪ್ರಸಿದ್ಧ ಜೈನ ಆಚಾರ್ಯರು ಹಾಗೂ ಕವಿಗಳು. ಸೇನ ಸಂಘಕ್ಕೆ ಸೇರಿದ ಇವರಿಂದ ಮುಂದೆ ಸೇನಾನ್ವಯ ಅಥವಾ ಸೇನಗಣ ತುಂಬ ಪ್ರಸಿದ್ಧವಾಯಿತು. ಪಂಚಸ್ತೂಪಾನ್ವಯಕ್ಕೆ ಸೇರಿದ ವೀರಸೇನ ಇವರ ಗುರು. ತಮ್ಮ ಗುರುಗಳಂತೆ ಇವರ ವಿದ್ವತ್ತೆಯು ಅಗಾಧವೂ ವಿಶಾಲವೂ ಆಗಿತ್ತು. ಇವರು ಆಜನ್ಮ ಬ್ರಹ್ಮಚಾರಿಗಳಾಗಿದ್ದ ರೆಂದುಕೊಂಡು ತಮ್ಮ ಇಡೀ ಜೀವನವನ್ನು ವಿದ್ಯಾ ವ್ಯಾಸಂಗದಲ್ಲೂ ಸಮಾಜೋದ್ಧಾರ ದಲ್ಲೂ ಕಳೆದರು. ಕರ್ನಾಟಕ ಇವರ ಪ್ರಧಾನ ವಿಹಾರ ಕ್ಷೇತ್ರವಾಗಿತ್ತು. ವೀರಸೇನ ಮತ್ತು ಜಯಸೇನರಂಥ ವಿದ್ಯಾನಿಧಿಗಳಲ್ಲಿ ವಿದ್ಯಾಭ್ಯಾಸ ನಡೆಸಿದ ಇವರು ಚಿಕ್ಕಂದಿನಲ್ಲೆ ಸರ್ವಶಾಸ್ತ್ರಗಳಲ್ಲಿ ಅಸೀಮ ಪಾಂಡಿತ್ಯ ಪಡೆದಿದ್ದರು. ಪಾಂಡಿತ್ಯದ ಜತೆಗೆ ಪ್ರತಿಭಾ ಸಂಪತ್ತಿಯೂ ಇತ್ತು. ಇವರ ವಿದ್ವತ್ತು ಪ್ರತಿಭೆ ಕಾವ್ಯಶಕ್ತಿಯನ್ನು ಕುರಿತು ಇವರ ಸಮವಯಸ್ಕರೂ ಸಮಕಾಲೀನರೂ ಹರಿವಂಶ ಪುರಾಣದ ಕರ್ತೃವೂ ಪುನ್ನಾಟ ಸಂಘಕ್ಕೆ ಸೇರಿದ ಆಚಾರ್ಯರೂ ಆದ ಇನ್ನೊಬ್ಬ ಜಿನಸೇನರು ಪ್ರಶಂಸಿಸಿದ್ದಾರೆ. ರಾಷ್ಟ್ರಕೂಟ ದೊರೆ ಅಮೋಘವರ್ಷ (814-878) ಇವರ ಶಿಷ್ಯವರ್ಗದಲ್ಲಿ ಒಬ್ಬನಾಗಿದ್ದು ಈತ ಜಿನಸೇನಾಚಾರ್ಯರ ಪಾದಗಳಿಗೆ ವಂದನೆ ಮಾಡಿದ ದಿನವಂದು ತಾನು ಪುನೀತನಾದೆ ನೆಂದು ಭಾವಿಸುತ್ತಿದ್ದನೆಂದು ಉತ್ತರ ಪುರಾಣದ ಕರ್ತೃ ಗುಣಭದ್ರಾಚಾರ್ಯರು ಹೇಳಿ ದ್ದಾರೆ. ಪಾರ್ಶ್ವಾಭ್ಯುದಯ, ಜಯಧವಲಾ ಟೀಕೆ, ಪೂರ್ವ ಪುರಾಣ (ಆದಿ ಪುರಾಣ—) ಇವು ಜಿನಸೇನರ ಕೃತಿಗಳು.

ಕರ್ನಾಟಕ ವಿಷಯ ವಿಶ್ವಕೋಶ
ಪುಟ ೬೯೭

ಸಿ. ಎಸ್. ರಾಮಚಂದ್ರ

# ಸಂಕೇತಿ ಭಾಷೆ ಮತ್ತು ಜನಾಂಗ

ಸಂಕೇತಿ ಭಾಷೆ ಮತ್ತು ಜನಾಂಗದ ಇತಿಹಾಸವನ್ನೂ, ಸಾಂಸ್ಕೃತಿಕ ವಿವರವನ್ನೂ, ಸಂಕೇತಿ ಭಾಷೆಯ ಸಾಮಾನ್ಯ ವರ್ಗೀಕರಣವನ್ನೂ ಮತ್ತು ಮಹತ್ವವನ್ನೂ ಸ್ಥೂಲವಾಗಿ ವಿವರಿಸುವುದೇ ಪ್ರಸ್ತುತ ಲೇಖನದ ಉದ್ದೇಶ. ಮೂಲತಃ 'ಸಂಕೇತಿ' ಪದವು ಜನಾಂಗಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇಂದು 'ಸಂಕೇತಿ' ಪದವು 'ಸಂಕೇತಿ ಭಾಷೆ' ಮತ್ತು 'ಸಂಕೇತಿ ಜನಾಂಗವೆರಡನ್ನೂ ಪ್ರತಿನಿಧಿಸುತ್ತದೆ. ಯಾರು ತಮ್ಮ ಮಾತೃ ಭಾಷೆ ಸಂಕೇತಿಯನ್ನು ಮಾತನಾಡುತ್ತಾರೋ ಅವರೇ 'ಸಂಕೇತಿ'ಗಳು, ಅವರ ಭಾಷೆಯೇ 'ಸಂಕೇತಿ'.

## ಸಂಕೇತಿಗಳ ನೆಲೆಬೆಲೆ

ಇಂದಿಗೆ ಸುಮಾರು 700-800 ವರ್ಷಗಳ ಹಿಂದಿನ ಮಾತಿದು. ಈಗಿನ ತಮಿಳು ನಾಡಿನ ಮಧುರಾ ಜಿಲ್ಲೆಯ ಸಂಕೋಟಂ ಎಂಬ ಗ್ರಾಮದ ತಾಮ್ರಪರ್ಣಿ ಮತ್ತು ವೈಗೈ ನದಿಗಳ ದಂಡೆಯಲ್ಲಿದ್ದ ತಮಿಳು ಬ್ರಾಹ್ಮಣರೇ ಈ 'ಸಂಕೇತಿ'ಗಳು. ಅಂದು ದಕ್ಷಿಣ ದೇಶದಲ್ಲಿದ್ದ ಸಂಕೇತಿಗಳು ಪಾಂಡ್ಯರಾಜ್ಯದ ಪಶ್ಚಿಮ ತೀರದ ತಿರುವಾಂಕೂರು ಸಂಸ್ಥಾನದಿಂದ ಯಾವುದೋ ಸಾಮಾಜಿಕ ತಿಕ್ಕಾಟ, ಆರ್ಥಿಕ ಸಮಸ್ಯೆ ಮತ್ತು ಆಂತರಿಕ ಕಲಹ ಇತ್ಯಾದಿ ಕಾರಣಗಳಿಂದ ಮೈಸೂರು ಸಂಸ್ಥಾನಕ್ಕೆ ವಲಸೆ ಬಂದರು. ಈ ತಮಿಳು ಬ್ರಾಹ್ಮಣರನ್ನೇ ಸಂಕೇತಿಗಳೆಂದು ಕರೆಯಲು ಯಾವ ಸ್ಪಷ್ಟ ದಾಖಲೆಗಳೂ ದೊರೆತಿಲ್ಲ. ಆದರೂ ದೊರೆತಿರುವ ದಾಖಲೆಗಳಿಂದ ಇಷ್ಟನ್ನು ಮಾತ್ರ ಊಹಿಸಬಹುದು. "ಶಂಕೋಟಂ"ನಲ್ಲಿರುವ ತಮಿಳು ಬ್ರಾಹ್ಮಣರಾದ್ದರಿಂದಲೇ ಅವರು 'ಸಂಕೇತಿ'ಗಳು. ಸಂಕೇತಿಗಳು ಯಾಕಾಗಿ ವಲಸೆ ಬಂದರು ? ಯಾವಾಗ ಬಂದರು ? ಹೇಗಿತ್ತು ಅಂದು ಅಲ್ಲಿನ ಸಾಮಾಜಿಕ ರಾಜಕೀಯ_ಆರ್ಥಿಕ ಸ್ಥಿತಿಗತಿ ? ಅವರ ಐತಿಹಾಸಿಕ-ಸಾಂಸ್ಕೃತಿಕ ಜೀವನ—ಇತ್ಯಾದಿ ವಿವರಗಳ ಬಗ್ಗೆ ಸಂಶೋಧನೆ ಅಗತ್ಯವಾಗಿ ನಡೆಯಬೇಕಾಗಿದೆ.

ರೈ ಗೆಜಿಟಿಯರ್ ಅಸ್ಪಯ ಮತ್ತು ಬ್ರಿಟಿಷರು ಮತ್ತು ಮೈಸೂರು ಅರಸರುಗಳ ಸಹಾಯದಿಂದ ನಡೆಸಿದ ಜನಗಣತಿಯ ವರದಿಗಳ ಪ್ರಕಾರ ಸಂಕೇತಿಗಳು ತಮಿಳುನಾಡಿನ

ಮಧುರಾ, ತಿನ್ನವೇಲಿ ಜಿಲ್ಲೆಗಳಿಂದಲೂ, ತಿರವಾಂಕೂರು ಸಂಸ್ಥಾನದಿಂದಲೂ ಎರಡು ಪಂಗಡಗಳಾಗಿ, ಮೊದಲು 300 ಸಂಸಾರದವರ ಒಂದು ಪಂಗಡವೂ ಕೆಲವು ವರ್ಷಗಳ ತರುವಾಯ 200 ಸಂಸಾರದವರ ಇನ್ನೊಂದು ಪಂಗಡವೂ ಮೈಸೂರು ದೇಶಕ್ಕೆ ಕಾಲ್ನಡಿಗೆಯಿಂದಲೇ ಬಂದರೆಂದು ತಿಳಿದುಬರುತ್ತದೆ.

1871ರ ಮೈಸೂರು ಜನರಲ್ ಸೆನ್ಸಸ್ ರಿಪೋರ್ಟಿನಲ್ಲಿ ಎ. ಡಬ್ಲ್ಯು.ಸಿ.ಲಿಂಡ್ಸೆ ಸಂಕೇತಿ ಜನಾಂಗದ ಬಗ್ಗೆ ಬರೆದಿರುವ ಮಾತುಗಳೇ ಪ್ರಥಮ ಉಲ್ಲೇಖಗಳು. ಆತ ಆ ವರದಿಯಲ್ಲಿ ಸಂಕೇತಿಗಳಿಗೆ ಸಂಬಂಧಿಸಿದ ಕೆಲವು ಪ್ರಮುಖ ಅಂಶಗಳನ್ನು ದಾಖಲಿಸಿದ್ದಾನೆ. ಸಂಕೇತಿಗಳು ತಮಿಳರೆಂದೂ ಸ್ಮಾರ್ತಬ್ರಾಹ್ಮಣ ಗುಂಪಿಗೆ ಸೇರಿರುವರೆಂದೂ, ಮದ್ರಾಸ್ ಪ್ರಾಂತ್ಯದ ಮಧುರಾ (ಮಧುರೆ) ಜಿಲ್ಲೆಯಿಂದ ವಲಸೆ ಬಂದವರೆಂದೂ, ಅಶುದ್ಧ ತಮಿಳು ರೂಪದ ಭಾಷೆಯನ್ನು ಮಾತಾಡುವವರೆಂದೂ, ಅವರ ಸ್ತ್ರೀಯರು ವಿಶಿಷ್ಟ ರೀತಿಯಲ್ಲಿ ಸೀರೆಯನ್ನು ಉಡುವರೆಂದೂ, ಸಂಕೇತಿಗಳಲ್ಲಿ ಹೆಚ್ಚಾಗಿ ವೈದಿಕರಿರುವರೆಂದೂ, ಅವರು ವೇದಪಾರಂಗತರೆಂದೂ, ಕೌಶಿಕ ಸಂಕೇತಿ, ಬೆಟ್ಟದಪುರ ಸಂಕೇತಿ ಎಂಬ ಎರಡು ಪ್ರಧಾನ ಗುಂಪುಗಳಿವೆಯೆಂದೂ ಲಿಂಡ್ಸೆ ಅಭಿಪ್ರಾಯಪಟ್ಟಿದ್ದಾನೆ.

ಇ. ಥರ್ಸ್ಟನ್ (E. Thurston) ಎಂಬುವವನ 'ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ' ಎಂಬ ಪುಸ್ತಕದಲ್ಲಿನ 1891ರ ಮೈಸೂರು ಜನಗಣತಿಯ ವರದಿಯು ಸಂಕೇತಿಗಳ ಬಗ್ಗೆ ಕೆಲವು ಮಾಹಿತಿಯನ್ನು ತಿಳಿಸುತ್ತದೆ. ಅಂದು ಈ ಪಂಗಡದಲ್ಲಿ ಒಟ್ಟು 2522 ಸಂಕೇತಿಗಳಿದ್ದರು. ಪ್ರಮುಖವಾಗಿ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ನೆಲಸಿದ್ದರು. ಅಲ್ಲದೆ ಕಡೂರು, ಶಿವಮೊಗ್ಗಗಳಲ್ಲೂ ಕಂಡುಬರುತ್ತಾರೆ. ಬಹುಶಃ ಇವರು ದ್ರಾವಿಡ ಗುಂಪಿನಿಂದ ಬಂದವರು. ಇವರು ತಮಿಳರೆಂದೂ, ಆವರಾಡುವ ಮಾತು ಹೆಚ್ಚು ಕನ್ನಡ ಮಿಶ್ರವಾದದ್ದು ಎಂದೂ, ಸುಮಾರು 700 ವರ್ಷಗಳ ಹಿಂದೆ ಸುಮಾರು 1000 ಸ್ಮಾರ್ತ ಬ್ರಾಹ್ಮಣ ಕುಟುಂಬಗಳು ಕಂಚಿ ಸುತ್ತಮುತ್ತಲ ಪ್ರದೇಶದ ಸಮಕಾಲೀನ ರಾಜಕೀಯ ಉಪಟಳವನ್ನು ತಡೆಯಲಾಗದೆ ಎರಡು ಗುಂಪಾಗಿ ಮೈಸೂರು ಪ್ರಾಂತ್ಯದ ಕಡೆಗೆ ವಲಸೆ ಬಂದರೆಂದೂ ತಿಳಿಸಿದ್ದಾರೆ. ಮಾರ್ಗ ಮಧ್ಯದಲ್ಲಿ ದರೋಡೆಕೋರರ ಧಾಳಿಗೆ ತುತ್ತಾದ ಇವರಲ್ಲಿ, ಬಲಿಷ್ಠವಾದ ದೊಡ್ಡ ಪಂಗಡ (ಸುಮಾರು 700 ಸಂಸಾರದವರು) ಸುರಕ್ಷಿತವಾಗಿ ಬಂದು ಹಾಸನದ ಹತ್ತಿರ ಕೌಶಿಕ ಎಂಬ ಗ್ರಾಮದಲ್ಲಿ ನೆಲೆನಿಂತರು. ಅವರೇ ಕೌಶಿಕ ಸಂಕೇತಿಗಳು. ಸುಮಾರು 12 ವರ್ಷಗಳ ತರುವಾಯ 300 ಸಂಸಾರದ ಚಿಕ್ಕಪಂಗಡವು ಮೈಸೂರು ಜಿಲ್ಲೆಯ ಆಗಿನ ಹುಣಸೂರು ತಾಲ್ಲೂಕಿನ ಬೆಟ್ಟದಪುರ ಎಂಬ ಊರಲ್ಲಿ ನೆಲಸಿದರು. ಅವರೇ ಬೆಟ್ಟದಪುರ ಸಂಕೇತಿಗಳು. ಇವೆರಡು ಪಂಗಡಗಳ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಯು ಒಂದೇ, ಆದರೆ ಇವರಲ್ಲಿ ವಿವಾಹ ಸಂಬಂಧವಿರಲಿಲ್ಲ. ಇವರು ವೇದಾಭ್ಯಾಸಿಗಳು, ತೋಟಗಾರಿಕೆಯ ಕಷ್ಟಜೀವಿಗಳು, ಇತ್ಯಾದಿ ವಿವರಗಳು ತಿಳಿಯುತ್ತವೆ. ಇವು ಅಂದಿನ

ಅವರ ಸಮಗ್ರ ಬದುಕಿನ ವಿವರಣೆಗೆ ಒಂದು ಉಲ್ಲೇಖ. ಇದರಿಂದ ಸಂಕೇತಿಗಳ ವಲಸೆ ಸುಮಾರು 700 ವರ್ಷಗಳಷ್ಟು ಹಿಂದೆಯೇ ನಡೆದಿದೆ ಎನ್ನುವುದು ಖಚಿತ.

ಎಂ. ಕೇಶವಯ್ಯನವರ "ನಾಚಾರಮ್ಮನ ಜೀವನ; ಆಕೆಯ ವಲಸೆಯ ಇತಿಹಾಸ" ಎಂಬ ಪುಸ್ತಕವು ಸಂಕೇತಿಗಳ ವಲಸೆ ಮತ್ತು ನೆಲೆಯ ಬಗ್ಗೆ ಒಂದೆರಡು ವಿಷಯವನ್ನು ತಿಳಿಸದಿರದು. ಸಂಕೇತಿಗಳು ಮೂಲತಃ ಮದ್ರಾಸ್ ರಾಜ್ಯದ ಮಧುರಾ ಜಿಲ್ಲೆಯ ಸಂಕೋಟಂನ ಸಮೀಪದ ರಾಮೇಶ್ವರಂ ರೈಲ್ವೆ ಮಾರ್ಗದ ಅಕ್ಕಪಕ್ಕದಲ್ಲಿ ನೆಲಸಿದ್ದರೆಂದೂ, ಒಬ್ಬ ಸಾಧ್ವೀಮಣಿಯ ಶಾಪದ ಭಯದಿಂದ ಆ ಪ್ರದೇಶವನ್ನು ಬಿಟ್ಟು ಮೈಸೂರು ಪ್ರಾಂತ್ಯಕ್ಕೆ ಬಂದು ತಮಗೆ ಅನುಕೂಲವಾದ ಪ್ರದೇಶಗಳಲ್ಲಿ ನೆಲಸಿದರೆಂದೂ ಅಭಿಪ್ರಾಯಪಟ್ಟಿದ್ದಾರೆ. ಕೇಶವಯ್ಯನವರ ಪ್ರಕಾರ ಈ ಘಟನೆಯು ಸುಮಾರು 400–500 ವರ್ಷಗಳಷ್ಟು ಹಿಂದೆಯೇ ನಡೆದದ್ದು, ಆ ಸಾಧ್ವೀಮಣಿಯೇ ಸಂಕೇತಿಗಳಿಗೆ ಮುಂದಾಳಾಗಿಯೂ ನಿಂತಳು ಎಂಬ ಅಂಶ ತಿಳಿದುಬರುತ್ತ .

ಸುಮಾರು 850 ವರ್ಷಗಳಷ್ಟು ಹಿಂದೆಯೇ ಸಂಕೇತಿಗಳು ತಮಿಳುನಾಡಿನಿಂದ ಮೈಸೂರು ದೇಶಕ್ಕೆ ವಲಸೆ ಬಂದರೆಂದೂ, ಮೊದಲು ಕೌಶಿಕವಲ್ಲಿ ನೆಲಸಿದರೆಂದೂ ಕೆಲವು ವಿದ್ವಾಂಸರ ಅಭಿಪ್ರಾಯ. ಸಂಕೇತಿಗಳ ಇತಿಹಾಸಕ್ಕೆ ಈ ಮಾತು ಒಂದು ಹೊಸ ತಿರುವು ಕೊಟ್ಟಿದೆ. ಭಾಷಿಕ ಹಿನ್ನೆಲೆಯಲ್ಲಿ ಸಂಕೇತಿಗಳ ಇತಿಹಾಸವನ್ನೂ, ಪ್ರಾಚೀನತೆಯನ್ನೂ ಗಮನಿಸಿದಲ್ಲಿ ಸುಮಾರು 700 ವರ್ಷಗಳಷ್ಟು ಹಿಂದೆಯೇ ವಲಸೆ ಬಂದವರು ಎಂಬುದು ನಿರ್ವಿವಾದ.

**ಸಂಕೇತಿ ಪದದ ವ್ಯುತ್ಪತ್ತಿ ಮತ್ತು ಅರ್ಥ :**

'ಸಂಕೇತಿ' ಎಂದು ಹೆಸರು ಬರಲು ಮುಖ್ಯವಾಗಿ ತಮಿಳುನಾಡಿನ 'ಶಂಕೋಟ್ಟೈ' (ಶಂಕೋಟಂ)ನಿಂದ ಬಂದವರಾಗಿದ್ದು, ಇವರಾಡುವ ಮಾತು ವಿಶಿಷ್ಟವಾಗಿದ್ದು, ತಮಿಳನ್ನೇ ಹೋಲುತ್ತಿದ್ದರೂ ಬೇರೊಬ್ಬರಿಗೆ ಅರ್ಥವಾಗದಂತೆ 'ಸಂಕೇತ' ರೂಪದಿಂದ ಕೂಡಿದ್ದು, ವೈಶಿಷ್ಟ್ಯಶೈ ರಚನೆಯಿಂದ ಕೂಡಿರುವುದರಿಂದ "ಸಂಕೇತಿ" ಎಂದು ಕರೆಯಲಾಗುತ್ತದೆಂಬ ವಾದವನ್ನು ತಾರ್ಕಿಕವಾಗಿ ಒಪ್ಪಿಕೊಂಡರೂ ಸಮಂಜಸವಲ್ಲ. ಸಂಕೇತಿಗಳು ಮೂಲತಃ ಮೇಧಾವಿಗಳು, ಅದರಲ್ಲೂ ಸಂಖ್ಯಾಶಾಸ್ತ್ರ, ಜ್ಯೋತಿಷ್ಯಶಾಸ್ತ್ರದಲ್ಲಿ ಪ್ರವೀಣರು. ಇವರನ್ನು 'ಸಾಂಖ್ಯಾತಿಗಳು', 'ಸಾಂಖ್ಯೇತಿ'ಗಳು ಎಂದು ಕರೆಯುತ್ತಿದ್ದರು. ಅವರೇ ಇಂದಿನ ಸಂಕೇತಿಗಳು. ಕಿಟ್ಟೆಲ್‌ರ 'ಕನ್ನಡ–ಇಂಗ್ಲಿಷ್ ನಿಘಂಟುವಿನಲ್ಲಿ 'ಸಂಕೇತಿ' ಎಂಬ ಪದಕ್ಕೆ ಮೈಸೂರಿನ ಸ್ಮಾರ್ತ ಬ್ರಾಹ್ಮಣರ ಒಂದು ಪಂಗಡ; ಅಶುದ್ಧ ತಮಿಳನ್ನು ಮಾತನಾಡುತ್ತಾರೆ ("a certain caste of Smarta Brahmanas in Mysore; speaking a very corrupt Tamil (p. 1558); ಎಂದಿದೆ. ಕಿಟ್ಟೆಲ್ಲರ ಈ ಮಾತು ಸಂಕೇತಿಗಳ ಐತಿಹಾಸಿಕ ವಿಷಯಕ್ಕೆ ಒತ್ತುಕೊಟ್ಟಂತಿದೆ. ಅರ್ಥವೂ ಸ್ಪಷ್ಟ. ಮೇಲಿನ ವಿವರನನ್ನು ಅನ್ವಯಿಸಿ

'ಸಂಕೇತಿ' ಪದದ ವ್ಯುತ್ಪತ್ತಿಯನ್ನು ಎರಡು ರೀತಿಯಿಂದ ನಿರೂಪಿಸಬಹುದು.

1. ಶಂಕೋಟ್ಟೈಜನ > ಶಂಕೋಟಿಜನ > ಸಂಕೋಟಿಜನ > ಸಂಕೊಟಿಜನ > ಸಂಕೇತಜನ > ಸಂಕೇತಿಜನ > ಸಂಕೇತಿ.
2. ಸಾಂಖ್ಯಾರ್ತಿ > ಸಾಂಖ್ಯೇತಿ > ಸಂಖ್ಯೇತಿ > ಸಂಕೇತಿ.

**ಸಂಕೇತಿ ಭಾಷೆ :**

'ತಮಿಳು' ದಕ್ಷಿಣ ಭಾರತದ ಪ್ರಮುಖ ಸಾಹಿತ್ಯಿಕ ದ್ರಾವಿಡ ಭಾಷೆಗಳಲ್ಲಿ ಒಂದು. "ಸಂಕೇತಿ ಭಾಷೆ" ತಮಿಳಿನ ಮುಖ್ಯ ಉಪಭಾಷೆಗಳಲ್ಲೊಂದು. ಇಂದು ಸುಮಾರು 10,000 ಜನರಿಗೆ 'ಸಂಕೇತಿ ಭಾಷೆ' ಮಾತೃ ಭಾಷೆಯಾಗಿದೆ. ಕರ್ನಾಟಕ ರಾಜ್ಯದ ಹಾಸನ, ಮೈಸೂರು, ಬೆಂಗಳೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಕೇತಿಗಳು ಹೆಚ್ಚಾಗಿದ್ದು, ಇತರ ಜಿಲ್ಲೆಗಳಲ್ಲೂ ನೆಲಸಿದ್ದಾರೆ. ಅಲ್ಲದೆ ತಮಿಳುನಾಡಿನ ತಿರುನೆಲ್‌ವೇಲಿ; ಕೇರಳದ ಶಾಪತ್ತೂರು, ತಿರುವಾಂಕೂರುಗಳಲ್ಲೂ ಸಂಕೇತಿಗಳು ಕಾಣಬರುತ್ತಾರೆ. ಅವರೂ ಸಂಕೇತಿ ಭಾಷೆಯನ್ನೇ ಮಾತಾಡುತ್ತಾರೆ.

ಸಂಕೇತಿ ಭಾಷೆಯು ತಮಿಳಿನ ಉಪಭಾಷೆಯಾದರೂ ಇಂದು ಒಂದು ಭಾಷೆಯ ಮಹತ್ವವನ್ನು ಪಡೆದಿದೆ. ಎಚ್. ಎಸ್. ಅನಂತನಾರಾಯಣ ಅವರು ಸಂಕೇತಿ ಭಾಷೆಯನ್ನು ಪ್ರಾದೇಶಿಕ ಆಧಾರದ ಮೇಲೆ ಮುಖ್ಯವಾಗಿ ನಾಲ್ಕು ಗುಂಪುಗಳಾಗಿ ವಿಭಾಗಿಸಿದ್ದಾರೆ.

1. ಕೌಶಿಕ ಸಂಕೇತಿ
2. ಬೆಟ್ಟದ ಪುರ ಸಂಕೇತಿ
3. ಮಲೆನಾಡು ಸಂಕೇತಿ
4. ಲಿಂಗದಹಳ್ಳಿ ಸಂಕೇತಿ

ಈ ಒಳವಿಭಾಗಗಳಲ್ಲಿ ಮುಖ್ಯವಾಗಿ ಭಾಷಿಕ ರಚನೆಯಲ್ಲಿ ಮತ್ತು ಉಚ್ಚಾರಣಾ ರೀತಿಯಲ್ಲಿ ಸಾಕಷ್ಟು ಭಿನ್ನತೆಗಳನ್ನು ಕಾಣಬಹುದು.

1. **ಕೌಶಿಕ ಸಂಕೇತಿ :** ಹಾಸನ ಜಿಲ್ಲೆಯ ಕೌಶಿಕ ಗ್ರಾಮದಲ್ಲಿ ಮೊದಲು ನೆಲಸಿದವರಾದ್ದರಿಂದ ಇವರನ್ನು "ಕೌಶಿಕ ಸಂಕೇತಿ"ಗಳು ಎಂದು ಕರೆಯುತ್ತಾರೆ. ಇತ್ತೀಚೆಗೆ ಇವರು ಮೈಸೂರು ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಕೌಶಿಕ ಸಂಕೇತಿಗಳು ವೇದ ಪಾರಂಗತರು, ವಿದ್ಯಾವಂತರು.

2. **ಬೆಟ್ಟದ ಪುರ ಸಂಕೇತಿ :** ಮೈಸೂರು ಜಿಲ್ಲೆಯ ಆಗಿನ ಹುಣಸೂರು ತಾಲ್ಲೂಕಿನ ಬೆಟ್ಟದಪುರ ಇವರ ಮೂಲನಿವಾಸ. ಇಂದು ಕೊಡಗು, ಮಂಡ್ಯ ಜಿಲ್ಲೆಯ ಕೆಲವು ಊರುಗಳಲ್ಲಿ ನೆಲಸಿದ್ದಾರೆ. ಇವರಲ್ಲಿ ಸಂಗೀತ ವಿದ್ವಾಂಸರು ಹೆಚ್ಚು.

3. **ಮಲೆನಾಡು ಸಂಕೇತಿ :** ಶಿವಮೊಗ್ಗ ಜಿಲ್ಲೆಯ ಮತ್ತೂರು, ಹೊಸಳ್ಳಿಯಲ್ಲಿ ಮಾತ್ರ ನೆಲಸಿದ್ದಾರೆ. ಇವರೂ ಸಹ ವೇದಾಧ್ಯಾಯಿಗಳು, ಅಲ್ಲದೆ ಗಮಕ ಪ್ರಿಯರು.

4. ಲಿಂಗದಹಳ್ಳಿ ಸಂಕೇತಿ : ಚಿಕ್ಕಮಗಳೂರು ಜಿಲ್ಲೆಯ ಕಪೂರಿನ ಲಿಂಗದ ಹಳ್ಳಿಯಲ್ಲಿ ಮಾತ್ರ ಕಾಣಬರುತ್ತಾರೆ. ವೇದದಲ್ಲಿ ಆಸಕ್ತರು.

ಇಂದು ನಾಗರಿಕತೆಯ ತುಳಿತಕ್ಕೆ ಸಿಕ್ಕಿ ಸಂಕೇತಿಗಳು ತಮ್ಮ ಸ್ವಂತ ಸ್ಥಳಗಳನ್ನು ತೊರೆದು ಪಟ್ಟಣಗಳಲ್ಲಿ ನೆಲಸಿದ್ದಾರೆ. ಹಾಗಾಗಿ ನಮಗೆ ಎಲ್ಲಾ ಸಂಕೇತಿ ಉಪ ಪಂಗಡದವರೂ ಎಲ್ಲಾ ಊರುಗಳಲ್ಲೂ ಕಂಡು ಬರುತ್ತಾರೆ.

## ಸಂಕೇತಿ ಭಾಷೆಯ ಶಬ್ದಕೋಶ :

ಕನ್ನಡ, ಸಂಸ್ಕೃತ, ತಮಿಳು, ಮಲೆಯಾಳಂ, ತುಳು, ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಯ ಪದಗಳನ್ನು ಹೆಚ್ಚಾಗಿ ಕಾಣಬಹುದು. ಆದರೆ ಕನ್ನಡ ಸಂಸ್ಕೃತ ಪದಗಳು ಹೇರಳವಾಗಿ ಈ ಭಾಷೆಯಲ್ಲಿ ಸೇರಿಕೊಂಡಿವೆ. ಜೊತೆಗೆ ಕನ್ನಡದ ಪ್ರತ್ಯಯ ಗಳು ತಮಿಳಿನ ಭಾಷಾರಚನೆಯ ಮಾದರಿಯು ಈ ಭಾಷೆಗೆ ವಿಶಿಷ್ಟ ಕೊಡುಗೆ. ಸಂಕೇತಿ ಭಾಷೆಯ ಜಾಯಮಾನಕ್ಕೆ ತಕ್ಕಂತೆ ನೆರೆಹೊರೆಯ ಭಾಷೆಯ ಪದಗಳನ್ನು ಒಗ್ಗಿಸಿ ಸ್ವೀಕರಿಸಿದೆ ಈ ಭಾಷೆ. ಕೆಲವು ಪ್ರಕೃತಿ ರೂಪಗಳನ್ನು ಯಾವ ಬದಲಾವಣೆಯೂ ಇಲ್ಲದೆ ಸಂಕೇತಿ ಭಾಷೆಯಲ್ಲಿ ಹಾಗೆಯೇ ಬಳಸಿಕೊಂಡಿದೆ.

## ಪ್ರಾದೇಶಿಕ ಪ್ರಭಾವ

ಸಂಕೇತಿಗಳು ದ್ವಿಭಾಷಿಗಳು, ಸಂಕೇತಿಗಳು ಮನೆಯಲ್ಲಿ ತಮ್ಮ ಮಾತೃಭಾಷೆ ಸಂಕೇತಿಯನ್ನೂ, ಹೊರಗಿನ ವ್ಯವಹಾರಕ್ಕೆ ಕನ್ನಡವನ್ನೂ ಬಳಸುತ್ತಾರೆ. ಆದರೆ ವ್ಯವಹಾರದ ದೃಷ್ಟಿಯಿಂದ ಆಯಾ ಪ್ರಾದೇಶಿಕ ಭಾಷೆಯನ್ನೇ ತಮ್ಮ ಮಾತೃ ಭಾಷೆಯೆಂದು ಆರಿಸಿಕೊಂಡಿದ್ದಾರೆ. ಹಾಗಾಗಿ ಇವರ ಮಾತಿನಲ್ಲಿ ಆಯಾ ಪ್ರಾದೇಶಿಕ ಭಾಷೆಯ ಪ್ರಭಾವವನ್ನು ಕಾಣುವುದು ಸಹಜ. ತಮಿಳುನಾಡಿನ ಸಂಕೇತಿಗಳಲ್ಲಿ ತಮಿಳು ಹೆಚ್ಚಾಗಿದ್ದರೆ, ತಿರುವಾಂಕೂರು, ಶಾಪತ್ತೂರು, ಕೇರಳದ ಸಂಕೇತಿಗಳಲ್ಲಿ ಮಲೆಯಾಳಂ ಹೆಚ್ಚಾಗಿದ್ದರೆ, ಕರ್ನಾಟಕದ ಸಂಕೇತಿಗಳಲ್ಲಿ ಕನ್ನಡ ಹೆಚ್ಚಾಗಿದೆ. ಇವರ ಮಾತಿನಲ್ಲಿ ಸಾಮ್ಯತೆಯನ್ನು ಕಂಡರೂ ಭಿನ್ನತೆಯೂ ಇದೆ. ಅಂತೂ ತಮ್ಮ ಭಾಷೆಯ ನೈಜ ಸ್ವರೂಪವನ್ನು ಕಳೆದುಕೊಂಡಿಲ್ಲ.

## ಕರ್ನಾಟಕದಲ್ಲಿ ಸಂಕೇತಿಗಳು

ಸಂಕೇತಿಗಳು ಸ್ಮಾರ್ತ ಪಂಗಡಕ್ಕೆ ಸೇರಿದ ಬ್ರಾಹ್ಮಣರು. ಆದಿಶಂಕರಚಾರ್ಯರ ಅನುಯಾಯಿಗಳು. ತಮಿಳುನಾಡಿನ ಐಯ್ಯರ್ ಪಂಗಡಕ್ಕೆ ಸೇರಿದವರು. ಕರ್ನಾಟಕದಲ್ಲೇ ಅಲ್ಲದೆ ನೆರೆಹೊರೆಯ ರಾಜ್ಯಗಳಲ್ಲೂ ಪ್ರಪಂಚದ ಇತರೆಡೆಗಳಲ್ಲೂ ಇತ್ತೀಚೆಗೆ ಸಂಕೇತಿಗಳು ಹರಡಿಕೊಂಡಿದ್ದಾರೆ. ಇವರಲ್ಲಿನ ಒಳಪಂಗಡಗಳಲ್ಲಿ ವಿವಾಹದ ಅನಿರ್ಬಂಧ ವೇನೂ ಇಲ್ಲ. ಅಂತರಿಕ ಸಂಬಂಧ ಹೆಚ್ಚುತ್ತಿದೆ.

ಸಂಕೇತಿಗಳು ಸುಂಸ್ಕೃತರೂ ಅಭಿಮಾನಿಗಳೂ, ಕಷ್ಟಸಹಿಷ್ಣುಗಳೂ, ಪ್ರತಿಭಾಶಾಲಿಗಳೂ ವೇದಾಧ್ಯಯನ ಸಂಪನ್ನರೂ, ಪಂಡಿತರೂ, ಪ್ರಾಚಾರ್ಯರೂ, ಜ್ಯೋತಿಷ್ಯ, ತರ್ಕಶಾಸ್ತ್ರ, ಧರ್ಮ, ವೈದ್ಯ, ವಿಜ್ಞಾನ, ಶಿಲ್ಪ, ತಾಂತ್ರಿಕತೆಯಲ್ಲಿ ಪ್ರವೀಣರೂ, ಸಂಗೀತ ಕೋವಿದರೂ, ದೈವಜ್ಞರೂ, ಇವೆಲ್ಲಕ್ಕಿಂತ ಹೆಚ್ಚಾಗಿ ದೃಢಕಾಯ ಕೃಷಿಕರೂ ಆಗಿದ್ದಾರೆ. ಸಂಕೇತಿಗಳ ವಿಶಿಷ್ಟ ಭಾಷೆ, ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಯಿಂದ ಸ್ಮಾರ್ತ ಬ್ರಾಹ್ಮಣರಲ್ಲೇ ವಿಶಿಷ್ಟ ಜನಾಂಗವಾಗಿದೆ 'ಸಂಕೇತಿ ಜನಾಂಗ'.

ಒಟ್ಟಾರೆ ಸಂಕೇತಿಗಳು ವಿಭಿನ್ನ, ವಿಶಿಷ್ಟ ಗುಣದೋಷಗಳನ್ನು ಹೊಂದಿದ್ದು ಇಂದಿನ ಸಾಮಾಜಿಕ ಪರಿಸರದಲ್ಲಿ ಇತರರೊಡನೆ ಹೊಂದಿಕೊಂಡು ತಮ್ಮತನವನ್ನು ಕಾಪಾಡಿಕೊಂಡು ಬಂದಿದ್ದಾರೆ. ಇಂತಹ ಜನಾಂಗದ ಸಾಂಸ್ಕೃತಿಕ ಮತ್ತು ಭಾಷಿಕ ಅಧ್ಯಯನದ ಕಡೆ ವಿದ್ವಾಂಸರು ಮತ್ತು ಸಂಶೋಧಕರು ಗಮನ ಹರಿಸುವುದು ಅಗತ್ಯ.

**ಸಹಾಯಕ ಆಕರಗಳು**


Keshaviah, M 1936 — "Life of Nacharamma" (History of Her Migration) Mysore

Krishnmurthy, K. S. (Et.al) 1970. 1977 — "Smrti Samputa" (Silver Jubilee Souvenier) Kousika Sanketi Association Mysore

Thurston, E — "Castes and Tribes of Southern India"

Kittel, F. 1971 — "Kannada-English Dictionary" University of Madras, Madras. Reprint

Ramaswamy R. G. (Et.al.) 1978 — Bettadapura Sanketi Vaini Nov. 1978, Mysore

ಬಿ. ಕೃಷ್ಣ

# ಚಾರ್ವಾಕ ಮತ್ತು ಉಮರ್ ಖಯಾಂ

ಸೃಷ್ಟಿಯ ಸ್ವರೂಪ ಅಗಣಿತ ಹಾಗೂ ವೈವಿಧ್ಯಮಯ. ಹೊರನೋಟಕ್ಕೆ ಹುಟ್ಟು–ಬದುಕು–ಸಾವು ಸರಳವಾಗಿ ಕಾಣುವುದು. ಈ ಮೂರು ಸ್ಥಿತಿಗಳನ್ನು ಹಿಂಜಿ ಹಿಂಜಿ ನೋಡುತ್ತಾ ಹೋದರೆ ಇವುಗಳ ಕಾರ್ಯ–ಕಾರಣ ಸಂಬಂಧಗಳ ಸ್ವರೂಪವು ಜಟಿಲವೂ ನಿರಂತರವಾದ ರಹಸ್ಯವೂ ಆಗಿರುವುದು ಸ್ಪಷ್ಟವಾಗುತ್ತದೆ.

ನಮ್ಮ ಇಂದ್ರಿಯಗೋಚರ ವಿಶ್ವವು ಚರ–ಸ್ಥಿರ ವಸ್ತು ವೈವಿಧ್ಯತೆಯಿಂದ ಕೂಡಿದೆ. ಇಂದ್ರಿಯಾತೀತ ಸಾಧನಗಳು ‘ಈ ಚರ–ಸ್ಥಿರ ದ್ವಿರೂಪ ವಿಶ್ವವು ಗೌಣ, ಆದರೆ, ಮೂಲತಃ ಇದು ಒಂದೇ ಒಂದು ಸತ್ಯ ಮತ್ತು ಶಕ್ತಿ’ ಎಂದು ಹೇಳುತ್ತವೆ.

ಹೀಗೆ ‘ಜೀವ–ಜಗತ್ತು–ದೇವರು’ ಇವುಗಳನ್ನು ಕುರಿತು ವಿವಿಧ ವಿಚಾರ–ನಂಬಿಕೆಗಳು ನೆಲೆಗೊಂಡಿವೆ. “ದೃಷ್ಟಿಯಂತೆ ಸೃಷ್ಟಿ” ಎಂಬ ಲೋಕೋಕ್ತಿಯಂತೆ ಮಾನವನ ಸ್ವಂತ ಇಂದ್ರಿಯ ಹಾಗೂ ಇಂದ್ರಿಯಾತೀತ ಅನುಭವ ಮತ್ತು ಅನುಭಾವಗಳನ್ನು ಆಧಾರವಾಗಿಟ್ಟುಕೊಂಡು ಈ ವಿಚಾರಗಳು ಮೂಡಿಬಂದಿವೆ. ಸೃಷ್ಟಿಯಲ್ಲಿನ ಯಾವುದೇ ಎರಡು ವಸ್ತುಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ಇದರಂತೆಯೆ ಯಾವುದೆ ಎರಡು ವಿಚಾರಗಳು ಒಂದೇ ರೀತಿ ಇರುವುದಿಲ್ಲ. ಈ ಕಾರಣದಿಂದಲೆ ವಿಚಾರಗಳ ನಡುವೆ ಅಭಿಪ್ರಾಯ ಭೇದಗಳುಂಟಾಗುವುದು. ವ್ಯಕ್ತಿ ವೈಶಿಷ್ಟ್ಯಗಳೇ ಈ ಭಿನ್ನಾಭಿಪ್ರಾಯಗಳಿಗೆ ಕಾರಣ. ಈ ವೈವಿಧ್ಯತೆಗಳು, ವೈಶಿಷ್ಟ್ಯಗಳು ಭೇದಭಾವಗಳು ಮೇಲ್ನೋಟಕ್ಕೆ ಸತ್ಯವಾದರೂ ಅಂತರ್ಯದಲ್ಲಿ ಗೌಣವಾಗುತ್ತವೆ. ಸಮುದ್ರನೊರೆಗಿಂತ, ಸಮುದ್ರದಾಳದಲ್ಲಿ ದೊರೆಯುವ ಮುತ್ತಿಗೇ ಬೆಲೆ ಜಾಸ್ತಿ. ಆದ್ದರಿಂದ, ಯಾವುದೇ ಸಮಸ್ಯೆಗೆ ಮುಕ್ತ ಮನಸ್ಸಿನ ಆಳವಾದ ಚಿಂತನೆಯಿಂದ, ನಿಧಾನವಾದರೂ, ಪರಿಹಾರ ದೊರೆಯುವುದು.

ನಮ್ಮ ವಿಚಾರಗಳು, ನಂಬಿಕೆಗಳು ಮತ್ತು ಭಾವನೆಗಳನ್ನು ನಾವು ತಿರಸ್ಕರಿಸುವುದಿಲ್ಲ. ಇದರಂತೆಯೆ ಇತರರ ಆಚಾರ–ವಿಚಾರಗಳನ್ನು ನಾವು ತಿರಸ್ಕರಿಸಬಾರದು. ಹಂಸಕ್ಷೀರ–ನ್ಯಾಯದಂತೆ ಪ್ರಸ್ತುತ ನಮ್ಮ ಬದುಕಿಗೆ ಯುಕ್ತವಾದುದನ್ನು ಒಪ್ಪಿಕೊಂಡು ಅಯುಕ್ತವಾದುದನ್ನು ಬಿಟ್ಟುಬಿಡುವುದು ಸೂಕ್ತ.

ಪ್ರಸ್ತುತ ಲೇಖನದಲ್ಲಿ ಚಾರ್ವಾಕರ ಸಿದ್ಧಾಂತಗಳ ಪರಿಚಯವಿದೆ. ವಿಶ್ವದಲ್ಲಿ ಜೀವ-ಜಗತ್ತು-ದೇವರನ್ನು ಕುರಿತು ಆಸ್ತಿಕ ಮತ್ತು ನಾಸ್ತಿಕರಿಬ್ಬರು ತಮ್ಮದೇ ಸಿದ್ಧಾಂತಗಳನ್ನು ಮಂಡಿಸಿರುವರು. ಹೀಗೆಯೆ ಚಾರ್ವಾಕರೂ ಕೂಡ ಮಂಡಿಸಿರುವರು.

'ಉಮರ್ ಖಯಾಂ'ನೂ ಒಬ್ಬ ಮನುಷ್ಯ, ನಮ್ಮೆಲ್ಲರಂತೆ ಇವನ ಜೀವನ ಮತ್ತು ತತ್ವಗಳೂ ಬೇರೆ ಬೇರೆ ಆಗಿವೆ. ಕೆಲವರಿಗೆ ಇವನು "ಚಾರ್ವಾಕನಾದರೆ, ಇತರ ಕೆಲವರಿಗೆ ಇವನು "ಸೂಫಿ"ಯಾಗಿದ್ದಾನೆ. ಬೇರೊಬ್ಬರಿಗೆ ಇವನು ವೇದಾಂತಿಯಾಗಿ ಕಾಣುತ್ತಾನೆ. ಜೀವನದಲ್ಲಿ "ಆದರ್ಶ" ಇರಬೇಕು. ಆದರೆ, ಈ ಆದರ್ಶ ಸಹಜವಾಗಿರಬೇಕು. ಚಾರ್ವಾಕ ಮತದಲ್ಲಿ ಈ ಸಹಜಾದರ್ಶವಿದೆ. ಇಂತಹ ಸಹಜಾದರ್ಶ ಮಾನವ 'ಉಮರ್ ಖಯಾಂ' ಎಂಬುದನ್ನು ಡಿ.ವಿ.ಜಿ. ಅವರ 'ಉಮರನ ಒಸಗೆ'ಯಲ್ಲಿ ನಾನು ಕಂಡುಕೊಂಡೆ. ನಾನು ಕಂಡ ಸತ್ಯವನ್ನು ಡಿ.ವಿ.ಜಿ. ಅವರ ಮಾತುಗಳಲ್ಲಿ ಈ ಲೇಖನದಲ್ಲಿ ಪ್ರತಿಬಿಂಬಿಸಿದ್ದೇನೆ.

**ಚಾರ್ವಾಕ ಮತ :**

ಜೀವ-ಜಗತ್ತು-ದೇವರನ್ನು ಕುರಿತು ಇರುವ ಅನೇಕ ಸಿದ್ಧಾಂತಗಳಲ್ಲಿ ಚಾರ್ವಾಕರದೂ ಒಂದು. ಇಲ್ಲಿಯೂ, ತಾತ್ವಿಕ ವಿಚಾರಗಳನ್ನು ಸಂಶಯಾತ್ಮಕ ವಿಚಾರದ ಮೂಲಕ ಪ್ರಶ್ನಿಸುವುದು ; ವಿಧಿಯನ್ನು ತರ್ಕದ ಮೂಲಕ ನಿವಾರಿಸುವುದು ; ಧರ್ಮವನ್ನು ನಿರ್ಲಿಪ್ತರಾಗಿ ಕಾಣುವುದು—ಮುಂತಾದ ವಿಚಾರ ವೈವಿಧ್ಯಗಳಿವೆ. ಈ ಸಿದ್ಧಾಂತದ ಮೂಲವು ಋಗ್ವೇದದಷ್ಟೇ ಹಿಂದಿನದು. ನಮ್ಮ ಮಹಾಕಾವ್ಯಗಳಲ್ಲಿ ಮತ್ತು ಬುದ್ಧನ ಸಂಭಾಷಣೆಗಳಲ್ಲಿ ಇದರ ಪ್ರಸ್ತಾಪವಿದೆ. ಭಗವದ್ಗೀತೆಯೂ ಇದರ ಬಗ್ಗೆ ಹೇಳುತ್ತದೆ.

ಬೃಹಸ್ಪತಿ ಸೂತ್ರವು ಇದರ ಮುಖ್ಯ ಗ್ರಂಥ. ಆದರೆ, ಇದು ಈಗ ಲಭ್ಯವಿಲ್ಲದುದರಿಂದ, ಚಾರ್ವಾಕರ ಸಿದ್ಧಾಂತಗಳನ್ನು, ಇವುಗಳನ್ನು ಕುರಿತಂತೆ ಇರುವ ಪರ-ವಿರೋಧ ವಿಮರ್ಶೆಗಳಿಂದ ವಸ್ತುನಿಷ್ಠವಾಗಿ ಪುನರ್ರಚಿಸಬೇಕಾಗಿದೆ. ಈ ಕಾರ್ಯ ಬಹಳ ತೊಡಕಿನದು. ಲೋಕ ಹಿತದೃಷ್ಟಿ, ವಸ್ತುನಿಷ್ಠ ಚಿಂತನೆಯುಳ್ಳವರಿಂದ ಮಾತ್ರ ಇದು ಸಾಧ್ಯ. ಇಂತಹ ಪ್ರಶಂಸನೀಯ ವಿಮರ್ಶೆಗಳು ಈಗೀಗ ಬರುತ್ತಿವೆ. ಸಂಪ್ರದಾಯದ ಮುಖವಾಡಧಾರಿ ತತ್ತ್ವಜಿಜ್ಞಾಸುಗಳು ಈ ಮುಕ್ತ ಮನಸ್ಸಿನ ವಿಮರ್ಶೆಗಳನ್ನು ಸ್ವೀಕರಿಸದಿರಬಹುದು. ಇವರಿಂದ ನಷ್ಟವೇನೂ ಆಗಲಾರದು. ಸಹಜವಾದ ಸತ್ಯದರ್ಶನ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ.

**ಲೋಕಾಯತ :**

ಚಾರ್ವಾಕರ ಸಿದ್ಧಾಂತವನ್ನು 'ಲೋಕಾಯತ' ಎಂದೂ ಕರೆಯುತ್ತಾರೆ. ಇಂದ್ರಿಯ ಗೋಚರವಾದ ಈ ಲೋಕ ಮಾತ್ರ ಸತ್ಯ, ಬೇರೆಲ್ಲ ಗೌಣ'—ಎಂಬುದರಿಂದ ಹೆಸರು ಬಂದಿದೆ. "ವರ್ತಮಾನ ಮಾತ್ರ ಸತ್ಯ, ಭವಿಷ್ಯದ ಬದುಕು ಇಲ್ಲ, ಇಂದ್ರಿಯಗಳ ಮೂಲಕ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವುದು ಮಾತ್ರ ಸತ್ಯ : ಅಪ್ರತ್ಯಕ್ಷವಾದುದರ

ಅಸ್ತಿತ್ವವೇ ಇಲ್ಲ" ಎಂಬುದು ಈ ಸಿದ್ಧಾಂತದಲ್ಲಿದೆ. ಇದುವರೆಗೂ ನಾವು ನಮ್ಮದಾಗಿಸಿಕೊಂಡಿರುವ ವಿಚಾರ–ನಂಬಿಕೆಗಳೆಲ್ಲವು, ನಮಗೆ, ನಮ್ಮ ಇಂದ್ರಿಯಗಳ ಮೂಲಕ ಲಭ್ಯವಾದವು. ನೋವು ಅಥವಾ ಸಾವು ನಮ್ಮ ಜೀವನದಲ್ಲಿಯೇ ಉಂಟಾದಾಗ ಆಗುವ ಅನುಭವ ಮತ್ತು ಉಂಟಾಗುವ ಜ್ಞಾನ, ಅದೇ, ನಮಗೆ ಸಂಬಂಧವಿಲ್ಲದವರಲ್ಲಿ ಉಂಟಾದಾಗ ಆಗುವುದಿಲ್ಲ. ಇದರಂತೆಯೆ 'ಅನುಮಾನ' ಪ್ರಮಾಣದ ಮೂಲಕ ದೊರಕುವ 'ವಿಶ್ವಸಂಬಂಧ ಜ್ಞಾನದಿಂದ ಪ್ರಯೋಜನವಿಲ್ಲ' ಎನ್ನುವಂತೆ ಮಾತನ್ನಾಡುವರು. ನಮ್ಮದು ಸ್ವಂತದ್ದು, ಸ್ವತಂತ್ರವಾದದ್ದು ; ಇತರರದು ಎಂದೂ ನಮ್ಮದಾಗುವುದಿಲ್ಲ. ಅವಲಂಬನೆಯಿಂದ ಬೆಳವಣಿಗೆ ಇಲ್ಲ. ಆದ್ದರಿಂದ 'ಪ್ರತ್ಯಕ್ಷ'ವನ್ನುಳಿದು 'ಅನುಮಾನ' ಮೊದಲಾದ ಇತರ ಪ್ರಮಾಣಗಳನ್ನು ಇವರು ಒಪ್ಪುವುದಿಲ್ಲ. ಇಂದ್ರಿಯಗೋಚರ 'ವಸ್ತು' ಮಾತ್ರ ಸತ್ಯ, ಭೂಮಿ, ನೀರು, ಬೆಂಕಿ ಮತ್ತು ಗಾಳಿ–ಇವು ಮೂಲಭೂತ ವಸ್ತುಗಳು. ಇವುಗಳ ವಿವಿಧ ಪ್ರಮಾಣದ ಬೆರೆಯುವಿಕೆಯಿಂದ ಈ ವಿಶ್ವವು ತನ್ನ ವೈವಿಧ್ಯತೆಗಳೊಡನೆ ಪ್ರಕಟವಾಗಿದೆ ಎನ್ನುವರು.

ಪ್ರಜ್ಞೆ : ಇದು ಒಂದು ವಸ್ತು ಸ್ಥಿತಿ. ಇದು ಮೂಲಭೂತ ವಸ್ತುಗಳಾದ ಭೂಮಿ, ನೀರು, ಬೆಂಕಿ ಮತ್ತು ಗಾಳಿಯು ಯಾವುದೊ ಒಂದು ಪ್ರಮಾಣದಲ್ಲಿ ಬೆರೆತಾಗ ಆದ ಒಂದು ರೂಪಾಂತರ ಸ್ಥಿತಿ. ತನಗೆ ಆಧಾರವಾದ ಮೂಲಭೂತ ವಸ್ತುಗಳು ಕರಗಿ ಹೋದಾಗ ಈ ಪ್ರಜ್ಞೆಯು ಮರೆಯಾಗುತ್ತದೆ.

ಇಲ್ಲಿ ಚಾರ್ವಾಕರು ನಾಲ್ಕು ಮೂಲಭೂತ ವಸ್ತುಗಳಾದ ಭೂಮಿ, ನೀರು, ಬೆಂಕಿ ಮತ್ತು ಗಾಳಿಯನ್ನು ಕುರಿತಂತೆ ತಮ್ಮ ವಿಚಾರವನ್ನು ಬೆಳೆಸಿದ್ದಾರೆ. ಏಕೆಂದರೆ, ಇವು ಅವರಿಗೆ ಇಂದ್ರಿಯ ಗೋಚರ. ಕಾರ್ಯ–ಕಾರಣ ಸಂಬಂಧದ ಆಧಾರದ ಮೇಲೆ, ತರ್ಕ ಪ್ರಧಾನವಾಗಿಯಾದರೂ, ಅವರು, ವಿಚಾರ ಮುಂದುವರಿಸಿದರೆ, ಈ ನಾಲ್ಕು ಮೂಲಭೂತ ವಸ್ತುಗಳ ಅಸ್ತಿತ್ವಕ್ಕೆ (ಕಾರ್ಯ) ಕಾರಣವಾದ "ಯಾವುದೊ ಒಂದು" ಇನ್ನೂ ಮೂಲಭೂತ ಸತ್ಯ ಇರುವುದನ್ನು ತಿಳಿಯಲು ಸಾಧ್ಯವಾಗುತ್ತದೆ. ಆದರೆ, ಈ ಪ್ರಯತ್ನಕ್ಕೆ ಅವರು ತೊಡಗುವುದಿಲ್ಲ. ಹೀಗೆ ತೊಡಗುವುದು ವ್ಯರ್ಥಶ್ರಮವೆಂಬುದು ಅವರ ಅಭಿಪ್ರಾಯವಿರಬಹುದು. ಆದ್ದರಿಂದಲೆ ಏನೊ ಅವರ ಸಿದ್ಧಾಂತಗಳು "ವರ್ತಮಾನ"ಕ್ಕೆ ಸೀಮಿತವಾಗಿವೆ. ಇವರ ಈ "ವರ್ತಮಾನದ ಬದುಕು" ಮತ್ತು ಕೆಲವು ಆಸ್ತಿಕ ದರ್ಶನಗಳಲ್ಲಿ ಕಂಡುಬರುವ "ಭವಿಷ್ಯದ ಬದುಕು" ಈ ಎರಡರಲ್ಲಿ ಯಾವುದು ಸಹಜ ಮತ್ತು ಅಪೇಕ್ಷಿತ ಎನ್ನುವುದನ್ನು "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು" ಎಂಬ ಉಕ್ತಿಯ ಹಿಂದೆ ಇರುವ ಸತ್ಯದ ನೆರಳಿನಲ್ಲಿ ನಿರ್ಧರಿಸಬೇಕಾಗಿದೆ.

ಬುದ್ಧಿ : ಇದು, ಬುದ್ಧಿಯ ಲಕ್ಷಣಗಳಿಲ್ಲದಂತೆ ಕಾಣುವ ಮೂಲಭೂತ ವಸ್ತುಗಳಿಂದಾದ ಒಂದು ರೂಪಾಂತರ ಸ್ಥಿತಿ. ವೀಳೆಯದೆಲೆ, ಅಡಿಕೆ ಮತ್ತು ಸುಣ್ಣದ ಮಿಶ್ರಣದಿಂದಾದ ಕೆಂಪು ವರ್ಣದಂತೆ ಬುದ್ಧಿಯು ರೂಪಗೊಂಡಿದೆ ಎನ್ನುವರು.

ಆತ್ಮ : ಬುದ್ಧಿಯನ್ನು ಒಗ್ಗೂಡಿಸಿಕೊಂಡು ಬಂದ ದೇಹವೇ ಆತ್ಮ–ದೇಹದಿಂದ ಹೊರಗೆ ಇದಕ್ಕೆ ಅಸ್ತಿತ್ವವಿಲ್ಲ. ಆತ್ಮವು : ದೇಹ ಅಥವ ಇಂದ್ರಿಯಗಳು, ಅಥವ ಪ್ರಾಣ ಅಥವ ಆಲೋಚನೆ–ಎಂಬುದಾಗಿ ನಾಲ್ಕು ವಿಧದ ಸಿದ್ಧಾಂತಗಳನ್ನು ಮಂಡಿಸುತ್ತಾರೆ.

ಧರ್ಮ, ದೇವರು, ಸ್ವಾತಂತ್ರ್ಯ ಮತ್ತು ಅಮರತ್ವ–ಇವು ಕೇವಲ ಭ್ರಮೆ. ಪ್ರಕೃತಿಯು ಒಳಿತು–ಕೆಡುಕಿನಿಂದ ದೂರ. ದೇವರ ಪ್ರತ್ಯಕ್ಷತೆಯ ಬಗ್ಗೆ ಚರಿತ್ರೆಯಲ್ಲಿ ಯಾವ ಸಾಕ್ಷಿಯೂ ಇಲ್ಲ. ನೋವು ಮತ್ತು ನಲಿವು ಮುಖ್ಯ ವಾಸ್ತವಗಳು. ಒಳ್ಳೆಯತನ ಮತ್ತು ಕೆಟ್ಟತನ ಪರಿಪೂರ್ಣ ನಿರಪೇಕ್ಷ ಮೌಲ್ಯಗಳಲ್ಲ ; ಕಾಲ–ದೇಶಗಳಿಗೆ ಸಂಬಂಧಿಸಿದಂತೆ ಇರುವ ಬೇರೆ ಬೇರೆಯಾದ ಸಾಪೇಕ್ಷವಾದ ಸಾಮಾಜಿಕ ಸ್ವಭಾವ ಲಕ್ಷಣಗಳು–ಎನ್ನುವರು.

ಪ್ರಕೃತಿಯಂತೆ ಒಳಿತು ಮತ್ತು ಕೆಡಕುಗಳ ಪರಿಣಾಮಗಳಿಗೆ ನಿರ್ಲಿಪ್ತರಾಗಿರುವುದು ಬಹುಪಾಲು ಜೀವಿಗಳಿಗೆ ಅದರಲ್ಲೂ ಮಾನವರಿಗೆ ಸಾಧ್ಯವೇ ಇಲ್ಲ. ಹೀಗೆಯೆ ಜೀವನದ ಕೇಂದ್ರಗಳಾದ ನೋವು ಮತ್ತು ನಲಿವುಗಳಿಗೆ ಅತೀತರಾಗಿ ಬದುಕುವವರೂ ಬಹಳ ಅಪರೂಪ. ಇನ್ನು ಒಳ್ಳೆಯತನ ಮತ್ತು ಕೆಟ್ಟತನಗಳನ್ನು ಮೆಟ್ಟಿ ನಿಂತವರ ಬಗೆ ಹೇಳಲು ಸಾಧ್ಯವೆ ? ಆದ್ದರಿಂದ, ದೇವರು, ಧರ್ಮ, ಸ್ವಾತಂತ್ರ್ಯ, ಅಮರತ್ವಗಳನ್ನು ಕುರಿತು ಮಾನವನು ನಡೆಸುವ ಚಿಂತನೆಯು ಅವಾಸ್ತವವೆಂತಲು, ಆದರೆ, ನೋವು–ನಲಿವನ್ನು ಕುರಿತು ನಡೆಸುವ ಚಿಂತನೆಯು ವಾಸ್ತವವೆಂತಲೂ ಚಾರ್ವಾಕರ ಅಭಿಪ್ರಾಯ. ಬಹಳಷ್ಟು ಜನರು ತಮ್ಮ ಸಂಕಟಗಳ ಪರಿಹಾರಕ್ಕೆ ಔಷಧಿಗಳ ಬೆನ್ನು ಹತ್ತುತ್ತಾರೆ. ಇವರಲ್ಲಿ ನಾಸ್ತಿಕರಿಗಿಂತ ಆಸ್ತಿಕರೇ ಮುಂದಿರುವುದು ಎದ್ದು ಕಾಣುತ್ತವೆ. ಈ ವಾಸ್ತವತೆಯನ್ನು ನೋಡಿದಾಗ, ಈ ಲೋಕ ವ್ಯವಹಾರವನ್ನು ಕಡೆಗಣಿಸಿದವರಿಗಿಂತ, ಇದರಲ್ಲಿ ಸಕ್ರಿಯವಾಗಿ ಭಾಗಿಗಳಾದವರೇ ಸುಖಿಗಳು ಎಂಬುದು ಸ್ಪಷ್ಟವಾಗುತ್ತದೆ. ದುಃಖವನ್ನು ಹೊರತಳ್ಳಿ ಸುಖಿಯಾಗಿ ಬದುಕುವುದಕ್ಕಿಂತ, ವರ್ತಮಾನ ಬದುಕಿನಿಂದ ಬಹಳ ದೂರವಾದ ದೇವರು, ಧರ್ಮ, ಸ್ವಾತಂತ್ರ್ಯ, ಅಮರತ್ವದ ಬೆನ್ನು ಹತ್ತುವುದು ವಿವೇಕವಲ್ಲವೆಂಬ ಅಭಿಮತ ಚಾರ್ವಾಕರ ಸಿದ್ಧಾಂತಗಳಲ್ಲಿ ಕಾಣುವುದು.

"ಗಟ್ಟಿಯಾದದ್ದು ಬಹಳ ಕಾಲ ಉಳಿಯುತ್ತದೆ ; ಟೊಳ್ಳಾದದ್ದು ಬೇಗನೆ ಅಳಿಯುತ್ತದೆ" ಎಂಬುವದಕ್ಕೆ ಚಾರ್ವಾಕ ಮತವು ಬಹುಸಂಖ್ಯಾತರಾದ ಸಾಮಾನ್ಯ ಜನರ ಅಥವಾ ಶ್ರೀ ಸಾಮಾನ್ಯರ ಮತವಾಗಿರುವುದೇ ಸಾಕ್ಷಿ. "ಹಸಿದವನಿಗೆ ಅನ್ನ ಬೇಕು, ವೇದವಲ್ಲ." ಎಂಬ ಸ್ವಾಮಿ ಶ್ರೀ ವಿವೇಕಾನಂದರ ಮಾತಿನಲ್ಲಿ ಎಷ್ಟೊಂದು ವಾಸ್ತವತೆ ತುಂಬಿದೆ. ಈ ವಾಸ್ತವತೆಯನ್ನೇ ಚಾರ್ವಾಕರು ಹಿರಿದಾಗಿ ಜಗಕ್ಕೆ ಸಾರಿದ್ದಾರೆ. ಈ ಸಿದ್ಧಾಂತ ಇಷ್ಟೊಂದು ವಾಸ್ತವವಾದದ್ದರಿಂದಲೇ ವೇದ ಕಾಲದಿಂದಲೂ ಉಳಿದು ಬಂದಿದೆ. ಚಾರ್ವಾಕರ "ವರ್ತಮಾನದಲ್ಲಿ ಚೆನ್ನಾಗಿ ಬದುಕು ; ವಿವೇಕಿಯಾಗಿ ಎಲ್ಲ ಸುಖವನ್ನು ಅನುಭವಿಸು" ಎಂಬ ನೇರವಾದ, ಖಂಡಿತವಾದ, ಪರಾವಲಂಬಿಯಲ್ಲದ, ವಿವೇಕದಿಂದ ಕೂಡಿದ ಸುಂದರ ಸುಖಮಯ ಜೀವನ ಎಲ್ಲರೂ ಸುಲಭವಾಗಿ ನಡೆಸು

ವಂತಹುದಲ್ಲ. ಅರಿವಿನೊಡಗೂಡಿದ ಅನುಭೋಗ ಎಂಬುದು ಅವಿವೇಕದ ಜೀವನವಲ್ಲ. ವರ್ತಮಾನದ ಬದುಕು ಪ್ರಜ್ಞಾವಂತ ಬದುಕು. "ದೇವರು, ಧರ್ಮ, ಅಮರತ್ವ" ಎಂಬುದರ ಬಗ್ಗೆ ನಾವು ಸ್ವಂತವಾಗಿ ಹೇಳುವುದಕ್ಕಾಗುವುದಿಲ್ಲ. ಇತರರ 'ಅಂತೆ' ಮಾತ್ರ ಹೇಳಬಹುದು. ಆದ್ದರಿಂದ ವರ್ತಮಾನ ಬದುಕಿನಿಂದ ದೂರವಾದ, ನಮ್ಮ ಸುಖ-ದುಃಖದಿಂದ ನಿರ್ಲಿಪ್ತವಾದ ಅವುಗಳನ್ನು ಚಿಂತಿಸಿ ಫಲವೇನು ? ಉಪನಿಷತ್ತಿನ ಅನುಭಾವಿಗಳ ದೊಡ್ಡ ಸಂಸ್ಕೃತಿಯಾದ "ಯಾವುದರ ಬಗ್ಗೆ ನಾವು ಮಾತನಾಡಲಾಗುವುದಿಲ್ಲವೊ ಅವುಗಳ ಬಗ್ಗೆ ಮೌನಿಯಾಗಿರಬೇಕು" ಎಂಬುದನ್ನು ಪೂರ್ಣವಾಗಿ ಅನುಸರಿಸಿ ಬದುಕಿದವರು ಚಾರ್ವಾಕರು.

ಇಂದು ಜಗತ್ತಿನ ಬಹುಪಾಲು ಜನರು ಬೌದ್ಧ ಮತ್ತು ಜೈನ ಜೀವನ ತತ್ತ್ವಗಳನ್ನು ಗೌರವಿಸುವರು. ದೇವರ ಇರುವಿಕೆಯ ಬಗ್ಗೆ ಬೌದ್ಧರು ಮತ್ತು ಜೈನರು ಮೌನ ತಳೆದಿರುವರು. ಅಂದರೆ ಇವರಿಗೆ ದೇವರ ಸಮಸ್ಯೆ ಇರಲಿಲ್ಲವೆಂದಲ್ಲ. ಈ ಸಮಸ್ಯೆಯ ಬಗ್ಗೆ ನಡೆಸುವ ಚಿಂತನೆ ವ್ಯರ್ಥ ಪ್ರಯತ್ನವೆಂಬುದು ಇವರ ಅಭಿಪ್ರಾಯವಾಗಿರಬಹುದು. ಆದ್ದರಿಂದಲೇ ಅವರು ಈ ವರ್ತಮಾನ ಜೀವನದ ದುಃಖ ನಾಶದ ಮೂಲಕ ಶಾಂತಿ ಸಮಾಧಾನ ಹೊಂದುವ ಮಾರ್ಗಗಳ ಅನ್ವೇಷಣೆಗಾಗಿ ಚಿಂತನ ಶೀಲರಾದರು. ಚಾರ್ವಾಕರು ಮೌನವಾಗಿ, ಶೋಷಣೆ ರಹಿತ, ಸ್ವಾವಲಂಬಿ ಸುಖಜೀವನಕ್ಕಾಗಿ ಸಹಜ ವಿವೇಕ ಮಾರ್ಗವನ್ನು ತುಳಿದರು. ಯಾರನ್ನೂ ಯಾವ ರೀತಿಯಿಂದಲೂ ಶೋಷಣೆ ಮಾಡದೆ, ಸ್ವಂತ ದುಡಿಮೆಯಿಂದ ಕೋಟಿಗಟ್ಟಲೆ ಹಣ ಸಂಪಾದಿಸಿ, ಲೋಕ ಹಿತಕ್ಕೆ ಧಕ್ಕೆ ಬರದ ರೀತಿಯಲ್ಲಿ ಎಷ್ಟೇ ದೊಡ್ಡ ಪ್ರಮಾಣದ ಭೋಗ ಜೀವನ ನಡೆಸುವವನು ಯಾರಿಗೂ ನೀತಿ ಬೋಧನೆ ಮಾಡುವುದಿಲ್ಲ. ಬೋಧಿಸುವವರು ಬೆವರು ಸುರಿಸಿ ದುಡಿದು ತಿನ್ನುವುದಿಲ್ಲ. ಚಾರ್ವಾಕರು ನೀತಿಯ ಬಗ್ಗೆ ಬೋಧನೆ ಮಾಡಿಲ್ಲ ಎಂದ ಮಾತ್ರಕ್ಕೆ ಅವರು ಅನೀತಿವಂತರಲ್ಲ. ಅವರು ಲೋಕಾಯತರು. ಏಕೆಂದರೆ, ಲೋಕಹಿತದ ಚಿಂತನೆ ಮಾಡಿದವರು. ಲೋಕದಲ್ಲಿ ಸುಖ-ಶಾಂತಿ ನೆಲಸಲು ಅಗತ್ಯವಾದ ವಿಚಾರಗಳನ್ನು ಹೇಳಿ, ಅನಗತ್ಯವಾದುದದನ್ನು ಕುರಿತು ಚಿಂತಿಸಿ ನರಳಲಿಲ್ಲ, ವ್ಯರ್ಥವಾಗಿ ಕಾಲ ಹರಣ ಮಾಡಲಿಲ್ಲ.

ಪ್ರಾಜ್ಞ ಭೋಗಿಗಳಾದ ಚಾರ್ವಾಕರು ಯಾವುದೇ ಒಂದು ಕಾಲ ಮತ್ತು ದೇಶಕ್ಕೆ ಸೇರಿದ ಜನರ ಒಂದು ಗುಂಪಲ್ಲ. ಇವರು ಎಲ್ಲಾ ಕಾಲದಲ್ಲಿಯೂ ಎಲ್ಲಾ ಕಡೆಯೂ ಇರುವಂತಹ "ಮನುಷ್ಯರು". ಈಗಲೂ ಇಂತಹ ಜನ ಪ್ರಪಂಚದ ಎಲ್ಲ ಕಡೆ ಇರುವರು. "ಖಂಡಿತವಾದಿ ಲೋಕ ವಿರೋಧಿ" ಎಂಬ ಲೋಕೋಕ್ತಿಯಂತೆ ಚಾರ್ವಾಕರ ನೇರ ಜೀವನ ಕಾರ್ಯಾವಳಿ ಕೆಲವರಿಗೆ ಕಿರಿಕಿರಿಯುಂಟುಮಾಡಿರಬಹುದು.

ಯಾವುದೇ ದರ್ಶನದ ವಿಚಾರಗಳಲ್ಲಿ ಕೆಲವು ಅಂಶಗಳು ವಿವರಿಸಲ್ಪಟ್ಟಿರುತ್ತವೆ. ಕೆಲವು ವಿವರಿಸಲ್ಪಟ್ಟಿರುವುದಿಲ್ಲ. ಎಲ್ಲ ವಿಚಾರಗಳಲ್ಲಿಯೂ ಒಂದಲ್ಲ ಒಂದು ಉದ್ದೇಶ

ಇನ್ನೇ ಇರುತ್ತವೆ. ವಿವೇಕಿಗಳಾದವರು ಯುಕ್ತವಾದುವನ್ನು ಮಾತ್ರ ಉಳಿಸಿಕೊಳ್ಳುತ್ತಾರೆ.

ವರ್ತಮಾನ ಪ್ರಪಂಚದಲ್ಲಿ ಆಸ್ತಿಕ ದರ್ಶನದ ಪರ ಇರುವವರ ಜೀವನವನ್ನು ನಾಸ್ತಿಕರದರೊಡನೆ ವಸ್ತು ನಿಷ್ಠವಾಗಿ ಹೋಲಿಸಿ ನೋಡಿದಾಗ ಯಾವುದು ಹೆಚ್ಚು ವಾಸ್ತವ ಮತ್ತು ಪ್ರಶಂಸನೀಯ ಎಂಬುದು ತಿಳಿಯುತ್ತದೆ. ಆಸ್ತಿಕ ಮತ್ತು ನಾಸ್ತಿಕ ಮತ ಸಂಸ್ಥಾಪಕರ ವೈಯುಕ್ತಿಕ ಜೀವನಕ್ಕೂ ಮತ್ತು ಇವೆರಡರ ಹೆಸರಿನಲ್ಲಿ ಬದುಕುತ್ತಿರುವ ಇಂದಿನವರ ಜೀವನಕ್ಕೂ ಅಗಾಧ ವ್ಯತ್ಯಾಸವಿದೆ. ಅದ್ದರಿಂದಲೆ ಲೋಕಕ್ಕೆ ಒಬ್ಬನೇ ಬುದ್ಧ, ಒಬ್ಬನೇ ಮಹಾವೀರ, ಒಬ್ಬನೇ ಕ್ರಿಸ್ತ, ಒಬ್ಬನೇ ಶಂಕರ, ಒಬ್ಬನೇ ರಾಮಾನುಜ, ಒಬ್ಬನೇ ಮಾಧ್ವ, ಒಬ್ಬನೇ ವಿವೇಕಾನಂದ ಇರುವುದು. ಚಾರ್ವಾಕರಂತೆ ಬಾಹುಬಲಿಯು ಒಬ್ಬ ನಾಸ್ತಿಕ. ಆದರೆ, ಇವನ ಪರಮ ವೈರಾಗ್ಯವನ್ನು ಮೀರಿಸಿದವರುಂಟೆ ?

ಹಿಂದೂ ದರ್ಶನದಲ್ಲಿ ಚಾರ್ವಾಕರನ್ನು ಕುರಿತು ಹೇಳುವಾಗ 'ಇವನೇ ಚಾರ್ವಾಕ' ಎಂದು ಹೆಸರಿಸಿರುವ ಯಾವ ವ್ಯಕ್ತಿಯು ಕಾಣುವುದಿಲ್ಲ. ಆದರೆ ವಿಶ್ವ ಸಾಹಿತ್ಯದಲ್ಲಿ 'ಉಮರ್ ಖಯಾಂ'ನನ್ನು ಚಾರ್ವಾಕನಂತೆ ಕಂಡಿದ್ದಾರೆ, ಹೀಗೆ ಚಾರ್ವಾಕನೆಂದು ಕೀಳು ದೃಷ್ಟಿಯಿಂದ ನೋಡಲ್ಪಟ್ಟ ಉಮರ್ ಖಯಾಮನ ಜೀವನ ಮತ್ತು ದರ್ಶನಗಳನ್ನು ಅವಲೋಕಿಸಿದಾಗ ಎಲ್ಲರೂ ಅವನನ್ನು ಸಮಗ್ರವಾಗಿ ತಿಳಿಯ ಬಯಸುತ್ತಾರೆ. ಇದಕ್ಕೆ ಡಿ.ವಿ.ಜಿ. ಅವರು ಉಮರನ ಬಗ್ಗೆ ತೋರಿಸಿರುವ ಗೌರವವೇ ನಿದರ್ಶನ.

ಉಮರನ ವ್ಯಕ್ತಿತ್ವವನ್ನು ಡಿ.ವಿ.ಜಿ. ಅವರು ತಮ್ಮ 'ಉಮರನ ಒಸಗೆ'ಯಲ್ಲಿ ಪರಿಚಯಿಸಿದ್ದಾರೆ. ಕೆಲವು ಗಮನಾರ್ಹ ಅಂಶಗಳನ್ನು 'ಉಮರನ ಒಸಗೆ'ಯಿಂದ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

"ಉಮರ್ ಖಯ್ಯಾಮ್" ಕವಿಯು ಪರ್ಷಿಯ (ಪಾರಸೀ = ಈಗಿನ ಇರಾನ್) ದೇಶದವನು. ಈತನ ಜನ್ಮಸ್ಥಳ ಆ ದೇಶದ ಖೊರಾಸನ್ ಎಂಬ ಪ್ರಾಂತದ ನೀಷಾಪೂರ್ (ನೈಷಾಪುರ) ಪಟ್ಟಣ. ಈತನ ಜೀವಿತ ಕಾಲ ಕ್ರಿ.ಶ. ಸುಮಾರು 1015-1020 ರೊಳಗಿನ ಒಂದು ವರ್ಷದಿಂದ 1123ರ ವರೆಗಿನದೆಂದು ಗೊತ್ತಾಗಿದೆ."

—(ಉಮರನ ಒಸಗೆ ಪು. 15)

"ಒಮ್ಮೆ, ಉಮರನನ್ನು ಆ ದೇಶದ ರಾಜ ಬಹಳವಾಗಿ ಸನ್ಮಾನಿಸಲು ಬಯಸಿ, ಅಧಿಕಾರ ಬಿರುದುಗಳನ್ನು ಕೊಡುವೆನೆಂದು ಎಷ್ಟು ಹೇಳಿದರೂ, ಉಮರನು ಅದಕ್ಕೊಡಂಬಡದಿರಲು, ಆತನ ಜೀವನಕ್ಕೆ ಸಾಕಾಗುವಷ್ಟು ವರ್ಷಾಶನವನ್ನು ರಾಜ ಬೊಕ್ಕಸದಿಂದ ಕೊಡುವಂತೆ ಏರ್ಪಡಿಸಿದನು. ಇವನ್ನು ಉಮರನು ಅಂಗೀಕರಿಸಿ ತೃಪ್ತನಾಗಿ, ಗ್ರಂಥವ್ಯಾಸಂಗಕ್ಕೂ ತತ್ತ್ವವಿಚಾರಕ್ಕೂ ತನ್ನ ಜೀವಿತವನ್ನು ಮೀಸಲಾಗಿಸಿದನು".

—(ಉ.ಒ. ಪು. 20)

"ಉಮರನು ಖ್ಯಾತ ಗಣಿತ ಶಾಸ್ತ್ರಜ್ಞನೂ, ಜ್ಯೋತಿಶ್ಶಾಸ್ತ್ರಜ್ಞನೂ ಆಗಿದ್ದನು". ಅರಬ್ಬೀ ಭಾಷೆಯಲ್ಲಿ ಬೀಜಗಣಿತದ(ಅಲ್ಜಿಬ್ರಾ) ಗ್ರಂಥವೊಂದನ್ನು ಬರೆದನು. ಈ ಶಾಸ್ತ್ರದ ಸಮಸ್ಯೆಗಳಿಗೆ, ಕ್ಷೇತ್ರಗಣಿತದ (ಜ್ಯಾಮಿಟ್ರಿ) ಶಂಕುಚ್ಛೇದನೆಯ ಕ್ರಮಗಳಿಂದ (ಕೋನಿಕ್ ಸೆಕ್ಷನ್ಸ್) ಸಮಾಧಾನ ಕೊಡುವ ವಿಧಾನವನ್ನು ಕಂಡು ಹಿಡಿದದ್ದು ಉಮರನ ಚಾತುರ್ಯವೆಂದು ತಿಳಿದವರು ಹೇಳುತ್ತಾರೆ. ಉಮರನ ಬೀಜಗಣಿತ ಗ್ರಂಥದ ಭಾಗಗಳು ಫ್ರೆಂಚ್, ಜರ್ಮನ್ ಮೊದಲಾದ ಐರೋಪ್ಯ ಭಾಷೆಗಳಿಗೆ ತರ್ಜುಮೆಯಾಗಿದೆ. ಉಮರನು ಕ್ರಿ.ಶ. ೧೦೭೪ರಲ್ಲಿ ಅಲ್ಲಿಯ ಪಂಚಾಂಗ ಪದ್ಧತಿಯನ್ನು ಪರಿಷ್ಕಾರಗೊಳಿಸಿದನು.

—(ಉ.ಖ. ಪು. 21)

"ಉಮರನಲ್ಲಿದ್ದ ಕವಿತಾ ಚಾತುರ್ಯವು ಅವನ ಗಣಿತ ನೈಪುಣ್ಯವನ್ನು ಮೀರಿಸುತ್ತಿತ್ತಂತೆ. ಆದರೆ, ಆತನ ಕಾಲದ ಮಹಮ್ಮದೀಯ ವಿದ್ವಾಂಸರಲ್ಲಿ ಆತನ ಕವಿತ್ವಕ್ಕೆ ತಕ್ಕ ಪುರಸ್ಕಾರ ದೊರೆಯದೆ ಹೋದದ್ದು ಅವನ ಮತ ವಿಚಾರದ ವ್ಯತೀಕರಣಭಾವದ ಕಾರಣದಿಂದಾಗಿ." ಸಂಕುಚಿತ ಮನಸ್ಸಿನ ವಿದ್ವಾಂಸರಿಂದ ಇಂತಹ ಅಚಾತುರ್ಯಗಳು ಈಗಲೂ ಎಲ್ಲೆಡೆ ನಡೆಯುತ್ತಿವೆ. "ಉಮರನು ತನ್ನ ಕವನಗಳಲ್ಲಿ ಮಾನವ ಜೀವನದ ಒಳತತ್ತ್ವಗಳನ್ನು ಕುರಿತು ವಿಚಾರ ಮಾಡತೊಡಗಿ ತನ್ನ ಅಂತರಂಗದ ಆಲೋಚನೆಗಳನ್ನು, ಭಾವ ಭಂಗಿಗಳನ್ನು, ಸಂದೇಹಗಳನ್ನು, ಅಭಿಲಾಷೆಗಳನ್ನು ಸರಸವಚನಗಳಿಂದ ಧ್ವನಿಗೊಳಿಸಿದ್ದಾನೆ. ಇದರಿಂದ ಇವನೊಬ್ಬ ದಾರ್ಶನಿಕ ಕವಿಯಾಗಿದ್ದನು ಎಂಬುದು ಸ್ಪಷ್ಟವಾಗುತ್ತದೆ. ಈತನ ತತ್ತ್ವನಿರ್ಣಯಗಳು ಎಷ್ಟು ಸಹಜ ಮತ್ತು ಅರ್ಥಪೂರ್ಣವೆಂಬುದು ಮುಂದೆ ತಿಳಿಯುತ್ತದೆ.

—(ಉ.ಖ. ಪು: 23 ಮತ್ತು 25)

ಉಮರನು "ಸೂಫಿ" ದರ್ಶನವು ಪ್ರಬಲಿಸುತ್ತಿದ್ದ ಕಾಲದವನು. "ದೃಷ್ಟಿಯಂತೆ ಸೃಷ್ಟಿ" ಎಂಬಂತೆ ಇವನು ಲೋಕದ ಕಣ್ಣಿಗೆ ಚಾರ್ವಾಕನಂತೆಯೂ, ಸೂಫಿಯಂತೆಯೂ, ವೇದಾಂತಿಯಂತೆಯೂ ಕಂಡಿದ್ದಾನೆ. ಈತನ ಜೀವನ ದರ್ಶನವನ್ನು ಅವಲೋಕಿಸಿದ ನಂತರ ಈ ಮೂರೂ ದೃಷ್ಟಿಗಳವರು ಅವನನ್ನು ಗೌರವಿಸಲು ಮುಂದಾಗುತ್ತಾರೆ.

ಡಿ.ವಿ.ಜಿ. ಅವರ ಸಂಶೋಧನೆಯ ಪ್ರಕಾರ "ಸೂಫಿ"ಯ ಅರ್ಥ ಹೀಗಿದೆ: "ವಸ್ಫ್" ಎಂದರೆ ದೇವರ ಗುಣ_ದೇವಸ್ವರೂಪವನ್ನು ಕುರಿತ ಮಾತು, ಅಥವಾ ಜಿಜ್ಞಾಸೆ—"ತಸವ್ವುಫಾ" "ತಸವ್ವುಫ್" ಉಳ್ಳವನು "ಸೂಫಿ". "ಸೂಫಿ" ಶಬ್ದಕ್ಕೆ ತುಪ್ಪಟದಿಂದಾದ ಬಟ್ಟೆ ಎಂದೂ ಅರ್ಥವುಂಟಂತೆ. ತುಪ್ಪಟದಂತೆ ಮೃದುವೂ ನಯವೂ ಆದ ಹೃದಯವುಳ್ಳವರು—"ಸೂಫಿ". ಅವರ ಮತ "ತಸವ್ವುಫ್". ಸೂಫಿಗಳು ತುಪ್ಪಟದ ಬಟ್ಟೆಯನ್ನು ಲಾಂಛನವಾಗಿಟ್ಟುಕೊಂಡಿದ್ದರಂತೆ. "ಸಾಫ್" "ಅಥವಾ "ಸಫಾಯಿಯ್" ಎಂದರೆ ಸರಳ, ಚೊಕ್ಕಟ ಎಂದರ್ಥ; ಸರಳನೂ ನಿರ್ಮಲನೂ ಆದವನು "ಸೂಫಿ"—ಹೀಗೆಂದೂ ನಿರ್ವಚನ ಹೇಳುವುದುಂಟು.

—(ಉ.ಖ. ಪು: 26)

"ಸುಮಾರು ಕ್ರಿ.ಶ. ೮೦೦ರಲ್ಲಿ ಉಮರನ ಕಾಲದ ಮುಹಮ್ಮದೀಯ ಮತದಲ್ಲಿ "ಸೂಫಿ" ಎಂಬ ಏಕಾಂತೋಪಾಸನೆಯ ಪಂಥವೊಂದು ಹೊರಬಿತ್ತು. ಮಹಮದ್ ಗುರುವು ಬೋಧಿಸಿದ್ದ ಧರ್ಮದ ಜೊತೆಗೆ ಕ್ರೈಸ್ತರ ವಿರಕ್ತಿ ಭಾವನನ್ನು, ಬೌದ್ಧರ ಆತ್ಮ ಸಂಯಮ ತತ್ತ್ವವನ್ನು ಸೇರಿಸಿಕೊಂಡು, ಜೀವಸ್ವರೂಪ ವಿಚಾರದಲ್ಲಿ ಬೌದ್ಧರ ಮತ್ತು ಗ್ರೀಕರ ಮತಗಳನ್ನು ಮುಹಮ್ಮದೀಯ ಮತದೊಡನೆ ಸಮನ್ವಯ ಪಡಿಸಿಕೊಳ್ಳುವ ಪ್ರಯತ್ನದ ಫಲಿತಾಂಶವೇ ಈ "ಸೂಫಿ" ಮತವೆಂದು ಕೆಲವರು ಹೇಳುತ್ತಾರೆ. "ಸೂಫಿ" ಸಿದ್ಧಾಂತವು ಹಿಂದೂ ಮತದ ವೇದಾಂತಕ್ಕೆ ಸರಿಹೋಗುತ್ತದೆ ಎಂದು ಇನ್ನು ಕೆಲವರು ಹೇಳುವರು. ಮನುಷ್ಯ ಜೀವನವು ಅಂತರ್ವಿರಕ್ತ ಪೂರ್ವಕವಾದ ಧ್ಯಾನಾನು ಸಂಧಾನಗಳ ಮೂಲಕ ಪರವಸ್ತುವಿನಲ್ಲಿ ಒಂದುಗೂಡಲಾಗುತ್ತದೆ—ಎಂಬುದು "ಸೂಫಿ" ಸಿದ್ಧಾಂತದ ಮುಖ್ಯಾಂಶ. ಸೂಫಿಗಳು ಅಂತರನುಭವಿಗಳು. "ಸುರಾಪಾನ" ಮೊದಲಾದ ವಚನಗಳು ಅವರ ಉಪಾಸನಾ ವಿಧಾನದ ಸಂಕೇತ ಪದಗಳು. ಹೆಂಡದಂಗಡಿ ಯೆಂದರೆ ಸಾಧು ಜಿಜ್ಞಾಸುಗಳ ಗೋಷ್ಠಿ; ಸಾಕಿ (ಸಖಿ) ಯೆಂದರೆ ಜ್ಞಾನವೃದ್ಧರಾದ ತತ್ತ್ವಾಭ್ಯಾಸಿ; ಬಟ್ಟಲೆಂದರೆ ಮನುಷ್ಯ ಹೃದಯ; (ಪ್ರಿಯೆಯೆಂದರೆ ವಿಚಾರ ಸಹ ಭಾಗಿಯಾದ ಸ್ನೇಹಿತ; ಗಂಧರ್ವನೆಂದರೆ ದೈವ ಸಾಕ್ಷಾತ್ಕಾರ ಪಡೆದ ಸಿದ್ಧ; ಮದ್ಯ ವೆಂದರೆ ಭಗವದ್ಭಕ್ತಿಯ ಆನಂದ–ಹೀಗಿದೆ ಆ ಜೀವಾತ್ಮ ಪರಮಾತ್ಮೈಕ್ಯಯೋಗದ ಪಾರಿಭಾಷಿಕ ಸರಣಿ. ಏವಂಚ, ಉಮರನ ದಿವಸಕ್ಕೆ ಹಿಂದೆಯೇ ಇಂಡಿಯಾ, ಪ್ಯಾಲೆಸ್ಟೈನ್, ಗ್ರೀಸ್ ಮೊದಲಾದ ದೇಶಗಳ ಮತ–ಮತಾಂತರಗಳ ಜ್ಞಾನವು ಪರ್ಷಿಯಕ್ಕೆ ಸಂಚಾರಮಾಡಿ, ಅಲ್ಲಿಯ ವಿಚಾರಶೀಲ ಜನರ ಮನಸ್ಸಿನಲ್ಲಿ ನೂತನ ಭಾವನೆಗಳನ್ನು ಹುಟ್ಟಿಸಲು ಮೊದಲು ಮಾಡಿತ್ತೆಂಬುದು ಸ್ಪಷ್ಟವಾಗಿದೆ. ಇದರ ಪರಿಣಾಮವಾದ "ಸೂಫಿ" ದರ್ಶನವು ಪ್ರಭವಿಸುತ್ತಿದ್ದ ಕಾಲದವನು ಉಮರ್. ಆತನು ಸ್ವಯಂ "ಸೂಫಿ" ಮತದವನೇ ಎಂದು ಕೆಲವರು ಬರೆದಿದ್ದಾರೆ. ಇವನ ಕವನಗಳನ್ನು ಓದುವಾಗ ಇವನು ಚಾರ್ವಾಕನಂತೆ ಕಾಣುವನು, ಆದರೆ ಒಳಹೊಕ್ಕು ನೋಡಿದಾಗ "ಚಾರ್ವಾಕ" ಎಂಬುದರ 'ಸಹಜ–ಸತ್ಯ' ದರ್ಶನವಾಗುವುದು. ಇದರ ಜೊತೆಗೆ ಅದರ ಹೊರನೋಟದ ಅಸಹನೀಯ ಸ್ವರೂಪವು ಕೇವಲ ಭ್ರಮೆ ಎಂಬುದು ಮನದಟ್ಟಾಗುವುದು.

—(ಉ.ಒ. ಪು: 26)

"ತತ್ತ್ವಚಿಂತಾವ್ಯಾಕುಲ, ರಾಜ್ಯವಿಚಾರ ಜುಗುಪ್ಸೆ, ಸರಸ ಜೀವನಾಭಿಮಾನ— ಈ ಮೂರು ಬಗೆಯ ಸಂದರ್ಭಗಳ ಗುರುತುಗಳು ಉಮರನ ಕೃತಿಯಲ್ಲಿ ಪ್ರತಿಧ್ವನಿಸುತ್ತವೆ. ಅದು ಜನಮನೋಭಾವದ ವ್ಯತ್ಯಾಸಕಾಲದಲ್ಲಿ ಹುಟ್ಟಿದ ಕಾವ್ಯ". ಉಮರನು ವಿಸ್ತಾರ ವಾಗಿ ದೇಶಾಟನೆ ಮಾಡಿದವನು. ಅರೇಬಿಯಾ, ಸಿರಿಯಾ, ಮೆಸೊಪೊಟೋಮಿಯಾ ದೇಶಗಳ ರಾಜಾಸ್ಥಾನಗಳನ್ನು ಪಂಡಿತ ಮಂಡಲಿಗಳನ್ನು ನೋಡಿದ್ದವನು; ಮುಹಮ್ಮದೀ ಯರ ಪ್ರಸಿದ್ಧ ಪುಣ್ಯಸ್ಥಲವಾದ "ಮೆಕ್ಕಾ" ಕ್ಷೇತ್ರಕ್ಕೂ ಯಾತ್ರೆ ಮಾಡಿದ್ದವನು."

—(ಉ. ಒ. ಪು: 28)

"ಉಮರನ ಮತ ವಿಷಯದ ಅಭಿಪ್ರಾಯಗಳು ಆತನ ಸಮಾಜದ ಪೂರ್ವಾಚಾರ ನಿಷ್ಠರಿಗೆ ಅಸಮ್ಮತವಾಗಿದ್ದುವೆಂಬುದೇನೋ ಖಂಡಿತ. ಆತನ ಕಾವ್ಯವನ್ನು ಅವರು ಚಾರ್ವಾಕ ಕೃತಿಯೆಂದು ಅಲ್ಲಗಳೆದರು. ನಮ್ಮ ದೇಶದಲ್ಲಿ ಪಂಡಿತರಾಜನೆಂದು ಪ್ರಸಿದ್ಧನಾಗಿರುವ ಜಗನ್ನಾಥ ಕವಿಯನ್ನು ವ್ರಾತ್ಯನೆಂದು ವೈದಿಕರು ದೂಷಿಸಿ ಬಹಿಷ್ಕರಿಸಿದರೆಂದು ಕಥೆಯಿಲ್ಲವೇ! ಪೂರ್ವ ಸಂಪ್ರದಾಯ ಶರಣರಾದವರು ಸಾಮಾನ್ಯ ಜನದ ವಿಷಯದಲ್ಲಿ ಎಷ್ಟು ಕರುಣೆ ವಿನಯಗಳನ್ನು ತೋರಿದರೂ, ತಮ್ಮ ದಾರಿಯನ್ನು ತುಳಿಯದಿರುವವರ ವಿಷಯದಲ್ಲಿ ಮಾತ್ರ ಸ್ವಲ್ಪವೂ ಸಹನೆ ಕನಿಕರಗಳನ್ನು ತೋರಲಾರರು. ಈ ಕಾರಣದಿಂದ ಉಮರನ ಕಾವ್ಯಕ್ಕೆ ಆತನ ಕಾಲದಲ್ಲಿ ಆ ದೇಶದ ವಿದ್ವದ್ಗೋಷ್ಠಿಯಲ್ಲಿ ಹೆಚ್ಚು ಮನ್ನಣೆ ದೊರೆಯದೆ ಹೋಯಿತು."

—(ಉ.ಖ. ಪು : 28–29)

"ಆದರೆ ಸಾಮಾನ್ಯ ಜನದ ಮನಸ್ಸು ಮತ ಚರ್ಚೆಯ ಭೇದಾಂಶವೊಂದನ್ನೇ ಲಕ್ಷ್ಯದಲ್ಲಿಟ್ಟುಕೊಂಡಿರುವುದಿಲ್ಲ. ಯುಕ್ತಿಯುಕ್ತವಾದ ಸರಸವಾಕ್ಯವನ್ನು ಕೇಳಿದೊಡನೆಯೇ ಅದು, ಮತಭೇದ ವಿವರಗಳನ್ನು ಮರೆತು, ಕುತೂಹಲದಿಂದ ಕಿವಿಗೊಟ್ಟು ಆಲಿಸುತ್ತದೆ. ಹೀಗೆ ಉಮರನ ಸ್ವತಂತ್ರ ವಾತಾವರಣದ ರೀತಿ (ಸಹಜ ಮಾನವರಾದ) ಸಾಮಾನ್ಯ ಜನಕ್ಕೆ ಇಷ್ಟವೇ ಆಯಿತು. ಕ್ರಮೇಣ ಆತನ ಕಾವ್ಯವು ಲೋಕ ಪ್ರಿಯವಾಗಿ, ಇತರ ಕವಿಗಳಿಗೆ ನೂತನ ಮಾರ್ಗ ಪ್ರದರ್ಶಕವೂ ಆಯಿತು."

"ಉಮರನು ಒಂದು ಶತಮಾನ ಪೂರ್ತಿಯಾಗಿ ಜೀವಿಸಿದಂತೆ ಕಾಣುತ್ತದೆ. ಆತನು ಸದಾ ಸಂತುಷ್ಟ ಚಿತ್ತನಾಗಿದ್ದು, ಸಂತೋಷದಿಂದ ಅವತಾರ ಮುಗಿಸಿದನಂತೆ." ಈ ಭಾಗ್ಯ ಎಷ್ಟು ಜನರಿಗಿದೆ?

—(ಉ.ಖ. ಪು : 29)

"ಉಮರನ ಕಡೆಯ ಗಳಿಗೆಯ ವಿಚಾರದಲ್ಲಿ ಇತ್ತೀಚಿನ ಲೇಖನ ಒಂದು ಸಂಗತಿಯನ್ನು ತಿಳಿಸುತ್ತದೆ. ಸಾಯುವ ದಿನ ಉಮರನು ಆ್ಯವಿಸೆನ್ನ (Avicenna) ಎಂಬ ತತ್ತ್ವವಾದಿ ಬರೆದ ಒಂದು ಗ್ರಂಥವನ್ನು ಓದುತ್ತ, ಒಂದು ಚಿನ್ನದ ಕಡ್ಡಿಯಿಂದ ಹಲ್ಲು ಚುಚ್ಚಿಕೊಳ್ಳುತ್ತ ಕುಳಿತಿದ್ದನಂತೆ. ಆ ಗ್ರಂಥದಲ್ಲಿ "ಏಕ ಮತ್ತು ಅನೇಕ" ಎಂಬ ಅಧ್ಯಾಯಕ್ಕೆ ಬರುತ್ತಲೇ ಆತನು ಆ ಚಿನ್ನದ ಹಲ್ಲುಕಡ್ಡಿಯನ್ನು ಅಲ್ಲಿ ಸಿಕ್ಕಿಸಿ, ಪುಸ್ತಕವನ್ನು ಮುಚ್ಚಿ, ಮೇಲಕ್ಕೆದ್ದು ಭಗವತ್ಪ್ರಾರ್ಥನೆ ಮಾಡಿ, ಅಲ್ಲಿದ್ದವರಿಗೆ ತನ್ನ ಕಡೆಯ ಕೋರಿಕೆಗಳನ್ನು ತಿಳಿಯಪಡಿಸಿದನಂತೆ. ಆ ಬಳಿಕ ಆತ ಆ ಹೊತ್ತೇ ಯಾವ ಆಹಾರವನ್ನು ಪಾನೀಯವನ್ನೂ ಮುಟ್ಟದೆ ಸಂಜೆಯವರೆಗೂ ಉಪವಾಸವಿದ್ದು, ಆಗ ಪುನಃ ದೇವತಾಸ್ತೋತ್ರ ಹೇಳಿ ನೆಲಕ್ಕೆ ಬಗ್ಗಿ ನಮಸ್ಕರಿಸಿ ಹೀಗೆಂದನಂತೆ:

"ಓ ಸ್ವಾಮಿ, ನನ್ನ ಶಕ್ತಿಗೆ ಸಾಧ್ಯವಾದಷ್ಟು ಮಟ್ಟಿಗೆ ನಿನ್ನನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇನೆ. ನನ್ನನ್ನು ಕ್ಷಮಿಸು. ನಿನ್ನನ್ನು ಕಾಣಲು ನಾನು ಮಾಡಿದ ಪ್ರಯತ್ನವೇ ನನ್ನ ವಿಷಯದಲ್ಲಿ ನಿನಗೆ ಒಪ್ಪಿಸಬಹುದಾದ ಸಹಾಯವಚನ (ಶಿಫಾರಸು)."

"ಓ ದೇವ ನೀನರಿವೆ ನಿನ್ನ ನಾನರಸುತ್ತೆ
ಪಟ್ಟಿಲ್ಲ ಪಾಡುಗಳನಾದವಿತು ಪಟ್ಟಿನ್ ;
ಎನಗೆ ಒಂದರಿವಿನಾ ಕೊರೆಯು ನೀಂ ಮರೆತುಬಿಡು,
"ನಾನರಿಸಿದವನೆಂದು ಕನಿಕರಿಸಿ ನೋಡು."—ಈ ಪ್ರಾರ್ಥನೆಯನ್ನು ಸಲ್ಲಿಸಿದ ಮೇಲೆ ಉಮರನು ನೆಲದ ಮೇಲೆ ಮಲಗಿ ಸಂಕಟವಿಲ್ಲದೆ ಯಾತನೆಯ ಸೂಚನೆಯಿಲ್ಲದೆ ದೇಹವನ್ನು ತೊರೆದನು."

"ಆತನ ಸಮಾಧಿಯು (ಪರ್ಷಿಯಾ ದೇಶದ, ಖೊರಾಸಾನ್ ಪ್ರಾಂತದ, ನೈಷಾಪುರ್‌ನಲ್ಲಿದೆ) ಬಳಿ ಈಗಲೂ ಅನೇಕರು ಯಾತ್ರಿಕರಾಗಿ ಹೋಗಿ ದರ್ಶನ ಮಾಡುತ್ತಾರಂತೆ".

"ಉಮರನ ಪದ್ಯಮಾಲೆ ಇಂಗ್ಲೀಷ್, ಫ್ರೆಂಚ್, ಜರ್ಮನ್, ರಷ್ಯನ್ ಮೊದಲಾದ ಐರೋಪ್ಯ ಭಾಷೆಗಳಿಗೆ, ಒಂದೊಂದರಲ್ಲಿಯೂ ಅನೇಕ ಮಂದಿ ವಿಪ್ವದ್ರಸಿಕರಿಂದ, ಪದ್ಯರೂಪಗಳಲ್ಲಿಯೂ, ಗದ್ಯರೂಪಗಳಲ್ಲಿಯೂ ತರ್ಜುಮೆಗೊಂಡಿವೆ. ಹಾಗೆಯೇ ಅವು ನಮ್ಮ ದೇಶದಲ್ಲಿಯೂ ಸಂಸ್ಕೃತ, ಮರಾಠಿ, ತೆಲುಗು ಮೊದಲಾದ ನಾನಾ ಭಾಷೆಗಳಿಗೆ ಪರಿವರ್ತಿತವಾಗಿವೆ. ನಮ್ಮ ದೇಶದ ಮೊಗಲಾಯಿ ಬಾದಷಹರಲ್ಲಿ ಅತ್ಯಂತ ಪ್ರಖ್ಯಾತನಾದ ಅಕ್ಬರ್ ಚಕ್ರವರ್ತಿಗೆ ಉಮರನ ಕಾವ್ಯವು ಅತಿ ಪ್ರಿಯವಾಗಿತ್ತೆಂದು ಹೇಳುತ್ತಾರೆ. ಹೆಚ್ಚೇಕೆ ? ಸಮಸ್ತ ಭೂಮಂಡಲದ ಅತ್ಯುತ್ತಮ ಕಾವ್ಯರತ್ನಗಳ ಪೈಕಿ ಉಮರನ ಕೃತಿ ಒಂದೆಂದು ಸಹೃದಯರಾದ ಪಂಡಿತರು ಅಂಗೀಕರಿಸಿದ್ದಾರೆ. "ಭಗವದ್ಗೀತೆ", "ಬೈಬಲ್" ಗ್ರೀಕ್ ನಾಟಕಗಳು, ಷೇಕ್ಸ್‌ಪಿಯರಿನ ನಾಟಕಗಳು ಮೊದಲಾದ ಕೆಲವು ಗ್ರಂಥಗಳನ್ನು ಬಿಟ್ಟರೆ, ಉಮರನ ಕಾವ್ಯದ ಸಂಬಂಧದಲ್ಲಿ ಹುಟ್ಟಿರುವಷ್ಟು ಅನುವಾದಗಳೂ ವ್ಯಾಖ್ಯಾನಗಳೂ ಪ್ರಬಂಧಗಳೂ ಪ್ರಪಂಚದ ಮತ್ತಾವ ಕಾವ್ಯದ ವಿಷಯದಲ್ಲಿಯೂ ಆಗಿಲ್ಲವೆಂದು ಹೇಳಬಹುದು."

"ಉಮರನ ಗ್ರಂಥದ ಸ್ವರೂಪವನ್ನು ಕುರಿತು—ಎಂದರೆ, ಅದರ ಪದ್ಯ ಸಂಖ್ಯೆ ಪಾಠ ಭೇದಗಳು, ಅರ್ಥ ವಿಶೇಷಗಳು, ತತ್ತ್ವವಿಮರ್ಶೆ ಅದರ ಕವಿತಾ ಗುಣ ತೋಲನೆ ಇವುಗಳನ್ನೊಳಗೊಂಡ ಸಾಹಿತ್ಯ ಅಪಾರವಾಗಿದೆ."

—(ಉ.ಒ. ಪು : 30–31)

ಮಾನವನು ತನಗೆದುರಾದ ಯಾವುದೇ ಸಮಸ್ಯೆಗಳನ್ನು ಬಿಡಿಸಲು ಮಾಡುವ ಪ್ರಯತ್ನ ಒಂದಾದರೆ, ಆ ಪ್ರಯತ್ನ ಅಪ್ರಯತ್ನವಾಗಿಯೇ ಉಳಿದಾಗ, ನಿರಾಶನಾಗದೆ. ಆಶಾವಾದಿಯಾಗಿ ವರ್ತಮಾನವನ್ನು ಮುಗಿಸಲು ಮಾಡುವ ಪ್ರಯತ್ನ ಇನ್ನೊಂದು. ಉಮರ್ ಮತ್ತು ಇವನನ್ನು ಲೋಕಕ್ಕೆ ಪರಿಚಯಿಸಿದ ಫಿಟ್ಸ್‌ಜೆರಾಲ್ಡ್—ಈ ಇಬ್ಬರಲ್ಲಿಯೂ ಮೇಲಿನ ಎರಡೂ ಪ್ರಯತ್ನಗಳೂ ಹಾಸು ಹೊಕ್ಕಾಗಿವೆ. ಇವರಿಬ್ಬರೂ ಕೃತಕತೆಯನ್ನು ದ್ವೇಷಿಸುತ್ತಾ ಸಹಜ ವರ್ತಮಾನ ಜೀವನವನ್ನು ಅಪ್ಪಿಕೊಂಡು ನೆಮ್ಮದಿಯಿಂದ ಕಣ್ಮುಚ್ಚಿದವರು.

ಈ ಮಹನೀಯರ ಜೀವನಕ್ಕೆ ವಿರುದ್ಧವಾದ ದ್ವಿಮುಖ ವ್ಯಕ್ತಿತ್ವವುಳ್ಳವರು ಇದ್ದಾರೆ. ಇವರಲ್ಲಿ ಬಹಳ ಮಂದಿ ಆಸ್ತಿಕರು, ಸಂಪ್ರದಾಯ ಶರಣರು, ನೀತಿ ಶುದ್ಧಿವಾದಿಗಳು ಎಂಬ ಮುಖವಾಡ ಧರಿಸಿರುವವರು. ಪೂರ್ಣ ಪರಾವಲಂಬಿ ಜೀವನ ಇವರದು. ಇಡೀ ಜಗತ್ತು ಇವರ ಭೋಗದ ವಸ್ತು. ಆದರೂ ಇವರು ಆಸ್ತಿಕ ದಾರ್ಶನಿಕರಂತೆ. ಶ್ರೀ ಸಾಮಾನ್ಯನನ್ನು ನಿರಂತರ ಹಸಿವಿನ ದವಡೆಗೆ ಸಿಕ್ಕಿಸಿ, ಜ್ಞಾನಿಗಳಾಗದಂತೆ ಮಾಡಿ, ಸಹಜ ಜೀವಿಗಳನ್ನು 'ಭೋಗಿ ಚಾರ್ವಾಕ'ರೆಂದು ಅಸಹ್ಯವಾಗಿ ನೋಡಿ, ಗಗನ ಕುಸುಮವಾದ ಆಸ್ತಿಕ ಆದರ್ಶಗಳನ್ನು ಬೋಧಿಸುತ್ತಾ, ನಾಡಿನ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ಜ್ಞಾನ-ವಿಜ್ಞಾನ ಕೇಂದ್ರಗಳ ಪ್ರಮುಖ ಸ್ಥಾನಗಳಲ್ಲಿ ಸಾಮ್ರಾಟರಂತೆ ಪರಮ ಸುಖಿಗಳಾಗಿದ್ದಾರೆ. ಕಪಟ, ದ್ರೋಹ, ಶೋಷಣೆ ಮೊದಲಾದ ಅಧರ್ಮ ವೃತ್ತಿಯ ಈ ಕೃತಕ ನೀತಿ ಶುದ್ಧಿವಾದಿಗಳ ಕೈಯಲ್ಲಿ, ಸಹಜ ಧರ್ಮಿಗಳನ್ನು ಟೀಕಿಸಲು, ಖಂಡಿಸಲು, ಇರುವ ಮಹಾ ಅಸ್ತ್ರವೆಂದರೆ 'ಇವನು ಚಾರ್ವಾಕ' ಎನ್ನುವ ಮಾತು. ಇಂತಹ ಕಪಟ ಆದರ್ಶವಾದಿಗಳಿಂದ, ಸಹಜ ಹೋರಾಟ, ಸತ್ಯ, ಆದರೆ ಬೆತ್ತಲೆಯಾದ, ಅಂದರೆ, ಮುಚ್ಚುಮರೆಯಿಲ್ಲದ ಸಹಜ ಜೀವನ ಮಾರ್ಗ ಸಾಧ್ಯವೇ ಇಲ್ಲ. "ಇವನು ಚಾರ್ವಾಕ"—ಎಂದು ದೂಷಣೆ ಮಾಡುವ ಯಾರೇ ಆಗಲಿ, ಅವರ ಜೀವನದ ಒಳಮುಖ ಕಪ್ಪಾಗಿರುತ್ತದೆ, ಬಿಳುಪಲ್ಲ. ಶುಭ್ರವಾದ ಜೀವನವುಳ್ಳವರು ಟೀಕೆ, ಖಂಡನೆ, ಕುಚೋದ್ಯಗಳಿಂದ ಎಂದೆಂದಿಗೂ ಬಹಳ ದೂರವೇ ಉಳಿಯುವರು. ಹೀಗೆ ದೂರ ಉಳಿದು, ಕೇವಲ ಆತ್ಮವಿಮರ್ಶೆಯಲ್ಲೇ ಜೀವನ ನವೆಸಿದವರು. "ಚಾರ್ವಾಕ, ಸೂಫಿ, ವೇದಾಂತಿ" ಎಂದು ಹೆಸರಿಸಿಕೊಂಡ ಉಮರ್, ಇಂತಹ ಸ್ವಾವಲಂಬಿ, ಸ್ವತಂತ್ರ, ಸಹಜ ಜೀವನ ನಡೆಸಿದ ಚಾರ್ವಾಕ ಉಮರನಂತಹವರನ್ನು ಪರಾವಲಂಬಿ, ಪರತಂತ್ರ, ಅಸಹಜ ಜೀವನ ನಡೆಸುತ್ತಿರುವ ಆಸ್ತಿಕ ಆದರ್ಶ ಪುರುಷರು ಎಂದಿಗೂ ಒಪ್ಪುವದಿಲ್ಲ.

ಸಹಜ ಮಾನವರ ಜೀವನ ದರ್ಶನವನ್ನು ಡಿ.ವಿ.ಜಿ. ಅವರು ಮನೋಜ್ಞವಾಗಿ ಈ ಕೆಳಗಿನ ಮಾತುಗಳಲ್ಲಿ ವರ್ಣಿಸುತ್ತಾರೆ : "ಸೃಷ್ಟಿಯಾದಂದಿನಿಂದ ಮಾನವ ಪ್ರಾಣಿಯ ಎದೆಯನ್ನು ಒಂದಿಲ್ಲದಿದ್ದರಿನ್ನೊಂದು ಚಿಂತೆಯ ಭಾರ ಒತ್ತುತ್ತಲೇ ಇದೆ; ಹಾಗೆಯೇ, ಆ ಭಾರವನ್ನು ತಳ್ಳಿಹಾಕಲಾಗದಿದ್ದರೆ ಮರೆಯಲಾದರೂ ಬೇಕೆಂಬ ಆಸೆಯೊಂದು ಸೇರಿಕೊಂಡೇ ಇದೆ. ತನ್ನ ಜೀವನಕ್ಕೆ ತಾನು ಅಧಿಕಾರಿಯಾಗಿಲ್ಲವಲ್ಲಾ ! ಎಂಬ ಕೊರಗಿನಿಂದ ಉಂಟಾದದ್ದು ಆ ಮನೋಭಾರ; ದೊರೆತಷ್ಟು ಅವಕಾಶದಿಂದ ಆದರೂ ಉಲ್ಲಾಸಪಡಬೇಡವೆ?—ಎಂಬುದು ಆ ರಾಗೋದ್ರೇಕ. ಆ ಚಿರಂತನ ಪ್ರತೀಕ್ಷ್ಯ ಸಂಭ್ರಮ—ಇವೆರಡೂ ಮಾನವ ಚರಿತ್ರೆಯ ಹಾಸು ಹೊಕ್ಕುಗಳು. ಇವೆರಡೇ ಉಮರನ ಕಾವ್ಯಕ್ಕೂ ಆದಿದ್ರವ್ಯ".

—(ಉ. ಬ. ಪು : 47-48)

ಜಗತ್ತೆಂಬುದೇನು? ನಾನೆಂಬುದೇನು? ಜಗತ್ತು ನನಗೇನು? ನಾನು ಜಗತ್ತಿ

ಗೇನು ?—ಇಂಥ ಪ್ರಶ್ನೆ ಪರಂಪರೆಗಳ ಕಾಡಸ್ನು ಮನುಷ್ಯನ ಅಂತರಂಗದಲ್ಲಿ ಪ್ರಕೃತಿ ನೆಟ್ಟಿದ್ದಾಳೆ. ಮನುಷ್ಯ ಬುದ್ಧಿ ಎಂದು ಕಣ್ಣು ಬಿಟ್ಟಿತೋ ಅಂದು ಅದು ಕೇಳಿದ ಪ್ರಶ್ನೆಗಳು ಅವು. ಅವನ್ನು ನಾವು ಇನ್ನೂ ಪುನಃ ಪುನಃ ಕೇಳುತ್ತಲೇ ಇದ್ದೇವೆ. ಅವಕ್ಕೆ ತಕ್ಕ ಸಮಾಧಾನ ದೊರೆತಂದು ಜೀವನದ ಅರ್ಥವೇನೆಂಬುದು ನಮ್ಮ ಮನಸ್ಸಿಗೆ ವಿಶದ ಪಟ್ಟೀತು. ಲೋಕದಲ್ಲಿ ನಮ್ಮ ಕರ್ತವ್ಯವೇನೆಂಬುದನ್ನು ಆಗ ನಾವು ನಿಸ್ಸಂಶಯವಾಗಿ ಕಂಡುಕೊಳ್ಳಲಾದೀತು. ಅಂಥ ಉತ್ತರ ದೊರೆಯುವವರೆಗೂ ನಮ್ಮ ಜೀವನವೆಲ್ಲ ಅರೆ ಕುರುಡರ ಹಾರಾಟವೇ, ಅಥವಾ ಅದೃಷ್ಟದ ಹುಡುಕಾಟವೇ ''.

—(ಉ.ಒ. ಪು : 48)

ಆಸ್ತಿಕ ದಾರ್ಶನಿಕರು ಸದಾ ಅಸಹನೀಯವಾಗಿ ನೋಡುವ ಚಾರ್ವಾಕರನ್ನು ಈ ಚಾರ್ವಾಕರ ಪ್ರತಿನಿಧಿಯಾಗಿ ಕಂಡುಬರುವ ಉಮರನ ಜೀವನ ದರ್ಶನವನ್ನು ಅವನಿಂದಲೇ ಡಿ.ವಿ.ಜಿ. ಅವರು ಹೀಗೆ ಹೇಳಿಸುತ್ತಾರೆ: " ಈ ಲೋಕದಲ್ಲಿ ಸತ್ಯವಾವುದೋ ಸರಿಯಾವುದೋ ಯಾರೂ ಖಂಡಿತವಾಗಿ ಹೇಳುವವರಿಲ್ಲ (ಆಸ್ತಿಕ ನಾಸ್ತಿಕರಿಬ್ಬರಲ್ಲಿಯೂ !). ತಿಳಿದೆವೆಂದು ಹೇಳಿಕೊಳ್ಳುವವರಲ್ಲಿ ಒಮ್ಮತವಿಲ್ಲ. ಆಯುಸ್ಸು ಮಿತವಾಗಿದೆ, ಚಿಂತೆ ಅಪಾರವಾಗಿದೆ. ಈ ಹೊತ್ತು ಜೀವಂತ ದೇಹವಾಗಿರುವುದು ನಾಳೆ ಮಣ್ಣಾಗುತ್ತಿದೆ. ನಾಳಿದ್ದು ಅದೇ ಮಣ್ಣೇ ಮಡಕೆಯಾಗಿ ನಮಗೆ ನೀರನ್ನೋ ಹಾಲನ್ನೋ ಹಿಡಿದು ತರುತ್ತದೆ. ಈ ಹೊತ್ತು ಯಾವ ಸೊಬಗು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತಿದೆಯೋ ಆ ಸೊಬಗಿಗೆ ಮನೆಯಾಗಿರುವ ಮೈಯೇ ನಾಳೆ ಧೂಳಿನಲ್ಲಿ ಧೂಳಾಗುತ್ತದೆ. ಅದೇ ಧೂಳು ಪುನಃ ಹುಲ್ಲಾಗಿಯೋ ಹೂವಾಗಿಯೋ ಎದ್ದು ನಾಳಿದ್ದು ಪುನಃ ನಮ್ಮಂಥ ಇನ್ನೊಬ್ಬರಿಗೆ ತನ್ನ ಸೊಬಗಿನಿಂದ ಪ್ರಿಯವಾಗುತ್ತದೆ. ಹೀಗೆ ಯಾವುದೂ ಶಾಶ್ವತವಲ್ಲ. [ಈ ಹೇಳಿಕೆ ಬುದ್ಧನ ಕ್ಷಣಭಂಗುರವಾದಕ್ಕೆ ಸ್ಪಷ್ಟ ನಿದರ್ಶನವಾಗಿದೆ]. ಎಲ್ಲ ಕನಸು ; ಎಲ್ಲ ಮನಃ ಕಲ್ಪನೆ ; ಎಲ್ಲ ಭ್ರಾಂತಿ ; ಎಲ್ಲ ಬರಿಯ ಉಸಿರು. ಮೃತ್ಯು ಒಂದೇ ಸತ್ಯ. ಹೀಗಿರುವಲ್ಲಿ, ಅತಿ ಚಿಂತೆಯಿಂದ ಆಗುವುದೇನು ? ದೊರೆತಷ್ಟು ಸುಖ ಸಾಮಗ್ರಿಯನ್ನು ಭೋಗಿಸಿ ಉಲ್ಲಾಸದಿಂದಿರೋಣ. ಸಂಕಟ ಸಾಮಗ್ರಿಯ ನಡುವೆ ಸಂತೋಷ ಸಾಧನಗಳೂ ಉಂಟು. ಒಂದು ಸಲ ಗುಲಾಬಿಯನ್ನು ಮೂಸಿದ್ದಾದರೂ ಲಾಭವೇ. ಭೋಗಾನುಭೋಗ ಇರುವಷ್ಟು ಕ್ಷಣವಾದರೂ ಗೋಳು ಮರೆತಿರುತ್ತದೆ. ನಿತ್ಯವೂ ನಡೆಯುತ್ತಿರುವ ಸರ್ವವಿನಾಶವನ್ನು ನೋಡಿದರೆ ಸುಖ ಚಿಂತೆ ಶ್ರೇಷ್ಠತಾ ಚಿಂತೆಗಳು ನಮಗೆ ಸ್ವಯಂಕೃತ ಕ್ಲೇಶವೆಂದು ಗೋಳಾಡುವುದಕ್ಕಿಂತ ಕೈಯಲ್ಲಿರುವ ಅಲ್ಪಸ್ವಲ್ಪವನ್ನು ಯಾಕೆ ಅನುಭವಿಸಬಾರದು ? ಎಂಬ ಪ್ರಶ್ನೆಯ ಮೂಲಕ ನೋವಿನ ಉಪಶಮನದ ಮಾರ್ಗವನ್ನು ತೋರಿಸುತ್ತಾನೆ. ಇದೇ ಉಮರನಿಗೆ ಹೆಚ್ಚಾಗಿ ದೊರೆತಿರುವ ಪ್ರೀತಿ ಪ್ರಸಕ್ತಿಗಳಿಗೆ ಕಾರಣ.''

—(ಉ.ಒ. ಪು : 51-54)

" ಮನುಷ್ಯನಿಗೆ ತನ್ನ ಗೋಳನ್ನು ಯಾರು ನುಡಿಯುತ್ತಾರೋ ಅಂಥವರು

ಸ್ವಾಭಾವಿಕವಾಗಿ ಮಿತ್ರರಾಗುತ್ತಾರೆ. ಆದರೆ ಯಾರು ತಮ್ಮಂತೆ ಗೋಳಾಡಿ, ಗೋಳಾಡು ವುದರ ಜೊತೆಗೆ ಒಂದಿಷ್ಟು ಉಲ್ಲಾಸವನ್ನೂ ಒದಗಿಸುತ್ತಾರೋ ಅವರು ಇನ್ನೂ ಹೆಚ್ಚಿನ ಮಿತ್ರರಾಗುತ್ತಾರೆ'' ಎಂದು ಡಿ.ವಿ.ಜಿ. ಅವರೇ ಹೇಳುವಾಗ "ಚಾರ್ವಾಕ''– "ಸೂಫಿ''ಯಾದ ಉಮರನು ನಮಗೆ ಪರಮಾಪ್ತ ಮಿತ್ರನಾಗಿ ಕಂಡು ಬರುತ್ತಾನೆ. ಈ ಸಂದರ್ಭದಲ್ಲಿ ನಾಸ್ತಿಕನಾದ ಬುದ್ಧನೂ ನಮ್ಮ ನೆಚ್ಚಿನ ಹಿತ ಚಿಂತಕನಾಗುತ್ತಾನೆ. ಏಕೆಂದರೆ, ಅವನೂ ಕೂಡ ನಮ್ಮ ನೋವು ನಿವಾರಣಾರ್ಥ ಬದುಕಿದನೇ ಹೊರತು ಅಗೋಚರ ಹಾಗೂ ಬಹುದೂರವಾದ ದೇವರು, ಪುನರ್ಜನ್ಮಗಳಿಗಾಗಿ ಬದುಕಲಿಲ್ಲ. "ಬದುಕು ನೋವಿನಿಂದ ತುಂಬಿದೆ. ಇದಕ್ಕೆ ಅಜ್ಞಾನವೇ ಕಾರಣ. ನನ್ನಂತಹ ನೂರು ಬುದ್ಧರು ಬಂದರೂ ನಿಮ್ಮ ನೋವನ್ನು ದೂರ ಮಾಡಲಾಗುವುದಿಲ್ಲ. ನಿಮ್ಮ ನೋವನ್ನು ನೀವೇ ಸ್ವತಃ ಇಲ್ಲವಾಗಿಸಬೇಕು. ಇಂದೇ ಆ ಪ್ರಯತ್ನವ ಮಾಡಿ. ನಾಳೆಗಾಗಿ ಕಾಯುವುದು ವ್ಯರ್ಥ''—ಎಂದು ಜಗತ್ತಿಗೆ ಸಾರಿದ್ದಾನೆ ಬುದ್ಧ.

ಡಿ.ವಿ.ಜಿ. ಅವರು ಮುಂದುವರಿದು ಹೇಳುತ್ತಾರೆ: (ಉ.ಒ. ಪು: ೫೪) ಉಮರನ ಸಿದ್ಧಾಂತ ಸರ್ವಾಂಗೀಕೃತವಾಗಿದೆಯೆಂದಾಗಲಿ ಅದು ಸರ್ವ ಸಮರ್ಪಕವಾಗಿದೆ ಯೆಂದಾಗಲಿ ಯಾರು ತಾನೇ ಹೇಳಿಯಾರು? ಆಪ್ಯಾಯನದ ದಾರಿಯಲ್ಲಿ ನಮ್ಮನ್ನು ಕರೆದುಕೊಂಡು ಹೋಗುವಾಗ ಉಮರನು ಆಡುವ ಎಷ್ಟೋ ಮಾತುಗಳು ನೇಮಿಷ್ಟರ ಕಿವಿಗೆ ಶೂಲಪ್ರಾಯವಾಗಬಹುದು. ದೇವರಿದ್ದರೇನು? ಅವನಿಂದ ಆಗುವುದೇನು?— ಎಂದೆನ್ನುವಂತೆ ಇರುತ್ತದೆ ಉಮರನ ಮಾತು. ಲೋಕಾಂತರ ಕಥೆ ನಂಬಿಕೆಗೆ ಅರ್ಹ ವಾದದ್ದಲ್ಲವೆನ್ನುತ್ತಾನೆ ಅವನು. ಸಂದಿಗ್ಧವಾದದ್ದರ ಮೇಲೆ ನಂಬಿಕೆ ಹೂಡಿ, ಸಿದ್ಧವಾಗಿರುವುದನ್ನು ಏಕೆ ಬಿಡುತ್ತೀರಿ–ಎನ್ನುತ್ತಾನೆ, "ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾ ಮಟತಿ ದುರ್ಮತಿಃ'' ಇದು ಅವನಿಗೆ ಪರಲೋಕೈಕ ದೃಕ್ಕುಗಳ ಮೇಲೆ ಇರುವ ಆಕ್ಷೇಪಣೆ''

—(ಉ.ಒ. ಪು: 54)

"ಪ್ರತ್ಯಕ್ಷವಾಗಿರುವುದನ್ನು ಅವನು ಪ್ರಮಾಣವಾಗಿ ಗ್ರಹಿಸುತ್ತಾನೆ. ಶಾಸ್ತ್ರ ಸಂಪ್ರದಾಯಗಳನ್ನು ನೋಡಿ ನಗುತ್ತಾನೆ. ದ್ರಾಕ್ಷಾರಸದ ಮಾಧುರ್ಯ, ಗುಲಾಬಿಯ ಸೌರಭ, ಚಂದ್ರನ ಶೀತಲ ಶಾಂತಿ, ಪ್ರಿಯೆಯ ಸರಾಗ ಸಾನ್ನಿಧ್ಯ–ಇವಿಷ್ಟು ಲಭ್ಯವಾಗಿರು ವಾಗ ಬೇರೆ ಚಿಂತೆಗಳು ಏಕೆನ್ನುತ್ತಾನೆ. ಇದು ಸಂಪ್ರದಾಯ ವಿಶ್ವಾಸಿಗಳಿಗೆ ಅಪರಾಧ ವಾಗುತ್ತದೆ. ಅವರು ಇದನ್ನು ಚಾರ್ವಾಕಮತ ಎನ್ನುತ್ತಾರೆ. ಅವನು ದೇವರೊಡನೆ ಸ್ನೇಹಿತನಂತೆ ಮಾತನಾಡುತ್ತಾನೆ, ಹಂಗಿಸುತ್ತಾನೆ, ಹಾಸ್ಯಮಾಡುತ್ತಾನೆ, ಮೂದಲಿ ಸುತ್ತಾನೆ, ಹಟಮಾಡುತ್ತಾನೆ. ಇದು ಭಕ್ತಿಯ ಒಂದು ರೀತಿಯೆಂದು ಸಾಂಪ್ರದಾಯ ಕರಿಗೆ ತೋರುವುದಿಲ್ಲ; ಅವನದು ಅವಿನಯವೆಂದು ರೇಗಾಡುತ್ತಾರೆ; ಅವನು ಮತ್ತಷ್ಟು ನಗುತ್ತಾನೆ. ಆದರೆ ಶಾಸ್ತ್ರ ಸಂಪ್ರದಾಯಗಳಿಂದ ಕಣ್ಣುಪಟ್ಟಿ ಕಟ್ಟಿಕೊಂಡಿರದ ಸಾಮಾನ್ಯ ಜನರಿಗೆ ಉಮರನ ಭಾವ ಪ್ರಕಾರಗಳಲ್ಲಿ ಅಸಹಜವಾದದ್ದೇನೂ ತೋರು

ವುದಿಲ್ಲ. ದೇವರೆಂದು ನಂಬಿ ಮೊರೆಯಿಟ್ಟು, ಹರಕೆ ಹೊತ್ತು, ಕೊನೆಗೆ ಹೊಟ್ಟೆಯುರಿ ಪಟ್ಟವರು ಲೋಕದಲ್ಲಿ ಕೊಂಚ ಮಂದಿಯೇ? ಅಂಥವರಿಗೆಲ್ಲ ಉಮರನ ಧ್ವನಿಯು ಸ್ವಪಕ್ಷದ ವಕೀಲನ ಧ್ವನಿಯಂತೆ ಇರುತ್ತದೆ.''

—(ಉ.ಒ. ಪು: 55)

ಚಾರ್ವಾಕರೆಂದರೆ ಅನೀತಿವಂತರು. ಅಘವರ್ಗಗಳು ಎಂಬುದು ಕಪಟ ಸಂಪ್ರದಾಯಿಕರು ಮತ್ತು ನೀತಿ ಶುದ್ಧಿವಾದಿಗಳಿಂದ ವಿಪರೀತ ಪ್ರಚಾರಮಾಡಲ್ಪಟ್ಟಿದೆ. ಆದರೆ, ಚಾರ್ವಾಕನೆಂದೇ ಕರೆಯಿಸಿಕೊಂಡ ಉಮರನು ಬಹು ಸಂಖ್ಯಾತರಾದ ಶ್ರೀಸಾಮಾನ್ಯರಿಗೆ ಪ್ರಿಯನಾಗಲು ಇರುವ ಕಾರಣಗಳನ್ನು ಡಿ.ವಿ.ಜಿ. ಅವರು ಹೀಗೆ ವಿವರಿಸಿದ್ದಾರೆ: “ಮಧುವಿನಲ್ಲಿ ಕಹಿ ಸ್ವಲ್ಪ ಉಂಟೆಂದು ಉಮರನು ಹೇಳಿದ್ದಾನೆ. ಅವನ ಕಾವ್ಯದಲ್ಲಿಯೂ ಹಾಗೆ ಎರಡು ಗುಣಗಳು ಸಮ್ಮಿಶ್ರಿತವಾಗಿವೆ. ಅಪನಂಬಿಕೆಯೊಡನೆ ನಂಬಿಕೆ; ಮೃತ್ಯು ಸ್ಮರಣೆಯೊಡನೆ ಜೀವನಾನಂದ; ಉಲ್ಲಾಸ ಪ್ರೀತಿಯೊಡನೆ ಅದೃಷ್ಟ ವಿಡಂಬನ; ವಿರಕ್ತಿಯೊಡನೆ ಆಸಕ್ತಿ. ನಿಂಬೆಯ ಹಣ್ಣಿನ ಪಾನಕದಲ್ಲಿ ಸಕ್ಕರೆ ಹುಳಿಗಳೆರಡೂ ಸೇರಿ ರುಚಿಗೆ ಒಂದು ವಿಚಿತ್ರ ಸ್ವಾರಸ್ಯವನ್ನು ಕೊಡುವಂತೆ, ಉಮರನ ವಾಕ್ಕು ಚಿಂತಾತಪ್ತ ಸಂತೋಷಪ್ರಿಯರಿಬ್ಬರಿಗೂ ಮನಮೋಹಕವಾಗಿದೆ. ಆ ಇಬ್ಬರೂ ಯಾವ ಮನುಷ್ಯ ಹೃದಯದಲ್ಲಿ ತಾನೇ ಅಡಗಿಲ್ಲ? ಅವರು ಇಬ್ಬರಂತೆ ಕಂಡರೂ ನಿಜವಾಗಿ ಇಬ್ಬರಲ್ಲಿ ಒಬ್ಬನೇ,–ಒಂದೇ ಮುಖದ ಅಳುವು ನಗುವುಗಳಂತೆ. ಆ ದ್ವಂದ್ವತೆ ಪ್ರಕೃತಿ ಪ್ರತಿಷ್ಠಿತ. ಅದೇ ಅನಂತ ಮಾನವ ನಾಟಕದ ಕಥಾಗರ್ಭ. ಅದೇ ನಿತ್ಯ ಜಗತ್ಪ್ರವಾಹದ ಗಂಗಾ ಮೂಲ.''

—(ಉ.ಒ. ಪು: 63)

ಚಾರ್ವಾಕರು ಭೋಗ ಪ್ರಧಾನವಾದ ಜೀವಿಗಳು ಎಂದು ಪ್ರಚಾರವಿದೆ. ಸಾಂಪ್ರದಾಯಿಕರು ಸತತ ಬೆಂಬಲಿಸುವ ಯೋಗ ಜೀವನಕ್ಕೂ ಆಧಾರವಾಗಿದೆ ಈ ಚಾರ್ವಾಕರ ಭೋಗ ಜೀವನ ಎಂಬುದನ್ನು ಡಿ.ವಿ.ಜಿ. ಅವರು ಚನ್ನಾಗಿ ವಿವರಿಸಿದ್ದಾರೆ: ಭೋಗೇಚ್ಛೆ ಸ್ವಭಾವ ಸಿದ್ಧವಾಗಿ ಬಂದದ್ದು; ‘ತ್ಯಾಗ–ಬುದ್ಧಿ ಪ್ರಯತ್ನದಿಂದ ಸಂಪಾದಿಸಬೇಕಾದದ್ದು. ಸ್ವಾಭಾವಿಕವಾದ ಮನೋವೃತ್ತಿಯನ್ನು ಸ್ವಭಾವದಮನದ ಕಡೆಗೆ ತಿರುಗಿಸುವುದು ಹೇಗೆ? ಇದು ಬಹು ಪುರಾತನ ಪ್ರಶ್ನೆ. ಪ್ರಿಯವಾದದ್ದಕ್ಕೂ ಶ್ರೇಯಸ್ಸಾದದ್ದಕ್ಕೂ ಇರುವ ವೈಷಮ್ಯವನ್ನು ಉಪನಿಷದಾಚಾರ್ಯರೇ ಕಂಡುಕೊಂಡಿದ್ದರು. ಆದರೆ ಅನೇಕಕ್ಕೂ ನಡುವೆ ನಮಗೆ ಕಾಣುವ ಮಹಾಗರ್ತವನ್ನು ದಾಟಲು ಇನ್ನೇನೂ ಒಂದು ರಾಜ ಸೇತುವೆಯನ್ನು ಕಟ್ಟಿರುವಂತಿಲ್ಲ. ಕೊಂಚ ಭೋಗಗಳನ್ನು ಭುಂಜಿಸಿ ಕೊಂಚ ಭೋಗಗಳನ್ನು ತ್ಯಜಿಸುವ, ಉಭಯ ಮಿತಿಯ ನಯವನ್ನು ದೀರ್ಘಕಾಲ, ಸತತವಾಗಿ, ಸಾವಧಾನವಾಗಿ ಅಭ್ಯಾಸಮಾಡುವ ಉಪಾಯವೊಂದರಿಂದಲೇ ಆ ಗರ್ತತರಣ ಸಾಧ್ಯವಾದೀತೆಂದು ಅವರು ತಿಳಿದುಕೊಂಡಿದ್ದಂತೆ ಕಾಣುತ್ತದೆ. ಅದರಿಂದ ನಿಜವಾದ ವಿರಕ್ತಿ ಸಾಧ್ಯವಾಗದು. ಮಿಡಿಗಾಯನ್ನು ಹಿಸುಕಿ ಮಾಡಿದ ಹಣ್ಣಿನಲ್ಲಿ ತಾನಾಗಿ ಮಾಗಿದ

ಹಣ್ಣಿನ ಸ್ವಾರಸ್ಯ ಬರಲಾರದು. [ಇದಕ್ಕಾಗಿಯೆ ಹಿಂದೂ ಜೀವನ ಪದ್ಧತಿಯಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಆಶ್ರಮಗಳನ್ನು ಆಶ್ರಮ ಧರ್ಮಗಳಾಗಿ ಒಂದಾದನಂತರ ಮತ್ತೊಂದನ್ನು ಸೂಚಿಸಿರುವರು. ಈ ನಾಲ್ಕು ಆಶ್ರಮಗಳಲ್ಲಿ ಕ್ರಮವಾಗಿ ಜೀವನ ನಡೆಸಿ ಬಂದವರಲ್ಲಿ ಕಾಣುವ ವೈರಾಗ್ಯವು ಮರದಲ್ಲೇ ಪೂರ್ಣ ಮಾಗಿದ ಹಣ್ಣಿನಂತಿರುತ್ತದೆ. ಒಮ್ಮೆಗೆ ಸಂನ್ಯಾಸಿ ಆಗುವವರು ಮಿಡಿಕಾಯಿಯನ್ನು ಕಿತ್ತು ಹಣ್ಣು ಮಾಡಿದಂತಾಗುತ್ತದೆ. ಮೊದಲಿನದು ಸಹಜ ಜೀವನ, ಎರಡನೆಯದು ಅಸಹಜ ಜೀವನ] ನಿರ್ಬಂಧದಿಂದ ಮಾಡಿಸಿದ ಇಂದ್ರಿಯೋಪವಾಸವು ಸ್ವಂತ ಉತ್ಪನ್ನವಾದ ವೈರಾಗ್ಯದ ಸಮಾಧಾನವನ್ನು ತರಲಾರದು ; ಅದು ಅದುಮಿಟ್ಟ ಸಿಡಿಮದ್ದೇ ಆದೀತು. ಮೊದಲು ಭೋಗೇಚ್ಛೆ ನೈಜವಾಗಿದ್ದಂತೆ ಆಮೇಲೆ ತ್ಯಾಗೇಚ್ಛೆ ನೈಜವಾದರೆ ಅದು ಹಿತ. ಅದು ಒಂದು ಮನಸ್ಸಾಂತ್ವನದ ಉಪಾಯದಿಂದ,–ಒಂದು ಸೂಕ್ಷ್ಮನಯದಿಂದ,–ಒಂದು ಆತ್ಮಶಿಕ್ಷಣ ಕೌಶಲದಿಂದ ಆಗತಕ್ಕದ್ದು. ಅದಕ್ಕೆ ಇದೇ ದಾರಿ ಎಂದು ನಿಷ್ಕರ್ಷೆಯಾಗಿ ರೇಖೆಯೆಳೆದು ತೋರಿಸಲು ಯಾರಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬ ಮನುಷ್ಯನು ತನ್ನ ಸ್ವಭಾವ ತನ್ನ ಸನ್ನಿವೇಶಗಳಿಗೆ ತಕ್ಕಂತೆ ತನ್ನ ಮುಕ್ತಿ ಪಥವನ್ನು ಕಂಡುಕೊಳ್ಳಬೇಕಾಗಿದೆ. ಎಷ್ಟೋ ಸಂದರ್ಭಗಳಲ್ಲಿ ಜೀವ ನೈರ್ಮಲ್ಯಕ್ಕೆ ವಿಷಯಾನುಭವವೇ ವೈರಾಗ್ಯಕ್ಕಿಂತ ಹೆಚ್ಚು ಸಹಾಯವಾದೀತು ; ಎಷ್ಟೋ ಮಂದಿ ಸಂನ್ಯಸ್ತರಿಗಿಂತ ಎಷ್ಟೋ ಮಂದಿ ಗೃಹಸ್ಥರು ನಿಜವಾಗಿ ಪರಿಶುದ್ಧರಾದವರಿರುತ್ತಾರೆ."

—(ಉ.ಖ. ಪು : 71–73)

ಭೋಗ ಜೀವನದ ಸಹಜತೆಯನ್ನು ಡಿ.ವಿ.ಜಿ. ಅವರು ಹೀಗೂ ಸಮರ್ಥಿಸಿದ್ದಾರೆ : "ನಮ್ಮ ಮಹರ್ಷಿಗಳೆಲ್ಲ ಭೋಗೇಚ್ಛೆಯನ್ನು ತೊರೆದಿದ್ದವರಲ್ಲ. ಪಶುಪರಿವಾರಗಳಿಗಾಗಿ, ಕ್ಷೇತ್ರಾರಾಮಗಳಿಗಾಗಿ, ಧನಧಾನ್ಯ ಸಮೃದ್ಧಿಗಾಗಿ, ಅಂಗಾಂಗ ಪಟುತ್ವಕ್ಕಾಗಿ, ಶತ್ರುದಮನಕ್ಕಾಗಿ, ಸಂತಾನಕ್ಕಾಗಿ, ವೀರ್ಯಕ್ಕಾಗಿ, ಆಯುರ್ವೃದ್ಧಿಗಾಗಿ ಎಷ್ಟೋ ಮಂದಿ ಋಷಿಗಳು ಬಗೆ ಬಗೆಯಾಗಿ ದೇವತೆಗಳನ್ನಾರಾಧಿಸಿ ಯಾಚಿಸಿದ್ದು ವೇದ ಮಂತ್ರಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಹಾಗಿದ್ದ ಮೇಲೆ ನಾವು ದೇಹವನ್ನು ದೂಷಿಸಬೇಕೇಕೆ ? ಭೋಗವನ್ನು ಖಂಡಿಸಬೇಕೇಕೆ ? ನಮ್ಮ ಭೋಗಾನ್ವೇಷಣೆಯು ನೀತಿಯ ಎಲ್ಲೆಯೊಳಗಿರಬೇಕೆಂಬ ಮಾತು ಬೇರೆ. ಅದನ್ನು ಯಾರೂ ತಿರಸ್ಕರಿಸಲಾರರು. ಚಾರ್ವಾಕರು ನೀತಿಯಿಲ್ಲದವರು ಎನ್ನುವುದಕ್ಕೆ ದೃಷ್ಟಾಂತವೆಲ್ಲಿದೆ ? ಅನೀತಿವಂತರೆಲ್ಲ ಚಾರ್ವಾಕರು ಎನ್ನುವುದಾದರೆ ಜಗತ್ತಿನ ಬಹು ಸಂಖ್ಯಾತರು ಚಾರ್ವಾಕರೇ ಆಗುತ್ತಾರೆ. ಲೋಕದಲ್ಲಿ ಎರಡು ರೀತಿಯ ಜನರು ಮಾತ್ರ ಇರುವರು, ಅವರು ನೀತಿವಂತರು ಮತ್ತು ನೀತಿಯಿಲ್ಲದವರು ; ಅಥವಾ ಒಳ್ಳೆಯವರು ಮತ್ತು ಕೆಟ್ಟವರು. ಜೀವ–ಜಗತ್ತು–ದೇವರ ಬಗ್ಗೆ ಇರುವ ಅನೇಕ ಮತಗಳಲ್ಲಿ ಚಾರ್ವಾಕರದೂ ಒಂದು ಮತ. ಆದರೆ ಈ ಮತವು ನೀತಿಯಿಲ್ಲದ ಮತವೆಂದು ಅರ್ಥವಲ್ಲ. ಆದರೆ ಧರ್ಮ ಬಾಧಕವಲ್ಲದೆ ಇರುವುದು ಮಾತ್ರವೇ ಅಲ್ಲದೆ, ಧರ್ಮ ಸಾಧಕ ಕೂಡ ಆಗಬಹುದಾದ ಭೋಗಾನುಭವಗಳು ಎಷ್ಟೋ

ಇರುತ್ತವೆ. ಮನುಷ್ಯನಿಗೆ ದಾರಿದ್ರ್ಯದಿಂದ ಆಗಬಹುದಾದ ಶುದ್ಧಿ ಸಂಸ್ಕಾರಗಳು ಹೇಗೆಯೋ ಸಂಪತ್ತಿನಿಂದ ಆಗಬಹುದಾದ ಶೋಧನೆಗಳೂ ಹಾಗೆಯೇ ಇರುತ್ತವೆ. ಅಂಗೀಕಾರವೂ ವರ್ಜನೆಯಂತೆ ಒಂದು ಮನಃ ಪರಿಪಾಕಕ್ರಮ. ಎಷ್ಟೋ ಸಂದರ್ಭಗಳಲ್ಲಿ ತ್ಯಾಗಕ್ಕೆ ದಾರಿ ಭೋಗದ ಬಾಗಿಲಿನಿಂದಲೇ ಇದ್ದೀತು. ಭೋಗವೂ ಅದರಿಂದ ಬರುವ ಮನೋವಿಕಾಸವೂ ಜೀವಕ್ಕೆ ಒಂದು ತೆರದ ವಿದ್ಯಾಭ್ಯಾಸ.''

—(ಉ.ಒ. ಪು : 73)

"ಬ್ರಹ್ಮಜ್ಞರೆಂದು ಪ್ರಸಿದ್ಧರಾದ ಮಹರ್ಷಿಗಳಲ್ಲಿ ಶುಕರೊಬ್ಬರ ಹೊರತು ಆಜನ್ಮ ವಿರಕ್ತರಾದವರು ಯಾರಿದ್ದರೋ ಅವರ ಹೆಸರು ಪ್ರಸಿದ್ಧಿಗೆ ಬಂದಿಲ್ಲ. ವ್ಯಾಸರೂ ಪರಾಶರರೂ ವಸಿಷ್ಠರೂ ಅಷ್ಟೋ ಇಷ್ಟೋ ಸಂಸಾರಗಳನ್ನು ಕಟ್ಟಿಕೊಂಡಿದ್ದವರೇ. ಬೃಹದಾರಣ್ಯಕದ ಯಾಜ್ಞವಲ್ಕ್ಯರಿಗೆ ಇಬ್ಬರು ಹೆಂಡಿರು. ಆದರ್ಶವೀರರುಗಳಲ್ಲಿ ಅಹಲ್ಯೋದ್ಧಾರಿ ರಾಮನು ಸೀತಾದೇವಿ ಕಣ್ಣಿಗೆ ಕಾಣದೆ ಹೋದಾಗ ಗೋಳಾಡದವನಲ್ಲ. ಗೀತಾಚಾರ್ಯನಂತೂ ಸತ್ಯಭಾಮೆಯ ಮೋಹವನ್ನು ಸಲ್ಲದೆಂದಿದ್ದವನಲ್ಲ. ಇನ್ನು ದೇವತಾ ರೂಪಗಳಲ್ಲಿ ವೈರಾಗ್ಯ ಮೂರ್ತಿಯೆಂದು ಉಪಾಸ್ಯನಾದ ಪರಶಿವನ ಒಡಲಿನಲ್ಲಿ ಅರ್ಧದಷ್ಟು ಮಡದಿ. ಹೀಗೆ ನಮ್ಮ ಪುರಾತನರ ಭಾವನೆಯಲ್ಲಿ ವೈರಾಗ್ಯಕ್ಕೆ ಸಂಸಾರ ಸಹಕಾರಿಯೆಂದೇ ಗಣ್ಯವಾಗಿದ್ದಂತೆ ತೋರುತ್ತದೆ.''

—(ಉ.ಒ. ಪು : 47)

ಭೋಗ ಜೀವನದ ಸಮರ್ಥನೆಗೆ ಡಿ.ವಿ.ಜಿ. ಅವರು ಕೊಡುವ ಈ ಉದಾಹರಣೆಗಳನ್ನು ನೋಡಿ :

(1) ಉಮರನು ಹೇಳುತ್ತಾನೆ :

"ಅಲ್ಲಿ ಮರದಡಿಯಲ್ಲಿ ನಲ್ಕಾವ್ಯವೊಂದಿರಲು
ರೊಟ್ಟಿಯೊಂದಿನಿಸೊಂದು ಕುಡಿಕೆಯಲಿ ಮಧುವು
ಮೇಣ್ ಮುಗುದೆ, ನೀನೆನ್ನ ಬಳಿ ಕುಳಿತು ಪಾಡಲಹ
ಕಾಡಾದೊಡೇನಡುವೆ ಸಗ್ಗ ಸುಖವೆನಗೆ''

—(ಪದ್ಯ 10 ಉಮರನ ಒಸಗೆ)

(2) ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದ ಚಿತ್ರಕೂಟ ಪ್ರಕರಣದಲ್ಲಿ ವಾಲ್ಮೀಕಿಯು ಶ್ರೀರಾಮಚಂದ್ರನಿಂದ ಸೀತೆಯನ್ನುದ್ದೇಶಿಸಿ ಹೀಗೆ ಹೇಳಿಸುತ್ತಾನೆ :

"ನಾಯೋಧ್ಯಾಯೈ ನ ರಾಜ್ಯಾಯ ಸ್ಪೃಹಯೇದ್ಯ
ತ್ವಯಾ ಸಹ'' (ನೀನು ನನ್ನೊಡನೆ ಇರಲಾಗಿ
ನನಗೆ ಅಯೋಧ್ಯೆಯೂ ಬೇಡ, ರಾಜ್ಯವೂ ಬೇಡ).

— (ಉಮರನ ಒಸಗೆ ಪು. 74)

3) ಪರಮ ವಿರಕ್ತಿಯೂ ವೇದಾಂತಿಯೂ ಆದ ಭರ್ತೃಹರಿ ಏನು ಹೇಳಿದ್ದಾನೆ ನೋಡಿ :

ಅಗ್ರೇ ಗೀತಂ ಸರಸಕವಯಃ ಪಾರ್ಶ್ವತೋದಾಕ್ಷಿಣಾತ್ಯಾಃ ।
ಪಶ್ಚಾಲ್ಲೀಲಾ ವಲಯರಣಿತಂ ಚಾಮರಗ್ರಾಹಿಣೀನಾಂ ।
ಯದ್ಯಸ್ತ್ಯೇವಂ ಕುರು ಭವರಸಾಸ್ವಾದನೇ ಲಂಪಟತ್ವಂ ।
ನೋಚೇಚ್ಚೇತಃ ಪ್ರವಿಶ ಸಹಸಾ ನಿರ್ವಿಕಲ್ಪೇ ಸಮಾಧೌ ॥

(ಎಲೆ ಮನಸ್ಸೆ, ಮುಂದುಗಡೆ ಸೊಗಸಾದ ಸಂಗೀತ, ಎರಡು ಪಕ್ಕಗಳಲ್ಲಿಯೂ ರಸವತ್ತಾಗಿ ಪದ್ಯಗದ್ಯಗಳನ್ನು ರಚಿಸಿ ಹೇಳಬಲ್ಲ ಕವಿಗೋಷ್ಠಿ, ಹಿಂದುಗಡೆ ಚಾಮರ ಹಿಡಿದು ಬೀಸುತ್ತಿರುವ ಲೀಲಾವಿಲಾಸಿನಿಯರ ಬಳೆಯ ರಣಿತಸ್ವನ ಇಷ್ಟು ನಿನಗೆ ದೊರತದ್ದಾದರೆ ಸಂಸಾರ ಸುಖರಸಪಾನದಲ್ಲಿ ತಲ್ಲೀನನಾಗು ; ಹಾಗೆ ದೊರೆಯದೆ ಹೋದರೆ ಆಗ ಪ್ರಯತ್ನ ಮಾಡಿ ಪರಬ್ರಹ್ಮಧ್ಯಾನದಲ್ಲಿ ಮಗ್ನನಾಗು.)

— (ಉ. ಖ. — ಪು. 75)

ಇದೇ ಸಿದ್ಧಾಂತವನ್ನೇ ಉಮರನು ಬೇರೊಂದು ರೀತಿಯಲ್ಲಿ ಪ್ರತಿಪಾದಿಸಿದ್ದಾನೆ. ರೀತಿ ಬೇರೆಯೇ ಹೊರತು ತತ್ತ್ವ ಬೇರೆಯಲ್ಲ.

ಭೋಗದಲ್ಲಿ ಆಸಕ್ತಿ ಮತ್ತು ವಿರಕ್ತಿ : ಇದನ್ನು ವಿವರಿಸುವುದಕ್ಕಾಗಿ ಡಿ.ವಿ.ಜಿ. ಯವರು "ನಿಜವಾದ ವಿರಕ್ತಿಯು ಮನಸ್ಸಮಾಧಾನದ ಸ್ಥಿತಿ. ಅದು ಬೇಕು–ಬೇಡಗಳೆರಡರ ವಿಷಯದಲ್ಲಿಯೂ ಸಮಾನ ವೃತ್ತಿಯುಳ್ಳದ್ದು, ಎರಡಕ್ಕಿಂತ ಮೇಲ್ಮಟ್ಟದಲ್ಲಿ ಇರತಕ್ಕದ್ದು"—ಎಂದು ಹೇಳುತ್ತಾ ಈ ಎರಡು ಉದಾಹರಣೆಗಳನ್ನು ಕೊಡುತ್ತಾರೆ:

(1) ಹೊನಲ ತಡಿಯಲಿ ಹೊಸ ಗುಲಾಬಿ ನಗುನಗುತಲಿರೆ
    ಮುದಿ ಖಯ್ಯಾಮನ ಕೂಡೆ ಚೆಂಗಳ್ಳ ಕುಡಿ ; ಬಾ !
ಕರಿಯ ಕುಡಿತದ ಮುಂದೆ ಕಾಲನೊಡ್ಡಿದೊಡಂದು
    ಪಿಂತೆಗೆಯದೆದೆಯುಡುಗದದನು ಕುಡಿ ನಗುತೆ.

—(ಉ.ಖ. 53)

"ಮನುಷ್ಯನು ಮಧು ಮೃತ್ಯುಗಳೆರಡಕ್ಕೂ ಸನ್ನದ್ಧನಾಗಿರಬೇಕೆನ್ನುತ್ತಾನೆ ಉಮರ್".

(2) ಏಕೈವ ದೃಷ್ಟಿಃ ಕಾಕಸ್ಯ ವಾಮ ದಕ್ಷಿಣ ನೇತ್ರಯೋಃ ।
ಯಾತ್ಯಾಯಾತ್ಯೇವಮಾನನ್ದದ್ವಯೇ ತತ್ತ್ವವಿದೋಮತಿಃ ॥
ಭುಂಜಾನೋ ವಿಷಯಾನನ್ದಂ ಬ್ರಹ್ಮಾನನ್ದಂ ಚ ತತ್ತ್ವವಿತ್ ।
ದ್ವಿಭಾಷಾಭಿಜ್ಞವದ್ವಿದ್ಯಾದುಭೌ ಲೌಕಿಕ ವೈದಿಕೌ ॥

—ಪಂಚದಶೀ (ಉ.ಖ. ಪು. 77)

"ನಿಜವಾದ ವಿರಕ್ತಿಯಿರುವುದು ಲೋಕಾನುಭವದಿಂದ ಓಡಿಹೋಗುವುದರಲ್ಲಲ್ಲ,- ಅದನ್ನು ತಕ್ಕ ಸ್ಥಳದಲ್ಲಿರಿಸುವುದರಲ್ಲಿ. ಅದು ತುಂಬ ಹತ್ತಿರ ಬೇಡ, ತುಂಬ ದೂರವೂ ಬೇಡ. ನಿಜವಾದ ವಿರಕ್ತಿಯಲ್ಲಿ ಬೇಡವೆಂಬುದಕ್ಕೆ ಒಂದು ಸ್ಥಾನವಿರುವಂತೆ ಬೇಕೆಂಬುದಕ್ಕೂ ಇರುತ್ತದೆ ; ಅಥವಾ ಬೇಕೆಂಬುದು ತಪ್ಪಾದರೆ ಬೇಡವೆಂಬುದೂ ತಪ್ಪಾಗುತ್ತದೆ. ರಾಗವು ಆದಕ್ಕೆ ಹೇಗೆ ವರ್ಜ್ಯವೋ ದ್ವೇಷವೂ ಹಾಗೆ ವರ್ಜ್ಯವೇ. 'ಒಂದೇ ಗುಡ್ಡಿನಿಂದ ಎರಡು ಕಣ್ಣುಗಳ ಮೂಲಕ ನೋಡುವ ಕಾಗೆಯಂತೆ, ಒಂದೇ ಅಭಿಪ್ರಾಯವನ್ನು ಎರಡು ಭಾಷೆಗಳಲ್ಲಿ ವ್ಯಕ್ತಪಡಿಸಬಲ್ಲ ದ್ವಿಭಾಷಿಯಂತೆ, ಜ್ಞಾನಿಯಾದವನು ಬ್ರಹ್ಮಾನಂದ ವಿಷಯಾನಂದಗಳೆರಡನ್ನು ಅನುಭವಿಸುತ್ತಾನೆ—ಎಂದು ಹೇಳಿದ್ದಾರೆ ವಿದ್ಯಾರಣ್ಯರು".

"ದೇಹ ಜೀವನದಲ್ಲಿ ಆತ್ಮಕ್ಕೆ ಅಪಾಯ ತಟ್ಟಿಸದೆ ಉಲ್ಲಾಸವನ್ನು ಮಾತ್ರ ಸಂಪಾದಿಸಿಕೊಳ್ಳುವ ಉಪಾಯ ಜ್ಞಾನಿಯದು. ಅಂಥ ತ್ಯಾಗ ಭೋಗ ಸಮನ್ವಯವೇ ಯೋಗ"–ಎನ್ನುತ್ತಾರೆ ಡಿ.ವಿ.ಜಿ.

—(ಉ.ಒ. ಪು. 77)

ಜೀವನ ಮಾರ್ಗ ಹೇಗಿರಬೇಕು ಎನ್ನುವುದನ್ನು ಉಮರನು ಹೇಳುವ ರೀತಿ ನೋಡಿ : "ಸಂತೆಗಳಿಗೆ ಮೂಟೆ ಹೊತ್ತು ಜೀವನ ಸಂಪಾದಿಸುವವನು ಹೇಗಿದ್ದರೂ ಊರಿಂದೂರಿಗೆ ಸಾಗುತ್ತಲೇ ಇರಬೇಕು. ಅವನಿಗಿರುವ ದಾರಿಗಳಲ್ಲಿ ಒಂದು ಸಂಪಗೆಯ ತೋಟದ ಪಕ್ಕದಲ್ಲಿಯೂ ಇನ್ನೊಂದು ಕತ್ತಾಳೆಯ ಕಾಡಿನ ಪಕ್ಕದಲ್ಲಿಯೂ ಹೋಗುವುದಾಗಿದ್ದರೆ, ಸಂಪಗೆಯ ದಾರಿಯನ್ನೇ ಹಿಡಿಯಲಿ. ಹೇಗಿದ್ದರೂ ಸುಗಂಧದ್ರವ್ಯಗಳ ಪೇಟೆಯಲ್ಲಿ ನಡೆಯಬೇಕಾಗಿರುವಾಗ ಮೂಗು ಮುಚ್ಚಿಕೊಳ್ಳುವುದೇಕೆ ?"

—(ಉ.ಒ. ಪು. 78)

"...... ಸಮುದ್ರದಲ್ಲಿ ಹಾಲಾಹಲವೂ ಇತ್ತು, ಅಮೃತವೂ ಇತ್ತು. ಲೋಕದಲ್ಲಿಯೂ ಹಾಗೆಯೇ. ಭಯಂಕರವಾದದ್ದನ್ನು ಮಾತ್ರ ಗಮನಿಸಿ ಮನೋಹರವಾದದ್ದನ್ನು ತ್ಯಜಿಸುವುದು ಯುಕ್ತವಲ್ಲವೆನ್ನುತ್ತಾನೆ ಉಮರ್. ಮದ್ಯಕ್ಕೆ ಸ್ವಾಗತವಿರಲಿ; ಮೃತ್ಯುವಿಗೆ ಪ್ರತ್ಯುತ್ಥಾನವಿರಲಿ. ದೊರೆತ ಸುಖಕ್ಕೆ ಅಂಗೀಕಾರವಿರಲಿ ; ಅಸ್ಪೃಷ್ಟದ ಕಾಠಿನ್ಯಕ್ಕೆ ಉದಾಸೀನವಿರಲಿ. ಇದು ವಿಷಯ ಲಂಪಟನ ಮಾತಲ್ಲ, ವಿರಾಗಿಯ ಮಾತಲ್ಲವೆಂದು ಹೇಳಬೇಕಾಗಿಲ್ಲ. ಉಭಯ ಸಮನ್ವಯದ ಯೋಗದೃಷ್ಟಿ ಉಮರನದು. ಲೋಕ ಹೃದಯದ ಪರಿಸ್ಪಂದಿತದಲ್ಲಿ ಸಹಾನುಭವಿಯಾದ ಕವಿಜೀವ ಅವನದು"–ಎನ್ನುವರು ಡಿ.ವಿ.ಜಿ.

—(ಉ.ಒ. ಪು. 78)

ಕೊನೆಯದಾಗಿ ಡಿ.ವಿ.ಜಿ. ಅವರು ಉಮರನ ಬಗ್ಗೆ ಈ ಕೆಲವು ಮಾತುಗಳನ್ನು ಹೇಳುತ್ತಾರೆ: "ಉಮರನು ನಾಚಿಕೆ ಬಿಟ್ಟ ಚಾರ್ವಾಕನೆಂದೂ ಇಂದ್ರಿಯ ಸುಖೈಕಲೋಲುಪನೆಂದು ಹೇಳುವುದಕ್ಕೆ ಕಾರಣವಿರುವಂತೆ ಒಂದೆರಡು ಕಡೆ ತೋರಬಹುದು ಆದರೆ ಆ ಕಾರಣ ಕೇವಲ ಭ್ರಮೆಯೆಂಬುದು ಕಾವ್ಯವನ್ನೊಟ್ಟಿಗೆ ತೆಗೆದುಕೊಂಡು ಪರಾಮರ್ಶಿಸುವವರಿಗೆ ಬೇಗನೆ ಗೋಚರವಾಗದಿರಲಾರದು. ಉಮರನು ಇಹಲೋಕದ ಕ್ಷಣಿಕತೆಯನ್ನು ಮರೆತವನಲ್ಲ; ಮನುಷ್ಯ ಜೀವಿತದ ಆಲೋಲ ಕಲ್ಲೋಲಗಳನ್ನು ಕಾಣದವನಲ್ಲ; ವಿಶ್ವತತ್ತ್ವವನ್ನರಿಯಬೇಕೆಂಬ ಕುತೂಹಲವಿಲ್ಲದವನಲ್ಲ. ಇವುಗಳನ್ನೆಲ್ಲ ಅವನು ಅನುಭವಿಸಿ ದುಃಖ ಪಟ್ಟಿದ್ದಾನೆ. "ಅಳಬೇಡ, ನಗು"—ಎಂದು ಅವನು ಹೇಳುತ್ತಿದ್ದರೂ, ಆ ಮಾತು ಹೊರಡುವುದು ಕೇಕೆ ಹಾಕುವ ಬಾಯಿಂದಲ್ಲ; ಮರುಕದ ಕೊರಳಿಂದ. . . ." ನಾವು ಹಾಸ್ಯದಲ್ಲಿ ಸತ್ಯವನ್ನು ಜ್ಞಾನ ಚೂರ್ಣವೆನ್ನುವಂತೆ, ಅಥವಾ ಕಾಫೀ ಹೋಟಲನ್ನು ಹೆಂಡದಂಗಡಿಯೆನ್ನುವಂತೆ, ಅಥವಾ ಬಂದೀಖಾನೆಯನ್ನು ಜ್ಞಾನಮಂಟಪವೆನ್ನುವಂತೆ, ಉಮರನು ದ್ರಾಕ್ಷಾರಸವನ್ನು ಹೆಂಡವೆನ್ನುತ್ತಾನೆ, ಕಳ್ಳೆನ್ನುತ್ತಾನೆ; ಉಲ್ಲಾಸವನ್ನು ಅಮಲೆನ್ನುತ್ತಾನೆ, ನಿಷಾ ಎನ್ನುತ್ತಾನೆ. ಉಮರನ ಪದ್ಯದಲ್ಲಿ ನಾವು ಕೇವಲ ಶಿಷ್ಟಾರ್ಥವನ್ನು ಗ್ರಹಿಸತಕ್ಕದ್ದಲ್ಲವೆಂಬುದನ್ನು ಹಾಗೆಯೇ ಅವನ ಸ್ತ್ರೀಯ ಚರಿತ್ರೆಯನ್ನು ಅದರೊಡನೆ ಬೆರಸತಕ್ಕದಲ್ಲವೆಂಬುದನ್ನು ಎಚ್ಚರಿಕೆಯಿಂದ ಜ್ಞಾಪಕದಲ್ಲಿಡಬೇಕು."

(ಉ.ಒ. ಪು. 80, 81, 82)

"ಉಮರನ ಜೀವನ ಸಿದ್ಧಾಂತವನ್ನು ಹೀಗೆ ಸಂಗ್ರಹಿಸಿರುವರು: "ಜಗತ್ತಿನ ಮರ್ಮವೇನೆಂಬುದನ್ನು ಸೃಷ್ಟಿಕರ್ತನೇ ಬಚ್ಚಿಟ್ಟಿದ್ದಾನೆ; ಅವನ್ನೆಷ್ಟು ಹುಡುಕಿದರೂ ಅದು ದೊರೆಯುವಂತಿಲ್ಲ; ಆದಕ್ಕಾಗಿ ಶ್ರಮಪಟ್ಟವರೆಲ್ಲರೂ ಇನ್ನೂ ಒಪ್ಪಿಗೆಯ ನೆಲೆಯನ್ನು ಕಾಣದವರಂತೆ ಕಾದಾಡುತ್ತಿದ್ದಾರೆ. ಪ್ರಾಣಿ ಸತ್ತು ಮಣ್ಣಾಗುತ್ತದೆ, ಮಣ್ಣಿನಿಂದ ಪ್ರಾಣಿ ಮೊಳೆಯುತ್ತದೆ. ಚೆಲುವೆಯ ಕೆನ್ನೆತ್ತರು ನೆಲಕ್ಕೆ ಬೀಳುತ್ತದೆ; ಚೆಲುವಾದ ಚೆಂಗುಲಾಬಿ ನೆಲದಿಂದ ಏಳುತ್ತದೆ. ರುಸ್ತುಮನ ಹಸಿರಂಗಿ ಧೂಳಿನಲ್ಲಿ ಸೇರಿಹೋಗುತ್ತದೆ; ಧೂಳಿಯಿಂದ ನಗುವ ಹಸಿರು ಹುಲ್ಲೆದ್ದು ತೆನೆ ಮೆರೆಯುತ್ತವೆ. ಜೀವ ನಿತ್ಯವಲ್ಲದಿದ್ದರೆ ಸಾವೂ ನಿತ್ಯವಲ್ಲ. ಇದೊಂದು ಕ್ಷಣ; ಅದೊಂದು ಕ್ಷಣ. ಅದು ಹಾಗೆ ಇದ್ದುಕೊಂಡಿರಲಿ. ಆದಕ್ಕಾಗಿ ನಾವೇಕೆ ಪರದಾಡಬೇಕು? ಲೋಕದ ಮತ ಸಂಪ್ರದಾಯ ಸಂಸ್ಥೆ ಸಂಧಾನಗಳಲ್ಲಿ ನಮ್ಮ ಕೈಯಿಂದ ತಿದ್ದಲಾಗದ ಹೆಚ್ಚು ಕಡಮೆಗಳು ಹತ್ತು ಸಾವಿರ ಇವೆ. ಇವುಗಳನ್ನು ನೆನೆನೆನೆದು ಕೊರಗುತ್ತಾ ಆಯುಷ್ಯವನ್ನು ಕಳೆದುಕೊಳ್ಳೋಣವೇ, ಅಥವಾ ಸಾಧ್ಯವಾದಷ್ಟು ಸಮಾಧಾನವನ್ನು ತಂದುಕೊಂಡು, ಇರುವುದನ್ನೇ ಈಶ್ವರ ಪ್ರಸಾದವೆಂದು ಭುಜಿಸಿ ಸಂತೋಷಪಡೋಣವೇ? ಎರಡನೆಯದೇ ಮೇಲಾದ ದಾರಿಯೆಂಬುದು ಉಮರನ ಮತ. ಆತನು ಅಪೇಕ್ಷಿಸುವುದು ಹೆಚ್ಚಿನ

ಐಶ್ವರ್ಯವನ್ನಲ್ಲ. ಜನದ ಸಂದಣಿಯಿಲ್ಲದ ಒಂದು ನೆರಳಿನ ತಾವು; ಪ್ರಾಣಾಧಾರವಾಗಿ ಸ್ವಲ್ಪ ಆಹಾರ; ಬೇಸರವನ್ನು ಹೋಗಲಾಡಿಸಿ ಮನಸ್ಸಿನ ಸ್ಮಿತ ಉಳಿಸಿಕೊಡಲು ಎಲ್ಲರಿಗೂ ಸುಲಭವಾಗಿ ಸಿಕ್ಕುವ ದ್ರಾಕ್ಷಾರಸದ ಒಂದೆರಡು ಗುಟುಕು; ಕೆಲವು ಸದ್ಗ್ರಂಥಗಳು; ಒಂದಿಷ್ಟು ಸಂಗೀತ, ಒಬ್ಬ ಅನುರಾಗಿಣಿ. ಇಷ್ಟನ್ನೇ ಆತನು ಬಯಸುವುದು. ಈ ಬಯಕೆಯಲ್ಲಿ ದೋಷವೇನಿದೆ?''

—(ಉ.ಒ. ಪು. 83–84)

"ಸುಖಾಪೇಕ್ಷೆ ಪ್ರಾಣಿ ಮಾತ್ರಕ್ಕೆ ಸಹಜವಾದ ಗುಣ; ಅದನ್ನು ಸಂಪೂರ್ಣವಾಗಿ ನಿಗ್ರಹಿಸುವುದು ಸಾಧ್ಯವೂ ಅಲ್ಲ, ಅವಶ್ಯವೂ ಅಲ್ಲ. ಹೀಗಾದ ಮೇಲೆ, ಅದಕ್ಕೆ ಉಪಕರಣವಾಗಿ ನಮ್ಮ ಪಾಲಿಗೆ ಬಂದ ಭೋಗ್ಯವಸ್ತುಗಳನ್ನು ಭೋಗಿಸದೆ ಬಿಡಬೇಕಾದುದೇಕೆ? ಇದು ಉಮರನು ಕೇಳುವ ಪ್ರಶ್ನೆ. ಸುಖ ಸಂಪಾದನೆಗಾಗಿ ಅಕಾರ್ಯವನ್ನು ಮಾಡಬಹುದೆಂದು ಆತನು ಹೇಳಿಲ್ಲ. ಹೆಚ್ಚಿನ ಪ್ರಯಾಸವನ್ನಿಟ್ಟುಕೊಳ್ಳಬೇಡಿರೆಂದೇ ಆತನ ಉಪದೇಶ''.

—(ಉ.ಒ. ಪು. 84–85)

ಚಾರ್ವಾಕ ದರ್ಶನದಲ್ಲಿಯೂ ಕೂಡ ಸುಖ ಸಂಪಾದನೆಗಾಗಿ ಅಕಾರ್ಯವನ್ನು ಮಾಡಬಹುದೆಂದು ಹೇಳಿಲ್ಲ. ಒಂದು ವೇಳೆ ಹಾಗೆ ಹೇಳಿರುವುದು ಕಂಡುಬಂದರೆ, ಅದು ಮಡಿವಂತರಂತೆ ಸೋಗುಹಾಕುವವರು ಚಾರ್ವಾಕರಂಥ ನಿಷ್ಕಪಟದವರನ್ನು ಅವಹೇಳನ ಮಾಡಲು ಮಾಡುತ್ತಿರುವ ದ್ರೋಹ. ಧರ್ಮಿಷ್ಠನಾದ ಯಾವ ಮಡಿವಂತನು ಚಾರ್ವಾಕ ಮತವನ್ನಾಗಲಿ, ಉಮರನ ಜೀವನ ಸಿದ್ಧಾಂತವನ್ನಾಗಲಿ ತೆಗಳುವುದಿಲ್ಲ, ಡಿ.ವಿ.ಜಿ.ಯವರಂತೆ ಗೌರವಭಾವದಿಂದ ಕಾಣುತ್ತಾನೆ. ". . . . . 'ಈ ಜನ್ಮ ಸಾಕು' ಎಂದು ನರಳುವುದೇಕೆ? ಸಾವು ಬರುವಾಗ ಬರಲಿ; ಅದು ಬರುವವರೆಗೂ ಬದುಕೋಣ, ಆದಷ್ಟು ಚೆನ್ನಾಗಿ ಬದುಕೋಣ ಎಂಬುವೇ ಉಮರನ ಒಸಗೆ.''

—(ಉ.ಒ. ಪು. 85)

"ತಾಪತ್ರಯದ ಗೋಳಾಟ ಎಂದೆಂದಿಗೂ ಇದ್ದೇ ಇರುತ್ತವೆ; ಒಪ್ಪತ್ತಾದರೂ ಉಲ್ಲಾಸದಿಂದ ಇರೋಣ''—ಎಂದು ಯಾರಿಗೆ ತಾನೆ ಒಂದೊಂದು ಸಲವಾದರೂ ಎನ್ನಿಸುವುದಿಲ್ಲ? ಇದರಲ್ಲಿ ಅಧರ್ಮವೇನೂ ಇಲ್ಲ. ಈ ಪ್ರವೃತ್ತಿಯ ಬೇರುಗಳು ಮಾನುಷ ಸ್ವಭಾವದಲ್ಲೇ ಅಡಗಿವೆ. ಹೀಗೆ ಸ್ವಶ್ಕ್ತಿವಿಹಿತವಾಗಿ, ಹೆರರಿಗೆ ಬಾಧಕವಾಗಿದೆ ನಮ್ಮ ಚಿತ್ತಸ್ವಾಸ್ಥ್ಯಕ್ಕೆ ಸಾಧಕವಾಗುವ ಹಿತಮಿತ ಸುಖ ಸಂಪಾದನೆ ನಮ್ಮ ಸಾಮಾನ್ಯ ಲೋಕಧರ್ಮದ ಅನ್ಯಂತ ರೂಪವಲ್ಲದಿರಬಹುದು; ಆದರೆ ಧರ್ಮದ ಅನೇಕ ಅಂತರಂಗಗಳಲ್ಲಿ ಅದು ಒಂದೆಂಬುದಕ್ಕೆ ಅಡ್ಡಿಯಿರದು. ಈ ಜೀವನೋತ್ಸಾಹ ನೀತಿಯ ಮೇಲ್ಮೆ

ಯನ್ನು ಸೊಬಗನ್ನೂ ಮನಸೊಪ್ಪುವಂತೆ ತೋರಿಸಿರುವುದೇ ಉಮರನ ಒಸಗೆ"—ಎನ್ನುವರು ಡಿ.ವಿ.ಜಿ.

—(ಉ.ಒ. ಪು. 85-86)

ವಿವೇಕಯುತ ಭೋಗ ಜೀವನವು ಯೋಗ ಜೀವನಕ್ಕೆ ನಾಂದಿ ಮತ್ತು ಕಿಂಚಿತ್ತಾಗಿ ಕಾಣುವ ಭೋಗಾನಂದವು ಮಹತ್ತಾದ ಬ್ರಹ್ಮಾನಂದದ ಅಂಶವೇ ಎಂಬುದನ್ನು ಡಿ.ವಿ.ಜಿ. ಅವರು ಹೀಗೆ ಸಮರ್ಥಿಸುತ್ತಾರೆ: "ಪರಾವಸ್ತುವು ಸಚ್ಚಿದಾನಂದ ರೂಪಿಯೆಂದಲ್ಲವೆ ವೇದಾಂತದಲ್ಲಿ ಹೇಳುವುದು? ಆನಂದದ ಬೀಜಾಂಶವು ಪರಾವಸ್ತುವಿನಲ್ಲಿ ಅಂತರ್ಗತವಾಗಿ, ಜಗಜ್ಜೀವನದಲ್ಲಿ ಯತ್ಕಿಂಚಿತ್ತು ಹೊರಹೊಮ್ಮುತ್ತಿರುತ್ತದೆ. ಆದರಿಂದಲೇ ನಮ್ಮ ನಾನಾ ಭೋಗಾನ್ವೇಷಣೆಗಳು, ನಮ್ಮ ನಾನಾ ಸುಖಾನುಭವಗಳು, ಈ ಲೌಕಿಕ ಸುಖಗಳು ಪರಮ ಸುಖದ ಅರುಣಕಿರಣಗಳು, ಅದರ ಪೂರ್ವ ಶಕುನಗಳು, ಅದರ ಸಂಚಕಾರ; ಹಾಗೆಯೇ ಜೀವಕ್ಕೆ ಪೌರುಷ ಪ್ರೇರಕಗಳು, ಅದಕ್ಕೆ ವಿಕಸನ ಕಾರಕಗಳು. ಮನುಷ್ಯನಲ್ಲಿ ಭೋಗಾಪೇಕ್ಷೆಯಿಲ್ಲದೆ ಹೋಗಿದ್ದಿದ್ದರೆ ವಿದ್ಯೆ, ಕಲೆ, ಶಾಸ್ತ್ರ, ನಾಗರಿಕತೆ, ಸಂಸ್ಕೃತಿ, ಸಭ್ಯತೆ—ಇವೆಲ್ಲಾ ಹೇಗೆ ಹುಟ್ಟುತ್ತಿದ್ದವು? ಸುಖಕ್ಕೂ ಯೋಗ್ಯ ಜೀವನದಲ್ಲಿ ಸ್ಥಾನವುಂಟು".

—(ಉ.ಒ. ಪು. 66-67)

ಮೇಲ್ನೋಟಕ್ಕೆ ಉಮರನು ನಮಗೆ ಸಹ್ಯನಲ್ಲ. ಆದರೆ ಅವನನ್ನು ಒಳಹೊಕ್ಕಾಗ ಅವನು ನಮಗೆ ಹೆಚ್ಚು ಪ್ರಿಯನಾಗುತ್ತಾನೆ. ಇದರಂತೆಯೆ ಚಾರ್ವಾಕ ಮತವು ಕೂಡ. ವಸ್ತುನಿಷ್ಠವಾಗಿ, ಸಹಜ ದೃಷ್ಟಿಯಿಂದ ನೋಡಿದಾಗ ಚಾರ್ವಾಕ ಜೀವನ ಸಿದ್ಧಾಂತಗಳೂ ಉಮರನ ಜೀವನ ಸಿದ್ಧಾಂತಗಳೂ ಒಂದೇ ಎಂಬುದರ ಅರಿವಾಗುತ್ತದೆ. ಯಾರು ತುಳಿದರು ಅಳಿಯದ ಮತ ಚಾರ್ವಾಕ ಮತ. ಏಕೆಂದರೆ ಅದು ಸಹಜ ಜೀವನ ಮಾರ್ಗದಲ್ಲಿ ಸ್ವತಂತ್ರವಾಗಿ ಸಾಗಿದೆ. ಇದು 'ಅಹಂ' ಇಲ್ಲದೆ, ಮೌನವಾಗಿ ನಡೆದಿರುವುದರಿಂದ, ಇಂದಿನ 'ಅಹಂ' ಪ್ರಧಾನ ಸಂಪ್ರದಾಯನಿಷ್ಠ ಮಡಿವಂತ ಮತಗಳ ವ್ಯರ್ಥ ಖಂಡನೆಗೆ ವಸ್ತುವಾಗಿದೆ. ಈ ಸ್ಥಿತಿಯಲ್ಲಿ ಇದು, ಬೆಂಕಿಗೆ ಬಿದ್ದ ಚಿನ್ನದಂತಾಗಿದೆ. ಸತ್ಯ ಕಠೋರವಾದ್ದರಿಂದ ಬಹಳಷ್ಟು ಜನ ಇದರಿಂದ ದೂರ ಓಡುವರು. ಅಂತೆಯೆ, ಚಾರ್ವಾಕ ಜೀವನ ಸಿದ್ಧಾಂತವೂ ಸಹಜ, ಸತ್ಯ ಮತ್ತು ಕಠೋರ. ಇದಕ್ಕಾಗಿಯೆ ಇದನ್ನು 'ಕಹಿ' ಯಾಗಿ ನೋಡುವವರೆ ಬಹಳ ಮಂದಿ. 'ಉಮರನ ಒಸಗೆ'ಯ ಅಧ್ಯಯನವು ಚಾರ್ವಾಕ ಮತದ ದೃಷ್ಟಿ ಏನೆಂಬುದನ್ನು ಹೆಚ್ಚು ಸ್ಪಷ್ಟವಾಗಿ ತೋರಿಸುತ್ತದೆ.

ಡಾ|| ಎಸ್. ರಾಧಾಕೃಷ್ಣನ್ ಮತ್ತು ಮೂರ್–ಅವರ A Source Book in Indian Philosophy ಮತ್ತು ಡಿ.ವಿ.ಜಿ. ಅವರ 'ಉಮರನ ಒಸಗೆ' ಗ್ರಂಥಗಳು ಈ ಲೇಖನಕ್ಕೆ ಆಧಾರ. ಬಹಳ ಸೂಕ್ತ ಹಾಗೂ ಪ್ರಿಯವಾಗಿ ಕಂಡುಬಂದ

ವಿಚಾರಗಳನ್ನು ಡಿ.ವಿ.ಜಿ. ಅವರ 'ಉಮರನ ಒಸಗೆ'ಯಿಂದ ಯಥಾವತ್ತಾಗಿ ತೆಗೆದು ಕೊಳ್ಳಲಾಗಿದೆ.

ಚಾರ್ವಾಕ ಮತದ ಬಗ್ಗೆ ಹೆಚ್ಚು ತಿಳಿಯಲು ಈ ಕೆಳಗೆ ಸೂಚಿಸಿದ ಗ್ರಂಥಗಳನ್ನು ನೋಡಬಹುದು.

1) ಪ್ರಭೋದ ಚಂದ್ರೋದಯ — ಮೂಲ : ಕೃಷ್ಣ ಮಿಶ್ರ
ಅನುವಾದ : ಜೆ. ಟೆಯ್ಲರ್

2) ತತ್ತ್ವೋಪಪ್ಲವ ಸಿಂಹ — ಮೂಲ : ಜಯರಾಶಿ ಭಟ್ಟ
ಅನುವಾದ : ಎಸ್. ಎನ್. ಶಾಸ್ತ್ರಿ

3) ಸರ್ವದರ್ಶನ ಸಂಗ್ರಹ — ಮೂಲ : ಶಂಕರ

4) ಸರ್ವಸಿದ್ಧಾಂತ ಸಂಗ್ರಹ — ಮೂಲ : ಶಂಕರ
— ಅನುವಾದ : ಪಿ. ಎಸ್. ಬೋಸ್

5) ಸರ್ವದರ್ಶನ ಸಂಗ್ರಹ — ಮೂಲ : ಮಾಧವಾಚಾರ್ಯ
ಅನುವಾದ : ಇ. ಬಿ. ಕೋವೆಲ್

ಕೆ. ಕೆಂಪೇಗೌಡ

# ತೌಲನಿಕ ದ್ರಾವಿಡ ಭಾಷಾವಿಜ್ಞಾನ

## ೧ ಸಂಖ್ಯಾವಾಚಕಗಳು

ದ್ರಾವಿಡ ಭಾಷೆಗಳು ತಮ್ಮದೇ ಆದ ಕೆಲವು ಸಂಖ್ಯಾವಾಚಕಗಳನ್ನು ಸಂಪಾದಿಸಿಕೊಂಡಿವೆ. ಇವು ಸರ್ವನಾಮಗಳಂತೆ ನಾಮಪದಗಳ ವರ್ಗಕ್ಕೆ ಸೇರುವುವು. ಕೆಲವು ಸಂಖ್ಯಾವಾಚಕಗಳು ನಾಮಪದಗಳಂತೆಯೇ ಲಿಂಗ, ವಚನ ಮತ್ತು ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಳ್ಳಬಲ್ಲವು. ಈ ಕಾರಣದಿಂದಲೇ ಕೆಲವು ವಿದ್ವಾಂಸರು ಸಂಖ್ಯಾವಾಚಕಗಳನ್ನು ಅವುಗಳ ಅರ್ಥ ಮತ್ತು ರಚನಾಕ್ರಮಗಳನ್ನು ಆಧರಿಸಿ ನಾಮಪದಗಳಂತೆ ಒಂದು ಪ್ರತ್ಯೇಕವಾದ ವರ್ಗಕ್ಕೆ ಸೇರಿದ ಶಬ್ದಗಳನ್ನಾಗಿ ಪರಿಗಣಿಸಿಕೊಂಡಿದ್ದಾರೆ.

ಎಣಿಸುವ ಕ್ರಮವು ಬಹು ಹಿಂದೆಯೇ ಆರಂಭಗೊಂಡಿದ್ದಿತು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಆದಿಮಾನವ ಮೊದಮೊದಲು ತನ್ನ ಕೈಬೆರಳುಗಳ ಮೂಲಕ ಲೆಕ್ಕ ಹಾಕುವುದನ್ನು ಅರಿತನು. ಅನಂತರ ಕಲ್ಲು, ಕಡ್ಡಿ ಮುಂತಾದ ವಸ್ತುಗಳನ್ನು ಬಳಸುವುದರ ಮೂಲಕ ಎಣಿಸುವುದನ್ನು ಕಂಡುಕೊಂಡನು. ಹಾಗೆಯೇ ಹಗ್ಗವನ್ನು ಗಂಟು ಹಾಕುವುದರ ಮೂಲಕ, ಗೋಡೆ, ಬಂಡೆ ಮುಂತಾದುವುಗಳ ಮೇಲೆ ಕೆಲವು ಚುಕ್ಕೆಗಳನ್ನು, ಹಾಗೂ ಕೆಲವು ಸಂಕೇತಗಳನ್ನು ಹಾಕುವುದರ ಮೂಲಕ ಲೆಕ್ಕ ಹಾಕುವುದನ್ನು ಕಲಿತನು. ಹೀಗೆ ಆದಿಮಾನವ ನಾನಾ ಬಗೆಯಲ್ಲಿ ಲೆಕ್ಕ ಹಾಕುವುದನ್ನು ಹೊರತಂದನು. ಇವರ ಫಲದಿಂದಾಗಿ ಎಣಿಸುವ ಕ್ರಮ ಈಗ ನಾನಾ ರೀತಿಯಲ್ಲಿ ಬೆಳೆದು ಹೊರಬಂದಿದೆ.

ಮಾನವನ ದೈನಂದಿನ ಬದುಕಿಗೆ ಲೆಕ್ಕ ಹಾಕುವುದು ಅತ್ಯವಶ್ಯಕವಾಗಿದೆ. ಎಣಿಸುವ ಕ್ರಮ ಹೊರಬಂದಂತೆಲ್ಲಾ ಸಂಖ್ಯಾವಾಚಕ ಶಬ್ದಗಳ ಅವಶ್ಯಕತೆ ಹೆಚ್ಚಿತು. ಇದರಿಂದ ನಾನಾ ಬಗೆಯ ಸಂಖ್ಯೆಗಳು, ಸಂಕೇತಗಳು, ಅವುಗಳನ್ನು ಸೂಚಿಸುವ ಸಂಖ್ಯಾವಾಚಕ ಶಬ್ದಗಳು ಹೊರಬಂದವು. ಇದರಿಂದಾಗಿ ಕೆಲವು ಸಂಖ್ಯಾವಾಚಕ ಶಬ್ದಗಳು ಭಾಷೆಗಳಲ್ಲಿ ಕಾಣಿಸಿಕೊಂಡವು. ಅಲ್ಲದೆ, ಲೆಕ್ಕ ಹಾಕುವ ವಿಧಾನವೂ ಬೇರೆ ಬೇರೆ

ಭಾಷೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬೆಳೆದು ಬಂದವು. ಇದರಿಂದಾಗಿ ಸಂಖ್ಯಾವಾಚಕ ಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿ ಕಾಣಿಸಿಕೊಳ್ಳಲು ಸಾಧ್ಯವಾಯಿತು. ಹೀಗಾಗಿ ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಕೆಲವು ಸಂಖ್ಯಾವಾಚಕ ಗಳನ್ನು ಸಂಪಾದಿಸಿಕೊಳ್ಳಲು ಅವಕಾಶ ದೊರೆಯಿತು. ಅಸ್ಸಾಮಿನ ಬೋಡೋ ಭಾಷೆ ಯಲ್ಲಿ ಕೇವಲ ನಾಲ್ಕು ಸಂಖ್ಯಾವಾಚಕ ಶಬ್ದಗಳ ಸಹಾಯದಿಂದ ಅತಿ ಹೆಚ್ಚಿನ ಮೊತ್ತ ವನ್ನು ಸೂಚಿಸಬಹುದಾದ ಸೌಲಭ್ಯವಿದೆ. ಇದರಲ್ಲಿ 'ಹತ್ತು' ಎಂಬುದನ್ನು ಎರಡು ನಾಲ್ಕು ಮತ್ತು ಎರಡು ಎಂಬಂತೆ ಸೂಚಿಸುವರು (ನಾಲ್ಕು+ನಾಲ್ಕು+ಎರಡು) ಆಸ್ಟ್ರೇಲಿಯಾದ ಕೆಲವು ಭಾಷೆಗಳಲ್ಲಿ ಮೂರರ ಅನಂತರದ ಯಾವ ಸಂಖ್ಯಾವಾಚಕಗಳು ಬಳಕೆಯಲ್ಲಿಲ್ಲ. ಇವುಗಳಲ್ಲಿ 'ನಾಲ್ಕು' ಎಂಬುದನ್ನು ಜೋಡಿ ಜೋಡಿ ಎಂಬಂತೆಯೂ ಐದು ಎಂಬುದನ್ನು ಜೋಡಿ ಜೋಡಿ ಮತ್ತು ಒಂದು ಎಂಬಂತೆಯೂ ಸೂಚಿಸುವ ಶಬ್ದ ಗಳು ಬಳಕೆಯಲ್ಲಿವೆ. ಎಸ್ಕಿಮೋ ಭಾಷೆಯಲ್ಲಿ ಐದರವರೆಗೆ ಮಾತ್ರ ಕೆಲವು ಸಂಖ್ಯಾ ವಾಚಕಗಳು ಬಳಕೆಯಲ್ಲಿವೆ. ಹೀಗೆ ಜಗತ್ತಿನಾದ್ಯಂತ ಬೇರೆ ಬೇರೆ ಭಾಷೆಗಳಲ್ಲಿ ಸಂಖ್ಯಾ ವಾಚಕಗಳು ಅವುಗಳನ್ನು ಬಳಸುವ ಕ್ರಮ ಇತ್ಯಾದಿಗಳು ಬೇರೆ ಬೇರೆ ಬಗೆಯಲ್ಲಿರುವು ದನ್ನು ಗುರುತಿಸಿಕೊಳ್ಳಬಹುದಾಗಿದೆ.

ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಸಂಖ್ಯಾವಾಚಕಗಳ ಪಾತ್ರ ಬಹಳ ಮುಖ್ಯ ವಾದುದು. ಭಾಷೆಗಳಲ್ಲಿ ಸರ್ವನಾಮಗಳು ಹೇಗೆ ತಮ್ಮ ಪಾತ್ರವನ್ನು ಉಳಿಸಿ ಕೊಂಡಿವೆಯೋ ಅಂತೆಯೇ ಸಂಖ್ಯಾವಾಚಕಗಳೂ ಕೂಡ ಹೆಚ್ಚಿನ ಮಹತ್ತ್ವವನ್ನು ಸಂಪಾದಿಸಿಕೊಂಡಿವೆ. ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳ ನಡುವಿನ ಸಂಬಂಧವನ್ನು ನಿಖರ ಹಾಗೂ ಖಚಿತವಾಗಿ ಗುರುತಿಸಿಕೊಳ್ಳಲು ಇವು ತುಂಬ ಸಹಾಯಕಾರಿಯಾಗಿವೆ. ಭಾಷೆ ಭಾಷೆಗಳ ನಡುವಿನ ಸಾಮ್ಯವನ್ನು ನಿರ್ಧರಿಸಿಕೊಳ್ಳಲು ಆ ಭಾಷೆಗಳ ಸರ್ವನಾಮಗಳನ್ನು ಹೆಚ್ಚು ಬಳಸಿಕೊಳ್ಳುವುದು ರೂಢಿಯಲ್ಲಿದೆ. ಇದೇ ರೀತಿ ಅವುಗಳ ನಡುವಿನ ಆಂತರಿಕ ಸಂಬಂಧವನ್ನು ಗುರುತಿಸಿಕೊಳ್ಳಲು ಕೆಲವರು ಅವುಗಳ ಸಂಖ್ಯಾವಾಚಕಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಸಂಸ್ಕೃತ, ಇಂಗ್ಲಿಷ್, ಗ್ರೀಕ್, ಲ್ಯಾಟಿನ್ ಇತ್ಯಾದಿ ಇಂಡೋ-ಯೂರೋಪಿಯನ್ ಭಾಷೆಗಳಲ್ಲಿ ಕಂಡುಬರುವ ಎಲ್ಲಾ ಸಂಖ್ಯಾವಾಚಕಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯ ಇರುವುದು ಗೋಚರಿಸುವುದು. ಇದೇ ರೀತಿ, ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಕಂಡುಬರುವ ಸಾಮ್ಯ ಹಾಗೂ ಅಸಾಮ್ಯವನ್ನು ಇವುಗಳ ಸಂಖ್ಯಾವಾಚಕಗಳ ಸಹಾಯ ದಿಂದ ನಿರ್ಧರಿಸಿಕೊಂಡು ಅವುಗಳನ್ನು ಬೇರೆ ಬೇರೆ ವರ್ಗ ಮತ್ತು ಉಪವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದಾದ ಸಾಧ್ಯತೆಗಳಿವೆ. ಈ ದೃಷ್ಟಿಯಿಂದ ಸಂಖ್ಯಾವಾಚಕಗಳು ಭಾಷಾವಿಜ್ಞಾನ ಕ್ಷೇತ್ರದಲ್ಲಿ ತುಂಬ ಸಹಾಯಕಾರಿ ಎನ್ನಬಹುದಾಗಿದೆ.

ಭಾಷೆಯ ಪ್ರತಿಯೊಂದು ಅಂಶವೂ ಬೇರೆ ಬೇರೆ ಭಾಷೆಗಳ ಪ್ರಭಾವಕ್ಕೆ ಒಳಗಾಗದೆ ಪೂರ್ಣವಾಗಿ ದೂರ ಉಳಿದುಕೊಂಡಿಲ್ಲ. ಹಾಗೆ ಭಾಷೆಯ ಯಾವ ಅಂಶವೂ

ಪೂರ್ಣವಾಗಿ ದೂರ ಉಳಿಯಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಸಂಖ್ಯಾವಾಚಕಗಳು ಸರ್ವನಾಮಗಳಂತೆ ಹೆಚ್ಚು ಸ್ಥಿರ ಹಾಗೂ ಅಭೇದ್ಯ ಅಂಶಗಳಾಗಿ ಗೋಚರಿಸುತ್ತವೆ. ಇವು ಅನ್ಯಭಾಷೆಯ ಪ್ರಭಾವಕ್ಕೆ ಒಳಗಾಗಿದ್ದರೂ ಅವುಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಕೆಲವು ಸಂಖ್ಯಾವಾಚಕಗಳು ಭಾಷೆಯಿಂದ ಭಾಷೆಗೆ ಸುಲಭವಾಗಿ ಸ್ವೀಕಾರವಾಗಬಲ್ಲವು. ಆದರೆ ಎಲ್ಲಾ ಸಂಖ್ಯಾವಾಚಕಗಳು ಪೂರ್ಣವಾಗಿ ಭಾಷೆಯಿಂದ ಭಾಷೆಗೆ ಅಷ್ಟೊಂದು ಸುಲಭವಾಗಿ ಸ್ವೀಕಾರವಾಗಲಾರವು. ಈ ಕಾರಣದಿಂದಲೇ ಸಂಖ್ಯಾವಾಚಕಗಳು ಸರ್ವನಾಮಗಳಂತೆಯೇ ಹೆಚ್ಚು ಸ್ಥಿರ ಹಾಗೂ ಅಭೇದ್ಯ ಅಂಶಗಳಾಗಿ ಗೋಚರಿಸುತ್ತವೆ. ಸರ್ವನಾಮಗಳು ಭಾಷೆಯಿಂದ ಭಾಷೆಗೆ ಸ್ವೀಕಾರವಾಗುವುದು ಬಹಳ ಅಪರೂಪ. ಸಂಖ್ಯಾವಾಚಕಗಳು ಭಾಷೆಯಿಂದ ಭಾಷೆಗೆ ಸುಲಭವಾಗಿ ಸ್ವೀಕಾರವಾಗಬಲ್ಲ ಶಬ್ದಗಳಾಗಿ ಗೋಚರಿಸುತ್ತವೆಯಾದರೂ ಅವುಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸ ಕಾಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಸಂಖ್ಯಾವಾಚಕಗಳು ಸರ್ವನಾಮಗಳನ್ನೇ ಹೆಚ್ಚು ಹೋಲುತ್ತವೆ ಎನ್ನುವುದರಲ್ಲಿ ಅನುಮಾನವೇನೂ ಇಲ್ಲ.

ದ್ರಾವಿಡ ಭಾಷೆಗಳು ತಮ್ಮದೇ ಇದ ಕೆಲವು ಸಂಖ್ಯಾವಾಚಕಗಳನ್ನು ಪಡೆದು ಕೊಂಡಿವೆ. ಇವುಗಳಲ್ಲಿ ಮೂಲ ಸಂಖ್ಯಾವಾಚಕಗಳು ಹೆಚ್ಚು ಸ್ಪಷ್ಟವಾಗಿವೆಯಲ್ಲದೆ ಅವು ನಿರ್ದಿಷ್ಟ ಭೇದವನ್ನು ತಿಳಿಸಬಲ್ಲ ಅಂಶಗಳಾಗಿ ಗೋಚರಿಸುತ್ತವೆ. ಇಂತಹ ಮೂಲ ಸಂಖ್ಯಾ ವಾಚಕಗಳ ಸಂಖ್ಯೆ ಆ ಭಾಷೆಗಳಲ್ಲಿ ಸಾಮಾನ್ಯವಾಗಿ ಕಡಿಮೆ ಇರುತ್ತವೆ. ಈ ಮೂಲ ಸಂಖ್ಯಾ ವಾಚಕಗಳ ಸಹಾಯದಿಂದ ಬೇರೆ ಬೇರೆ ಬಗೆಯ ಸಂಖ್ಯಾವಾಚಕ ಗಳನ್ನು ರೂಪಿಸಿಕೊಳ್ಳಲು ಸಾಧ್ಯ. ಈ ಬಗೆಯ ಕೆಲವು ಸಂಖ್ಯಾವಾಚಕಗಳು ಕೆಲವು ವೇಳೆ ವಿಶೇಷಣಗಳಾಗಿಯೂ, ವಿಶೇಷ್ಯಗಳಾಗಿಯೂ ಕಾಣಿಸಿಕೊಳ್ಳಬಹುದಾದ ಸಾಧ್ಯತೆ ಗಳು ಇಲ್ಲವೆ ಇಲ್ಲ. ಕೆಲವು ಭಾಷೆಗಳಲ್ಲಿ ಆ ಮೂಲ ಸಂಖ್ಯಾವಾಚಕಗಳಿಗೆ ಬೇರೆ ಬೇರೆ ಲಿಂಗ ಮತ್ತು ವಚನ ಪ್ರತ್ಯಯಗಳನ್ನು ಹಚ್ಚಿದಾಗ ಅವು ಬೇರೆ ಬೇರೆ ಸಾಧಿತ ಸಂಖ್ಯಾ ವಾಚಕಗಳಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಸಾಧಿತ ಸಂಖ್ಯಾವಾಚಕಗಳು ಸಾಮಾನ್ಯವಾಗಿ ಆ ಮೂಲ ಸಂಖ್ಯಾವಾಚಕಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಅಂತಹ ಸಾಧಿತ ಸಂಖ್ಯಾವಾಚಕಗಳು ಭಾಷೆಗಳಲ್ಲಿ ಲಿಂಗ. ವಚನ, ವಿಶೇಷಣ ಸೂಚಕ ರೂಪಗಳಾಗಿ ಗೋಚರಿಸುತ್ತವೆ. ಪರ್ಜಿ ಭಾಷೆಯಲ್ಲಿ ಮೊದಲ ಐದು ಸಂಖ್ಯಾವಾಚಕಗಳು ಲಿಂಗ ಹಾಗೂ ವಚನ ಭೇದವನ್ನು ಸ್ಪಷ್ಟವಾಗಿ ನಿರ್ದೇಶಿಸಬಲ್ಲವು. ಉದಾ : ಒಕುರಿ (ಒಬ್ಬನು) ಒಕುಲಿ (ಒಬ್ಬಳು) ಒಕ್ತಿ (ಒಂದು ವಸ್ತು) ಚೇವಿರ್ (ನಾಲ್ಕು ಜನ ಗಂಡಸರು) ಚೇಯಲ್ (ನಾಲ್ಕು ಜನ ಹೆಂಗಸರು) ಚೇದುಕ್ (ನಾಲ್ಕು ವಸ್ತುಗಳು). ಕೊಲಾಮಿ, ನಾಯ್ಕಿ, ಗದಬ ಮುಂತಾದ ಮಧ್ಯ ದ್ರಾವಿಡ ಭಾಷೆಗಳಲ್ಲಿ ಇಂತಹ ಲಿಂಗ ಸೂಚಕ ಸಂಖ್ಯಾ ವಾಚಕಗಳು ಬಳಕೆಯಲ್ಲಿವೆ. ಕೊಲಾಮಿಯಲ್ಲಿ ಮೂರು ಲಿಂಗ ಗಳನ್ನು ಸೂಚಿಸುವ ವಿಶಿಷ್ಟವಾದ ಸಂಖ್ಯಾವಾಚಕಗಳು ಬಳಕೆಯಲ್ಲಿವೆ. ಉದಾ :

ಇದ್ವರ್ (ಇಬ್ಬರು ಗಂಡಸರು) ಈರಲ್ (ಇಬ್ಬರು ಹೆಂಗಸರು) ಇಂಗಿಜ್ (ಎರಡು ವಸ್ತುಗಳು). ಇದೇ ರೀತಿ ಗೋಂಡಿ, ಕೊಂಡ ಮುಂತಾದ ಭಾಷೆಗಳಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಭೇದಗಳನ್ನು ನಿರ್ದೇಶಿಸುವ ಸಂಖ್ಯಾ ವಾಚಕಗಳು ಬಳಕೆಯಲ್ಲಿರುವುದು ಗೋಚರಿಸುತ್ತವೆ. ತೆಲುಗು, ಕೊಲಾಮಿ, ನಾಯ್ಕಿ, ಪರ್ಜಿ, ಗದಬ ಮುಂತಾದ ದ್ರಾವಿಡ ಭಾಷೆಗಳಲ್ಲಿ ವಾಸ್ತವವಾಗಿ ಸ್ತ್ರೀಲಿಂಗಕ್ಕೆ ಪ್ರತ್ಯೇಕವಾದ ಸ್ಥಾನವಿಲ್ಲ. ಆದರೆ ಈ ಭಾಷೆಗಳ ಸಂಖ್ಯಾ ವಾಚಕಗಳಲ್ಲಿ ಮಾತ್ರ ಸ್ತ್ರೀಲಿಂಗಕ್ಕೆ ಪ್ರತ್ಯೇಕವಾದ ಸ್ಥಾನ ಇರುವುದು ತುಂಬ ಆಶ್ಚರ್ಯದ ಸಂಗತಿಯಾಗಿದೆ. ಇದು ಮಧ್ಯ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆನ್ನಬಹುದು. ಕುರುಖ್ ಭಾಷೆಯಲ್ಲಿ ಒಂದ ರಿಂದ ನಾಲ್ಕರವರೆಗೆ ಮಾತ್ರ ಕೆಲವೇ ಕೆಲವು ಸಂಖ್ಯಾ ವಾಚಕಗಳು ಬಳಕೆಯಲ್ಲಿರುವುದು ಕಂಡುಬರುತ್ತವೆಯಾದರೂ ಇವುಗಳಿಗೆ ಎರಡೆರಡು ರೂಪಗಳು ಒಳಕೆಯಲ್ಲಿವೆ. ಉದಾ : ಒರ್ತ್ (ಪುಂ. ಸ್ತ್ರೀ) ಒಣ್ಡ್ (ನಪುಂ), ಒಂದು, ಇರ್ಬ್ (ಪುಂ. ಸ್ತ್ರೀ) ಎಣ್ಡ್ (ನಪುಂ.) ಎರಡು, ನುಬ್ಬ್ (ಪುಂ. ಸ್ತ್ರೀ.) ಮೂನ್ದ್ (ನಪುಂ.) ಮೂರು, ನೈಖ್ಖ್ (ಪುಂ. ಸ್ತ್ರೀ.) ನಾಖ್ (ನಪುಂ) ನಾಲ್ಕು, ಇಂತಹ ಕೆಲವು ಸಂಖ್ಯಾವಾಚಕಗಳನ್ನು ಬಿಟ್ಟರೆ, ಉಳಿದ ಕೆಲವು ಸಂಖ್ಯಾವಾಚಕಗಳು ಕುರುಖ್ ಭಾಷೆಯಲ್ಲಿ ಬೇರೆಬೇರೆ ಭಾಷೆಗಳಿಂದ ಬಂದ ಶಬ್ದಗಳಾಗಿ ಗೋಚರಿಸುತ್ತವೆ. ಸ್ವೀಕೃತಶಬ್ದಗಳಲ್ಲಿ ಈ ಬಗೆಯ ವ್ಯತ್ಯಾಸವೇನನ್ನೂ ಕಾಣಲು ಬರುವುದಿಲ್ಲ. ದಕ್ಷಿಣ ದ್ರಾವಿಡಭಾಷೆಗಳಲ್ಲಿ ಸಂಖ್ಯಾವಾಚಕಗಳು ಸ್ವತಂತ್ರ ಹಾಗೂ ಕ್ರಮಬದ್ಧವಾಗಿವೆ. ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಸಂಖ್ಯಾವಾಚಕಗಳ ಸ್ಥಿತಿ ತುಂಬ ವಿಚಿತ್ರವಾಗಿದೆ. ಕೆಲವು ಭಾಷೆಗಳಲ್ಲಿ ಮೂಲ ಸಂಖ್ಯಾ ವಾಚಕ ಶಬ್ದಗಳು ದ್ರಾವಿಡವಾಗಿದ್ದರೆ, ಮತ್ತೆ ಕೆಲವು ಭಾಷೆಗಳಲ್ಲಿ ಅವು ದ್ರಾವಿಡವಲ್ಲದಿರುವ ಸಂದರ್ಭಗಳೂ ಇವೆ. ಮಲ್ತೊ, ಕುಯಿ, ಕುವಿ, ಮುಂತಾದ ಭಾಷೆಗಳಲ್ಲಿ ಮೂರರ ಅನಂತರದ ಸಂಖ್ಯಾವಾಚಕಗಳು ದ್ರಾವಿಡವಲ್ಲ. ಅವೆಲ್ಲವೂ ಬೇರೆ ಬೇರೆ ಭಾಷೆಗಳಿಂದ ಬಂದ ಸ್ವೀಕೃತ ಶಬ್ದಗಳು. ಇದೇ ರೀತಿ, ಬ್ರಹೂಈ ಭಾಷೆಯಲ್ಲಿ ನಾಲ್ಕರ ಅನಂತರದ ಶಬ್ದಗಳು, ಕುರುಖ್ ಭಾಷೆಯಲ್ಲಿ ಐದರ ಅನಂತರದ ಶಬ್ದಗಳು, ಕೊಲಾಮಿಯಲ್ಲಿ ಏಳರ ಅನಂತರದ ಶಬ್ದಗಳು, ಪರ್ಜಿಯಲ್ಲಿ ಎಂಟರ ಅನಂತರ ಶಬ್ದಗಳು, ದ್ರಾವಿಡ ಭಾಷೆಗಳಲ್ಲಿ ಸ್ವೀಕೃತ ಸಂಖ್ಯಾವಾಚಕ ಶಬ್ದಗಳಾಗಿ ಗೋಚರಿಸುತ್ತವೆ. ಬ್ರಹೂಈ ಭಾಷೆಯ ಸಂಖ್ಯಾವಾಚಕಗಳ ಸ್ಥಿತಿ ತುಂಬ ಸ್ವಾರಸ್ಯವಾಗಿದೆ. ಅಸಿಟ್ (ಒಂದು) ಇರಟ್ (ಎರಡು) ಮುಸಿಟ್ (ಮೂರು) ಇವು ಮೂಲತಃ ಅಸಿ, ಇರಾ, ಮತ್ತು ಮುಸಿ ಎಂಬ ವಿಶೇಷಣ ರೂಪಗಳಿಂದ ರೂಪುಗೊಂಡ ಸಂಖ್ಯಾವಾಚಕಗಳಾಗಿ ಕಂಡುಬರುತ್ತವೆ.

ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಕೆಲವು ಅನಿಶ್ಚಿತ ಸಂಖ್ಯಾವಾಚಕಗಳು ಬಳಕೆಯಲ್ಲಿರುವುದು ಸ್ಪಷ್ಟವಾಗಿ ಗೋಚರವಾಗುವುದು. ಕನ್ನಡದಲ್ಲಿ ಹಲವು, ಕೆಲವು, ಸ್ವಲ್ಪ ಅಲ್ಪ ಸ್ವಲ್ಪ, ಎಷ್ಟು, ಅಷ್ಟು, ಇಷ್ಟು, ಹೆಚ್ಚು, ಕಡಿಮೆ ಇತ್ಯಾದಿಗಳು ಬಳಕೆಯಲ್ಲಿವೆ. ಇವುಗಳಿಗೆ ಸಮನಾದ ಶಬ್ದಗಳು ತಮಿಳು, ಮಲೆಯಾಳಂ ಮುಂತಾದ ಭಾಷೆಗಳಲ್ಲಿ ಬಳಕೆ

ಯಲ್ಲಿವೆ. ಇಂತಹ ಆಸ್ಥಿರ ಸಂಖ್ಯಾವಾಚಕ ಶಬ್ದಗಳು ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿಯೂ ಬಳಕೆಯಲ್ಲಿವೆಯಾದರೂ ಅವುಗಳಲ್ಲಿ ಹೆಚ್ಚಿನ ಶಬ್ದಗಳು ದ್ರಾವಿಡವಲ್ಲ. ಬ್ರಹೂಈ ಭಾಷೆಯಲ್ಲಿ ಅಟ್ (ಅಷ್ಟು), ಮಸಟ್ (ಕೆಲವು, ಹಲವು), ಮಚ್ಚಿಟ್ (ಕೊಂಚ, ಸ್ವಲ್ಪ) ಇತ್ಯಾದಿಗಳು ಬಳಕೆಯಲ್ಲಿವೆ. ಇಂತಹ ಕೆಲವೇ ಕೆಲವು ಶಬ್ದಗಳು ಈ ಭಾಷೆಗಳಲ್ಲಿ ದ್ರಾವಿಡವಾಗಿ ಗೋಚರಿಸುತ್ತವೆ.

ದ್ರಾವಿಡ ಭಾಷೆಗಳಲ್ಲಿ ಕೆಲವು ಮೂಲ ಸಂಖ್ಯಾವಾಚಕ ರೂಪಗಳಿಗೆ ಲಿಂಗ, ವಚನ ಮತ್ತು ವಿಶೇಷಣ ಸೂಚಕ ರೂಪಗಳನ್ನು ಹಚ್ಚಿದಾಗ ಬಗೆ ಬಗೆಯ ಸಾಧಿತ ಸಂಖ್ಯಾವಾಚಕ ರೂಪಗಳು ರೂಪುಗೊಳ್ಳುತ್ತವೆ. ಇವು ಮೂಲ ಸಂಖ್ಯೆಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ತೋರಿಸುತ್ತವೆ. ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಇಂತಹ ಸಂಖ್ಯಾವಾಚಕಗಳು ಬಹಳ ಕಡಿಮೆ. ಇಂತಹ ಕೆಲವು ಸಂಖ್ಯಾವಾಚಕಗಳು ಲಿಂಗ, ವಚನ ಮತ್ತು ವಿಶೇಷಣ ನಿರ್ದೇಶಕ ರೂಪಗಳಾಗಿ ಬಳಕೆಯಲ್ಲಿವೆ. ಇವುಗಳನ್ನು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ವಿಶೇಷವಾಗಿ ಕಾಣಬಹುದಾಗಿದೆ.

ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಆ ಎಲ್ಲಾ ಸಂಖ್ಯಾವಾಚಕಗಳನ್ನು ಅವುಗಳ ಅರ್ಥ ಮತ್ತು ರಚನೆಗಳನ್ನು ಆಧರಿಸಿ ಬೇರೆ ವರ್ಗ ಮತ್ತು ಉಪವರ್ಗಗಳಲ್ಲಿ ವರ್ಗೀಕರಿಸಿ ಕೊಳ್ಳಬಹುದಾಗಿದೆ. ದ್ರಾವಿಡ ಭಾಷೆಗಳಲ್ಲಿ ಕೆಲವು ಸಂಖ್ಯಾವಾಚಕಗಳು ಸ್ವತಂತ್ರ ಹಾಗೂ ನಿರ್ದಿಷ್ಟ ಸಂಖ್ಯೆಯನ್ನು ಸೂಚಿಸಬಲ್ಲವು. ಅಂತಹ ಸಂಖ್ಯಾವಾಚಕಗಳನ್ನೇ ಮೂಲ ಸಂಖ್ಯಾವಾಚಕಗಳು (Cardinal numbers) ಎನ್ನುವರು. ಇದನ್ನೇ ಸರಳ ಸಂಖ್ಯಾವಾಚಕಗಳು ಎಂತಲೂ (Simple numerals), ಪ್ರಧಾನ ಸಂಖ್ಯಾ ವಾಚಕಗಳು ಎಂತಲೂ ಕರೆಯುವರು. (ಉದಾ : ಒಂದು, ಎರಡು, ಮೂರು, ನಾಲ್ಕು, ಒಂಬತ್ತು, ಹತ್ತು, ನೂರು, ಸಾವಿರ, ಲಕ್ಷ, ಕೋಟಿ ಇತ್ಯಾದಿ) ಈ ಬೇರೆ ಬೇರೆ ಮೂಲ ಸಂಖ್ಯಾವಾಚಕ ರೂಪಗಳಿಗೆ ಬೇರೆ ಬೇರೆ ಲಿಂಗ, ವಚನ, ವಿಶೇಷಣ ಸೂಚಕ ಪ್ರತ್ಯಯಗಳನ್ನು ನೇರವಾಗಿ ಹಚ್ಚಿದಾಗ ಕೆಲವು ಸಂಖ್ಯಾವಾಚಕಗಳು ರೂಪುಗೊಳ್ಳುತ್ತವೆ. ಇಂತಹ ಸಂಖ್ಯಾವಾಚಕಗಳನ್ನೇ ಸಾಧಿತ ಸಂಖ್ಯಾವಾಚಕಗಳು (Derived numerals) ಎನ್ನುವರು. ಇವನ್ನೇ ವ್ಯುತ್ಪನ್ನ ಸಂಖ್ಯಾವಾಚಕಗಳು ಎಂತಲೂ, ಜನ್ಯ ಸಂಖ್ಯಾವಾಚಕಗಳು ಎಂತಲೂ ಕರೆಯುವರು. (ಉದಾ : ಒಬ್ಬನು, ಒಬ್ಬಳು, ಒಬ್ಬರು, ಒಂಟಿ, ಒಂದೇ, ಒಂದನೇ, ಒಮ್ಮೆ, ಎರಡನೇ, ಇಮ್ಮಡಿ, ಮುಮ್ಮಡಿ, ಹತ್ತನೇ ಇತ್ಯಾದಿ.) ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಎಲ್ಲಾ ಸಾಧಿತ ಸಂಖ್ಯಾವಾಚಕಗಳನ್ನು ಮತ್ತೆ ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಅವಕಾಶಗಳಿವೆ. ದ್ರಾವಿಡ ಭಾಷೆಗಳಲ್ಲಿ ಅವುಗಳ ಮೂಲ ಸಂಖ್ಯಾವಾಚಕಗಳಿಗೆ ಲಿಂಗ ವಚನ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲದಲ್ಲಿ ನಾಮ ಪ್ರಕೃತಿಯು ಸಿದ್ಧಿಸುವುದು. ಇಂತಹ ನಾಮ ಪ್ರಕೃತಿಗಳನ್ನೇ ಸಂಖ್ಯಾನಾಮ ಪದಗಳು (Numeral Nouns) ಎನ್ನುವರು. ಉದಾ : ಒಬ್ಬನು (ಪುಂ.) ಒಬ್ಬಳು (ಸ್ತ್ರೀ.) ಒಬ್ಬರು

(ಪುಂ. ಸ್ತ್ರೀ.) ಇಬ್ಬರು (ಪುಂ. ಸ್ತ್ರೀ.) ಮೂವರು, ನಾಲ್ವರು ಇತ್ಯಾದಿ. ಇದೇ ರೀತಿ ಮತ್ತೆ ಕೆಲವು ಮೂಲ ಸಂಖ್ಯಾವಾಚಕ ರೂಪಗಳಿಗೆ ಬೇರೆಬೇರೆ ವಿಶೇಷಣ ಸೂಚಕ ಪ್ರತ್ಯಯಗಳನ್ನು ಹಚ್ಚಿದಾಗ ಕೆಲವು ವಿಶೇಷಣ ರೂಪಗಳು ಸಿದ್ಧಿಸುವುವು. ಹೀಗೆ ರೂಪುಗೊಂಡ ಸಂಖ್ಯಾವಾಚಕಗಳನ್ನು ಕೆಲವರು ಸಂಖ್ಯಾ ವಿಶೇಷಣಗಳು ಎನ್ನುವರು. (Numeral Adjectives) ಉದಾ: ಒಂದು, ಒಂಟಿ, ಒಮ್ಮೆ, ಇಮ್ಮಡಿ, ಮುಮ್ಮಡಿ, ಎರಡನೇ, ಒಂದನೇ, ಹತ್ತನೇ, ಇತ್ಯಾದಿ. ದ್ರಾವಿಡ ಭಾಷೆಗಳಲ್ಲಿ ಕೆಲವು ಮೂಲ ಸಂಖ್ಯಾವಾಚಕಗಳು ಸಂದರ್ಭಕ್ಕೆ ತಕ್ಕಂತೆ ವಿಶೇಷಣಗಳಾಗಿ ಗೋಚರಿಸುತ್ತವೆ. ಇವು ಎಷ್ಟೇ ಸ್ವತಂತ್ರವಾಗಿ ಭಾಷೆಗಳಲ್ಲಿ ಬಳಕೆಗೆ ಬಂದರೂ ಅವು ಸಾಮಾನ್ಯವಾಗಿ ಸಮಾಸ ಪದಗಳಲ್ಲಿ ಬರುವುದೇ ಹೆಚ್ಚು. ಈ ಕಾರಣದಿಂದಲೇ ಕಾಲ್ಡ್‌ವೆಲ್ ಮಹಾಶಯನು ದ್ರಾವಿಡ ಸಂಖ್ಯಾವಾಚಕಗಳಲ್ಲಿ ಕೆಲವು ಸ್ವತಂತ್ರವಾಗಿಯೂ ಕೆಲವು ಸಮಾಸ ಪದಗಳಲ್ಲಿಯೂ ಬರುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಮೂಲ ಸಂಖ್ಯಾವಾಚಕಗಳು ಸಮಾಸ ಪದಗಳಲ್ಲಿ ಬಂದಾಗ ಅವು ಸಂದರ್ಭಕ್ಕೆ ತಕ್ಕಂತೆ ವಿಶೇಷಣಗಳಾಗಿಯೂ ಕೆಲವು ವೇಳೆ ವಿಶೇಷ್ಯಗಳಾಗಿಯೂ ಕಾಣಿಸಿಕೊಳ್ಳಬಹುದಾದ ಸಾಧ್ಯತೆಗಳು ಇಲ್ಲದೆ ಇಲ್ಲ. ಉದಾ: ಒಂದು ಮನೆ, ಮನೆ ಒಂದು, ಎರಡು ಪುಸ್ತಕ, ಪುಸ್ತಕ ಎರಡು, ಇಬ್ಬರು ಹೆಂಗಸರು, ಹೆಂಗಸರು ಇಬ್ಬರು, ಇತ್ಯಾದಿ. ಇಂತಹ ಕೆಲವು ಸಂಖ್ಯಾವಾಚಕಗಳು ದ್ರಾವಿಡ ಭಾಷೆಗಳಲ್ಲಿ ಹೆಚ್ಚು ಪ್ರಾಚೀನ ಮಾತ್ರವಲ್ಲದೆ, ಅವು ಯಾವಾಗಲೂ ನಪುಂಸಕ ಲಿಂಗದಲ್ಲಿಯೇ ಕಾಣಿಸಿಕೊಳ್ಳಬಹುದು. ಕೆಲವು ಸಂಖ್ಯಾವಾಚಕಗಳು ವಿಶೇಷಣಗಳಂತೆ ನಾಮಪದಗಳನ್ನೇ ಅನುಸರಿಸಿ ಹೇಗೇ ಬೇಕೋ ಹಾಗೆ ಬರಬಲ್ಲವು. ಇಂತಹ ಸಂಖ್ಯಾವಾಚಕಗಳನ್ನು ಅವುಗಳ ಅರ್ಥ ಮತ್ತು ಸ್ಥಾನವನ್ನು ಆಧರಿಸಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದಾಗಿದೆ. ದ್ರಾವಿಡ ಭಾಷೆಗಳಲ್ಲಿ ಕೆಲವು ಸಂಖ್ಯಾವಾಚಕಗಳು ಸಮಾಸ ಪದಗಳೇ ಮೊದಲಾದ ಹಲವಾರು ಸಂದರ್ಭಗಳಲ್ಲಿ ಬರುವುದರಿಂದ ಇಂತಹ ಸಂಖ್ಯಾವಾಚಕಗಳು ಸಾಮಾನ್ಯವಾಗಿ ಸಂಕ್ಷಿಪ್ತವೂ, ಪರಿಶುದ್ಧವೂ, ಅತ್ಯಂತ ಪ್ರಾಚೀನವೂ ಆದ ಅಂಶಗಳಾಗಿ ಗೋಚರಿಸುತ್ತವೆ ಎಂದು ಕೆಲವು ಆಧುನಿಕ ಭಾಷಾವಿಜ್ಞಾನಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆಧುನಿಕ ಭಾಷಾವಿಜ್ಞಾನಿಗಳು ದ್ರಾವಿಡ ಸಂಖ್ಯಾವಾಚಕಗಳನ್ನು ಅವುಗಳ ಅರ್ಥ ಮತ್ತು ರಚನೆಗಳನ್ನು ಗಮನಿಸಿ ನಾನಾರೀತಿಯಲ್ಲಿ ವಿವರಿಸಿಕೊಂಡಿದ್ದಾರೆ. ಒಂದು ಮರ, ಮರ ಒಂದು, ಒಂದು ಬಂಡೆ, ಬಂಡೆ ಒಂದು, ಮೂವರು ಗಂಡಸರು. ಗಂಡಸರು ಮೂವರು, ನಾಲ್ವರು ಹೆಂಗಸರು, ಹೆಂಗಸರು ನಾಲ್ವರು, ಇತ್ಯಾದಿಗಳಲ್ಲಿ ಅವುಗಳ ಅರ್ಥ ವ್ಯತ್ಯಾಸ ಕಂಡುಬರುವುದು. ಈ ಅರ್ಥ ವ್ಯತ್ಯಾಸಕ್ಕೆ ಅವುಗಳ ರಚನೆಗಳಲ್ಲಿ ಕಂಡು ಬರುವ ನಾಮಪದಗಳು ಮುಖ್ಯವಲ್ಲ. ಅವುಗಳ ಹಿಂದೆ ಅಥವಾ ಮುಂದೆ ಬಂದಿರುವ ಸಂಖ್ಯಾವಾಚಕಗಳು ಮಾತ್ರ ಕಾರಣವಾಗಿವೆ. ಇಂತಹ ರಚನೆಗಳು ದ್ರಾವಿಡ ಭಾಷೆಗಳಲ್ಲಿ ಸರ್ವೇ ಸಾಮಾನ್ಯ. ಇಂತಹ ರಚನೆಗಳು ಗುಣವಾಚಕದಲ್ಲಿ ಸಾಧ್ಯವಾಗುವುದಿಲ್ಲ.

(ಎರಡನೇ ಮನೆ, ನೂರನೇ ಪುಸ್ತಕ, ಮೊದಲನೆ ಗಂಡ, ಎರಡನೇ ಹೆಂಡತಿ, ಇತ್ಯಾದಿ.) ಈ ರಚನೆಗಳಲ್ಲಿ ಅವುಗಳ ಅರ್ಥ ವ್ಯತ್ಯಾಸವೇನೂ ಉಂಟಾಗುವುದಿಲ್ಲ. ಅವುಗಳಲ್ಲಿ ಕಂಡುಬರುವ ಸಂಖ್ಯಾವಾಚಕ ರೂಪಗಳನ್ನು ಅಷ್ಟೊಂದು ಸುಲಭವಾಗಿ ಬದಲಿಸಲು ಬರುವುದಿಲ್ಲ. ಹಾಗೆ ಬದಲಿಸಿದರೆ ಅವು ಅವುಗಳ ಅರ್ಥವನ್ನು ಕಳೆದುಕೊಳ್ಳುತ್ತವೆ.

ದ್ರಾವಿಡ ಭಾಷೆಗಳಲ್ಲಿ ಕೆಲವು ಭಿನ್ನಾಂಶ ಸೂಚಕ ಶಬ್ದಗಳು ಬಳಕೆಯಲ್ಲಿರುವುದು ಕಂಡುಬರುತ್ತವೆ. ಉದಾ : ಅರ್ಧ, ಕಾಲು, ಮುಕ್ಕಾಲು, ಇತ್ಯಾದಿ. ಇವು ಸ್ವತಂತ್ರವಾಗಿ ಬಳಕೆಗೆ ಬರಬಲ್ಲವು. ಈ ಬಗೆಯ ಭಿನ್ನಾಂಶ ಸೂಚಕ ಸಂಖ್ಯಾ ವಾಚಕಗಳನ್ನು ಭಿನ್ನಾಂಶ ಸಂಖ್ಯಾವಾಚಕಗಳು (Fractionals) ಎನ್ನುವರು. ಇಂತಹ ಸಂಖ್ಯಾವಾಚಕಗಳು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಉತ್ತರ ಮತ್ತು ಮಧ್ಯ ದ್ರಾವಿಡ ಭಾಷೆಗಳಲ್ಲಿ ಈ ಬಗೆಯ ಸಂಖ್ಯಾವಾಚಕಗಳು ಬಳಕೆಯಲ್ಲಿರುವುದು ಕಂಡುಬರುತ್ತವೆಯಾದರೂ ಅವುಗಳಲ್ಲಿ ಹೆಚ್ಚಿನ ಶಬ್ದಗಳು ಬೇರೆ ಬೇರೆ ಭಾಷೆಗಳಿಂದ ಬಂದಂತಹ ಶಬ್ದಗಳಾಗಿ ಕಂಡುಬರುತ್ತವೆ.

ದ್ರಾವಿಡ ಭಾಷೆಗಳಲ್ಲಿ ಕೆಲವು, ಹಲವು, ಸ್ವಲ್ಪ, ಹೆಚ್ಚು, ಕಡಿಮೆ, ಕೊಂಚ, ಸಾರಿ, ಬಾರಿ, ಸಲ, ದಪ, ಭಾಗ, ಇಷ್ಟು, ಅಷ್ಟು, ಎಷ್ಟು, ಎಲ್ಲಾ, ಇತ್ಯಾದಿ ಅರ್ಥ ಸೂಚಕ ಶಬ್ದಗಳು ಬಳಕೆಯಲ್ಲಿರುವುದು ಗೋಚರಿಸುತ್ತವೆ. ಇವು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿವೆ. ಇವು ಅನಿಶ್ಚಿತ ಅರ್ಥವನ್ನು ಸೂಚಿಸಬಲ್ಲಂತಹ ಶಬ್ದಗಳು. ಇವನ್ನು ಕೆಲವು ವಿದ್ವಾಂಸರು ಅನಿಶ್ಚಿತ ಸಂಖ್ಯಾವಾಚಕಗಳು ಎಂದು ಹೆಸರಿಸಿಕೊಂಡಿದ್ದಾರೆ. ಇವು ಒಂದು ಬಗೆಯಲ್ಲಿ ಸಂಖ್ಯಾವಾಚಕ ರೂಪಗಳಾಗಿ ಕಂಡುಬರುತ್ತವೆಯಾದರೂ ಇವುಗಳ ಅನಿಶ್ಚಿತ ಅರ್ಥವನ್ನು ಆಧರಿಸಿ ಅವನ್ನು ಅನಿಶ್ಚಿತ ಸಂಖ್ಯಾವಾಚಕಗಳು ಎಂದು ಪರಿಗಣಿಸಿಕೊಳ್ಳಬಹುದಾಗಿದೆ. ಇವುಗಳಲ್ಲಿ ಕೆಲವು ವಿಶೇಷಣಗಳಾಗಿಯೂ ಮತ್ತೆ ಕೆಲವು ವಿಶೇಷ್ಯಗಳಾಗಿಯೂ ಕಂಡುಬರುತ್ತವೆ.

ಇಂದು ಬಳಕೆಯಲ್ಲಿರುವ ಎಲ್ಲಾ ದ್ರಾವಿಡ ಭಾಷೆಗಳ ಎಲ್ಲಾ ಬಗೆಯ ಸಂಖ್ಯಾವಾಚಕಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯವಿರುವುದು ಗೋಚರಿಸುವುದು. ಈ ಭಾಷೆಗಳಲ್ಲಿ ದೊರೆಯುವ ಸಂಖ್ಯಾವಾಚಕಗಳ ಸಹಾಯದಿಂದ ಅವುಗಳ ಮೂಲದಲ್ಲಿದ್ದ ರೂಪಗಳನ್ನು ಪುನರ್ರಚಿಸಿಕೊಳ್ಳಲು ಸಾಧ್ಯ. ಇದರಿಂದ ಈ ಸಂಖ್ಯಾವಾಚಕಗಳು ಬೇರೆ ಬೇರೆ ಭಾಷೆಗಳಲ್ಲಿ ಅವು ಹೇಗೆ ಕಾಲಕಾಲಕ್ಕೆ ಪರಿವರ್ತನೆಗೊಂಡು ಬೆಳೆದು ಬಂದಿವೆ ಎಂಬುದನ್ನು ತಿಳಿಯಲು ಸಹಾಯಕವಾಗುವುದಲ್ಲದೆ ಅವುಗಳ ಸ್ವರೂಪವು ತಿಳಿದು ಬರುವುದು. ದ್ರಾವಿಡ ಸಂಖ್ಯಾವಾಚಕಗಳನ್ನು ಪೂರ್ಣವಾಗಿ ಪರಿಶೀಲಿಸಲು ಹೊರಟ ಕೆಲವು ವಿದ್ವಾಂಸರು ಅವುಗಳನ್ನು ಮುಖ್ಯವಾಗಿ ಅವುಗಳ ಅರ್ಥವನ್ನು ಆಧರಿಸಿ ನಿಶ್ಚಿತ ಸಂಖ್ಯಾವಾಚಕಗಳು (Definite numerals) ಮತ್ತು ಅನಿಶ್ಚಿತ ಸಂಖ್ಯಾವಾಚಕಗಳು (Indefinite numerals) ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದನ್ನು ಗಮನಿಸಿದ ಮತ್ತೆ

ಕೆಲವರು ಎಲ್ಲಾ ದ್ರಾವಿಡ ಸಂಖ್ಯಾವಾಚಕಗಳನ್ನು ಸರಳ ಸಂಖ್ಯಾವಾಚಕಗಳು, ಸಾಧಿತ ಸಂಖ್ಯಾವಾಚಕಗಳು, ಭಿನ್ನಾಂಶ ಸಂಖ್ಯಾವಾಚಕಗಳು ಎಂದು ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದರೆ, ಇನ್ನೂ ಕೆಲವರು ದ್ರಾವಿಡ ಸಂಖ್ಯಾವಾಚಕಗಳನ್ನು ಮೂಲ ಸಂಖ್ಯಾವಾಚಕಗಳು, ಕ್ರಮಾಂಕ ಸಂಖ್ಯಾವಾಚಕಗಳು, (ಸಾಧಿತ) ಸಂಖ್ಯಾ ವಿಶೇಷಣಗಳು, ಸಂಖ್ಯಾ ನಾಮ ಪದಗಳು, ಭಿನ್ನಾಂಶ ಸಂಖ್ಯಾವಾಚಕಗಳು ಎಂದು ಐದು ವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಯಾವ ಸಂಖ್ಯಾವಾಚಕಗಳು ನಿಶ್ಚಿತ ಅರ್ಥವನ್ನು ಸೂಚಿಸಬಲ್ಲವೋ ಅವೆಲ್ಲವೂ ನಿಶ್ಚಿತ ಸಂಖ್ಯಾವಾಚಕಗಳ ವರ್ಗಕ್ಕೆ ಸೇರುತ್ತವೆ. ಇದರಂತೆಯೇ, ಯಾವ ಸಂಖ್ಯಾವಾಚಕಗಳು ನಿಶ್ಚಿತ ಅರ್ಥವನ್ನು ಸೂಚಿಸಲಾರವೋ ಅವೆಲ್ಲವೂ ಅನಿಶ್ಚಿತ ಸಂಖ್ಯಾವಾಚಕಗಳ ವರ್ಗಕ್ಕೆ ಸೇರುತ್ತವೆ. ಈ ಎರಡು ಬಗೆಯ ಕೆಲವು ಸಂಖ್ಯಾವಾಚಕಗಳನ್ನು ಬಿಟ್ಟರೆ ದ್ರಾವಿಡ ಭಾಷೆಗಳಲ್ಲಿ ಉಳಿದ ಎಲ್ಲಾ ಬಗೆಯ ಸಂಖ್ಯಾವಾಚಕಗಳು ಸಂಖ್ಯಾತ್ಮಕ ರಚನೆಗಳಾಗಿ ಗೋಚರಿಸುತ್ತವೆ. ಈ ಬಗೆಯ ಸಂಖ್ಯಾಯಿಕ ರಚನೆಗಳು ಅವುಗಳ ಮೂಲ ಸಾಮಗ್ರಿಯ ಸಹಾಯದಿಂದಲೇ ರಚನೆಗೊಂಡ ಸಂಖ್ಯಾವಾಚಕಗಳಾಗಿ ಗೋಚರಿಸುತ್ತವೆ. ಉದಾ : ಇಪ್ಪತ್ತು, ಮೂವತ್ತು, ನಲವತ್ತು, ಐವತ್ತು, ಎಪ್ಪತ್ತು, ತೊಂಬತ್ತು, ಇಪ್ಪತ್ತೊಂದು, ಮೂವತ್ತನಾಲ್ಕು ನಲವತ್ತಐದು, ಐವತ್ತಾರು, ಎಂಬತ್ತನಾಲ್ಕು, ಎಂಬತ್ತೊಂಬತ್ತು, ತೊಂಬತ್ತೆರಡು, ನೂರನಾಲ್ಕು, ಐನೂರೊಂದು, ಎಂಟುನೂರನಾಲ್ಕು, ಇತ್ಯಾದಿ. ಈ ಬೇರೆ ಬೇರೆ ದ್ರಾವಿಡ ಸಂಖ್ಯಾಯಿಕ ರಚನೆಗಳನ್ನು ಪರಿಶೀಲಿಸಲು ಹೊರಟಾಗ ಅವುಗಳ ರಚನಾತ್ಮಕ ವಿಧಾನವು ತಿಳಿದುಬರುವುದು. ಈ ಸಂಖ್ಯಾಯಿಕ ರಚನೆಗಳನ್ನು ಕೆಲವು ವಿದ್ವಾಂಸರು ಅವುಗಳ ರಚನಾ ವಿಧಾನವನ್ನು ಅನುಸರಿಸಿ ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. (1) ಕೂಡುವಿಕೆಯಿಂದ ರಚನೆಗೊಂಡ ಸಂಖ್ಯಾಯಿಕ ರಚನೆಗಳು ; ಉದಾ : ಹತ್ತು + ಒಂದು = ಹನ್ನೊಂದು, ಹತ್ತು + ಐದು = ಹದಿನೈದು, ಹತ್ತು + ಆರು = ಹದಿನಾರು, ಹತ್ತು + ಒಂಬತ್ತು = ಹತ್ತೊಂಬತ್ತು, ಇತ್ಯಾದಿ (2) ಗುಣಿಸುವಿಕೆಯಿಂದ ರಚನೆಗೊಂಡ ಸಂಖ್ಯಾವಾಚಕಗಳು, ಉದಾ : ಹತ್ತು × ಎರಡು = ಇಪ್ಪತ್ತು, ಹತ್ತು × ಮೂರು = ಮೂವತ್ತು, ಹತ್ತು × ಐದು = ಐವತ್ತು, ಹತ್ತು × ಆರು = ಅರವತ್ತು, ಹತ್ತು × ಎಂಟು = ಎಂಬತ್ತು, ಹತ್ತು × ಒಂಬತ್ತು = ತೊಂಬತ್ತು, ನೂರು × ಐದು = ಐದುನೂರು, ನೂರು × ಎಂಟು = ಎಂಟುನೂರು, ಇತ್ಯಾದಿ (3) ಗುಣಿಸುವಿಕೆ ಮತ್ತು ಕೂಡುವಿಕೆಗಳಿಂದ ರಚನೆಗೊಂಡ ಸಂಖ್ಯಾಯಿಕ ರಚನೆಗಳು ; ಉದಾ : ಹತ್ತು × ಎರಡು + ಒಂದು = ಇಪ್ಪತ್ತೊಂದು, ಹತ್ತು × ಮೂರು + ನಾಲ್ಕು = ಮೂವತ್ತನಾಲ್ಕು, ಹತ್ತು × ಎಂಟು + ಎಂಟು = ಎಂಬತ್ತೆಂಟು, ಹತ್ತು × ಒಂಬತ್ತು + ಮೂರು = ತೊಂಬತ್ತಮೂರು. ನೂರು × ಎರಡು + ಒಂದು = ಇನ್ನೂರ ಒಂದು, ನೂರು × ನಾಲ್ಕು + ಐದು = ನಾನೂರಐದು, ನೂರು × ಎಂಟು + ಆರು =

ಎಂಟುನೂರೆಆರು, ಇತ್ಯಾದಿ. ಹೀಗೆ ರಚನೆಗೊಂಡ ಸಂಖ್ಯಾಯಿಕ ರೂಪಗಳು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತವೆ. ಇಂತಹ ಸಂಖ್ಯಾಯಿಕ ರಚನೆಗಳು ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ದ್ರಾವಿಡ ಸಂಖ್ಯಾವಾಚಕಗಳ ಸ್ವರೂಪವನ್ನು ತಿಳಿಯಲು ಆಯಾ ಭಾಷೆಗಳಲ್ಲಿ ಬಳಕೆಯಲ್ಲಿರುವ ಎಲ್ಲಾ ಸಂಖ್ಯಾಯಿಕ ರೂಪಗಳನ್ನು ಈ ಕೆಳಗಿನಂತೆ ಪಟ್ಟಿಮಾಡಿ ತೋರಿಸಬಹುದಾಗಿದೆ.

1:1 ಒಂದು :

ತ ; ಒನ್ಱು, ಒನ್ನು, ಒಣ್ಣು (ಒಂದು)
ಒರುಕ್ಕವಳ್ (ಒಂದಾಗು)
ಒರುವಿ " "
ಒರುವಿಕ್ಕ " "
ಒರುವಿಪ್ಪ " "
ಒರುಕ್ಕು " "
ಒರುಂಕು " "
ಒನ್ಱಿಪು " "
ಒರುವ್ವೈ (ಒಂಟಿ)
ಒಟ್ಟೈ "
ಒರ್ರೈ "
ಒನ್ಱಾ (ಒಂದನೇ)
ಒರೇ (ಒಂದೇ)
ಒಕ್ಕ (ಒಂದಾಗುವಿಕೆ)
ಒರುವನ್ (ಒಬ್ಬನು), (ಪುಂ. ಏಕ)
ಒರುವನ್ ( " ), ( " )
ಒರುತ್ತಿ (ಒಬ್ಬಳು), (ಸ್ತ್ರೀ. ಏಕ)
ಒರುವರ್ (ಒಬ್ಬರು), (ಪುಂ. ಸ್ತ್ರೀ.) (ಗೌರವ ಸೂಚಕ ಬಹುವಚನ)
ಒರುಮಗಳ್ (ಒಬ್ಬ ಮಗಳು), (ಸ್ತ್ರೀ ಏಕ)
ಒರುನಾಳ್ (ಒಂದು ದಿನ), (ನಪುಂ, ಏಕ)
ಓರ್ಆಯಿರ್‌ರಂ (ಒಂದು ಸಾವಿರ)
ಓರ್ವ್ವೈ (ಒಂದಾಗುವುದು)
ಓರ್ಒನ್ಱು (ಒಂದೊಂದು ಸಾರಿ)

ಓಕ್‌ಆನ್ (ಒಂದು ಹಸು), (ನಪುಂ. ಏಕ)
ಓರ್‌ಯಿಲ್ (ಒಂದು ಕೋಟೆ) ”

(ಒನ್ನ್ಟು, ಒನ್ನು, ಒಣ್ಣು (ಒಂದು) ಒರು–, ಒರ್–, ಒ–, ಒನ್ಟ್– ಓರ್–)
(ಒರು–ಎಂಬುದು ವ್ಯಂಜನಗಳ ಮುಂದೆ ಬಂದರೆ, ಓರ್–ಎಂಬುದು ಸ್ವರಗಳ ಮುಂದೆ
ಬರುವುದು. ಒ–ಎಂಬುದು ಇನ್ನೆಲ್ಲಿಯೋ ಬರುವುದು)

ಮ ; ಒನ್ನು (ಒಂದು)

ಒರುವನ್ (ಒಬ್ಬನು), (ಪುಂ. ಏಕ.)
ಒರುತ್ತನ್ ( ” ” )
ಒರುತ್ತಿ (ಒಬ್ಬಳು) (ಸ್ತ್ರೀ. ಏಕ)
ಒರುವ್ಳೆ ( ” ” )
ಒರುಮ (ಒಂದಾಗು)
ಒರುಮಿಕ್ಕ ( ” )
ಒರುವರ್ (ಒಬ್ಬರು) (ಪುಂ. ಸ್ತ್ರೀ) (ಗೌರವ ಸೂಚಕ ಬಹುವಚನ)
ಒನ್ನಿಕ್ಕ (ಒಂದಾಗುವಿಕೆ)
ಒನ್ನಾಕ ( ” )
ಒಕ್ಕ ( ” )
ಒನ್ಟಾ (ಒಂಟಿ)
ಓರೋ (ಒಬ್ಬೊಬ್ಬನು)
ಓರೋನ್ನು (ಪ್ರತಿಯೊಬ್ಬನು)
ಒರೋರೋ ( ” )

(ಒನ್ನು, ಒನ್ನ್–, ಒರು–, ಒರ್–, ಒ–, ಓರ್–,)

ಕೋ ; ಒದ್ (ಒಂದು)

ಒರ್ವ್ (ಒಬ್ಬನು), (ಪುಂ. ಏಕ)
ಒರ್ವಿ (ಒಬ್ಬಳು), (ಸ್ತ್ರೀ. ಏಕ)
ಒಜ್ (ಒಂದೇ), (ನಪುಂ. ಏಕ)
ಒರ್‌ಪಾಣಿ (ಒಂದು ಪಾವು) (ನಪುಂ. ಏಕ)
ಒರ್‌ಕಟ್ಟ್ (ಒಂದು ಕಳ್ಳು) ”
ಒರ್‌ಪೊಬ್ತ್ (ಒಂದು ಹೊತ್ತು) ”
ಒರರ್ (ಒಂದು ಕೊಳಗ)
ಒಬಿ (ಒಂದಾಗು)

ಒತ್ತ್ಯೆ (ಒಂದು ಜೊತೆ)
ಒತ್ತ್ಯೆಲ್ಗ್ಎ (ಒಬ್ಬೊಬ್ಬ)
ಒಚಾರಿ (ಒಂದು ಕಡೆ)
ಒಬುದ್ದಿ (ಒಂದು ಚಟಾಕು)
ಓರ್ಆಡ್ (ಒಂದು ವರ್ಷ)
ಓರ್ವಿ (ಒಮ್ಮೆ)
ಓರ್ಆಳ್ವ್ (ಮೊದಲನೆಯ ಹೆಂಡತಿ)
(ಒದ್, ಒರ್–, ಒ–. ಓರ್–)

ತೊ ;

ವೀದ್, ವೀಡ್ (ಒಂದು)
ಒಬ್ಃ (ಒಬ್ಬನು, ಒಬ್ಬಳು, ಒಂದು, (ಪುಂ.ಸ್ತ್ರೀ, ನಪುಂ.ಏಕ)
ವೀರ್ಓಬ್ (ಒಂದು ವರ್ಷ)
ವೀರ್ ಅಕ್ (ಒಂದು ಸೇರು)
ಒಮುನ್ (ಒಂದು ಕಡೆ)
ಒಕ್ವಾವ್ (ಒಂದು ಸೇರು)
ಒಸ್ತೇರ್ (ಒಂದು ಹಿಡಿ)
ಒನೂಬ್ (ಒಂದು ನೂರು)
ವಟ್ಯೆ (ಒಂಟಿ)
ವೀಡ್ಯೆ ( " )
ವೀಡಿ ( " )

(ವೀದ್, ವೀಡ್, ವೀರ್–, ಒ–>, ಒಟ್–> ವಟ್–,
ಒನ್ಟು–> ಒದ್–> ವೀದ್–> ವೀಡ್–> ವೀರ್–)

ಕೊಡ್ ;

ಒಂಡು,
ಒಬ್ಬೆ (ಒಬ್ಬನು), (ಪುಂ. ಏಕ)
ಒಬ್ಬ (ಒಬ್ಬಳು), (ಸ್ತ್ರೀ, ಏಕ)
ಒರ್ಮೆ (ಒಮ್ಮೆ)
ಒನ್ನುಂಡು (ಒಂದು ದಿನ) (ನಪುಂ)
ಒಕ್ಕ (ಒಂಟಿ)
ಒಕ್ಕಚೆ ( " )

ಒಮ್ಮ (ಒಂದು ಸಾರಿ)
ಓರಬೆ (ಪ್ರತಿಯೊಬ್ಬನು)
ಓರ್‌ಆಳ್ (ಒಂದು ಆಳು)
ಓರ್‌ಆಣ್ಡ್ (ಒಂದು ವರ್ಷ)
ಓಡಕ್‌ಎತ್ತ್ (ಒಂದು ಜೊತೆ ಎತ್ತು)
(ಒಂಡು, ಒ–, ಓರ್–), (ಓರ್– > ಓಡ್, ಒರ್ಮೆ– > ಒಮ್ಮೆ–)

ಕ ;

ಒಂದು (ಒಂದು)
ಒಬ್ಬನು (ಒಬ್ಬನು), (ಪುಂ. ಏಕ)
ಒಬ್ಬಳು (ಒಬ್ಬಳು), (ಸ್ತ್ರೀ. ಏಕ)
ಒಬ್ಬ (ಒಬ್ಬನು)
ಒಬ್ಬರು (ಒಬ್ಬರು) (ಪುಂ. ಸ್ತ್ರೀ), (ಗೌರವಸೂಚಕ ಬಹುವಚನ)
ಓರ್ವನ್ (ಒಬ್ಬನು)
ಓರ್ವಳ್ (ಒಬ್ಬಳು)
ಓರ್ವರ್ (ಒಬ್ಬರು), (ಗೌರವಸೂಚಕ ಬಹುವಚನ)
ಒಂಟಿ (ಒಂಟಿ)
ಒಂಟಿಗ (ಒಂಟಿಗ), (ಪುಂ. ಏಕ)
ಒಬ್ಬಂಟಿಗ [ಒಂಟಿಗ], [ಪುಂ. ಏಕ]
ಒಂಟಿಗಿತ್ತಿ [ ” ] [ಸ್ತ್ರೀ. ಏಕ]
ಒಬ್ಬಂಟಿಗಿತ್ತಿ [ಒಂಟಿಗ] [ಸ್ತ್ರೀ. ಏಕ]
ಒಂದು ವರ್ಷ [ಒಂದು ವರ್ಷ], [ನಪುಂ]
ಒಂದೇ [ಒಂದೇ]
ಒಂದನೆಯ [ಒಂದನೆಯ] [ವಿಶೇಷಣ]
ಒಂದಿಸು [ಒಂದಾಗುವಿಕೆ]
ಒಂದಿಕೆ [ ” ]
ಒಂದಾನು (ಒಂದಾಗುವಿಕೆ)
ಒರ್ ಸೇರು (ಒಂದು ಸೇರು)
ಒಮ್ಮೆ (ಒಂದು ಸಾರಿ)
ಓರಗೆ (ಸರಿಸಮಾನ)
ಓರ್‌ಅಳ್ಕೆ (ಒಬ್ಬನ ಆಳ್ವಿಕೆ)
ಒಗ್ಗಟ್ಟು (ಒಂದಾಗು)

ಒಪ್ಪೊತ್ತು (ಒಂದು ಹೊತ್ತು)
ಒಕ್ಕಣ್ಣು (ಒಂದು ಕಣ್ಣು)
ಒಕ್ಕಳ (ಒಂದು ಕೊಳಗ)
ಒಮ್ಮತ (ಒಗ್ಗಟ್ಟು)
(ಒಂದು, ಒಂದ್-, ಒರ್-, ಒ-, ಓರ್-)
(ಒಕ್- > ಒನ್-),

ತು ;

ಒಂಜಿ (ಒಂದು)
ಒರಿ (ಒಬ್ಬನು), (ಪುಂ. ಏಕ.)
ಒರ್ತಿ (ಒಬ್ಬಳು), (ಸ್ತ್ರೀ. ಏಕ)
ಒರು (ಒಬ್ಬರು), (ಪುಂ. ಸ್ತ್ರೀ)
ಒಬ್ಬಂಟಿಗೆ (ಒಬ್ಬನು), (ಪುಂ. ಏಕ.)
ಒಬ್ಬಂಟೀ ( " ), ( " )
ಒಂಟಿಗೆ ( " ), ( " )
ಒತ್ತಿ (ಒಬ್ಬಳು) (ಸ್ತ್ರೀ. ಏಕ.)
ಒರಿಯೆ (ಒಬ್ಬಳು) (ಸ್ತ್ರೀ. ಏಕ.)
ಒರ, ಒರ್ (ಒಂದು ಸಾರಿ)
ಒಮ್ಮೆ ( " )
ಒಮ್ಮುತ (ಒಂದಾಗು)
ಒಂಜನೇ (ಒಂದನೆಯ)
ಒಪೊರ್ತು (ಒಂದು ಹೊತ್ತು)
ಒಗ್ಗಾಪಿನಿ (ಒಂದಾಗುವಿಕೆ)
ಒಗ್ಗಡ (ಒಂದು ಕಡೆ)
ಒಂದುನಿ (ಒಂದಾಗು)
ಒಂದಿಕೆ ( " )
ಒತ್ತಿ (ಒಂಟಿ)
(ಒಂಜಿ, ಒಂಜ್-, ಒರು-, ಒರ್-, ಒ-)
(ಒಂದ್- > ಒಂಜ್-, ಒರ್- > ಒಬ್ಬ್-)

ತೆ ;

ಒಂಡು (ಒಂದು), (ಹಳೆ, ತೆಲುಗು), ಒಕ,

ಒಕಡು (ಒಬ್ಬನು) (ಪು. ಏಕ.)
ಒಕೊಡು (ಒಬ್ಬನು) (ಪು. ಏಕ.)
ಒಕರುಡು ( " ) ( " )
ಒಕರುವ್ವಡು( " ) ( " )
ಒಕೊರೊಡು [ಒಬ್ಬನು] [ಪು. ಏಕ]
ಒಕಟಿ [ಒಬ್ಬಳು], [ಸ್ತ್ರೀ. ಏಕ.]
ಒಕಟ ( " ) ( " )
ಒಕತುಕ [ಒಬ್ಬಳು] [ಸ್ತ್ರೀ. ಏಕ]
ಒಕತೆ [ " ] [ " ]
ಒಕರಿತ [ " ] [ " ]
ಒಕರಿತಿ [ " ] [ " ]
ಒಕರಿತೆ [ " ] [ " ]
ಒಕರ್ತು [ " ] [ " ]
ಒಕರ್ತುಕ [ " ] [ " ]
ಒಕರ್ತೆ [ " ] [ " ]
ಒಕೊತ [ " ] [ " ]
ಒಕೋರಿತ [ಒಬ್ಬಳು] [ಸ್ತ್ರೀ. ಏಕ]
ಒಕುರು [ಒಬ್ಬರು] [ಪು. ಸ್ತ್ರೀ.] ಗೌರವಸೂಚಕ ಬಹುವಚನ
ಒಕಟಿ [ಒಂದು ವಸ್ತು] [ನಪುಂ]
ಒಕೊಟಿ [ಒಂದು ವಸ್ತು] [ನಪುಂ.]
ಒಕಟ [ಒಂದು ಸಾರಿ]
ಒಕೊಟ [ಒಂದು ಸಾರಿ]
ಒಕಟೀ [ಒಂದೇ]
ಒರಿವು [ಒಂದಾಗು]
ಒರಿಮಿಕ [ಒಂದಾಗು]
ಒರುಮು [ " ]
ಒನ್‌ವರ್ಷ [ಒಂದು ವರ್ಷ]
ಒಂಟಿ [ಒಂಟಿ] [ಪು]
ಒಂಟರಿಕವೂ [ಒಂಟಿ]
ಒಂಟಿಕಡು [ " ]
ಒಂಟಿರಿಡು [ " ]
ಒಂಡರಿಕಡು [ " ]

ಒಂಟರಿ [ಒಂಟಿ], [ಸ್ತ್ರೀ]
[ಒಂಡು, ಒಕ, ಒರು–, ಒರ್–, ಒ–]

ಕೊಲಾ ;

ಒಕ್ಕೊದ್ [ಒಂದು]
ಒಕ್ಕೊನ್ [ಒಬ್ಬನು], [ಪು. ಏಕ]
ಒಕ್ಕೊದ್ [ಒಬ್ಬಳು, ಒಂದು], [ಸ್ತ್ರೀ, ನಪುಂ. ಏಕ]
ಒಕ್‌ಸಿಡ್ [ಒಂದು ದಿನ]
ಒಕ್‌ಮಟ್ [ಒಂದು ಸಾರಿ]
[ಒಕ್ಕೊದ್, ಒ–]

ನಾ ;

ಒಕ್ಕೊದ್ [ಒಂದು]
ಒಕ್ಕೊ[ನ್] [ಒಬ್ಬನು], [ಪು. ಏಕ.]
ಒಕ್ಕೊದ್ [ಒಬ್ಬಳು, ಒಂದು], [ಸ್ತ್ರೀ. ನಪುಂ. ಏಕ]
ಒಕ್‌ಸಿರ್ [ಒಂದು ದಿನ]
ಒಕ್‌ಮಟ್ [ಒಂದು ಸಾರಿ]
[ಒಕ್ಕೊದ್, ಒ–]

ಪ ;

ಒಕ್ [ಒಂದು] ಒಕುತ್
ಒಕುರ್ [ಒಬ್ಬನು], [ಪು. ಏಕ]
ಒಕಲ್ [ಒಬ್ಬಳು] [ಸ್ತ್ರೀ. ನಪುಂ. ಏಕ]
ಒಕುತ್ [ " ] [ " " ]
ಒಕ್ತ್ [ " ] [ " " ]
ಒಕುತಿ [ಒಂದೇ]
[ಒಕುತ್, ಒಕ್, ಒ–]

ಗ ;

ಉಕುತ್, ಉಕುಟ್, ಒಕುತ್ [ಒಂದು]
ಉಕುರ್ [ಒಬ್ಬನು], [ಪು. ಏಕ]
ಉಕುತ್ [ಒಬ್ಬಳು] [ಸ್ತ್ರೀ. ನಪುಂ. ಏಕ]
ಒಕುತ್ ( " ) ( " )

ಒಕಲ್ [ಒಬ್ಬಳು], [ಸ್ತ್ರೀ. ನಪುಂ. ಏಕ]
ಉಕುಟ್ [ಒಂದು ವಸ್ತು], [ನಪುಂ. ಏಕ]
[ಉಕುತ್, ಒಕುತ್, ಒ–] [ಒ– > ಉ–]

ಗೋಂ ;

ಉಂದಿ, ಉಂಡಿ, ಒಂಡ್, ಉಂಚ್ [ಒಂದು]
ಓಡುಲ್ [ಒಬ್ಬನು], [ಪು. ಏಕ]
ಓಬುಲ್ [ಒಬ್ಬಳು], [ಸ್ತ್ರೀ. ನಪುಂ. ಏಕ]
ಓಕೋ [ಒಂದೇ]
ಓಕೊರೆ [ಪ್ರತಿಯೊಬ್ಬ]
[ಉಂದಿ, ಉಂಡಿ, ಒಂಡ್, ಉಂಚ್, ಒ–]

ಕೊಂ ;

ಉನ್ಡಿ (ಒಂದು]
ಒರೆನ್ [ಒಬ್ಬನು], [ಪುಂ. ಏಕ]
ಒರೆಜ್ ,, ,,
ಉನ್ಡಿ < ಉನ್ಡಿ [ಒಬ್ಬಳು], [ಸ್ತ್ರೀ. ನಪುಂ.]
ಉನ್ಡಿ ,, ,,
[ಉನ್ಡಿ ಉನ್ಡ–, ಉಂಡ್, ಒರ್–]

ಪೆಂಗೋ ;

ರೊ [ಒಂದು]
ರೊ ಬೋಪ [ಒಂದು ಹುಡುಗಿ]
ರೊ [ಒಂದು ವಸ್ತು], [ಸ್ತ್ರೀ. ನಪುಂ.]
[ರೊ, ರೊ– ರೋ–]

(ಒರ್ ಅಥವಾ ಒರು ಎಂಬುದರ ಆದಿಯಲ್ಲಿ ಕಂಡುಬರುವ ಒ ಎಂಬ ಹ್ರಸ್ವ ಸ್ವರವು ಪಲ್ಲಟಗೊಂಡು ರೊ–ಆಗಿ ಪರಿವರ್ತನೆಗೊಂಡಿದೆ. ಅದೇ ರೀತಿ, ಓರ್–ಎಂಬುದರ ದೀರ್ಘಸ್ವರವು ಸ್ಥಾನ ಪಲ್ಲಟಗೊಂಡು ರೋ–ಆಗಿ ಪರಿವರ್ತನೆಗೊಂಡಿವೆ.)

ಕು ;

ರೊ, ರೊಂದಿ [ಒಂದು[
ರೊ ಅಂಜು [ಒಬ್ಬನು], [ಪು. ಏಕ}

ರೊಂಡೆ (ಒಬ್ಬಳು), (ಸ್ತ್ರೀ. ನಪುಂ.)
ರೊಹೆ [ಒಂದಾಗು]
ರೊಕೊ [ಒಂದು ಕಡೆ]
ರೊಂದಿ [ಒಂದು ವಸ್ತು], [ನಪುಂ. ಏಕ.]
ರೊಮ್ರುಹನ್ [ಒಂದು ಮರ] ,,
[ರೊಂದಿ, ರೊ, ರೊನ್ದ್-]

ಕುವಿ ;

ರೊಂದಿ, ರೊ, [ಒಂದು]
ರೋ'ಒಪಿ [ಒಬ್ಬನು], [ಪು. ಏಕ.]
ರೊಂದಿ'ಎ [ಒಬ್ಬಳು], [ಸ್ತ್ರೀ.]
ರೊ [ಒಂದು ವಸ್ತು], [ನಪುಂ. ಏಕ.]
ರೊ'ಒಸಿ [ಒಬ್ಬನು], [ಪು. ಏಕ.]
ರೊಂದಿ (ಒಬ್ಬಳು) (ಸ್ತ್ರೀ. ನಪುಂ)
[ರೊಂದಿ, ರೊ, ರೊ- ರೋ-, ರೊಂದ್-]

ಕುರುಖ್ ;

ಓನ್, ಓಂದ್, [ಒಂದು]
ಒರೊತ್ [ಒಬ್ಬನು, ಒಬ್ಬಳು], [ಪು. ಸ್ತ್ರೀ. ಏಕ]
ಒರ್ ,, ,, ,, ,,
ಒರ್‌F [ಒಬ್ಬಳು], [ಸ್ತ್ರೀ. ಏಕ.]
ಓಂದ್‌ಕಿತ್ರಾ [ಒಂದು ಸಾರಿ]
ಒಣ್ಟಾ [ಒಂಟಿ], [ನಪುಂ.]
ಒರ್ಮF [ಒಂದು ಬಾರಿ], [ಪ್ರತಿಯೊಬ್ಬನು]
[ಒನ್, ಓಂದ್, ಒರ್-, ಒ- ಓ-]

ಮಲ್ತೊ ;

ಒರ್‌F, -ಒಂದ್, [ಒಂದು]
ಒರ್‌F [ಒಬ್ಬನು], [ಪುಂ. ಏಕ.]
ಒರ್‌F [ಒಬ್ಬಳು] [ಸ್ತ್ರೀ. ಏಕ.]
ಒರ್ಗ್‌F [ಒಂಟಿ], [ನಪುಂ.]
ಒನೊನ್ತಿ [ಒಂದೊಂದಾಗಿ]

ಒರ್ತೊರ್ನೊನ್ತಿ [ಒಬ್ಬೊಬ್ಬರಾಗಿ]
ಒರ್ವೆರ್ [ಒಂದು ಸಾರಿ]
ಒವರ್ರ್ [ ,, ]
[ಒತ್ರ್, –ಒಂದ್, ಒ–]

ಬ್ರಾ ;
ಆಸಿಟ್ (ಒಂದು) (ನಪುಂ.)
ಆಸೀಕ (ಒಂದು ಸಾರಿ)
ಅಸಿ (ಒಂಟಿ)
(ಅಸಿಟ್, ಅಸಿ), [ಇಲ್ಲಿ ಒಕಾರವು ಅಕಾರವಾಗಿದೆ]

1:1:1 ಒಂದನೆಯ ವರ್ಗ ;
ತ; ಒನ್ಱು, ಒನ್ನು, ಒಣ್ಣು, ಒನ್ಱ್–, ಒಣ್ಡ್–,
ಮ; ಒನ್ಱು, ಒನ್ನು, ಒನ್–,
ಕೋ; ಒದ್, ಒತ್,
ತೊ; ವೀದ್, ವೀಡ್–, ವೀರ್–, (ಒ > ವ್)
ಕೊಡ್; ಒಂಡು, ಒಂದ್–, ಒನ್ಟ್– (ಒಣ್ಟ್–)
ಕ; ಒಂದು, ಒಂದ್–, ಒನ್ಟ್–, ಒಣ್ಟ್–,
ತು; ಒಂಜಿ, ಒಂಜ್–, ಒಂದ್, ಒಣ್ಟ್–,
ತೆ; ಒಂಡು, ಒಕ, ಒಣ್ಟ್–, ಒನ್ಟ್–,
ಕೊಲಾ; ಒಕ್ಕೊದ್,
ನಾ; ಒಕ್ಕೊ (ದ್)
ಪ; ಒಕುತ್, ಒಕ
ಗ; ಒಕುತ್, ಉಕುತ್ (ಒ> ಉ)
ಗೋಂ; ಉಂದಿ, ಉಂಡಿ, ಉಂಟಿ, ಒಂಡ್, ಉಂಚ್,
ಪೆಂ; ರೊ
ಕು; ರೊಂದಿ, ರೊ,
ಕುವಿ; ರೊಂದಿ, ರೊ,
ಕುರುಖ್; ಓಂದ್, ಓನ್, ಓಣ್ಟ್–,
ಮಲ್ತೊ; –ಒಂದ್, ಒನ್–,
ಬ್ರಾ; ಆಸಿಟ್, ಅಸಿ–,
ಮೂಲ ದ್ರಾ: *ಒನ್ಱು, *ಒನ್ಱ್–
ಮೂಲ ದ. ದ್ರಾ: *ಒನ್ತು, *ಒನ್ತ್–

(ಒರ್- ಎಂಬ ರೂಪವು ಟ್‌ಕಾರ ಮತ್ತು ಣ್‌ಕಾರಗಳ ಮುಂದೆ ಬಂದಾಗ ಅವು ಒನ್ಟ್-, ಒಣ್ಟ್- ಎಂಬುದಾಗಿ ಪರಿವರ್ತನೆಗೊಳ್ಳುತ್ತವೆ.)

1:1:2 ಎರಡನೆಯ ವರ್ಗ;

ತ; ಒರು-, ಒರ್-, ಒ-, ಓರ್-, (ಒರ್- > ಓರ್-)
ಮ; ಒರು, ಒರ್-, ಒ- ಓರ್-,
ಕೋ; ಒರ್-, ಒ-, ಓರ್-,
ತೊ; ವೀರ್-, ಒ-, (ಒ- > ವ್-)
ಕೊಡ್; ಒರು, ಒ-, ಓರ್-,
ಕ; ಒರ್-, ಒ-, ಓರ್-,
ತು; ಒರು, ಒರ್-, ಒ-,
ತೆ; ಒರ್-, ಒ-,
ಕೊಲಾ; ಒ-,
ನಾ; ಒ-,
ಪ; ಒ-,
ಗ; ಒ-,
ಗೋಂ; ಓ-,
ಕೊಂ; ಒರ್-, ಉ-,
ಪೆಂ; ರೊ-, ರೋ-,
ಕು; ರೊ-, ರೋ-,
ಕುವಿ; ರೊ-, ರೋ-,
ಕುರುಖ್; ಒರ್-, ಒ-,
ಮಲ್ತೊ; ಒ-;
ಮೂಲ ದ್ರಾ: *ಒರು, > *ಒರ್-, > *ಓರ್-,

(ವರ್ಣವ್ಯತ್ಯಯದ ಫಲದಿಂದಾಗಿ ಒರ್- ಎಂಬುದು ರೊ- ಆಗಿಯೂ, ಒರ್- ಎಂಬುದು ರೋ- ಆಗಿಯೂ ಪರಿವರ್ತನೆಗೊಂಡಿವೆ.)

1:1:3 ಮೂರನೆಯ ವರ್ಗ;

ತ; ಮ; ಒರುತ್ತ್- (ಒರು+ತ್ತ್-=ಒರುತ್ತ್-)
ಕೋ; ಒವ್ರ್- (ಒರು+ವ್=ಒವ್ರ್-)
ಕುರುಖ್, ಮಲ್ತೊ; ಒತ್ರ್- (ಒರು+ತ್=ಒತ್ರ್-)
ಕೊಡ್, ಕ, ತು, ತೊ; ಒಬ್ಬ್- (ಒರು+ಬ್ಬ್-=ಒಬ್ಬ್-)

ಮೂಲ ದ್ರಾ:

*ಒರುತ್ತನ್ (ಒಬ್ಬನು),(ಪುಂ. ಏಕ.)
*ಒರುವನ್ ( ,, ) > ಓರ್ವನ್
*ಒರುತ್ತಿ (ಒಬ್ಬಳು), (ಸ್ತ್ರೀ. ಏಕ.)
*ಒರುವರ್ (ಒಬ್ಬರು) (ಪುಂ. ಸ್ತ್ರೀ)

ಒರು–/ಒರ್– ಎಂಬ ರೂಪಗಳು ಬೇರೆಬೇರೆ ವ್ಯಂಜನಗಳ ಮುಂದೆ ಬಂದಾಗ ಅವುಗಳ ಮೂಲ ರೂಪಗಳು ನಾನಾ ರೀತಿಯಲ್ಲಿ ಪರಿವರ್ತನೆಗೊಳ್ಳುತ್ತವೆ. ಅವು ಹೀಗಿವೆ :

ಒಕ್ಕ್–, ಒತ್–, ಒಟ್–, ಒಜ್ಜ್–, ಒಸ್–, ವಟ್–
ಒವ್–, ಒಪ್–, ಒಗ್–,

ಒಂದು ಎಂಬುದಕ್ಕೆ ದ್ರಾವಿಡ ಭಾಷೆಗಳಲ್ಲಿ ಕೆಲವು ಸ್ವತಂತ್ರ ಸಂಖ್ಯಾವಾಚಕಗಳು ಬಳಕೆಯಲ್ಲಿದ್ದರೆ, ಮತ್ತೆ ಕೆಲವು ಕಡೆ ಕೆಲವು ವಿಶೇಷಣಗಳು ಬಳಕೆಯಲ್ಲಿರುವುದು ಗೋಚರಿಸುತ್ತವೆ. ಇವುಗಳಲ್ಲಿ ತಮಿಳಿನ ಒನ್ಱು, ಒಣ್ಣು, ಮಲೆಯಾಳದ ಒನ್ನ್, ಕನ್ನಡದ ಒಂದು, ತುಳುವಿನ ಒಂಜಿ, ತೆಲುಗು ಮತ್ತು ಕೊಡಗುಗಳ ಒಂಡು, ಕೋತದ ಒಡ್, ಒತ್, ತೊದದ ವೀದ್, ವೀಡ್, ಗೋಂಡಿ ಮತ್ತು ಕೊಂಡಗಳ ಉಂದಿ, ಉಂಡಿ, ಉನ್ಥಿ, ಕುವಿ ಮತ್ತು ಕುಯಿಗಳ ರೊಂದಿ, ಕುರುಖ್‌ನ ಓಂದ್, ಒನ್, ಬ್ರಾಹೂಯೀಯ ಅಸಿಟ್ ಇತ್ಯಾದಿಗಳು ಮುಖ್ಯವಾಗಿರುವುದು ಮಾತ್ರವಲ್ಲವೆ ಇವು ಅವುಗಳಲ್ಲಿ ಸ್ವತಂತ್ರವಾಗಿ ಬಳಕೆಗೆ ಬರಬಲ್ಲವು. ಇವುಗಳ ಜೊತೆಗೆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಒರು, ಓರ್–, ಒರು– ಎಂಬ ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಾಣಿಸಿಕೊಳ್ಳುತ್ತವೆ. ಈ ಬೇರೆ ಬೇರೆ ಸ್ವತಂತ್ರ ಹಾಗೂ ವಿಶೇಷಣ ಸೂಚಕ ಸಂಖ್ಯಾವಾಚಕಗಳನ್ನು ಪರಸ್ಪರ ಹೋಲಿಸಿ ಪರಿಶೀಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯವು ಕಾಣಿಸಿಕೊಳ್ಳುವುದಲ್ಲದೆ ಅವು ಪರಸ್ಪರ ಒಂದೇ ಮೂಲದಿಂದ ಹುಟ್ಟಿ ಬೆಳೆದುಬಂದ ರೂಪಗಳಾಗಿ ಗೋಚರಿಸುತ್ತವೆ. ಆ ಮೇಲಿನ ಸ್ವತಂತ್ರ ಸಂಖ್ಯಾವಾಚಕಗಳಲ್ಲಿ ತಮಿಳಿನ ಒನ್ಱು ಎಂಬ ರೂಪವೇ ಹೆಚ್ಚು ಪ್ರಾಚೀನವಾದುದಲ್ಲದೆ. ಇದು ಮೂಲ ದ್ರಾವಿಡ ರೂಪಕ್ಕೆ ಬಹು ಹತ್ತಿರವಾದ ರೂಪವಾಗಿ ಕಾಣಿಸಿಕೊಳ್ಳುವುದು. ಆದುದರಿಂದ ಕೆಲವು ವಿದ್ವಾಂಸರು ತಮಿಳಿನ ಒನ್ಱು ಎಂಬ ರೂಪವನ್ನೇ ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. *ಒನ್ಱು ಎಂಬ ರೂಪದಿಂದಲೇ ದ್ರಾವಿಡ ಭಾಷೆಗಳ ಎಲ್ಲಾ ಒಂದು ಎಂಬುದರ ಪರ್ಯಾಯ ಶಬ್ದಗಳು ವಿಕಾಸಗೊಂಡಿವೆ.

ಒನ್ಱು, ಒನ್ನ್, ಒಣ್ಣು, ಒಂದು, ಒಂಡು, ಒಂಜಿ ಎಂಬಿತ್ಯಾದಿ ಸಂಖ್ಯಾವಾಚಕ ರೂಪಗಳ ನಡುವಿನ ಅನುನಾಸಿಕ ವ್ಯಂಜನವು ಉಚ್ಚಾರದಲ್ಲಿ ಕಣ್ಮರೆಯಾದಾಗ ಅವುಗಳ

ಮೂಲದಲ್ಲಿ ಒರು, ಒರ್–ಎಂಬ ರೂಪಗಳು ಕಾಣಿಸಿಕೊಳ್ಳುತ್ತವೆ. ಈ ಒರು ಅಥವಾ ಒರ್–ಎಂಬ ರೂಪಗಳು ಮೇಲಿನ ಸಂಖ್ಯಾವಾಚಕಗಳ ವಿಕಾಸಕ್ಕೂ ಕಾರಣವಿದ್ದರೂ ಇರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒರು ಅಥವಾ ಒರ್– ಎಂಬ ರೂಪಗಳ ನಡುವೆ ಉಚ್ಚಾರದಲ್ಲಿ ಅನುನಾಸಿಕ ವ್ಯಂಜನಗಳು ಕಾಣಿಸಿಕೊಂಡು ಆ ಬೇರೆ ಬೇರೆ ಸಂಖ್ಯಾವಾಚಕಗಳು ವಿಕಾಸಗೊಂಡಿದ್ದರೂ ಇರಬಹುದು. ದ್ರಾವಿಡ ಸಂಖ್ಯಾವಾಚಕಗಳು ಹೆಚ್ಚು ಕಡಿಮೆ ಒರು ಅಥವಾ ಒರ್– ಎಂಬ ವಿಶೇಷಣ ರೂಪಗಳನ್ನೇ ಹೆಚ್ಚು ಹೋಲುತ್ತವೆ. ಅಲ್ಲದೆ ಅವು ಅವುಗಳ ಮೂಲ ರೂಪಗಳಾಗಿ ಗೋಚರಿಸುತ್ತವೆ ಎಂದು ಕಾಲ್ಡ್‌ವೆಲ್ ಮಹಾಶಯನು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ತಮಿಳು, ಮಲೆಯಾಳ, ಕನ್ನಡ, ತೆಲುಗು ಮುಂತಾದ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಒರು ಅಥವಾ ಒರ್– ಎಂಬ ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ. ಇದರಿಂದ ಒಂದು, ಒಂಡು, ಒಂಜಿ, ಒನ್ನು, ಒಣ್ಣು, ಉಂದಿ, ಒಂಬಿತ್ಯಾದಿ ಸ್ವತಂತ್ರ ಸಂಖ್ಯಾವಾಚಕ ರೂಪಗಳು ಅವುಗಳ ನಡುವೆ ಅನುನಾಸಿಕ ವ್ಯಂಜನವು ಕಾಣಿಸಿಕೊಂಡು ವಿಕಾಸಗೊಂಡಿರಬಹುದು ಎನ್ನುವುದಕ್ಕೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಇಷ್ಟಾದರೂ ಕೆಲವು ವಿದ್ವಾಂಸರು ಒರು ಅಥವಾ ಒರ್– ಎಂಬುದರ ನಡುವೆ ಅನುನಾಸಿಕವು ಕಾಲಕ್ರಮೇಣ ಕಾಣಿಸಿಕೊಂಡು ಆ ಬೇರೆ ಬೇರೆ ಸಂಖ್ಯಾವಾಚಕ ರೂಪಗಳು ಬಗೆಬಗೆಯಲ್ಲಿ ಪರಿವರ್ತನೆಗೊಂಡು ಬೆಳೆದು ಬಂದಿರಬಹುದಾದ ಸಾಧ್ಯತೆಗಳು ಇವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಸಂಖ್ಯಾವಾಚಕ ರೂಪಗಳನ್ನು ಪೂರ್ಣವಾಗಿ ಪರಿಶೀಲಿಸಿದಾಗ ಅವುಗಳ ಮೂಲದಲ್ಲಿ ಒರು, ಒರ್–, ಒ– ಎಂಬ ರೂಪಗಳಿರುವುದು ಕಂಡುಬರುತ್ತವೆ. ·ಈ ಬೇರೆ ಬೇರೆ ವಿಶೇಷಣ ರೂಪಗಳಿಗೆ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲ ರೂಪಗಳು ಅವುಗಳ ಮುಂದೆ ಬಂದಿರುವ ವ್ಯಂಜನಗಳಿಗೆ ಅನುಗುಣವಾಗಿ ಒಕ್ಕ್– ಒಕ್,– ಒಗ್ಗ್–, ಒಗ್–, ಒಪ್–, ಒಮ್–, ಒತ್–, ಒತ್ರ್–, ಒಬ್ಬ್–, ಒಬ್–, ಒಸ್–, ಒಟ್–, ಒನ್ಟ್–,ಒಣ್ಟ್– ಎಂಬುದಾಗಿ ಪರಿವರ್ತನೆಗೊಂಡಿರುವುದನ್ನು ಗುರುತಿಸಿಕೊಳ್ಳಬಹುದಾಗಿದೆ. ಇವು ಮೂಲತಃ ಒರು ಅಥವಾ ಒರ್ ಎಂಬ ರೂಪದಿಂದಲೇ ಹುಟ್ಟಿ ಬೆಳೆದು ಬಂದ ರೂಪಗಳು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದುದರಿಂದ ಕೆಲವರು ಅವುಗಳ ಮೂಲ ರೂಪಗಳನ್ನು *ಒರು, *ಒರ್–, *ಒ– ಎಂದು ಮೂಲದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಒರು ಅಥವಾ ಒರ್ ಎಂಬ ರೂಪದ ಮುಂದೆ ಕಕಾರವು ಬಂದಾಗ ಅದು ಒಕ್ಕ್– ಒಕ್– ಎಂಬುದಾಗಿಯೂ, ಅದರ ಮುಂದೆ ಗಕಾರ ಬಂದಾಗ ಅದು ಒಗ್ಗ್–, ಒಗ್– ಎಂಬುದಾಗಿಯೂ, ಹಾಗೆಯೇ ಅದರ ಮುಂದೆ ಪಕಾರ ಕಾಣಿಸಿಕೊಂಡಾಗ ಒಪ್ಪ್–, ಒಪ್– ಎಂಬುದಾಗಿಯೂ, ಮಕಾರ ಕಾಣಿಸಿಕೊಂಡಾಗ ಅದು ಅದು ಒಮ್– ಎಂಬುದಾಗಿಯೂ,

ಟಕಾರ ಮತ್ತು ಣಕಾರಕಾಣಿಸಿಕೊಂಡಾಗ ಅದು ಒನ್ಟ್– ಒಣ್ಟ್– ಎಂಬುದಾಗಿಯೂ, ಹಾಗೆಯೇ ಅದರ ಮುಂದೆ ತಕಾರ ಕಾಣಿಸಿಕೊಂಡಾಗ ಒತ್–, ಒರ್ತ್ ಎಂಬುದಾಗಿಯೂ, ಅದರ ಮುಂದೆ ಬಕಾರ ಕಾಣಿಸಿಕೊಂಡಾಗ ಅದು ಒಬ್ಬ್–, ಒಬ್– ಎಂಬುದಾಗಿಯೂ ಪರಿವರ್ತನೆಗೊಳ್ಳುವುದು. ಇದೇ ರೀತಿ ಒರು ಅಥವಾ ಒರ್ ಎಂಬುದರ ಆದಿಯಲ್ಲಿ ಕಂಡುಬರುವ ಒ ಸ್ವರವು ದೀರ್ಘಸ್ವರವಾಗಿ ಪರಿವರ್ತನೆಗೊಂಡು ಓರ್ ಎಂಬ ರೂಪವು ಕಾಣಿಸಿಕೊಳ್ಳುವುದು. ಒರ್ > ಓರ್ ಎಂಬುದು ಇರ್ > ಈರ್ ಎಂಬುದರಂತೆ ಆದರ ಹ್ರಸ್ವಸ್ವರವು ದೀರ್ಘ ಸ್ವರವಾಗಿ ಪರಿವರ್ತನೆಗೊಂಡಿದೆ ಅಷ್ಟೆ. ಈ ರೀತಿ ಹ್ರಸ್ವ ಸ್ವರವು ದೀರ್ಘಸ್ವರವಾಗಿ ಪರಿವರ್ತನೆಗೊಳ್ಳುವುದು ಸರ್ವೇ ಸಾಮಾನ್ಯ ಎಂಬುದಾಗಿ ಎಂ.ಬಿ. ಎಮೆನೋ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಧುನಿಕ ತಮಿಳು ಮುಂತಾದ ದ್ರಾವಿಡ ಭಾಷೆಗಳಲ್ಲಿ ಒರು ಎಂಬುದು ವ್ಯಂಜನಗಳ ಮುಂದೆ ಬಂದರೆ, ಓರ್ ಎಂಬುದು ಸ್ವರಗಳ ಮುಂದೆ ಬರುವುದು. ಆದರೆ ಕೆಲವು ಭಾಷೆಗಳಲ್ಲಿ ಒರ್ ಎಂಬುದ ಮುಂದೆ ಸ್ವರ ಅಥವಾ ವ್ಯಂಜನ ಬಂದಾಗಲೂ ಈ ಬಗೆಯ ವ್ಯತ್ಯಾಸ ಕಾಣಿಸಿಕೊಳ್ಳದೆ ಇರಬಹುದಾದ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಈ ಬಗೆಯ ಪರಿವರ್ತನೆ ಅವು ಬರುವ ಸ್ಥಾನ ಮುಂತಾದುವು ಇನ್ನೂ ಅಸ್ಪಷ್ಟವಾಗಿ ಉಳಿದುಕೊಂಡಿವೆ. ಒರ್– > ಓರ್–, ಓನ್–, ಓತ್–, ಓರ್ತ್–, ಓಜ್ಜ್–, ಓರ್ವ್– ಮುಂತಾದ ಪರಿವರ್ತನೆಗಳನ್ನು ಕಾಣಬಹುದಾದರೂ ಈ ದಿಕ್ಕಿನಲ್ಲಿ ಯಾವುದನ್ನು ಖಚಿತವಾಗಿ ಹೇಳಲುಬರುವುದಿಲ್ಲ.

ತಮಿಳು, ಮಲೆಯಾಳ, ಕನ್ನಡ, ತೆಲುಗು, ಕೊಡಗು ಮುಂತಾದ ದ್ರಾವಿಡ ಭಾಷೆಗಳಲ್ಲಿ ಒರು ಅಥವಾ ಒರ್– ಎಂಬ ರೂಪಕ್ಕೆ ಬೇರೆ ಬೇರೆ ಲಿಂಗ ಮತ್ತು ವಚನ ಸೂಚಕ ಪ್ರತ್ಯಯಗಳನ್ನು ಹಚ್ಚಿದಾಗ ಅವು ಒರುತ್ತನ್, (ಒಬ್ಬನು), ಒರುವನ್, ಒರುತ್ತಿ (ಒಬ್ಬಳು) ಒರ್ತಿ, ಒರ್ವರ್ (ಒಬ್ಬರು) ಒರುವ್ಮೆ > ಒರ್ಮೆ > ಒಮ್ಮೆ, (ಒಂದು ಸಾರಿ) ಇತ್ಯಾದಿ ತಮಿಳು ರೂಪಗಳೂ, ಓರ್ವನ್, (ಪು.) ಓರ್ವಳ್ (ಸ್ತ್ರೀ) ಓರ್ವರ್ (ಬಹು.) ಒಬ್ಬನು, ಒಬ್ಬಳು, ಒಬ್ಬರು, ಒಮ್ಮೆ, ಒಂಟಿ, ಇತ್ಯಾದಿ ಕನ್ನಡ ರೂಪಗಳೂ, ಕಾಣಿಸಿಕೊಳ್ಳುತ್ತವೆ. ಇದೇ ರೀತಿ ಮಲೆಯಾಳ, ಕೊಡಗು, ತುಳು, ಕೋತ, ತೆಲುಗು ಮುಂತಾದ ಭಾಷೆಗಳು ತಮ್ಮದೇ ಆದ ಕೆಲವು ಇಂತಹ ಲಿಂಗ ಹಾಗೂ ವಚನ ನಿರ್ದೇಶಕ ರೂಪಗಳನ್ನು ಸಂಪಾದಿಸಿಕೊಂಡಿವೆ. ಈ ಎಲ್ಲಾ ದ್ರಾವಿಡ ಭಾಷೆಗಳ ಮೂಲ ರೂಪಗಳಲ್ಲಿ ಒರು ಅಥವಾ ಒರ್– ಇಲ್ಲವೇ ಒ– ಎಂಬ ಮೂಲ ರೂಪಗಳು ಇರುವುದು ಗೋಚರಿಸುತ್ತವೆ. ಈ ಕಾರಣದಿಂದ ಇವು ಮೂಲ ದ್ರಾವಿಡದಲ್ಲಿಯೂ ಇದ್ದಿರಬಹುದೆಂದು ಕೆಲವು ವಿದ್ವಾಂಸರು ಭಾವಿಸಿ ಅವುಗಳನ್ನು ಆಯಾ ಲಿಂಗ ಮತ್ತು ವಚನಗಳಿಗೆ ಅನುಗುಣವಾಗಿ *ಒರುತ್ತನ್ (ಒಬ್ಬನು)* ಒರುವನ್ (ಪು.)* ಒರುತ್ತಿ (ಸ್ತ್ರೀ)* ಒರುವರ್ (ಪು. ಸ್ತ್ರೀ.) ಒರುವ್ಮೆ (ನಪುಂ.) ಇತ್ಯಾದಿಗಳನ್ನು ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ತಮಿಳಿನ ಒನ್ರು ಎಂಬುದು ಒಟ್ರು ಆಗಿ ಪರಿವರ್ತನೆಗೊಂಡಿರಬಹುದು. ಒನ್ರು

> ಒಜ್ಜಿತ್ಜು- > ಒಟ್ಟ್ರಿತು- > ಒಟ್ಟ್ಟು ಎಂದಾಗಿರಲು ಸಾಧ್ಯತೆಗಳು ಇಲ್ಲದೆ ಇಲ್ಲ. ಇದೇ ರೀತಿ *ಒನ್ಬು ಎಂಬುದರಿಂದ ದ್ರಾವಿಡ ಭಾಷೆಗಳ ಬೇರೆ ಬೇರೆ ರೂಪಗಳು ವಿಕಾಸ ಗೊಂಡಿರಬಹುದು. ಒನ್ಬು ಎಂಬುದು ಗೋಂಡಿ, ಕೊಂಡ, ಭಾಷೆಗಳಲ್ಲಿ ಉಂದಿ, ಉಂಡಿ, ಉಂಡ್, ಉಂಚ್ ಎಂದಾಗಿ ಪರಿವರ್ತನೆಗೊಂಡಿದೆ. ಇವುಗಳಲ್ಲಿ ಒಕಾರವು > ಉಕಾರ ವಾಗಿ ಪರಿವರ್ತನೆಗೊಂಡಿದೆ. ತೊದ ಭಾಷೆಯಲ್ಲಿ ಒಕಾರವು > ವ್ ಕಾರವಾಗಿ ಪರಿ ವರ್ತನೆಗೊಂಡಿದೆ. ಕುಯಿ, ಕುವಿ, ಪೆಂಗೊ, ಮುಂಡ ಮುಂತಾದ ಭಾಷೆಗಳಲ್ಲಿ ಒರು ಎಂಬುದರ ಆದಿಯ ಒಸ್ವರವು ವರ್ಣವ್ಯತ್ಯಯದ ಪರಿಣಾಮದಿಂದಾಗಿ ರೊ ಆಗಿದೆ. ಒನ್ಬು ಎಂಬುದು ರೊಂದಿಯಾಗಿದೆ. ಒ ಎಂಬ ಸ್ವರವು ದೀರ್ಘಸ್ವರವಾಗಿ ಪರಿವರ್ತನೆಗೊಂಡು ಅದು ಸ್ಥಾನ ಪಲ್ಲಟಗೊಂಡು ರೋ ಆಗಿ ಪರಿವರ್ತನೆಗೊಂಡಿದೆ. ಇದಕ್ಕೆ ಆ ಭಾಷೆಗಳಲ್ಲಿ ಕಂಡುಬರುವ ವರ್ಣವ್ಯತ್ಯಯ ತತ್ವವೇ ಮುಖ್ಯ ಕಾರಣವಿರಬಹುದು.

ತೆಲುಗು ಮುಂತಾದ ಮಧ್ಯ ದ್ರಾವಿಡ ಭಾಷೆಗಳಲ್ಲಿ ಒರು ಅಥವಾ ಒರ್- ಎಂಬ ರೂಪದ ರಕಾರದ ಸ್ಥಾನದಲ್ಲಿ ಕಕಾರವೇ ಹೆಚ್ಚು ಬಳಕೆಯಲ್ಲಿರುವುದು ಕಂಡುಬರುವುದು. ತೆಲುಗಿನ ಒಕಟಿ, ಒಕ, ಗೋಂಡಿಯ, ಒಕೊ- ಓಕೋ-, ಕೊಂಡದ ಒಕೊ-, ಕೊಲಾಮಿ ಮತ್ತು ನಾಯ್ಕಿಗಳ ಒಕ್ಕೊ (ದ್) ಗದಬ ಪರ್ಜಿಗಳ ಒಕುಲ್, ಒಕುಟ್, ಎಂಬಿತ್ಯಾದಿ ರೂಪಗಳು ಅವುಗಳಲ್ಲಿ ಮುಖ್ಯವಾಗಿವೆ. ಇವು ಮೂಲತಃ ಒಂದೇ ಮೂಲ ದಿಂದ ಹುಟ್ಟಿ ಬೆಳೆದು ಬಂದ ರೂಪಗಳು. ಒರ ಅಥವಾ ಒರ್- ಎಂಬುದರ ಮುಂದೆ ಕಕಾರ ವ್ಯಂಜನವು ಬಂದಾಗ ಅವುಗಳ ಮೂಲದಲ್ಲಿ ರ್ ಕಾರವು ಪರಿವರ್ತನೆಗೊಂಡು ಕಕಾರವು ಕಾಣಿಸಿಕೊಳ್ಳುವುದು. (ಉದಾ. ಒಕ ಒಕ್ರ್-, ಒಕ್-,) ಒರು ಎಂಬ ಮೂಲ ರೂಪಕ್ಕೆ ಕಕಾರವುಳ್ಳ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲ ರೂಪವು ಈ ಬಗೆಯಲ್ಲಿ ಪರಿವರ್ತಿತಗೊಳ್ಳುವುದು. ಈ ಬಗೆಯ ರೂಪಗಳು ಮಧ್ಯ ದ್ರಾವಿಡ ಭಾಷೆಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಆದುದರಿಂದ ಅವುಗಳ ಮೂಲ ರೂಪವನ್ನು ಕೆಲವರು* ಒಕ್ಕಂತು ಎಂದು ಪುನರ್ರಚಿಸಿ ಕೊಳ್ಳಲು ಪ್ರಯತ್ನಿ ಸಿದ್ದಾರೆ. ಮತ್ತೆ ಕೆಲವರು ಒಕ್ಕಂತುಗೆ ಬದಲಾಗಿ ಒರ್ ಎಂಬ ರೂಪವನ್ನೆ ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಬಹುದಾದ ಅವಕಾಶಗಳಿವೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. *ಒನ್ಬು ಎಂಬ ಮೂಲ ದ್ರಾವಿಡ ರೂಪವು ಮೂಲ ದಕ್ಷಿಣ ದ್ರಾವಿಡದಲ್ಲಿ *ಒನ್ತು ಎಂಬುದಾಗಿಯೂ, ಅದೇ ಮೂಲ ಮಧ್ಯ ದ್ರಾವಿಡ ಭಾಷೆಯಲ್ಲಿ* ಒಕ್ಕಂತು ಎಂಬುದಾಗಿಯೂ ಪರಿವರ್ತನೆಗೊಂಡು ಬೆಳೆದುಬಂದಿರಬಹುದೆಂದು ಕೆಲವರ ಊಹೆ. ಮೂಲ ಮಧ್ಯ ದ್ರಾವಿಡ ಭಾಷೆಯು ಮೂಲ ದ್ರಾವಿಡದಿಂದ ಕವಲೊಡೆದು ಬೇರೆಯಾದ ಮೇಲೆ ಒರ್ ಎಂಬುದೇ > ಒಕ್ಕಂತು ಎಂಬ ರೂಪವಾಗಿ ಪರಿವರ್ತನೆಗೊಂಡಿದ್ದರೂ ಇರಬಹುದೆಂದು ಕೆಲವರ ಭಾವನೆ. ಇದರ ಫಲದಿಂದಾಗಿಯೇ ತೆಲುಗಿನಲ್ಲಿ ಒಕ, ಒಕಟಿ, ಎಂಬಿತ್ಯಾದಿ ರೂಪಗಳು ಬಳಕೆಗೆ ಬಂದಿರಬಹುದಾದ ಸಾಧ್ಯತೆಗಳಿವೆ. ಈ ದಿಕ್ಕಿನಲ್ಲಿ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ತೌಲನಿಕ ಭಾಷಾವಿಜ್ಞಾನ ಭಾಷಾವಿಜ್ಞಾನದ ಪ್ರಮುಖ ವಿಭಾಗಗಳಲ್ಲೊಂದು. ಒಂದು ಭಾಷೆಯ ಸಮಗ್ರ ಚರಿತ್ರೆಯನ್ನು ಕಾಲಕ್ರಮದಂತೆ ವಿವರಿಸುವುದು ಚಾರಿತ್ರಿಕ ಭಾಷಾವಿಜ್ಞಾನದ ಉದ್ದೇಶವಾದರೆ ಎರಡು ಅಥವಾ ಹೆಚ್ಚು ಭಾಷೆಗಳನ್ನು ಹೋಲಿಸಿ ಅವುಗಳ ಅನುವಂಶಿಕ ಸಂಬಂಧಗಳನ್ನು ಅರಿಯುವುದು ತೌಲನಿಕ ಭಾಷಾವಿಜ್ಞಾನದ ಉದ್ದೇಶ. ಇದಲ್ಲದೆ ಈ ಶಾಸ್ತ್ರ ಮೂಲ ಭಾಷೆಯನ್ನು ಗುರುತಿಸಲು ಬೇಕಾದ ಪ್ರಕ್ರಿಯೆ ಮತ್ತು ಸಿದ್ಧಾಂತಗಳನ್ನು ಒಳಗೊಂಡಿದೆ.

—ಕನ್ನಡ ವಿಶ್ವಕೋಶ, ಸಂಪುಟ ಒಂಬತ್ತು, ಪು. 418

ಕೆ. ಯಶೋಧರ

# ಶಿಕ್ಷಣದಲ್ಲಿ ಅಳತೆಯ ಮಾಪನಿಗಳು
(Scales of Measurement)

ಅಳತೆ ಅಥವಾ ಮಾಪನ ಎಂದರೆ ದತ್ತಾಂಶವನ್ನು ಅಂಕರೂಪದಲ್ಲಿ ವಿವರಿಸುವುದು ಅಥವಾ ದತ್ತಾಂಶದ ಪರಿಮಾಣಾತ್ಮಕ ವಿವರ ಎಂದರ್ಥ. ಒಂದು ವಸ್ತುವಿಗಾಗಲೀ, ಸಂಗತಿಗಾಗಲೀ, ವ್ಯಕ್ತಿಗಾಗಲೀ ಸುಸ್ಥಾಪಿತವಾದ ಕೆಲವು ನಿರ್ದಿಷ್ಟ ನಿಯಮಗಳಿಗನು ಸಾರವಾಗಿ ನಿಗದಿಪಡಿಸುವ ನಿಖರವಾದ ಹಾಗೂ ಪರಿಮಾಣಾತ್ಮಕವಾದ ಸಂಖ್ಯೆ ಎಂದು ವ್ಯಾಖ್ಯಾನಿಸಬಹುದು (5 ರೂಪಾಯಿ 6 ಮೀಟರ್, 20 ಅಂಕಗಳು ಇತ್ಯಾದಿ). ಯಾವುದೇ ವಿಧದ ಮಾಪನ ಎಷ್ಟು ಹೆಚ್ಚು ಅಥವಾ ಎಷ್ಟು ಕಡಿಮೆ; ಎಷ್ಟು ದೊಡ್ಡದು ಅಥವಾ ಎಷ್ಟು ಚಿಕ್ಕದು; ಒಂದು ಮತ್ತೊಂದಕ್ಕಿಂತ ಎಷ್ಟು ದೊಡ್ಡದು ಅಥವಾ ಚಿಕ್ಕದು ಎಂಬುವನ್ನು ನಿರ್ಧರಿಸುವುದಾಗಿರುತ್ತದೆ. ಜೇಮ್ಸ್ ಎಂ. ಬ್ರಾಡ್‌ಫೀಲ್ಡ್ ರವರು "ಯಾವುದೇ ವಿಷಯದ ವಿದ್ಯಮಾನದ ನೆಲೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಖರವಾಗಿ ಗುರುತಿಸಲು ಆ ವಿದ್ಯಮಾನದ ಆಯಾಮಗಳಿಗೆ ಸಂಕೇತಗಳನ್ನು ನೀಡುವ ಪ್ರಕ್ರಿಯೆಯೇ ಅಳತೆ" ಎಂದು ವ್ಯಾಖ್ಯಾನಿಸಿದ್ದಾರೆ. ಅಳೆಯುವುದು ಎಂದರೆ ಒಂದು ಸೂಕ್ತ ಘಟಕದ ಮೂಲಕ ಒಂದು ಲಕ್ಷಣದ ಪ್ರಮಾಣವನ್ನು ನಿರ್ಧರಿಸುವುದು ಎಂದಾಗುತ್ತದೆ. ಅಂತೆಯೇ ಅಳತೆಯ ಪ್ರಕ್ರಿಯೆಗೆ ಅಳತೆ ಮಾಡಬೇಕಾದ ಅಂಶಗಳು, ಅಳತೆಯ ಪ್ರಮಾಣ ತಿಳಿಸುವ ಸಂಖ್ಯೆಗಳು ಹಾಗೂ ಸಂಖ್ಯೆಗಳನ್ನು ನಿಗದಿಪಡಿಸಲು ಅನುಸರಿಸಬೇಕಾದ ನಿರ್ದಿಷ್ಟ ನಿಯಮಗಳು ಅವಶ್ಯಕವೆನಿಸುತ್ತವೆ.

'ಮಾಪನ' ನಮ್ಮ ದೈನಂದಿನ ಜೀವನದ ಒಂದು ಮುಖ್ಯ ಅಂಶ. ಭೌತ ವಿಜ್ಞಾನ, ಜೀವ ವಿಜ್ಞಾನ, ಸಾಮಾಜಿಕ ವಿಜ್ಞಾನ ಇತ್ಯಾದಿ ವಿಜ್ಞಾನಗಳಿಂದ ಹಿಡಿದು ಜೀವನದ ವಿವಿಧ ಕ್ಷೇತ್ರಗಳಲ್ಲಿಯೂ ಮಾಪನ ಕಾರ್ಯ ಅಸ್ತಿತ್ವ ಪಡೆದುಕೊಂಡಿದೆ. ಅಂತೆಯೇ ಶಿಕ್ಷಣಶಾಸ್ತ್ರ ಹಾಗೂ ಮನಃಶಾಸ್ತ್ರಗಳಲ್ಲಿಯೂ ಈ ಕಾರ್ಯ ಅವಶ್ಯಕವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ದೃಗ್ಗೋಚರವಲ್ಲದ ಆದರೆ ನಿರ್ದಿಷ್ಟ ಪರಿಸ್ಥಿತಿಯಲ್ಲಿ ವ್ಯಕ್ತಿಯು ವ್ಯಕ್ತಗೊಳಿಸುವ ವರ್ತನೆಗಳ ಸ್ವರೂಪದಿಂದ ಅರ್ಥೈಸುವಂತಹ ಮಾನಸಿಕ ಪ್ರಕ್ರಿಯೆಗಳನ್ನು ಮಾಪನ ಮಾಡಬೇಕಾಗಿರುವುದರಿಂದ ಶೈಕ್ಷಣಿಕ ಮಾಪನ ಸಂಕೀರ್ಣ

ವೆನಿಸುತ್ತದೆ. ಕಲಿಕೆಯ ಸಾಧನಾಮಟ್ಟ, ಬುದ್ಧಿಶಕ್ತಿ ಇತ್ಯಾದಿ ಸಂಜ್ಞಾನಾತ್ಮಕ ಲಕ್ಷಣಗಳನ್ನು, ಮನೋವೃತ್ತಿಗಳು, ಆಸಕ್ತಿಗಳು ಇತ್ಯಾದಿ ಸಂವೇಗಾತ್ಮಕ ಲಕ್ಷಣಗಳನ್ನು ಪರಿಮಾಣಾತ್ಮಕವಾಗಿ ಅಳೆಯಬಹುದಾದರೂ ಭೌತಿಕ ಅಳತೆಗಳಾದ ಎತ್ತರ, ಉದ್ದ, ತೂಕ ಮೊದಲಾದವುಗಳಷ್ಟು ನಿಖರತೆ ಕಂಡುಬರುವುದಿಲ್ಲ. ಶೈಕ್ಷಣಿಕ ಮಾಪನವು ನಿಷ್ಕೃಷ್ಟತೆ ಹಾಗೂ ನಿಖರತೆಯಲ್ಲಿ ಬಹುಮಟ್ಟಿಗೆ ವ್ಯತ್ಯಯಗೊಳ್ಳುತ್ತದೆ. ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ನಿಷ್ಠಾವಂತನಾಗಿದ್ದಾನೆ, ಸಂಬಲರ್ಹನಾಗಿದ್ದಾನೆ, ಎಷ್ಟರಮಟ್ಟಿನ ಅಭಿರುಚಿ ಹೊಂದಿದ್ದಾನೆ ಎಂಬುದನ್ನು ನಿಖರವಾಗಿ ಮಾಪನಮಾಡಲಾಗುವುದಿಲ್ಲ. ಆದರೆ ಈ ಲಕ್ಷಣಗಳಿಗೆ ಸಂಬಂಧಿಸಿದಂತೆ ಸಾಧ್ಯವಾದಷ್ಟುಮಟ್ಟಿನ ನಿಖರತೆಯುಳ್ಳ ಮಾಪನ ಪಡೆಯಬೇಕಾದರೆ ಮಾಪನಕ್ಕೊಳಗಾದ ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ಶ್ರೇಣಿ ಬದ್ಧಗೊಳಿಸಿ (1ನೆಯ ಸ್ಥಾನ, 2ನೆಯ ಸ್ಥಾನ . . . ಇತ್ಯಾದಿ) ಆ ಶ್ರೇಣಿಗಳಿಂದ ತಾರ ತಮ್ಯದ ಎಣಿಕೆ ಮಾಡಬಹುದಷ್ಟೆ. ಹೀಗೆ ಇನ್ನೂ ಅನೇಕ ಸಂವೇಗಾತ್ಮಕ ಹಾಗೂ ಪಾಂಡಿತ್ಯಪರವಲ್ಲದ ಲಕ್ಷಣಗಳನ್ನು ನಿಖರವಾಗಿ ಮಾಪನಮಾಡುವುದು ಕಷ್ಟಸಾಧ್ಯ; ಏಕೆಂದರೆ ಈ ಲಕ್ಷಣಗಳನ್ನು ವ್ಯಕ್ತಿಗಳು ಪ್ರಕಟಪಡಿಸುವ ವರ್ತನೆಗಳ ಮೂಲಕ ಪರೋಕ್ಷ ವಾಗಿ ಅಳೆಯಬಹುದಾಗಿದೆಯೇ ವಿನಾ ಪ್ರತ್ಯಕ್ಷ ಮಾಪನ ಸಾಧ್ಯವಿಲ್ಲ. ಆದರೆ ಸಂಜ್ಞಾ ನಾತ್ಮಕ ಲಕ್ಷಣಗಳ (ಉದಾ: ಬುದ್ಧಿಶಕ್ತಿ, ಸಾಧನಾಮಟ್ಟ) ಮಾಪನವು ಸಂವೇಗಾತ್ಮಕ ಲಕ್ಷಣಗಳ ಮಾಪನಕ್ಕಿಂತ ಹೆಚ್ಚು ನಿಖರವಾಗಿರುತ್ತದೆ ಎನ್ನಬಹುದು. ಹೀಗೆಂದ ಮಾತ್ರಕ್ಕೆ ಈ ಮಾಪನವು ದೋಷಮುಕ್ತವಾದುದು ಎನ್ನಲು ಬರುವುದಿಲ್ಲ.

ಹೀಗೆ ನಿಖರತೆ ಹಾಗೂ ನಿಷ್ಕೃಷ್ಟತೆಯಲ್ಲಿ ವ್ಯತ್ಯಾಸ ಹೊಂದುವುದಾದರೂ ಶಿಕ್ಷಣ ಕ್ಷೇತ್ರದಲ್ಲಿ ಮಾಪನಕಾರ್ಯ ಅನಿವಾರ್ಯವೂ ಅತ್ಯವಶ್ಯಕವೂ ಆಗಿದೆ. ಆದ್ದರಿಂದ ಮಾಪನ ಮಾಡುವಾಗ ಯಾವ ಅಳತೆಯ ಮಾಪನಿಯಿಂದ ಎಷ್ಟರಮಟ್ಟಿನ ನಿಖರತೆ ಯನ್ನು ಪಡೆಯಬಹುದೆಂಬುದರ ಬಗೆಗೆ ಬೋಧಕರಿಗೂ ಶಿಕ್ಷಣ ತಜ್ಞರಿಗೂ ಸ್ಪಷ್ಟ ಪರಿ ಕಲ್ಪನೆಯಿರುವುದು ಅಗತ್ಯ. ಈ ಕಾರಣಕ್ಕಾಗಿ ಸಾಮಾನ್ಯವಾಗಿ ಬಳಕೆಯಲ್ಲಿರುವ ವಿವಿಧ ಮಟ್ಟದ ನಿಖರತೆಯನ್ನು ಪಡೆದಿರುವ ವಿವಿಧ ರೀತಿಯ ಅಳತೆಯ ಮಾಪನಿಗಳ ಅರಿವು ಅತ್ಯಗತ್ಯ.

ಸ್ಟೀವನ್ಸ್‌ರವರ ಪ್ರಕಾರ ಅಳತೆಯ ಮಾಪನಿಗಳನ್ನು ಕೆಳಗೆ ಕಾಣಿಸಿರುವ ರೀತಿ ಯಲ್ಲಿ ವರ್ಗೀಕರಿಸಬಹುದಾಗಿದೆ.

1 ನಿರ್ದೇಶಕ ಮಾಪನಿ Nominal Scale
2 ಶ್ರೇಣಿ ಮಾಪನಿ Ordinal Scale
3 ಅಂತರ ಮಾಪನಿ Interval Scale
4 ಅನುಪಾತ ಮಾಪನಿ Ratio Scale

ಪ್ರತಿಯೊಂದು ಅಳತೆಯ ಮಾಪನಿಯೂ ತನ್ನದೇ ಆದ ಲಕ್ಷಣಗಳನ್ನೂ ನಿಯಮ ಗಳನ್ನೂ ಹಾಗೂ ನಿಬಂಧನೆಗಳನ್ನೂ ಹೊಂದಿದ್ದು, ಒಂದೊಂದು ಮಾಪನಿಯೂ ಅವರ

ಕೆಳಗಿನ ಮಾಪನಿಯ ಲಕ್ಷಣಗಳನ್ನೆಲ್ಲಾ ಒಳಗೊಂಡಿರುತ್ತದೆ. ಹೀಗೆ ಅನುಕ್ರಮ ಶ್ರೇಣಿಯಲ್ಲಿ ಗುರುತಿಸಲಾಗಿರುವ ಈ ಮಾಪನಿಗಳಲ್ಲಿ ಒಂದು ಮಾಪನಿ ಮತ್ತೊಂದಕ್ಕಿಂತ ಪರಿಷ್ಕೃತವಾದುದಾಗಿದೆ.

## 1. ನಿರ್ದೇಶಕ ಮಾಪನಿ

ಇದು ಕನಿಷ್ಠತಮ ಹಾಗೂ ಪ್ರಾಥಮಿಕ ಮಟ್ಟದ ಅಳತೆಯ ಮಾಪನಿ. ಈ ಮಾಪನಿಯಲ್ಲಿ ಯಾವುದೇ ಒಂದು ನಿರ್ದಿಷ್ಟ ಗುಂಪಿಗೆ ಅಥವಾ ವರ್ಗಕ್ಕೆ ಸೇರಬಹುದಾದ ಅಂಶಗಳನ್ನೆಲ್ಲಾ ಆ ವರ್ಗದ ಸಂಖ್ಯೆಯ ಮೂಲಕ ಗುರುತಿಸಲಾಗುತ್ತದೆ. ಅಂದರೆ ಕೆಲವು ವಿಶಿಷ್ಟ ಲಕ್ಷಣಗಳಿಗನುಗುಣವಾಗಿ ವಸ್ತುಗಳನ್ನಾಗಲೀ ಸಂಗತಿಗಳನ್ನಾಗಲೀ, ವ್ಯಕ್ತಿಗಳನ್ನಾಗಲೀ ವಿವಿಧ ಗುಂಪುಗಳಲ್ಲಿ ವರ್ಗೀಕರಿಸಿ, ಒಂದೊಂದು ವರ್ಗದಲ್ಲಿ ಬರುವ ಅಂಶಗಳನ್ನೆಲ್ಲಾ ಪಟ್ಟಿಮಾಡಿ ಅವುಗಳನ್ನು ಆ ವರ್ಗಕ್ಕೆ ನಿಗದಿಪಡಿಸುವ ಸಂಕೇತದ ಮೂಲಕ ಸೂಚಿಸಲಾಗುತ್ತದೆ. ಒಂದೊಂದು ವರ್ಗವನ್ನೂ ಬೇರೆ ಬೇರೆ ಸಂಖ್ಯೆಗಳಿಂದ ನಿರ್ದೇಶಿಸಿದಾಗ (ವರ್ಗ 1, ವರ್ಗ 2, . . . ಇತ್ಯಾದಿ) ಒಂದು ನಿರ್ದಿಷ್ಟ ವರ್ಗಕ್ಕೆ ಸೇರುವ ಎಲ್ಲಾ ಅಂಶಗಳನ್ನು ಆ ವರ್ಗದ ಸಂಕೇತ ಇಲ್ಲವೇ ಸಂಖ್ಯೆಯಿಂದಲೇ ಗುರುತಿಸಲಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಂದನೆಯ ವರ್ಗದಲ್ಲಿ ಪಟ್ಟಿ ಮಾಡಿದ ಎಲ್ಲಾ ಅಂಶಗಳನ್ನು ವರ್ಗ '1' ಅಥವಾ 'ಎ' ಎಂದೂ 2ನೆಯ ವರ್ಗದ ಅಂಶಗಳನ್ನು ವರ್ಗ '2' ಅಥವಾ 'ಬಿ' ಎಂದೂ ಗುರುತಿಸಲಾಗುತ್ತದೆ.

ಉದಾಹರಣೆಗೆ ವ್ಯಕ್ತಿಗಳು ಕೈಗೊಂಡಿರುವ ಉದ್ಯೋಗವನ್ನಾಧರಿಸಿ ಅವರನ್ನು (1) ರೈತರು (2) ವ್ಯಾಪಾರಿಗಳು (3) ಅಧಿಕಾರಿಗಳು (4) ಕಾರ್ಮಿಕರು ಇತ್ಯಾದಿ ಎಂದು ವರ್ಗೀಕರಿಸಬಹುದು. ಇಲ್ಲಿ ವರ್ಗ '1' ಎಂದಾಗ ಅದರಲ್ಲಿ ಪಟ್ಟಿಮಾಡಿರುವ ವ್ಯಕ್ತಿಗಳೆಲ್ಲರೂ ರೈತವರ್ಗಕ್ಕೆ ಸೇರಿದವರಾಗಿದ್ದು ಅವರನ್ನು ವರ್ಗಸಂಖ್ಯೆ '1' ರಿಂದ ಪ್ರತಿನಿಧಿಸಲಾಗುತ್ತದೆ. ಹಾಗೆಯೇ ಅಧಿಕಾರಿ ವರ್ಗಕ್ಕೆ ಸೇರುವ ವ್ಯಕ್ತಿಗಳೆಲ್ಲರನ್ನು ವರ್ಗ ಸಂಖ್ಯೆ '3' ರಿಂದ ಸೂಚಿಸಲಾಗುತ್ತದೆ. ಅಂತೆಯೇ ಈ ಅಂಕಗಳ ಉದ್ದೇಶ ಒಂದು ವರ್ಗವನ್ನು ಮತ್ತೊಂದು ವರ್ಗದಿಂದ ಪ್ರತ್ಯೇಕಿಸುವುದಾಗಿರುತ್ತದೆಯೇ ವಿನಾ ಯಾವುದೇ ರೀತಿಯ ಪರಿಮಾಣಾತ್ಮಕ ಅರ್ಥವನ್ನು ಹೊಂದಿರುವುದಿಲ್ಲ. ಮತ್ತೊಂದು ಉದಾಹರಣೆ—ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಅವರ ಐಚ್ಛಿಕ ವಿಷಯಗಳಿಗನುಗುಣವಾಗಿ (ಅ) ಶಿಕ್ಷಣ (ಆ) ವಿಜ್ಞಾನ (ಇ) ಮಾನವಿಕ ಹಾಗೂ (ಈ) ಗ್ರಂಥಾಲಯ ವಿಜ್ಞಾನ ವಿದ್ಯಾರ್ಥಿಗಳೆಂದು ವರ್ಗೀಕರಿಸಿದರೂ ಈ ವರ್ಗಗಳಲ್ಲಿ ತಾರತಮ್ಯತೆಯನ್ನು ಗುರುತಿಸುವ ಪ್ರಯತ್ನವಿರುವುದಿಲ್ಲ.

ಒಂದೊಂದು ವರ್ಗದಲ್ಲಿರುವ ಎಲ್ಲಾ ವ್ಯಕ್ತಿಗಳನ್ನಾಗಲೀ, ವಸ್ತುಗಳನ್ನಾಗಲೀ, ಪ್ರತ್ಯೇಕವಾಗಿ ಗುರುತಿಸಿ ಪಟ್ಟಿಮಾಡಲು ಪುನಃ ಸಂಖ್ಯೆಗಳನ್ನು ನಿಗದಿ ಪಡಿಸಲಾಗುತ್ತದೆ (ವರ್ಗ '1'ರಲ್ಲಿ—1, 2, 3, . . . n) ಉದಾಹರಣೆಗೆ ಸ್ನಾತಕೋತ್ತರ ಶಿಕ್ಷಣ

ವಿಭಾಗದ (M.Ed.) ಎಲ್ಲಾ ವಿದ್ಯಾರ್ಥಿಗಳನ್ನು ನಾಮಾಕ್ಷರಗಳನ್ನನುಲಂಬಿಸಿ 1, 2, 3 . . . n ಎಂದು ಪಟ್ಟಿಮಾಡಲಾಗುತ್ತದೆ. ಹಾಗೆಯೇ ಬೇರೆ ಬೇರೆ ವಿಭಾಗದ ಎಲ್ಲ ವಿದ್ಯಾರ್ಥಿಗಳನ್ನು ಪಟ್ಟಿಮಾಡಲಾಗುತ್ತದೆ. ಈ ಸಂದರ್ಭಗಳಲ್ಲಿ 2ನೆಯ ವ್ಯಕ್ತಿ 4ನೆಯ ವ್ಯಕ್ತಿಗಿಂತ ಎರಡರಷ್ಟು ಉತ್ತಮನಾಗಿದ್ದಾನೆ ಎಂದಾಗಲೀ ; 40 ನೆಯವನು 18ನೆಯ ವನಿಗಿಂತ ನಾಲ್ಕರಷ್ಟು ಕೆಳಮಟ್ಟದಲ್ಲಿದ್ದಾನೆ ಎಂದಾಗಲೀ ಅರ್ಥೈಸಲಾಗುವುದಿಲ್ಲ. ಇದೇ ರೀತಿ ಬೇರೆ ಬೇರೆ ವರ್ಗಗಳಲ್ಲಿ ಬರುವ ಅನೇಕ ವಸ್ತುಗಳನ್ನು ಆಯಾ ವರ್ಗಗಳಲ್ಲಿಯೇ ಒಂದರಿಂದ ಮತ್ತೊಂದನ್ನು ಬೇರ್ಪಡಿಸುವುದಕ್ಕಾಗಿ ಪಟ್ಟಿಮಾಡಬಹುದು. ಆದರೆ ಒಂದು ಮತ್ತೊಂದಕ್ಕಿಂತ ಚಿಕ್ಕದು ಅಥವಾ ದೊಡ್ಡದು ಎಂದು ವಿಂಗಡಿಸುವ ಪ್ರಯತ್ನವಾಗು ವುದಿಲ್ಲ. ಈ ರೀತಿ ನೀಡಲಾದ ಸಂಖ್ಯೆಗಳು ಕೇವಲ ವ್ಯಕ್ತಿ ಅಥವಾ ವಸ್ತು ನಿರ್ದೇಶಕ ವಾಗಿರುತ್ತವೆಯೇ ವಿನಾ ಪರಿಮಾಣಾತ್ಮಕವಾಗಿರುವುದಿಲ್ಲ.

ಒಂದು ವರ್ಗದಲ್ಲಿರುವ ಎಲ್ಲಾ ವಸ್ತುಗಳು | ವ್ಯಕ್ತಿಗಳು | ಅಂಶಗಳು ಒಂದೇ ರೀತಿಯ ಲಕ್ಷಣವನ್ನು ಹೊಂದಿದ್ದು ಬಹಳಷ್ಟು ಮಟ್ಟಿಗೆ ಸಮಾನತೆಯನ್ನು ಪಡೆದು ಕೊಂಡಿರುತ್ತವೆ ಹಾಗೂ ಮತ್ತೊಂದು ವರ್ಗದಲ್ಲಿರುವ ಅಂಶಗಳಿಗಿಂತ ಭಿನ್ನರೀತಿಯ ದಾಗಿರುತ್ತವೆ. ಕೆಲವು ವೇಳೆ ನಿರ್ದಿಷ್ಟವಾಗಿ ಕಂಡುಬರುವ ವ್ಯತ್ಯಾಸಗಳಿದ್ದರೂ ಬಹಳಷ್ಟು ವರ್ಗಗಳನ್ನು ಪಡೆಯಲಿಚ್ಛಿಸದೆ ಆ ವ್ಯತ್ಯಾಸಗಳನ್ನು ಗೌಣವಾಗಿಸಿ ಸಾಮಾನ್ಯ ಲಕ್ಷಣ ಗಳನ್ನು ಮಾತ್ರ ಪರಿಗಣಿಸಿ ಕೆಲವೇ ವರ್ಗಗಳನ್ನು ಪಡೆಯಬಹುದಾಗಿರುತ್ತದೆ. ಮೇಲೆ ಹೇಳಿದ ಮಾನಸಗಂಗೋತ್ರಿಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ವರ್ಗೀಕರಣ ವನ್ನು ಗಮನಿಸಿ ವಿಜ್ಞಾನ ವಿಭಾಗದಲ್ಲಿ ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ . . . ಇತ್ಯಾದಿ ವಿದ್ಯಾರ್ಥಿಗಳೆಂದೂ, ಮಾನವಿಕ ವಿಭಾಗದಲ್ಲಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಇತ್ಯಾದಿ ವಿದ್ಯಾರ್ಥಿಗಳೆಂದೂ ಬೇರೆ ಬೇರೆಯಾಗಿ ನಿರ್ದಿಷ್ಟ ವರ್ಗಗಳನ್ನು ಪಡೆಯುವ ಸಾಧ್ಯತೆಯಿದೆ. ಆದರೆ ಈ ವಿಷಯ ನಿರ್ದಿಷ್ಟತೆಯ ಅವಶ್ಯಕತೆಯಿಲ್ಲದಿದ್ದಾಗ ಅವನ್ನು ಗೌಣವಾಗಿಸಿ ಕೇವಲ ವಿಜ್ಞಾನ ವಿಭಾಗ, ಮಾನವಿಕ ವಿಭಾಗವೆಂದು ಮಾತ್ರ ವರ್ಗೀಕರಿಸಿಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಒಂದು ವರ್ಗದಲ್ಲಿರುವ ವಸ್ತುಗಳಲ್ಲಿಯಾಗಲೀ, ವ್ಯಕ್ತಿಗಳಲ್ಲಿಯಾಗಲೀ ವ್ಯತ್ಯಾಸವನ್ನು ಗುರುತಿಸಲಾಗದು. ಹಾಗೆಯೇ ಒಂದು ಗುಂಪಿನಲ್ಲಿ ಬರುವ ವ್ಯಕ್ತಿ ಯನ್ನು | ವಸ್ತುವನ್ನು ಮತ್ತೊಂದರಲ್ಲಿ ಸೇರಿಸಲೂ ಆಗದು ; ಯಾವುದೇ ಎರಡು ವರ್ಗ ಗಳಿಗೆ ಒಂದೇ ಸಂಖ್ಯೆ ಅಥವಾ ಸಂಕೇತವನ್ನು ಕೊಡಲಾಗದು. ಈ ಮಾಪನಿಯ ಅಂಕ ಗಳನ್ನು ಯಾವುದೇ ಗಣಿತ ಕ್ರಿಯೆಗಳಿಗೆ ಒಳಪಡಿಸಲಾಗದು. ಈ ಅಳತೆಯ ಮಾಪನಿ ಯಲ್ಲಿ ವರ್ಗೀಕರಣ ಹಾಗೂ ಪಟ್ಟಿಮಾಡುವಿಕೆಯನ್ನು ಮಾತ್ರ ಪರಿಗಣಿಸುವುದರಿಂದ ಕೆಳಕಂಡ ಸಾಂಖ್ಯಿಕ ಅಳತೆಗಳನ್ನಷ್ಟೇ ಪಡೆಯಲು ಸಾಧ್ಯ. ಒಂದೊಂದು ವರ್ಗದಲ್ಲಿಯೂ ಇರುವ ವ್ಯಕ್ತಿಗಳ | ಅಂಶಗಳ ಸಂಖ್ಯೆಯನ್ನು ಎಣಿಸಿ, ಆ ವರ್ಗದ ಆವೃತ್ತಿಯನ್ನು ಪಡೆಯಬಹುದು. ಆವೃತ್ತಿಯ ಗಾತ್ರದ ಮೇಲೆ ವರ್ಗಗಳನ್ನು ಹೋಲಿಸಿ, ನೋಡ

ಬಹುದು. ಅತ್ಯಂತ ಗರಿಷ್ಠ ಆವೃತ್ತಿಯುಳ್ಳ ವರ್ಗವನ್ನು 'ಬಹುಲಾಂಕ' [Mode] ದಿಂದ ಸೂಚಿಸಲಾಗುತ್ತದೆ. ಒಂದೇ ವರ್ಗದ ಸಂಖ್ಯೆಗಳನ್ನು ಯಾವುದಾದರೂ ಎರಡು ಅಂಶಗಳ ಆಧಾರದ ಮೇಲೆ 2 ರೀತಿಯಲ್ಲಿ ವರ್ಗೀಕರಿಸಿದಾಗ, ಅವುಗಳ ಪರಸ್ಪರಾವಲಂಬನೆಯನ್ನು ಆಸಂಗ ಗುಣಾಂಕ [Contingency Coefficient]ದ ಮೂಲಕ ಗುರುತಿಸಲಾಗುತ್ತದೆ. ಒಟ್ಟಿನಲ್ಲಿ ನಿರ್ದೇಶಕ ಮಾಪನಿ ದತ್ತಾಂಶವನ್ನಾಧರಿಸಿ ಆವೃತ್ತಿ, ಬಹುಲಾಂಕ ಹಾಗೂ ಪರಸ್ಪರಾವಲಂಬನ ಗುಣಾಂಕಗಳನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ.

## 2. ಶ್ರೇಣಿ ಮಾಪನಿ

ಈ ಮಾಪನಿಯಲ್ಲಿ ನಿರ್ದೇಶಕ ಮಾಪನಿಯಲ್ಲಿರುವಂತೆ ವಸ್ತುಗಳನ್ನು / ವ್ಯಕ್ತಿಗಳನ್ನು ವರ್ಗೀಕರಿಸಿ ಪಟ್ಟಿಮಾಡುವುದರ ಜೊತೆಗೆ ಅನುಕ್ರಮ ಶ್ರೇಣಿಯನ್ನೂ ಪರಿಗಣಿಸಲಾಗುತ್ತದೆ. ಪ್ರತಿಯೊಂದು ವರ್ಗವೂ ಪ್ರತಿನಿಧಿಸುವ ಮಾಪನ ಮಾಡಿದ ಗುಣಲಕ್ಷಣದ, ಪ್ರಮಾಣದ ಮೇರೆಗೆ ವರ್ಗಗಳನ್ನು ಅನುಕ್ರಮ ಶ್ರೇಣಿಯಲ್ಲಿ ಜೋಡಿಸಲಾಗುತ್ತದೆ. ಇದರಿಂದಾಗಿ ಒಂದು ಗುಂಪು ಮತ್ತೊಂದರಿಂದ ಪರಿಮಾಣಾತ್ಮಕವಾಗಿ ಭಿನ್ನವಾಗಿವೆ ಎಂದು ಗುರುತಿಸಲಾಗುತ್ತದೆ. ಉದಾ : ಒಂದು ತರಗತಿಯ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಸಾಧನಾಮಟ್ಟವನ್ನಾಧರಿಸಿ ಉತ್ತಮ, ಮಧ್ಯಮ ಹಾಗೂ ನಿಮ್ನ ವರ್ಗಗಳಲ್ಲಿ ವರ್ಗೀಕರಿಸಿದಾಗ ಆ ವರ್ಗಗಳನ್ನು ಅವರೋಹಣ ಕ್ರಮದಲ್ಲಿ ಶ್ರೇಣಿಬದ್ಧಗೊಳಿಸಲಾಗಿರುತ್ತದೆ. ಒಂದೊಂದು ವರ್ಗದಲ್ಲಿಯೂ ಮಾಪನ ಮಾಡಿದ ನಿರ್ದಿಷ್ಟ ಲಕ್ಷಣಕ್ಕನುಗುಣವಾಗಿ ವ್ಯಕ್ತಿಗಳನ್ನಾಗಲೀ / ವಸ್ತುಗಳನ್ನಾಗಲೀ ಗರಿಷ್ಠತಮ ಶ್ರೇಣಿಯಿಂದ ಕನಿಷ್ಠತಮ ಶ್ರೇಣಿಯ ವರೆಗೆ ಅನುಕ್ರಮವಾಗಿ ಸೂಚಿಸಲಾಗುತ್ತದೆ, ಅಂದರೆ ಶ್ರೇಣಿಬದ್ಧಗೊಳಿಸಲಾಗುತ್ತದೆ. ಉದಾ : ಗಣಿತ ವಿಷಯದಲ್ಲಿ ಸಾಧನಾಮಟ್ಟವನ್ನಾಧರಿಸಿ ಒಂದು ತರಗತಿಯ ವಿದ್ಯಾರ್ಥಿಗಳನ್ನು 1, 2, 3, . . . n ಶ್ರೇಣಿಗಳಲ್ಲಿ ಅನುಕ್ರಮವಾಗಿ ಪಟ್ಟಿ ಮಾಡಲಾಗುತ್ತದೆ. ಇಲ್ಲಿ ಭಿನ್ನತೆಯ ಪರಿಕಲ್ಪನೆಯ ಜೊತೆಗೆ ತಾರತಮ್ಯದ ಎಣಿಕೆ ಗಣನೆಗೆ ಬರುತ್ತದೆ.

ಆದರೂ ಈ ಮಾಪನಿಯ ಅಂಕಗಳು ವಸ್ತು/ವ್ಯಕ್ತಿಗಳ ಶ್ರೇಣಿ ಅನುಕ್ರಮವನ್ನು ಮಾತ್ರ ತಿಳಿಸುತ್ತವೆ ; ಒಂದು ಶ್ರೇಣಿಗೂ ಮತ್ತೊಂದು ಶ್ರೇಣಿಗೂ ಇರುವ ನಿರ್ದಿಷ್ಟ ಅಂತರದ ಪರಿಮಾಣವನ್ನು ಸೂಚಿಸುವುದಿಲ್ಲ. ಇದೇ ಮಾಪನಿಯಲ್ಲಿ ಒಂದು ಶ್ರೇಣಿಯ ಬಿಂದುವಿಗೂ ಮತ್ತೊಂದು ಶ್ರೇಣಿಯ ಬಿಂದುವಿಗೂ ಸಮಾನಾದ ಅಂತರವಿರುವುದಿಲ್ಲ ; ಅಲ್ಲದೆ ಯಾವುದೇ ಎರಡು ಬಿಂದುಗಳಿಗಿರುವ ಅಂತರದ ನಿಖರವಾದ ಪರಿಮಾಣ ಗೋಚರವಾಗುವುದಿಲ್ಲ. ಅಂತೆಯೇ ಈ ಅಂಕಗಳನ್ನು ಯಾವುದೇ ರೀತಿಯ ಮೂಲಭೂತ ಗಣಿತ ಕ್ರಿಯೆಗಳಿಗೆ ಒಳಪಡಿಸಲಾಗುವುದಿಲ್ಲ. ಭಾಷಾ ವಿಷಯದಲ್ಲಿ ಗಳಿಸಿದ ಅಂಕಗಳನ್ನಾಧರಿಸಿ ವಿದ್ಯಾರ್ಥಿಗಳ ಅನುಕ್ರಮ ಶ್ರೇಣಿಯಲ್ಲಿ ಪಟ್ಟಿಮಾಡಿದಾಗ 3 ಮತ್ತು 4ನೇ ಶ್ರೇಣಿ ವಿದ್ಯಾರ್ಥಿಗಳ ಅಂಕಗಳಿಗಿರುವ ಅಂತರ 1 ಮತ್ತು 2ನೇ ಶ್ರೇಣಿ ವಿದ್ಯಾರ್ಥಿಗಳ ಅಂಕ

ಗಳಿಗಿರುವ ಅಂತರಕ್ಕೆ ಸಮನಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಪ್ರಥಮಶ್ರೇಣಿ ವಿದ್ಯಾರ್ಥಿಯ ಅಂಕ ದಶಮಶ್ರೇಣಿ ವಿದ್ಯಾರ್ಥಿ ಗಳಿಸಿರುವ ಅಂಕಕ್ಕಿಂತ ಹತ್ತರಷ್ಟು ಹೆಚ್ಚಾಗಿದೆ ಎನ್ನಲಾಗುವುದಿಲ್ಲ. ಹಾಗೆಯೇ ಪ್ರಥಮಶ್ರೇಣಿ ವಿದ್ಯಾರ್ಥಿಯು ಅಂತಿಮ ಶ್ರೇಣಿ ವಿದ್ಯಾರ್ಥಿಗಿಂತ ಎಷ್ಟರಮಟ್ಟಿಗೆ ಉತ್ತಮನಾಗಿದ್ದಾನೆ ಎಂದು ತಿಳಿಯಲಾಗುವುದಿಲ್ಲ ; ಅವರೀರ್ವರಿಗಿರುವ ಅಂತರವೆಷ್ಟು ಎಂಬುದು ಸ್ಪಷ್ಟವಾಗುವುದಿಲ್ಲ.

ಈ ಮಾಪನಿಯಲ್ಲಿ ಒಂದು ಗುಂಪಿನ ಒಟ್ಟಾರೆ ಸಾಮರ್ಥ್ಯ ಅಥವಾ ಲಕ್ಷಣವನ್ನು ಅರಿಯುವುದಕ್ಕಾಗಲೀ, ಒಂದು ಗುಂಪಿನ ಸಾಮರ್ಥ್ಯವನ್ನು ಮತ್ತೊಂದು ಗುಂಪಿನೊಡನೆ ಹೋಲಿಸಿ ನೋಡುವುದಕ್ಕಾಗಲೀ ಸಾಧ್ಯವಾಗದು. ಒಂದು ಗುಣಲಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ಎರಡು ಅಥವಾ ಹೆಚ್ಚು ಗುಂಪುಗಳಿಂದ ದೊರೆಯುವ ಶ್ರೇಣಿಬದ್ಧ ಅಂಕಗಳಿಂದ ಯಾವ ಗುಂಪು ಉತ್ತಮ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಒಂದು ಗುಂಪಿನಲ್ಲಿ ಪ್ರಥಮ ಶ್ರೇಣಿ। ಅಂತಿಮ ಶ್ರೇಣಿ ಅಥವಾ ಯಾವುದೇ ನಿರ್ದಿಷ್ಟ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳು ಗಳಿಸಿರುವ ಅಂಕ ಮತ್ತೊಂದು ಗುಂಪಿನಲ್ಲಿ ಅದೇ ಶ್ರೇಣಿಗಳನ್ನು ಪಡೆದಿರುವ ವಿದ್ಯಾರ್ಥಿಗಳ ಅಂಕಕ್ಕೆ ಸಮನಾಗಿರುತ್ತದೆ ಎಂದು ಹೇಳಲಾಗುವುದಿಲ್ಲ; ಸಮನಾಗಿದೆಯೋ ಇಲ್ಲವೇ ಎಂಬುದು ತಿಳಿಯುವುದಿಲ್ಲ. ಅಂತೆಯೇ ಬೇರೆ ಬೇರೆ ಗುಂಪುಗಳಿಗಿರುವ ತಾರತಮ್ಯವನ್ನು ಸ್ಪಷ್ಟವಾಗಿ ಗುರುತಿಸಲಾಗುವುದಿಲ್ಲ.

ಒಟ್ಟನಲ್ಲಿ ಈ ಮಾಪನಿಯಲ್ಲಿ ಅಂಕಗಳ ವಿತರಣೆ। ವಿಚಲನೆಯನ್ನಾಗಲೀ, ಒಂದು ಅಂಕಕ್ಕೂ ಮತ್ತೊಂದು ಅಂಕಕ್ಕೂ ಇರುವ ಅಂತರವನ್ನಾಗಲೀ ತಿಳಿಯಲಾಗುವುದಿಲ್ಲ. ಈ ಅಂಕಗಳಿಂದ ಆವೃತ್ತಿ, ಬಹುಲಾಂಕ, ಸ್ಥಾನಾನುಕ್ರಮ ಸಹಸಂಬಂಧ ಗುಣಾಂಕ ಹಾಗೂ ಅರ್ಧಕ, ಶತಮಕಗಳನ್ನು [Median Percenties] ಲೆಕ್ಕಾಚಾರಮಾಡಲು ಸಾಧ್ಯವಾಗುತ್ತದೆ.

### 3. ಅಂತರ ಮಾಪನಿ

ಇದರಲ್ಲಿ ದತ್ತಾಂಶವನ್ನು ಶ್ರೇಣಿಬದ್ಧಗೊಳಿಸುವುದಲ್ಲದೆ ಒಂದೊಂದು ಬಿಂದುಗಳಿಗೂ ಇರುವ ಅಂತರವನ್ನು ನಿಖರವಾಗಿ ಸೂಚಿಸಲಾಗುತ್ತದೆ. ಶ್ರೇಣಿ ಮಾಪನಿಗಿಂತ ಇದು ಪರಿಷ್ಕೃತಗೊಂಡಿದೆ ಮಾಪನಿಯ ಉದಕ್ಕೂ ಕ್ರಮೋಗತ ಬಿಂದುಗಳ ನಡುವಿರುವ ಅಂತರವು ಒಂದೇ ಆಗಿರುತ್ತದೆ. ಕ್ರಮಾಗತ ಬಿಂದುಗಳು ಸಮಾನಾಂತರದಲ್ಲಿರುವುದರಿಂದ ಈ ಮಾಪನಿಯನ್ನು ಸಮಾನ ಘಟಕ ಮಾಪನಿ [Equal unit scale] ಅಥವಾ ಸಮಾನಾಂತರ ಮಾಪನಿ [Equal interval scale] ಎಂದು ಕರೆಯಲಾಗುತ್ತದೆ.

ಉಷ್ಣಮಾಪಕದಲ್ಲಿ 50° ಮತ್ತು 51° ಗಳಿಗಿರುವಷ್ಟೇ ಅಂತರ 30° ಮತ್ತು 31° ಗಳಿಗೂ ಇರುತ್ತದೆ. ಹಾಗೆಯೇ 15 ಮತ್ತು 20ಕ್ಕಿರುವ ಅಂತರವೇ 75 ಮತ್ತು 80ರ ನಡುವೆಯೂ ಇರುತ್ತದೆ. ಇದೇ ರೀತಿಯಲ್ಲಿ ಮನೋವೈಜ್ಞಾನಿಕ ಹಾಗೂ

ಶೈಕ್ಷಣಿಕ ಪರೀಕ್ಷಣಗಳಿಂದ ಪಡೆಯುವ ಅಂಕಗಳನ್ನು ನಿರೂಪಿಸಲಾಗುತ್ತದೆ. ಯಾವುದೇ ಒಂದು ಪರೀಕ್ಷಣದಲ್ಲಾಗಲೀ ಅಂಕ 45 ಮತ್ತು 50ಕ್ಕಿರುವ ಅಂತರ ಅಂಕ 20 ಮತ್ತು 25ಕ್ಕಿರುವ ಅಂತರಕ್ಕೆ ಸಮನಾಗಿರುತ್ತದೆಯೆಂದೂ ಪರಿಗಣಿಸಬಹುದಾಗಿದೆ. ನಿಖರವಾಗಿ ಹೇಳುವುದಾದರೆ ಇದು ಪ್ರಶ್ನೆಗಳ ಕ್ಲಿಷ್ಟತೆಯ ಮಟ್ಟ ಒಂದೇ ಆಗಿದ್ದು ಮಾಪನದ ದೋಷಗಳು ಇಲ್ಲದಿರುವ ಸಂದರ್ಭಗಳಲ್ಲಿ ಮಾತ್ರ ನಿಜವೆನಿಸುತ್ತದೆ. ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಸಮಾನಾಂತರ ಬಿಂದುಗಳಲ್ಲಿ ವರ್ಗೀಕರಿಸಿಕೊಂಡು ಒಂದೊಂದು ವರ್ಗದ ವ್ಯಾಪ್ತಿಯಲ್ಲಿ ಬರಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಗುರುತಿಸಲಾಗುತ್ತದೆ. ಶೈಕ್ಷಣಿಕ ಮಾಪನಗಳು ಅದರಲ್ಲೂ ಸಂಜ್ಞಾನಾತ್ಮಕ ಲಕ್ಷಣಗಳ ಮಾಪನಗಳು ಬಹುತೇಕವಾಗಿ ಈ ಮಾಪನಿಯಲ್ಲಿರುತ್ತವೆ.

ಒಂದು ಬುದ್ಧಿಶಕ್ತಿ ಪರೀಕ್ಷಣದಿಂದ ಪಡೆದ ಬುದ್ಧಿಲಬ್ಧ (IQ) 120, ಬುದ್ಧಿಲಬ್ಧ 60ರ ಎರಡರಷ್ಟಿದೆ ಎನ್ನಲಾಗುವುದಿಲ್ಲ. ಒಂದು ಸಾಧನಾ ಪರೀಕ್ಷಣದಲ್ಲಿ ಒಬ್ಬ ವಿದ್ಯಾರ್ಥಿ ಗಳಿಸಿದ ಅಂಕ 30 ಮತ್ತೊಬ್ಬ ಗಳಿಸಿದ ಅಂಕ 90ಕ್ಕಿಂತ ಮೂರರಷ್ಟು ಕಡಿಮೆಯಿದೆ ಎಂದು ಹೇಳಲಾಗುವುದಿಲ್ಲ. ಒಂದು ಗುಂಪಿನಲ್ಲಿ / ತರಗತಿಯಲ್ಲಿ ಮೇಲೆ ಹೇಳಿದ ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳ ಸಾಪೇಕ್ಷ ಸ್ಥಾನವೇನೆಂಬುದನ್ನು ಗುರುತಿಸಬಹುದಷ್ಟೇ. ಬುದ್ಧಿಶಕ್ತಿ ಪರೀಕ್ಷಣವಲ್ಲಾಗಲೀ ಸಾಧನಾ ಪರೀಕ್ಷಣದಲ್ಲಾಗಲೀ '0'ಗಳಿಸಿದರೆ ಆ ವಿದ್ಯಾರ್ಥಿಗೆ ಬುದ್ಧಿಶಕ್ತಿಯೇ ಇಲ್ಲವೆಂದಾಗಲೀ, ಕಲಿಕೆ / ಸಾಧನೆ ಶೂನ್ಯವಾಗಿದೆಯೆಂದಾಗಲೀ ಅರ್ಥೈಸಲಾಗುವುದಿಲ್ಲ; ಮಾಪನ ಮಾಡಲು ಉಪಯೋಗಿಸಿದ ಪರೀಕ್ಷಣದಿಂದ ಆ ವಿದ್ಯಾರ್ಥಿಯ ಬುದ್ಧಿಶಕ್ತಿ / ಸಾಧನಾಮಟ್ಟವನ್ನು ಅಳೆಯಲಾಗಲಿಲ್ಲ ಎಂದು ನಿರೂಪಿಸಬಹುದಷ್ಟೆ. ಆದ್ದರಿಂದ ಈ ಮಾಪನಿಯಲ್ಲಿ ನೈಜವಾದ ಶೂನ್ಯಬಿಂದು ಇರುವುದಿಲ್ಲವೆಂಬುದು ಸ್ಪಷ್ಟ. ಇಲ್ಲಿ 'ಸೊನ್ನೆ'ಯು ಕೇವಲ ಯಾದೃಚ್ಛಿಕ (arbitrary) ಮಾತ್ರ. ಮಾಪನಿಯಲ್ಲಿ ಯಾವುದೋ ಒಂದು ಬಿಂದುವಿನಲ್ಲಿ '0'ಯನ್ನು ಗುರುತಿಸಲಾಗುತ್ತದೆ. ಆದರೆ ಆ ಸೊನ್ನೆಯಿರುವ ಬಿಂದುವಿನಲ್ಲಿ ಮಾಪನ ಮಾಡಿದ ಲಕ್ಷಣ ಶೂನ್ಯವಾಗುತ್ತದೆ ಎನ್ನಲಾಗುವುದಿಲ್ಲ. ಅಂತೆಯೇ ಯಾವುದೇ ಎರಡು ಬಿಂದುಗಳನ್ನಾಗಲೀ ಅನುಪಾತೀಯವಾಗಿ ನಿರೂಪಿಸಲಾಗುವುದಿಲ್ಲ. ಈ ಮಾಪನದಲ್ಲಿ ಅಂಕಗಳಿಗೆ ಗಣಿತಕ್ರಿಯೆಗಳನ್ನು ಅನ್ವಯಿಸಲಾದರೂ ನಿಖರತೆಯನ್ನು ಹೊಂದಿರುವುದಿಲ್ಲ. ಇವುಗಳಿಂದ ಸರಾಸರಿ, ಮಾನಕ ವಿಚಲನೆ (ರ), ಸಹಸಂಬಂಧ ಗುಣಾಂಕ (Coefficient of correlation) ಹಾಗೂ ಇವುಗಳನ್ನು ಅವಲಂಬಿಸಿದ ಇತರ ಸಾಂಖ್ಯಿಕ ಅಳತೆಗಳನ್ನು ಲೆಕ್ಕಾಚಾರ ಮಾಡಲು ಸಾಧ್ಯವಾಗುತ್ತದೆ.

## 4. ಅನುಪಾತ ಮಾಪನಿ

ಇದು ನಿರ್ದೇಶಕ, ಶ್ರೇಣಿ ಹಾಗೂ ಅಂತರ ಮಾಪನಿಗಳಲ್ಲಿರುವ ಎಲ್ಲ ಲಕ್ಷಣಗಳನ್ನು ಹೊಂದಿರುವ ಗರಿಷ್ಠತಮ ಹಾಗೂ ಪರಿಷ್ಕೃತ ಅಳತೆಯ ಮಾಪನಿ. ಇದರಲ್ಲಿ ನೈಜ

ವಾದ ಬಿಂದುವಿದ್ದು ಸಮಾನಾಂತರ ಘಟಕಗಳನ್ನು ನಿರೂಪಿಸಲೂ, ಅನುಕ್ರಮ ಶ್ರೇಣಿ ನಿರ್ಧರಿಸಲೂ, ಅಂಕಗಳನ್ನು ಪಟ್ಟಿಮಾಡಲೂ ಸಾಧ್ಯವಾಗುತ್ತದೆ. ನೈಜವಾದ ಶೂನ್ಯ ಬಿಂದುವಿರುವುದರಿಂದ ಈ ಅಂಕಗಳನ್ನು ಎಲ್ಲ ಗಣಿತ ಕ್ರಿಯೆಗಳಿಗೂ ಒಳಪಡಿಸಲಾಗುತ್ತದೆ ಹಾಗೂ ಉನ್ನತ ಗಣಿತ ಕ್ರಮಗಳನ್ನು ಅಳವಡಿಸಲಾಗುತ್ತದೆ. ಇದರಿಂದಾಗಿ ಅಂಕಗಳನ್ನು ಪರಸ್ಪರ ತುಲನೆ ಮಾಡಲೂ, ಅತ್ಯಂತ ನಿಖರವಾದ ಅಳತೆಯನ್ನು ಪಡೆಯಲೂ ಸಾಧ್ಯವಾಗುತ್ತದೆ. ಅಂತೆಯೇ ಈ ಮಾಪನಿ ಶೈಕ್ಷಣಿಕ ಹಾಗೂ ಮನೋವೈಜ್ಞಾನಿಕ ಕ್ಷೇತ್ರಗಳಿಗಿಂತ ಭೌತವಿಜ್ಞಾನಗಳಲ್ಲಿ ಹೆಚ್ಚು ಉಪಯುಕ್ತವಾಗಿ ಬಳಕೆಯಲ್ಲಿದೆ.

ಮಾಪನಿಯುದ್ದಕ್ಕೂ ಕ್ರಮಾಗತ ಬಿಂದುಗಳ ನಡುವಣ ಅಂತರ ಸಮನಾಗಿರುವುದೇ ಅಲ್ಲದೆ ನೈಜ ಸೊನ್ನೆಯಿಂದಾಗಿ ಯಾವುದೇ ಎರಡು ಬಿಂದುಗಳ ನಡುವೆ ನಿರ್ದಿಷ್ಟ ಅನುಪಾತವಿರುತ್ತದೆ. ಇದರಿಂದಾಗಿ ಮಾಪನಿಯ ಯಾವುದೇ ಸ್ಥಾನದಲ್ಲಿರುವ ಅಂಕಗಳನ್ನು ಅರ್ಥಪೂರ್ಣವಾಗಿ ಮತ್ತು ಅನುಪಾತೀಯವಾಗಿ ಹೋಲಿಸಲಾಗುತ್ತದೆ ಹಾಗೂ ಸೂಚಿಸಲಾಗುತ್ತದೆ. 60° ಗಳು 30° ಗಳ ಎರಡರಷ್ಟೆಂದು, 50 ಅಡಿ ಉದ್ದ, 10 ಅಡಿ ಉದ್ದದ ಐದರಷ್ಟೆಂದೂ ನಿಖರವಾಗಿ ಹೇಳಲಾಗುತ್ತದೆ.

ವೃತ್ತಿಮಾಪನದಲ್ಲಿ ಭೌತಿಕ ಲಕ್ಷಣಗಳಾದ ಎತ್ತರ, ಉದ್ದ, ಗಾತ್ರ, ತೂಕ ಇತ್ಯಾದಿ ಅಳತೆಗಳನ್ನು ಈ ವರ್ಗಕ್ಕೆ ಸೇರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೋವೈಜ್ಞಾನಿಕ ಅಳತೆಗಳನ್ನು ಈ ಮಾಪನಿಗೆ ಸೇರುವಂತೆ ಸೂಚಿಸಬಹುದಾಗಿದೆ. ಉದಾ : ಒಂದು ನಿರ್ದಿಷ್ಟ ಕಲಿಕಾ ಕಾರ್ಯಕ್ಕೆ ತೆಗೆದುಕೊಂಡ ಪ್ರಯತ್ನಗಳ ಸಂಖ್ಯೆ, ಕಾರ್ಯ ಪೂರೈಸಲು ತೆಗೆದುಕೊಂಡ ಅವಧಿ ಇತ್ಯಾದಿಗಳನ್ನು ಪರಿಗಣಿಸುವಾಗ ಈ ಮಾಪನಿಯ ಅಂಕಗಳು ಉಪಯುಕ್ತವೆನಿಸುತ್ತವೆ. ಇತ್ತೀಚೆಗೆ ಅಭಿವೃತ್ತಿ ಹಾಗೂ ಮಾನವ ನಿರ್ಣಯಗಳಿಗೆ ಸಂಬಂಧಿಸಿದ ಕೆಲವು ಮಾಪನಗಳಲ್ಲಿಯೂ ಅನುಪಾತಮಾಪನಿಯಲ್ಲಿರುವ ನಿಖರತೆಯನ್ನು ಪಡೆಯುವ ಪ್ರಯತ್ನ ನಡೆಸಲಾಗಿದೆ.

## ಆಕರ ಗ್ರಂಥಗಳು

1. Louis Cohen & Michael Holliday—Statistics for Education and Physical Education, Harper & Row Publishers London 1979.
2. Guilford J. P.—Fundamental Statistics in Psychology and Education, Mc Graw-Hill Book Co. Inc. N. York 1956.
3. George A. Ferguson—Statistical Analysis in Psychology and Education, Mc Graw-Hill Book Co. Inc. N. York 1966.

ಸಿ. ಕುಸುಮಾಕರ ಹೆಬ್ಬಾರ

# ಭಾರತದ ರಫ್ತು ಅಭಿವೃದ್ಧಿ : ಹೊಸ ರಫ್ತು ನೀತಿಯ ಅವಶ್ಯಕತೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಭಾರತ ತನ್ನ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಪ್ರಯತ್ನ ನಡೆಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಅಲ್ಲದೆ, ಈ ಬೆಳವಣಿಗೆಗೆ ಪೂರಕವಾದ ಆಮದು ಸರಕುಗಳನ್ನು ಕೊಳ್ಳಲು ಭಾರತ ಎಂದಿನಿಂದಲೂ ವಿದೇಶೀ ವಿನಿಮಯದ ತೊಂದರೆಯನ್ನನುಭವಿಸುತ್ತಿದೆಯೆನ್ನುವುದೂ ಸಾಮಾನ್ಯ ಖಚಿತ ಅಭಿಪ್ರಾಯ. ಆಮದು ಸರಕುಗಳನ್ನು ಪರದೇಶಗಳಿಂದ ಕೊಳ್ಳಲು ಬೇಕಾದ ಹಣದ ತುಂಬ ಸ್ವಲ್ಪ ಭಾಗವನ್ನು ಮಾತ್ರ ನಮ್ಮ ಸಾಂಪ್ರದಾಯಿಕ ಸರಕಿನ ರಫ್ತಿನಿಂದ ದೊರಕಿದ ವಿದೇಶೀ ವಿನಿಮಯದಿಂದ ಪೂರೈಸಲು ಸಾಧ್ಯವಾಗಿದೆ. ಉಳಿದಂತೆ ಪರಿಸ್ಥಿತಿ ಯಥಾ ಪ್ರಕಾರವಿದ್ದು, ನಮ್ಮ ಸರ್ವತೋಮುಖ ಮುನ್ನಡೆಗೆ ನಮ್ಮ ರಫ್ತಿನಲ್ಲಿ ಹೆಚ್ಚಿನ ಅಭಿವೃದ್ಧಿ ಮತ್ತು ತನ್ಮೂಲಕ ವಿದೇಶೀ ವಿನಿಮಯದಲ್ಲಿ ಹೆಚ್ಚಳ ಸಾಧಿಸುವುದು ಬಹಳ ಮುಖ್ಯವಾಗುತ್ತದೆ.

ನಮ್ಮ ದೇಶದ ಯೋಜಿತ ಅಭಿವೃದ್ಧಿಯ ಮೊದಲ ದಿನಗಳಲ್ಲಿ ರಫ್ತನ್ನು ಹೆಚ್ಚಿಸಲು ಮತ್ತು ಅಭಿವೃದ್ಧಿಪಡಿಸಲು ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಯ್ತು. ಉದಾಹರಣೆಗೆ, ವಿನಿಮಯ ನಿಯಂತ್ರಣ ವ್ಯವಸ್ಥೆಯಡಿಯಲ್ಲಿ ರಫ್ತಿನ ಮೇಲೆ ನಿಯಂತ್ರಣ, ಖೋಟಾದ ನಿಗದಿ, ರಫ್ತಿನ ಮೇಲಿನ ಸುಂಕದಲ್ಲಿ ಕಡಿತ, ಆಮದು ಸರಕಿನ ಬದಲು ದೇಶೀ ಸರಕಿನ ಬಳಕೆಗೆ ಪ್ರೋತ್ಸಾಹ, ಹೀಗೆ ಹಲವು ಹತ್ತು ಕ್ರಮಗಳಿಂದ ರಫ್ತು ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಹೊಸ ಆಯಾಮ ಸಿಕ್ಕಿ ಭಾರತದ ವಿದೇಶೀ ವಿನಿಮಯದ ಹಲವು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಯಿತು ಹಾಗೂ ಸಾಧ್ಯವಾಗುತ್ತಿದೆ. ಪರಿಣಾಮವಾಗಿ ಎಪ್ಪತ್ತು ಮತ್ತು ಎಂಭತ್ತರ ದಶಕದ ಆರಂಭದಲ್ಲಿ ಭಾರತದ ರಫ್ತಿನ ಪ್ರಮಾಣ ಗಣನೀಯವಾಗಿ ಹೆಚ್ಚಿದೆಯೆಂದೇ ಹೇಳಬಹುದು. (ಪಟ್ಟಿ–1 ನೋಡಿ). ಆದರೆ ಈ ಸಾಧನೆ ಆಮದಿನ ಹೆಚ್ಚಳದ ಮುಂದೆ ನಿರಾಶಾದಾಯಕ. ಭಾರತ ಇಂದು ಐವತ್ತು ಸಾವಿರ ಕೋಟಿಗೂ ಮಿಕ್ಕು ಸಾಲದ ಹೊಣೆಯನ್ನು ಹೊತ್ತಿದೆ. ಇದಕ್ಕೆ ಕಾರಣ ಆಮದಿನ ಪ್ರಮಾಣಕ್ಕೆ ಹೋಲಿಸಿದರೆ ಒಂದೇ ಸಮನೆ ಇಳಿಯುತ್ತಿರುವ

ರಫ್ತಿನ ಪ್ರಮಾಣ. ಇದರಿಂದಾಗಿ ನಮ್ಮ ದೇಶದ 'ವ್ಯಾಪಾರೀ ಸಮತೋಲನ' (Balance of Payments) ಪರಿಸ್ಥಿತಿ ತುಂಬಾ ಶೋಚನೀಯ. ಇದನ್ನು ಸರಿತೂಗಿಸಲು ಅಂದರೆ ವ್ಯಾಪಾರೀ ಖೋತಾವನ್ನು ತುಂಬಿ ಸಮತೋಲನ ಕಾಪಾಡಲು ಭಾರತ ಹಿಂದೆಂದಿಗಿಂತಲೂ ಇಂದು ರಫ್ತಿನ ಮತ್ತು ವಿದೇಶೀ ವ್ಯಾಪಾರ ವ್ಯವಹಾರದ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕಾಗಿದೆ.

ಪ್ರಸ್ತುತ ಈ ಲೇಖನದಲ್ಲಿ, ಭಾರತದ ವ್ಯಾಪಾರೀ ಸಮತೋಲನದಲ್ಲಿಯ ಸದ್ಯದ ನಿರಾಶಾದಾಯಕ ಪರಿಸ್ಥಿತಿಗೆ ಕಾರಣಗಳನ್ನು ಮತ್ತು ನಮ್ಮ ರಫ್ತು ಅಭಿವೃದ್ಧಿ ಹಾಗೂ ವಿದೇಶೀ ವಿನಿಮಯದ ಹೆಚ್ಚಳಕ್ಕೆ ತೆಗೆದುಕೊಳ್ಳಬೇಕಾದ ನೂತನ ಹಾಗೂ ತುರ್ತು ಕ್ರಮಗಳು ಮತ್ತು ಅನುಸರಿಸಬೇಕಾದ ನೀತಿಯ ಬಗ್ಗೆ ಚರ್ಚಿಸಲಾಗಿದೆ.

**ರಫ್ತಿನ ಕುಂಠಿತ ಬೆಳವಣಿಗೆಗೆ ಕಾರಣಗಳು :**

ನಮ್ಮ ದೇಶದ ಈವರೆಗಿನ ಕುಂಠಿತ ಬೆಳವಣಿಗೆಗೆ ಹಲವು ಕಾರಣಗಳನ್ನು ನಾವು ಗುರುತಿಸಬಹುದು. ಅವುಗಳಲ್ಲಿ ಕೆಲವು ಈ ಕೆಳಕಂಡಂತಿವೆ.

**೧) ಇತರ ದೇಶಗಳ ರಕ್ಷಣಾ ನೀತಿ :**

ಹೊರದೇಶಗಳು ತಮ್ಮ ಕೈಗಾರಿಕೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ರಕ್ಷಣೆ ಒದಗಿಸಲು—ಇತರ ದೇಶಗಳ ಕೈಗಾರಿಕೆಗಳಿಂದ ಹಾಗೂ ಸರಕುಗಳಿಂದ ಬಿಗಿಯಾದ ರಕ್ಷಣಾ ನೀತಿಯನ್ನು ಅನುಸರಿಸಲು ಆರಂಭಿಸಿದ್ದು, ನಮ್ಮ ದೇಶದ ಅತಿ ಮುಖ್ಯ ರಫ್ತು ಸಾಮಗ್ರಿಗಳಾದ ನೆಯ್ಗೆ ಬಟ್ಟೆ, ಚರ್ಮ ವಸ್ತುಗಳು, ಇಂಜಿನೀಯರಿಂಗ್ ವಸ್ತುಗಳು ರಫ್ತಿನ ಮೇಲೆ ಗಾಢ ಪರಿಣಾಮ ಬೀರಿವೆ. ಪರಿಣಾಮವಾಗಿ ನಾವಿಂದು ವ್ಯಾಪಾರದಲ್ಲಿ ಹೆಚ್ಚಿನ ಕುಸಿತ ಹಾಗೂ ನಿರುದ್ಯೋಗ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಅಲ್ಲದೆ ಇಂದು ನಾವು ಅಂತರಾಷ್ಟ್ರೀಯ ವ್ಯಾಪಾರೀ ಪರಿಸರದಲ್ಲಿ ಬಹಳ ಕಠಿಣ ಸ್ಥಿತಿಯನ್ನು ಎದುರಿಸುತ್ತಿದ್ದೇವಲ್ಲದೆ, ಕಳೆದ ಕೆಲವು ವರ್ಷಗಳಲ್ಲಿ ನಮ್ಮ ರಫ್ತಿನಲ್ಲಿ ಮತ್ತು ವಿದೇಶೀ ವಿನಿಮಯದ ಗಳಿಕೆಯಲ್ಲಿ ಇಳಿಮುಖ ಕಾಣುತ್ತಿದ್ದೇವೆ.

ಜೊತೆಗೆ, ನಮ್ಮ ರಫ್ತಿನ ನೆಲೆ ಬಹಳ ಸಂಕುಚಿತವಾಗಿದ್ದು, ಕೇವಲ 16 ವಸ್ತುಗಳು ನಮ್ಮ ರಫ್ತುಗಳಿಕೆಯ ಶೇಕಡ 72ರಷ್ಟನ್ನು ಕೊಡುತ್ತಿವೆ. ಈ 16 ವಸ್ತುಗಳ ರಫ್ತು ಪ್ರಮಾಣ 1982-83ರಲ್ಲಿ ಕಡಿಮೆಯಾಗಿ ವಿದೇಶೀ ವಿನಿಮಯದಲ್ಲಿ ಇಳಿಮುಖ ಕಂಡು ಬಂತು. ಇಂಜನೀಯರಿಂಗ್ ವಸ್ತುಗಳ ರಫ್ತು ಪ್ರಮಾಣ ಹೆಚ್ಚಿದರೂ ನಿಗದಿಪಡಿಸಲ್ಪಟ್ಟ ಗುರಿ ಮುಟ್ಟಲಾಗಲಿಲ್ಲ. ನಮ್ಮ ಸುಂಕನೀತಿ (Tariff Policy-320%) ಸ್ವದೇಶೀ ಕೈಗಾರಿಕೆಗಳಿಗೆ ರಕ್ಷಣೆ ಒದಗಿಸಿದರೂ ಕೂಡ, ರಫ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರಲ್ಲಿ ಸಹಕಾರಿಯಾಗಿಲ್ಲ.

**ಬಿ) ಬಂಡವಾಳ ಪ್ರಧಾನ ತಾಂತ್ರಿಕತೆಯ ಕುಂಠಿತ ಪ್ರಗತಿ :**

ಭಾರತದಲ್ಲಿ ಬಂಡವಾಳ ಪ್ರಧಾನ ತಾಂತ್ರಿಕತೆ ಹಾಗೂ ಕೈಗಾರಿಕೆಗೆ ಬದಲಾಗಿ ಉಪಭೋಗಿ ವಸ್ತು ತಯಾರಿಕಾ ಕೈಗಾರಿಕೆಗಳಿಗೆ(Consumers goods industries) ಪ್ರಾಮುಖ್ಯ ದೊರೆತದ್ದು ನಮ್ಮ ರಫ್ತಿನ ಬೆಳವಣಿಗೆಗೆ ಅಡ್ಡಿಯಾಯಿತೆಂದೇ ಹೇಳಬೇಕು. ಇದರಿಂದ ಸ್ವದೇಶೀ ಮಾರುಕಟ್ಟೆಗಳಿಗೆ ಉಪಭೋಗಿ ಸರಕುಗಳು ಹೆಚ್ಚಿದುವೇ ವಿನಹ ಹೆಚ್ಚಿನ ರಫ್ತಿಗೆ ಸಹಕಾರಿಯಾಗಲಿಲ್ಲ. ಅಲ್ಲದೇ ಇದೊಂದು ಆಮದನ್ನು ಸ್ವದೇಶೀ ವಸ್ತುಗಳ ಬಳಕೆಯಿಂದ ಕಡಿಮೆ ಮಾಡುವ ಸಾಧನವಾಗಷ್ಟೇ ಉಳಿದು, ರಫ್ತು ಅಭಿವೃದ್ಧಿ ಕುಂಠಿತಗೊಂಡಿತು.

**ಸಿ) ಸಾಂಪ್ರದಾಯಿಕ ಸರಕಿನ ರಫ್ತು :**

ಸಾಮಾನ್ಯ ತಿಳುವಳಿಕೆಯಂತೆ ಭಾರತದ್ದು ವ್ಯವಸಾಯ ಅವಲಂಬಿತ ಅರ್ಥ ವ್ಯವಸ್ಥೆ. ಹಾಗಾಗಿ ನಮ್ಮ ರಫ್ತಿನ ನೆಲೆಯನ್ನು ಸಾಂಪ್ರದಾಯಿಕ ವಸ್ತುಗಳಾದ ವ್ಯವಸಾಯೋತ್ಪನ್ನ ವಸ್ತುಗಳು ಹಾಗೂ ಕಚ್ಚಾವಸ್ತುಗಳು ಪ್ರತಿನಿಧಿಸುತ್ತವೆ. ಗೋಡಂಬಿ, ಹಣ್ಣು ಮತ್ತು ತರಕಾರಿಗಳು, ಸಾಂಬಾರು ಪದಾರ್ಥಗಳು, ಕಚ್ಚಾಹತ್ತಿ ಮುಂತಾದ ವ್ಯವಸಾಯೋತ್ಪನ್ನ ವಸ್ತುಗಳಿಂದಾದ ಗಳಿಕೆ 1982ಕ್ಕೆ ಹೋಲಿಸಿದರೆ 1983ರಲ್ಲಿ ಹೆಚ್ಚು. ಆದರೆ ಇದೇ ಕಾಲದಲ್ಲಿ ಮೀನು ಮತ್ತು ಅದರ ಉತ್ಪನ್ನಗಳ ರಫ್ತಿನಲ್ಲಿ ಹಿನ್ನೆಡೆ ಕಂಡುಬರುತ್ತದೆ. 1982–83ರ ಅವಧಿಯಲ್ಲಿ ಮೀನು ಮತ್ತು ಅದರ ಉತ್ಪನ್ನಗಳ ರಫ್ತಿನಲ್ಲಿ ಹಿನ್ನೆಡೆ ಕಂಡುಬರುತ್ತದೆ. 1982–83ರ ಅವಧಿಯಲ್ಲಿ ಇದರ ರಫ್ತು ರೂ. 349.5 ಬೆಲೆಯ 94.8 ಸಾವಿರ ಟನ್‌ಗಳಿಗೆ ಏರಿ, ಪ್ರಮಾಣದಲ್ಲಿ ಶೇಕಡಾ 28.3 ಮತ್ತು ಆದಾಯದಲ್ಲಿ ಶೇಕಡ 24.7ರಷ್ಟು ಹೆಚ್ಚಳ ಕಂಡುಬಂದಿತು. 1981–82ರಲ್ಲಿ ಈ ಸರಕಿನ ರಫ್ತು ರೂ. 280.3 ಕೋಟಿಯ ಬೆಲೆಯ 73.9 ಸಾವಿರ ಟನ್‌ಗಳಷ್ಟಿತ್ತು. ಆದರೆ 1983ರಲ್ಲಿ ರಫ್ತು ಪ್ರಮಾಣದಲ್ಲಿ ಶೇಕಡಾ 19.9 ಮತ್ತು ಆದಾಯದಲ್ಲಿ ಶೇಕಡಾ 18.5ರಷ್ಟು ಅಗಾಧ ಇಳಿಮುಖ ಕಂಡುಬರುತ್ತದೆ. ಆದ್ದರಿಂದ ನಾವು ಸಾಂಪ್ರದಾಯಿಕ ಸರಕುಗಳನ್ನು ಅವಲಂಬಿಸಿ ರಫ್ತಿನ ಪ್ರಮಾಣದಲ್ಲಿ ಹೆಚ್ಚಳ ಸಾಧಿಸಿದ್ದೇವೆಯೋ ಹೊರತು ಆದರ ಆದಾಯದಲ್ಲಲ್ಲ.

**ಡಿ) ಖಡ್ಡಾಯ ಅಥವಾ ಅಜ್ಞಾಪೂರ್ವಕ ರಫ್ತು ಪದ್ಧತಿ :**

ನಮ್ಮ ರಫ್ತಿನ ನೆಲೆಯ ಮತ್ತೊಂದು ಸಮಸ್ಯೆಯೆಂದರೆ, ನಮ್ಮಲ್ಲೇ ಅತಿ ಆವಶ್ಯಕ ವಸ್ತುಗಳಾದ ಸಕ್ಕರೆ, ಸಿಮೆಂಟ್, ಆಲೂಗೆಡ್ಡೆ, ಈರುಳ್ಳಿ, ಅಕ್ಕಿ ಮುಂತಾದ ವ್ಯವಸಾಯೋತ್ಪನ್ನಗಳನ್ನು ರಫ್ತು ಮಾಡುತ್ತಿರುವುದು. ಹೇಗಾದರೂ ಮಾಡಿ ನಮ್ಮ ರಫ್ತು ಹೆಚ್ಚಿಸಿಕೊಳ್ಳಬೇಕೆನ್ನುವುದು ಇವರ ಉದ್ದೇಶವೇನೋ ಎಂದೆನಿಸುತ್ತದೆ. ಸ್ವದೇಶೀ ಆವಶ್ಯಕತೆಯ ಮೇಲೆ ನಿಯಂತ್ರಣ ಹೇರಿ ರಫ್ತಿನ ಬೆಳವಣಿಗೆಗೆ ಯೋಚಿಸುವುದು ದೇಶದ

ಹಿತಕ್ಕೆ ಧಕ್ಕೆಯಾಗುತ್ತದೆ. ಇದನ್ನು ಗಮನಿಸಿ ಭಾರತ ಸರ್ಕಾರ ಆ ವಸ್ತುಗಳ ರಫ್ತಿನ ಮೇಲೆ ನಿಯಂತ್ರಣ ಹೇರಿದೆ. ಇದೇ ರೀತಿ, ಕೈಗಾರಿಕಾ ಕಚ್ಚಾ ವಸ್ತುಗಳಾದ ಕಬ್ಬಿಣ ಮತ್ತು ಅದರ ಅದಿರು, ಮ್ಯಾಂಗನೀಸ್ ಅದಿರು, ಮೈಕಾ ಮುಂತಾದವುಗಳ ರಫ್ತು ಕೂಡಾ ದೇಶದ ನಿರಂತರ ಬೆಳವಣಿಗೆಗೆ ಪೂರಕವಾಗುವುದಿಲ್ಲ. ಆದುದರಿಂದ ಅವುಗಳ ಹಾಗೇ ರಫ್ತು ಮಾಡುವ ಬದಲು, ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸಿ ರಫ್ತು ಮಾಡಿದರೆ ಒಳಿತು. ಆದರೂ ಅವುಗಳು ರಫ್ತಿನ ಪ್ರಮಾಣ ಹೆಚ್ಚಿಸಬಹುದೇ ಹೊರತು ಆದರಿಂದಾಗುವ ಗಳಿಕೆಯನ್ನಲ್ಲ.

### ಇ) ಬಹುರಾಷ್ಟ್ರೀಯ ಸಂಸ್ಥೆಗಳೊಡನೆ ಸ್ಪರ್ಧೆ :

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ವ್ಯವಸ್ಥಿತ ಬಹುರಾಷ್ಟ್ರೀಯ ಸಂಸ್ಥೆಗಳೊಡನೆ ಸ್ಪರ್ಧೆ ಬಹಳ ಕಠಿಣ. ಭಾರತೀಯ ಕೈಗಾರಿಕಾ ಸಂಸ್ಥೆಗಳು ತಮ್ಮ ಸರಕಿಗೆ ಬೇಡಿಕೆ ಹೆಚ್ಚಿಸಲು ಬಹು ರಾಷ್ಟ್ರೀಯ ಸಂಸ್ಥೆಗಳೊಡನೆ ಹೆಣಗಾಡಬೇಕಾಗಿರುವುದರಿಂದ ನಮ್ಮ ರಫ್ತಿನ ಬೆಳವಣಿಗೆ ನಿಜವಾದ ಒಗಟೇ ಆಗಿದೆ.

### ಎಫ್) ನಮ್ಮ ಸರ್ಕಾರೀ ಸಂಸ್ಥೆಗಳ ದುರ್ಬಲ ಸ್ಪರ್ಧಾಶಕ್ತಿ :

ನಮ್ಮ ದೇಶದ ಸರ್ಕಾರೀ ಉದ್ಯಮ ರಂಗದ ವ್ಯವಸ್ಥೆಯಲ್ಲಿರುವ ಬಹುತೇಕ ಪ್ರಮುಖ ಕೈಗಾರಿಕೆಗಳೂ ಟರ್ಶಿಯರಿ ಕೈಗಾರಿಕೆಗಳಾಗಿದ್ದು, ತಮ್ಮ ಬಂಡವಾಳಕ್ಕೆ ಮತ್ತು ಕಚ್ಚಾ ವಸ್ತುಗಳಿಗೆ ಇತರೆ ಹೊರ ಕೈಗಾರಿಕಾ ಸಂಸ್ಥೆಗಳನ್ನು ಅವಲಂಬಿಸಬೇಕಾಗುತ್ತದೆ. ಈ ಕಚ್ಚಾವಸ್ತು ಮತ್ತು ಬಂಡವಾಳವನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೀವ್ರಸ್ಪರ್ಧೆಯ ನಡುವೆ ಪಡೆಯಬೇಕಾಗಿರುವುದರಿಂದ ಅವುಗಳ ಬೆಲೆ ಹೆಚ್ಚುತ್ತದಲ್ಲದೆ, ತತ್ಫಲವಾಗಿ ಉತ್ಪಾದನಾ ವೆಚ್ಚವೂ ಹೆಚ್ಚುತ್ತದೆ. ಪರಿಣಾಮವಾಗಿ ಸಿದ್ಧವಸ್ತುವಿನ ಬೆಲೆ ಹೆಚ್ಚಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಮೇಲೆ ಹಿಡಿತ ಹೊಂದಲು ಕಷ್ಟವಾಗುತ್ತದೆ. ಅಲ್ಲದೆ ನಮ್ಮ ಸರ್ಕಾರಿ ಸಂಸ್ಥೆಗಳು ಸರಿಯಾದ ಆಡಳಿತವಿಲ್ಲದೆ ಸೊರಗಿವೆ ಮತ್ತು ಲಾಭಕ್ಕಿಂತ ಸೇವೆ ಮುಖ್ಯ ಎಂಬ ಘೋಷಣೆಯೊಂದಿಗೆ ಚುರುಕಾದ ರಫ್ತು ಅಭಿವೃದ್ಧಿ ನೀತಿಯನ್ನನುಸರಿಸದೆ ಕೆಲಸ ಮಾಡುತ್ತಿವೆ.

### ಜಿ) ನಮ್ಮ ಸರಕಿನ ಗುಣಮಟ್ಟ :

ಸರಕಿನ ಗುಣಮಟ್ಟ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದರ ಬೇಡಿಕೆಯನ್ನು ನಿರ್ಧರಿಸುವುದರಿಂದ ಉತ್ತಮ ಸರಕನ್ನು ಮಾತ್ರ ತಯಾರಿಸಬೇಕಾಗುತ್ತದೆ. ಆದರೆ ನಮ್ಮ ಕೈಗಾರಿಕೋದ್ಯಮದ ಸರಕಿನ ಗುಣಮಟ್ಟ ಕೆಳಗಿದ್ದು, ಇತರ ದೇಶಗಳ ಸರಕಿನೊಡನೆ ಸ್ಪರ್ಧಿಸಲಾಗುತ್ತಿಲ್ಲ. ಹಾಗಾಗಿ ನಮ್ಮ ಸರಕಿಗೆ ಬೇಡಿಕೆ ಕಡಿಮೆಯಿದ್ದು, ರಫ್ತಿನ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತಿವೆ.

**ಎಚ್) ವಿದೇಶೀ ನೆರವು :**

ವಿದೇಶೀ ನೆರವನ್ನು ಪಡೆಯುವ ದೇಶಗಳ ಪ್ರಮುಖ ಸಮಸ್ಯೆಯೆಂದರೆ ಅವಕ್ಕೆ ಸಿಗುವ ನೆರವಿನ ಪ್ರಮಾಣ ಹಾಗೂ ನೆರವಿನ ಕಾಲ ವಿಸ್ತಾರದ ಬಗೆಗೆ ಇರುವ ಅನಿಶ್ಚಿತತೆ. ಯೋಜನೆಗಳನ್ನು ಐದು ವರ್ಷಕ್ಕೊಮ್ಮೆ ತಯಾರಿಸುವ ನಮ್ಮ ದೇಶಗಳಲ್ಲಿ ನೆರವಿನ ಪ್ರಮಾಣ ಹಾಗೂ ಕಾಲ ವಿಸ್ತಾರದ ಬಗೆಗೆ ಪೂರ್ವ ಭಾವಿ ತಿಳುವಳಿಕೆಯಿಲ್ಲದಿದ್ದಲ್ಲಿ ದೀರ್ಘಾವಧಿಯೋಜನೆಗಳನ್ನು ಹಾಕಿಕೊಳ್ಳಲು ಕಷ್ಟವಾಗುತ್ತದೆ. ಅಲ್ಲದೆ, ಹಲವು ಸಂದರ್ಭಗಳಲ್ಲಿ ನೆರವು ಕೆಲವೊಂದು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಉದಾಹರಣೆಗೆ, ಸರಕಿನ ಹೆಚ್ಚಳವಿದ್ದರೂ ಅದನ್ನು ರಫ್ತು ಮಾಡಲಾಗದೆ ಕಡ್ಡಾಯವಾಗಿ ಸರಕನ್ನು ನೆರವು ನೀಡುವ ದೇಶದಿಂದ ಆಮದು ಮಾಡಿಕೊಳ್ಳಬೇಕಾಗುವುದು. ಮತ್ತೆ ಕೆಲವು ಸಂದರ್ಭಗಳಲ್ಲಿ ನೆರವನ್ನು ನೆರವು ನೀಡಿದ ದೇಶದಲ್ಲೇ ಉಪಯೋಗಿಸಬೇಕಾಗುತ್ತದೆ. ಇದು ನೆರವು ಪಡೆದ ದೇಶ ತನಗೆ ಬೇಕಾದ ಸರಕನ್ನು ಆರಿಸುವ ಹಕ್ಕನ್ನು ಕುಂಠಿತಗೊಳಿಸುತ್ತದೆ. ಇದೇ ಅಲ್ಲದೆ, ನೆರವು ಮತ್ತು ಅದರ ಹೆಚ್ಚಿನ ಭಾಗ ನಿಗದಿಗೊಳಿಸಿದ ಯೋಜನೆಗಳಿಗೇ ಮೀಸಲಾಗಿರುತ್ತದೆ. ಇದೂ ಕೂಡ ನೆರವನ್ನು ನೆರವು ಪಡೆದ ದೇಶ ತನಗೆ ಬೇಕಾದ ಹಾಗೆ ಲಾಭದಾಯಕವಾಗಿ ಬಳಸಿಕೊಳ್ಳಲು ತಡೆಯೊಡ್ಡುತ್ತದೆ. ಹಾಗಾಗಿ ಈ ರೀತಿಯ ವಿದೇಶೀ ನೆರವು ಯಾವ ರೀತಿಯಿಂದಲೂ ರಫ್ತು ಅಭಿವೃದ್ಧಿಗೆ ಸಹಕಾರಿಯಾಗುವುದಿಲ್ಲ.

**ಐ) ರಾಜಕೀಯ ಸಂಬಂಧಗಳು :**

ಯಾವುದೇ ದೇಶದ ರಫ್ತಿನ ಅಭಿವೃದ್ಧಿ ಆ ದೇಶದ ರಾಜಕೀಯ ಪರಿಸ್ಥಿತಿ ಮತ್ತು ಇತರ ದೇಶಗಳೊಡನೆ ಅದರ ರಾಜಕೀಯ ಸಂಬಂಧಗಳ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ ನಮ್ಮ ವಿದೇಶೀ ರಾಜಕೀಯ ಸಂಬಂಧ ಚೀನ, ಪಾಕಿಸ್ತಾನ ಮತ್ತು ಅಮೇರಿಕಾಗಳೊಡನೆ ಅಷ್ಟು ಆಶಾದಾಯಕವಾಗಿಲ್ಲ. ಆದರೆ ನಮ್ಮ ಆಮದು ಮುಖ್ಯವಾಗಿ ಅಮೇರಿಕಾದಿಂದ ಬರುತ್ತದೆ ಮತ್ತು ರಫ್ತು ಮಾಡತಕ್ಕ ನಮ್ಮ ವಸ್ತುಗಳು ನಮ್ಮಲ್ಲೇ ಉಳಿಯುತ್ತವೆ. ಇದರಿಂದ ನಮ್ಮ ರಫ್ತು ಕಡಿಮೆಯಾಗುತ್ತದೆ.

**ಜೆ) ಕಡಿಮೆ ಕಾರ್ಮಿಕ ವೆಚ್ಚ :**

ಕಾರ್ಮಿಕರು ಮತ್ತು ಕೆಲಸದಾಳುಗಳು ಕಡಿಮೆ ಬೆಲೆಗೆ ಸಿಗುವುದರಿಂದ ಬಂಡವಾಳ ಪ್ರಧಾನ ಕೈಗಾರಿಕೆಗಳಲ್ಲಿ ಹಣ ತೊಡಗಿಸಲು ಬಂಡವಾಳದಾರರು ಹಿಂತೆಗೆಯುತ್ತಿದ್ದಾರೆ. ತೀರಾ ಕಡಿಮೆ ಹಣ ತೊಡಗಿಸಿ, ಸಂಕೀರ್ಣ ತಾಂತ್ರಿಕತೆಯೆಡೆಗೆ ಗಮನ ಹರಿಸದೆ, ಕಡಿಮೆ ಬೆಲೆಯ ಉಪಭೋಗಿ ವಸ್ತುಗಳನ್ನು ಕಾರ್ಮಿಕ ಪ್ರಧಾನ ಕೈಗಾರಿಕೆಗಳಲ್ಲಿ ಉತ್ಪಾದಿಸುತ್ತಾರೆ. ಈ ವಸ್ತುಗಳು ರಫ್ತಿನ ದೃಷ್ಟಿಯಿಂದ ಉಪಯೋಗವಾಗುವುದಿಲ್ಲವಾದ್ದರಿಂದ, ನಮ್ಮ ರಫ್ತಿನ ಸದ್ಯದ ಪರಿಸ್ಥಿತಿ ಆಶಾದಾಯಕವಾಗಿಲ್ಲ.

**ಕೆ) ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಸಂಬಂಧ :**

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇತ್ತೀಚಿನ ವರ್ಷಗಳಲ್ಲಿ ಅನುಭವಿಸಿದ ಹಣ ದುಬ್ಬರ, Recession ಮತ್ತು ಅವುಗಳ ರಕ್ಷಣಾತ್ಮಕ ವ್ಯಾಪಾರ ನೀತಿ (protectionism) ಗಳು ಅಭಿವೃದ್ಧಿಶೀಲ ರಾಷ್ಟ್ರಗಳ ರಫ್ತಿನ ಮೇಲೆ ತೀವ್ರ ಪರಿಣಾಮ ವನ್ನುಂಟುಮಾಡಿರುವುದನ್ನು ಕಾಣುತ್ತೇವೆ. ಇದರಿಂದ ತೃತೀಯ ಜಗತ್ತಿನ ರಾಷ್ಟ್ರಗಳು ತಮ್ಮ ವ್ಯಾಪಾರೀ ಅಸಮತೋಲನವನ್ನು ಸರಿತೂಗಿಸಲು ಸಾಧ್ಯವಾಗುತ್ತಿಲ್ಲ.

**ರಫ್ತು ಅಭಿವೃದ್ಧಿಗಾಗಿ ಪ್ರಸ್ತುತ ಕೈಗೊಂಡಿರುವ ಕಾರ್ಯಕ್ರಮಗಳು :**

ನಮ್ಮ ಕುಂಠಿತ ರಫ್ತು ಬೆಳವಣಿಗೆಗೆ ಕಾರಣವಾಗಿರುವ ಅಂಶಗಳನ್ನು ಈವರೆಗೆ ಪರಿಚಯಮಾಡಿಕೊಂಡೆವು. ಈಗ ಈ ಕಾರಣಗಳ ಹಿನ್ನೆಲೆಯಲ್ಲಿ ರಫ್ತು ಅಭಿವೃದ್ಧಿಗಾಗಿ ಭಾರತ ಸರ್ಕಾರ ಪ್ರಸ್ತುತ ಕೈಗೊಂಡಿರುವ ಉತ್ತೇಜನಾ ಕಾರ್ಯಕ್ರಮಗಳ ಸ್ಥೂಲ ಪರಿಚಯ ಮಾಡಿಕೊಳ್ಳೋಣ.

1) ಶೇಕಡ 100ರಷ್ಟು ರಫ್ತು ಪ್ರಧಾನ [export oriented] ಘಟಕಗಳಿಗೆ ಕೊಡುವ OGL [Open General Licence]ನ್ನು ಸಾಕಷ್ಟು ವಿಸ್ತರಿಸ ಲಾಗಿದ್ದು, ಡೀಸೆಲ್ ಉತ್ಪಾದನಾ ಸೆಟ್‌ಗಳು, Consumables, Second hand capital goods ಮತ್ತು ಕಚ್ಚಾ ವಸ್ತುಗಳನ್ನು ಸೇರಿಸಲಾಗಿದೆ. ರಫ್ತಿ ಗಾಗಿ ಸರಕನ್ನು ಉತ್ಪಾದಿಸಲು ಬೇಕಾದ ಕಚ್ಚಾವಸ್ತು ಹಾಗೂ ಬಿಡಿ ಭಾಗಗಳ ಮೇಲಿನ ಆಮದು ಸುಂಕದ ರಿಯಾಯಿತಿಯನ್ನು ಸಾಕಷ್ಟು ಸುಧಾರಿಸಿ ಅದನ್ನು ಇನ್ನು ಮುಂದೂ ಕೊಡಲು ತೀರ್ಮಾನಿಸಲಾಗಿದೆ. ಶೇಕಡ 100ರಷ್ಟು ರಫ್ತು ಪ್ರಧಾನ ಘಟಕಗಳಿಗೆ ಬೇಕಾಗುವ ಸುಂಕರಹಿತ ಕಚ್ಚಾ ಸರಕುಗಳ ವಸ್ತುಗಳ ಪಟ್ಟಿಯನ್ನೂ ವಿಸ್ತರಿಸಲಾಗಿದೆ. ಇದೇ ರೀತಿ REP [Replenishment Export Product] ಲೈಸೆನ್ಸನ್ನು ಕೂಡ ವಿಸ್ತರಿಸಲಾಗಿದ್ದು ವ್ಯಾಪಾರ ಹಾಗೂ ನಿರ್ಯಾತ ಸಂಸ್ಥೆಗಳಿಗೆ ತಮ್ಮ ರಫ್ತು ಕಾರ್ಯಕ್ರಮಗಳನ್ನು ಸರಿಹೊಂದಿಸಿಕೊಂಡು ಉತ್ತಮ ಸೇವೆ ನೀಡಲು ಅನುಕೂಲ ಮಾಡಿ ಕೊಡಲಾಗಿದೆ.

2] ಎಕ್ಸಿಂ ಬ್ಯಾಂಕ್ [Exim Bank]ನ ಸಾಲವ್ಯವಸ್ಥೆ. ಈ ಸಾಲ ವ್ಯವಸ್ಥೆ ಯಡಿಯಲ್ಲಿ ಆಮದುದಾರ ಎರಡರಿಂದ ಐದು ವರ್ಷದವರೆಗಿನ ಸಾಲವನ್ನು ಪಡೆಯ ಬಹುದಾಗಿದೆ. ಈ ಪ್ರಯೋಜನವನ್ನು ಅಭಿವೃದ್ಧಿಹೊಂದಿದ ದೇಶಗಳಲ್ಲಿರುವ ಆಮದು ದಾರರಿಗೂ ವಿಸ್ತರಿಸಲಾಗಿದ್ದು, ಎಕ್ಸಿಂ ಬ್ಯಾಂಕ್‌ನ ಲಾಭಾಂಶ ಕಡಿಮೆಯಾಗಿದೆ. ಅಲ್ಲದೆ ವಾಣಿಜ್ಯ ಬ್ಯಾಂಕ್‌ಗಳ ಲಾಭಾಂಶ ಜಾಸ್ತಿಯಾಗಿದ್ದು, ಎಕ್ಸಿಂ ಬ್ಯಾಂಕ್ ಮೂಲಕ ಭಾರತದ ರಫ್ತು ಪರಿಸ್ಥಿತಿ ಆಶಾದಾಯಕವಾಗಿ ಸುಧಾರಿಸುವಲ್ಲಿ ಸಫಲ ವಾಗುತ್ತಿದೆ.

## ರಫ್ತು ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಮಾಪನ :

ಮೇಲೆ ಗಮನಿಸಿದ ಕಾರ್ಯಕ್ರಮಗಳು ಭಾರತ ಸರ್ಕಾರದ ರಫ್ತು ಪ್ರಧಾನ ಉದಾರ ನೀತಿಯನ್ನು ಸೂಚಿಸುತ್ತವೆ. ಯಾವುದೇ ರಫ್ತು ಅಭಿವೃದ್ಧಿ ದೊಡ್ಡ ಪ್ರಮಾಣದಲ್ಲಿದ್ದರೆ, ಅದರಿಂದ ಆಂತರಿಕ ಆಮದು ಸರಕುಗಳ ಬೆಲೆಯನ್ನು ಸುಲಭದಲ್ಲಿ ಸುಧಾರಿಸಬಹುದು. ಉದಾಹರಣೆಗೆ ಕಚ್ಚಾ ಎಣ್ಣೆ, ಪೆಟ್ರೋಲ್ ಹಾಗೂ ಪೆಟ್ರೋಲಿಯಂ ಸರಕುಗಳನ್ನು ಕೊಳ್ಳಲು ಸಾಕಷ್ಟು ವಿದೇಶೀ ವಿನಿಮಯ ಬೇಕಾಗುತ್ತದೆ. [ಈ ಸರಕುಗಳು ಭಾರತದ ಒಟ್ಟು ಆಮದಿನ ಶೇಕಡಾ 30–40ರಷ್ಟಿವೆ]. ಅಲ್ಲದೆ ರಫ್ತು ಅಭಿವೃದ್ಧಿಗೆ ಬೇಕಾಗುವ ವಸ್ತುಗಳ ಉತ್ಪಾದನೆಗೆ ಸ್ಥಳೀಯ ಕೈಗಾರಿಕಾ ವಲಯಗಳಿಗೆ ಬೇಕಾಗುವ ಆಮದು ವಸ್ತುಗಳನ್ನು ಕೊಳ್ಳಲೂ ರಫ್ತು ಅಭಿವೃದ್ಧಿ ದೊಡ್ಡ ಪ್ರಮಾಣದಲ್ಲಿರಬೇಕಾಗುತ್ತದೆ. ಆದರೆ ರಫ್ತು ನಿಜವಾದ ಅರ್ಥದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕಾದರೆ, ರಫ್ತಿಗೆ ಬೇಕಾದ ಮೂಲ ಸೌಲಭ್ಯ [Infrastructure facility] ಒದಗಿಸಲು ಸಾಕಷ್ಟು ಬಂಡವಾಳ ಹೂಡಿಕೆ ಅಗತ್ಯವಾಗುತ್ತದೆ. ಈ ಮೂಲ ಸೌಲಭ್ಯಗಳ ಮೇಲಿನ ವೆಚ್ಚ ಮರುಕಳಿಸುವಂತಹದಾದ್ದರಿಂದ, ಅಂತರರಾಷ್ಟ್ರೀಯ ಮಾರುಕಟ್ಟೆಗಳು ಸ್ಥಳೀಯ ಹಾಗೂ ಪ್ರಾಪಂಚಿಕ Recession ಮತ್ತಿತರ ಕಾರಣಗಳಿಂದ ನಿರಾಸಕ್ತಿ ತೋರಿದರೆ ನಮ್ಮ ರಫ್ತು ಅಭಿವೃದ್ಧಿಯ ಎಲ್ಲ ಪ್ರಯತ್ನಗಳಿಗೂ ಆಶಾಭಂಗವಾಗುತ್ತವೆ. ಆದ್ದರಿಂದ ನಮ್ಮ ರಫ್ತಿನ ವಸ್ತುಗಳು ಮತ್ತು ಸೇವೆಗಳ ಮಿಶ್ರಣದಲ್ಲಿ ಉತ್ತಮ ಬದಲಾವಣೆ ಹಾಗೂ ಹೊಂದಾಣಿಕೆ ನಿರಂತರವಾಗಿರಬೇಕಾಗಿರುತ್ತದಲ್ಲದೆ, ಹೊಸ ಹೊಸ ಮಾರುಕಟ್ಟೆಗಳನ್ನು ನಮ್ಮ ರಫ್ತು ವಸ್ತುಗಳಿಗೆ ಹುಡುಕಬೇಕಾಗುತ್ತದೆ ; ಕೆಲವೊಮ್ಮೆ ರಫ್ತು–ಆಮದು ಅಂತರವನ್ನು ಸರಿತೂಗಿಸಲು ನಮ್ಮಲ್ಲೇ ಒಳಕಿಗೆ ಬೇಕಾಗುವ ವಸ್ತುಗಳನ್ನೂ ರಫ್ತು ಮಾಡಬೇಕಾಗುತ್ತದೆ. ಹಾಗಾದಾಗ ಈ ಎಲ್ಲ ಕ್ರಮಗಳೂ "ರಫ್ತು ಅಭಿವೃದ್ಧಿಯ ಸಾಮಾಜಿಕ ವೆಚ್ಚವೇನು ?" ಎಂಬ ಪ್ರಶ್ನೆಯನ್ನು ಮುಂದಿಡುತ್ತವೆ.

ಆದರೆ ನಮ್ಮ ರಫ್ತು ಅಭಿವೃದ್ಧಿಯ ಉದ್ದೇಶ ಬರೀ ರಫ್ತು–ಆಮದು ಅಂತರವನ್ನು ಸರಿಪಡಿಸುವುದಷ್ಟೆ ಆಗಬಾರದು. ಬದಲಾಗಿ, ಇದೊಂದು ನಮ್ಮ ಜನರ ವರಮಾನ ಹೆಚ್ಚಿಸುವ, ನಿರುದ್ಯೋಗ ಕಡಿಮೆ ಮಾಡುವ ಮತ್ತು ದೇಶದ ಸರ್ವತೋಮುಖ ಅಭಿವೃದ್ಧಿಯ ಸಾಧನವಾಗಬೇಕಾಗುತ್ತದೆ. ಇದನ್ನು ಮಾಡಲು (ನಮ್ಮ ದೇಶದ ವಿಸ್ತಾರ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಗಮನಿಸಿ ಹೇಳಬಹುದಾದರೆ) ನಮ್ಮ ದೇಶ ಆಮದು ಸರಕುಗಳ ಪ್ರಮಾಣವನ್ನು ಕಡಿಮೆ ಮಾಡಿ ನಮ್ಮ ದೇಶದಲ್ಲೇ ತಯಾರಾದ ವಸ್ತುಗಳನ್ನು ಉಪಯೋಗಿಸಿಕೊಂಡು ಅದರಿಂದ ರಫ್ತನ್ನೂ ಹೆಚ್ಚಿಸಲು ಪ್ರಯತ್ನಿಸಬಹುದು. ಆದರೆ ಈ ನಿಟ್ಟಿನಲ್ಲಿಯ ಯಾವುದೇ ಬದಲಾವಣೆ ಮುಚ್ಚಿದ ಆರ್ಥಿಕ ವ್ಯವಸ್ಥೆಯನ್ನು ಮತ್ತು GATT (General Agreement on Trade and and Tariff) ಹಾಗೂ UNCTAD (United Nations Conference on Trade and Development) ಗಳೆಡೆಯಲ್ಲಿ ಮಾಡಿಕೊಂಡ

ಒಪ್ಪಂದದ ಧಿಕ್ಕಾರವನ್ನು ಸೂಚಿಸುತ್ತದೆ. ಆದರೆ ಇಂದಿನ ಪರಸ್ಪರ ಅವಲಂಬನಾ ಸ್ಥಿತಿಯಲ್ಲಿ ಈ ನೀತಿ ಎಷ್ಟರ ಮಟ್ಟಿಗೆ ವ್ಯಾವಹಾರಿಕ ಎಂಬುದು ಚರ್ಚಾಸ್ಪದ ವಿಷಯವಾಗೇ ಉಳಿಯುತ್ತದೆ.

ಮತ್ತೊಂದು ಗಮನಾರ್ಹ ಅಂಶವೆಂದರೆ ಭಾರತ ಸರ್ಕಾರದ ಆಯ್ಕೆ ಸ್ವದೇಶೀ ಕೈಗಾರಿಕೆಗಳಿಗೆ ಎಷ್ಟರ ಮಟ್ಟಿನ ರಕ್ಷಣೆ ಕೊಡಬೇಕೆಂಬುದು. ಈ ಕಳೆದ ಮೂರು ದಶಕಗಳಲ್ಲಿ ನಮ್ಮ ಯೋಜನಾಕಾರರು ಈ ಎರಡು ವಿಪರೀತಗಳ ನಡುವೆ (Less or more Protectionism-ಹೆಚ್ಚು ಅಥವಾ ಕಡಿಮೆ ರಕ್ಷಣೆ) ಮಾಡುತ್ತಲೇ ಬಂದಿದ್ದಾರೆ. ಎಲ್ಲ ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳೂ ಈ ಎರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗುತ್ತದೆ. ಕೆಲವು ರಾಷ್ಟ್ರಗಳು (ದಕ್ಷಿಣ ಕೊರಿಯಾ, ಟೈವಾನ್ ಹಾಗೂ ಸಿಂಗಪುರ) ತುಂಬಾ ಉದಾರ ನೀತಿಯನ್ನು ಅನುಸರಿಸಿ ರಫ್ತು ಹೆಚ್ಚಿಸಿ ಉತ್ತಮ ಆರ್ಥಿಕ ಅಭಿವೃದ್ಧಿಯನ್ನು ಸಾಧ್ಯವಾಗಿಸಿರುವುದನ್ನು ; ಮತ್ತೆ ಕೆಲವು, ಉದಾಹರಣೆಗೆ ಭಾರತ, ರಾಷ್ಟ್ರಗಳು ಬಹಳ ಮುಂಜಾಗ್ರತಾನಿಲುವನ್ನು ಹೊಂದಿ ಅಭಿವೃದ್ಧಿಗಾಗಿ ಹೆಣಗುತ್ತಿರುವುದನ್ನೂ ನಾವು ಕಾಣುತ್ತೇವೆ. ಆದ್ದರಿಂದ ಈಗಿರುವ ಪ್ರಶ್ನೆ-ವಿಸ್ತಾರವಾದ, ಒಂದೇ ಸಮನೆ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ನಿರುದ್ಯೋಗವುಳ್ಳ ಭಾರತ ಏಷಿಯಾದ ಇತರ ನೆರೆಹೊರೆ ರಾಷ್ಟ್ರಗಳಂತೆ ಉದಾರವಾದ ನೀತಿಯನ್ನು ಅನುಸರಿಸಬೇಕೇ ಎನ್ನುವುದು.

ಈ ಎಲ್ಲ ಅಂಶಗಳನ್ನೂ ಗಮನಿಸಿದಾಗ ನಮಗೊಂದು ಹೊಸ ರಫ್ತು ನೀತಿಯ ಆಗತ್ಯ ಕೆಳಕಂಡ ಮೂರು ಪ್ರಮುಖ ಕಾರಣಗಳಿಗಾಗಿ ಮುಖ್ಯವಾಗುತ್ತದೆ.

ಅ) ಸ್ಥಳೀಯ ಉತ್ಪಾದನಾ ನೆಲೆಯನ್ನು ವಿಸ್ತರಿಸಲು ಮತ್ತು ಬಲಪಡಿಸಲು ಹಾಗೂ ಅದರಿಂದ ರಫ್ತು ಮಾಡಲು ಯೋಗ್ಯವಾದ ವಸ್ತುಗಳಲ್ಲಿ ಹೆಚ್ಚಳ ಸಾಧಿಸಲು ;

ಆ) ರಫ್ತು ಮಾರಾಟಕ್ಕೆ ಅವಶ್ಯಕವಾದ ಮೂಲ ಸೌಲಭ್ಯವನ್ನು ಅಭಿವೃದ್ಧಿಪಡಿಸಿ ಬಲಪಡಿಸಲು ; ಮತ್ತು

ಇ) ರಫ್ತು ಅಭಿವೃದ್ಧಿಗೊಳಿಸಲು ರಫ್ತು ಉತ್ತೇಜಕಗಳನ್ನು (Export incentives) ಒದಗಿಸಲು. ಈ ಮೂರು ಕಾರಣಗಳನ್ನು ಮುಂದಿಟ್ಟುಕೊಂಡು ರೂಪಿಸಲ್ಪಡುವ ರಫ್ತು ನೀತಿ ಭಾರತ ಸರಕಾರದಿಂದ ಹಲವು ದಿಟ್ಟ ಹೆಜ್ಜೆಯನ್ನು ನಿರೀಕ್ಷಿಸುತ್ತದೆ.

**ಹೊಸ ರಫ್ತು ನೀತಿಯನ್ನು ರೂಪಿಸಲು ಕೆಲವು ಸಲಹೆಗಳು :**

ರಫ್ತು ಅಭಿವೃದ್ಧಿಗಾಗಿ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳು ನಿರೀಕ್ಷಿತ ಫಲಕೊಡುವಲ್ಲಿ ಯಶಸ್ವಿಯಾಗಿಲ್ಲದಿರುವುದು ಮೇಲೆ ಚರ್ಚಿಸಿದ ಅಂಶಗಳಿಂದ ಸ್ಪಷ್ಟವಾಗುತ್ತವೆ. ಈ ಪರಿಸ್ಥಿತಿಯಲ್ಲಿ ನಮ್ಮ ರಫ್ತು ನೀತಿಯಲ್ಲಿಯ ಕೆಲವು ಸಮಸ್ಯೆಗಳನ್ನು ಸರಿಪಡಿಸಲು ಹೊಸ ನೀತಿಯ ಅವಶ್ಯಕತೆಯಿದೆ. ಇತ್ತೀಚಿನ ಹಲವು ಬದಲಾವಣೆಗಳು

ಮತ್ತು ಭಾರತ ಸರ್ಕಾರದ ಬಲವಾದ ಒತ್ತು ಆಶಾದಾಯಕವೆನಿಸಿದರೂ, ಕೆಳಗೆ ಕಾಣಿಸಿದ ಕೆಲವು ಅಂಶಗಳ ಬೆಳಕಿನಲ್ಲಿ ನೀತಿಯನ್ನು ಪುನರ್ ರೂಪಿಸುವುದು ನಮ್ಮ ರಫ್ತು ಅಭಿವೃದ್ಧಿಯ ಯಶಸ್ವಿಯ ದೃಷ್ಟಿಯಿಂದ ಹೆಚ್ಚು ತುರ್ತಿನದಾಗಿದೆ.

1) ಪಶ್ಚಿಮ ಏಶಿಯಾದ ಅನಿರ್ಬಂಧಿತ ರಾಷ್ಟ್ರಗಳು, ಆಗ್ನೇಯ ಏಶಿಯಾದ ಶ್ರೀಮಂತ ರಾಷ್ಟ್ರಗಳು, ಕೊಲ್ಲಿರಾಷ್ಟ್ರಗಳು, ಮತ್ತು ಪಶ್ಚಿಮ ಯುರೋಪಿನ ಕೆಲವು ರಾಷ್ಟ್ರಗಳು ನಮ್ಮ ರಾಷ್ಟ್ರದ ಟೀಗೆ ಭವಿಷ್ಯತ್ತಿನಲ್ಲಿ ತುಂಬ ಒಳ್ಳೆಯ ಸಾಮರ್ಥ್ಯವುಳ್ಳ ಮಾರುಕಟ್ಟೆಗಳು. ಆದ್ದರಿಂದ ಮಾರುಕಟ್ಟೆಯ ಸರ್ವೆ ಮತ್ತು ತದನಂತರದ ಮಾರಾಟ ಪ್ರಯತ್ನ ಬಹಳ ಆವಶ್ಯಕ.

2) REP (Replenishment Export Products) ರಹದಾರಿ ನೀಡಿಕೆಯನ್ನು ಬಿಗಿಗೊಳಿಸಬೇಕು ಹಾಗೂ ವಿಕೇಂದ್ರೀಕರಿಸಬೇಕು ; ಇದರಿಂದ ರಫ್ತುದಾರರ ಆಶಿತ ತಪ್ಪುವಂತೆ ನೋಡಿಕೊಳ್ಳಬೇಕು. ಜೊತೆಗೆ ಸಾರ್ವಜನಿಕ ವಲಯ ಸಂಸ್ಥೆಗಳಾದ PSU (Public Sector Units) STC (State Trading Corporation) ಮತ್ತು MMTC (Minerals and Metals Trading Corporation) ಗಳು ತಮ್ಮ ಒಟ್ಟುಗಟ್ಟಲೆ ಕೊಳ್ಳುವ ಸಾಮರ್ಥ್ಯ (Bulk Purchasing Power of Imports) ವನ್ನು ಉಪಯೋಗಿಸಿಕೊಂಡು ದೇಶಕ್ಕೆ ಹೆಚ್ಚು ಹೆಚ್ಚು ರಫ್ತು ಬೇಡಿಕೆಗಳನ್ನು ತರುವಂತೆ ಉತ್ತೇಜಿಸಬೇಕಾಗಿದೆ. ಕೆಲವೊಂದು ಆಯ್ಕೆಮಾಡಿದ ರಫ್ತು ಸಂಸ್ಥೆಗಳು Link-deal ಗಳನ್ನು ಹೊಂದಲು ಅವಕಾಶಮಾಡಿಕೊಡಬೇಕಾಗಿದೆ.

3) ನಿರಂತರವಾಗಿ ನಮ್ಮ ರಫ್ತನ್ನು ಹೆಚ್ಚಿಸುವ ಉತ್ತಮ ಸಾಮರ್ಥ್ಯವುಳ್ಳ ನಮ್ಮ ವ್ಯವಸಾಯ ವಲಯಕ್ಕೆ ಸಾಕಷ್ಟು ಉತ್ತೇಜನ ಕೊಟ್ಟು, ವ್ಯವಸಾಯೋತ್ಪನ್ನಗಳ ಹೆಚ್ಚಳಕ್ಕೆ ಕಾರಣವಾಗಬೇಕಾಗಿದೆ.

4) ರಫ್ತು ಉತ್ಪಾದನೆ, ರಫ್ತು ಮಾರುಕಟ್ಟೆ, Packaging ಯಂತ್ರಗಳು ಮುಂತಾದುವನ್ನು ಆಧುನೀಕರಿಸಲು ಹೊಸ ಯಾಂತ್ರಿಕತೆ ಮತ್ತಿತರ ಸೌಲಭ್ಯಗಳನ್ನು ನಮ್ಮ ವ್ಯವಸಾಯೋತ್ಪನ್ನ ವಲಯಕ್ಕೆ ಒದಗಿಸಬೇಕು. ಇವೇ ಅನುಕೂಲವನ್ನು ನಮ್ಮ ಸಣ್ಣ ಕೈಗಾರಿಕಾ ವಲಯಕ್ಕೂ ವಿಸ್ತರಿಸುವ ಅಗತ್ಯ ಬಹಳವಿದೆ.

5) ಆಮದು ಪ್ರತಿಸ್ಥಾನಕ್ಕೆ (Import Substitution) ಉತ್ತೇಜನ : ರಫ್ತು ಅಭಿವೃದ್ಧಿಗಾಗಿ ಮತ್ತು ಸ್ಥಳೀಯ ವಸ್ತುಗಳನ್ನು ಆಮದು ವಸ್ತುಗಳ ಬದಲಾಗಿ ಉಪಯೋಗಿಸುವಂತೆ ಮಾಡುವ ಸಲುವಾಗಿ ನಮ್ಮ ಆಮದು ವೆಚ್ಚದ ಶೇಕಡಾ 75ರಷ್ಟು ಕಚ್ಚಾ ಎಣ್ಣೆ, ಪೆಟ್ರೋಲಿಯಂ ಉತ್ಪನ್ನಗಳು, ಅಡಿಗೆ, ಎಣ್ಣೆ, ಕಬ್ಬಿಣೇತರ ಲೋಹ, ಆಹಾರ ದಿನಸಿ, ರಾಸಾಯನಿಕ ಗೊಬ್ಬರ ಮತ್ತು ಕೆಲವು ಕಬ್ಬಿಣ ಮತ್ತು ಉಕ್ಕಿನ ಸಾಮಗ್ರಿಕೊಳ್ಳಲು ವಿನಿಯೋಗಿಸುವಂತೆ ನೋಡಿಕೊಳ್ಳಬೇಕು.

6) ರಫ್ತು ಯೋಗ್ಯ ವ್ಯವಸಾಯೋತ್ಪನ್ನಗಳ ಉತ್ಪಾದನೆಗೆ ಬೇಕಾಗುವ ಯಂತ್ರ

ಗಳು ಮತ್ತಿತರ ವಸ್ತುಗಳ ಆಮದಿಗೆ ಬರುವ ಅರ್ಜಿಗಳಿಗೆ ಪ್ರಥಮ ಆದ್ಯತೆ ದೊರೆಯು ವಂತೆ ನೋಡಿಕೊಳ್ಳಬೇಕು. ಅಲ್ಲದೆ ಬಂಡವಾಳ ವಸ್ತುಗಳ ಆಮದಿಗೆ ಸಂಬಂಧಪಟ್ಟ ಕಾರ್ಯವಿಧಾನಗಳನ್ನು ಸಡಿಲಿಸಬೇಕು ಅಥವಾ ಅದನ್ನು ಕೈಬಿಡಬೇಕು. ಅರ್ಜಿ ನಮೂನೆ ಯನ್ನು ಆದಷ್ಟು ಸರಳಗೊಳಿಸಿ ಅವುಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ.

7) ಹಿಂದಿನಂತೆಯೇ ಇಂದೂ ಹೆಚ್ಚಿನ ವಸ್ತುಗಳು ರಫ್ತು ನಿಯಂತ್ರಣದ ಹೊರಗೇ ಉಳಿದಿವೆ. ಕಬ್ಬು ಮತ್ತು ಖಂಡಸಾರಿ ಸಕ್ಕರೆಯ ರಫ್ತಿನ ಮೇಲಿನ ನಿಷೇಧ ವನ್ನು ತೆಗೆಯಬೇಕು ಮತ್ತು ಈ ವಸ್ತುಗಳನ್ನು OGL (Open General Licence) ಪಟ್ಟಿಯಲ್ಲಿ ಸೇರಿಸಬೇಕು. ಬೆಣ್ಣೆ, ಕಡಲೇಬೀಜ, ಬೆಲ್ಲ, ಬಾರ್ಲಿ, ಕುಕ್ಕುಟ ಪಕ್ಷಿಗಳ ಆಹಾರಗಳನ್ನೂ OGL ಪಟ್ಟಿಗೆ ಸೇರಿಸಬೇಕು. ಹರಳೆಣ್ಣೆಯ ರಫ್ತನ್ನು ನಿಗದಿತ ಪ್ರಮಾಣದಲ್ಲಿ ನಿಲ್ಲಿಸುವುದು ಉಚಿತ.

8) ಹೆಚ್ಚು ಹೆಚ್ಚು ವಸ್ತು ಪ್ರದರ್ಶನಗಳನ್ನು ಹೊರ ದೇಶಗಳಲ್ಲಿ ವ್ಯವಸ್ಥೆ ಮಾಡಬೇಕು. ಈಗ ಅಬುದಾಬಿ ಮತ್ತು ಖಠ್ಮಂಡುವಿನಲ್ಲಿ ಭಾರತದ ವಸ್ತು ಪ್ರದರ್ಶನ ಗಳಿವೆ. ಈ ವಸ್ತು ಪ್ರದರ್ಶನಗಳಲ್ಲಿ brassware, EPN ವಸ್ತುಗಳು, ಚರ್ಮ ವಸ್ತುಗಳು, ದಂತದ ಸೂಕ್ಷ್ಮ ವಸ್ತುಗಳು, ಮರದ ವಸ್ತುಗಳು, ಅದ್ಭುತವಾದ ಕರಕುಶಲ ವಸ್ತುಗಳು, ಅಲಂಕಾರಿಕ ವಸ್ತುಗಳು ಮುಂತಾದ ಭಾರತೀಯ ವಸ್ತುಗಳನ್ನು ಪ್ರದರ್ಶಿಸ ಲಾಗಿದೆ. ಇದರಿಂದ ನಮ್ಮ ವಸ್ತುಗಳಿಗೆ ಬಹಳ ಒಳ್ಳೆಯ ಪ್ರಚಾರ ಸಿಕ್ಕಂತಾಗಿ, ರಫ್ತು ಹೆಚ್ಚು ಸಾಧ್ಯತೆಗಳಿವೆ.

9) ಸಾಂಬಾರು ದಿನಸಿಗಳ ರಫ್ತಿಗಾಗಿ ಕೊಚ್ಚಿನ್‌ನಲ್ಲಿರುವ Spices Export Promotion Council ನ್ನು ಸ್ಥಾಪಿಸಬೇಕಾಗಿದೆ. ಇದೇ ರೀತಿ ಅಪ್ಪಟ ರೇಷ್ಮೆಯ ಉತ್ಪಾದನೆ ಹಾಗೂ ರಫ್ತಿಗೆ ಮಾಡಬೇಕಾಗಿದೆ.

10) ಉತ್ಪಾದನಾ ಕ್ರಮ ಮತ್ತಿತರ ಚಟುವಟಿಕೆಗಳ ನವೀಕರಣ ಕಾರ್ಯಕ್ರಮ ಗಳನ್ನು ನಿಗದಿತ ವೇಳೆಯಲ್ಲಿ ಮುಗಿಸಲು ಕ್ರಮ ಕೈಗೊಂಡು, ನಮ್ಮ ಉತ್ಪಾದನಾ ಘಟಕಗಳು ಪ್ರಪಂಚದ ಬೇರೆ ದೇಶಗಳಲ್ಲಾಗುತ್ತಿರುವ ತಾಂತ್ರಿಕ ಬದಲಾವಣೆಗೆ ಹೊಂದಿ ಕೊಂಡು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಸಹಾಯ ಮಾಡಬೇಕಾಗಿದೆ.

**ಪರಿಸಮಾಪ್ತಿ :**

ನಮ್ಮ ದೇಶದ ಆಮದು ಸರಕಿನ ಅವಶ್ಯಕತೆಯನ್ನು ಪೂರೈಸಲು, ದೇಶದ BOP (Balance of Payments) ಯಲ್ಲಿ ಸಮತೋಲನ ಕಾಪಾಡಲು ರಫ್ತು ಅಭಿ ವೃದ್ಧಿ ಅತಿ ಅವಶ್ಯಕವೆಂಬುವನ್ನು ವಿಶದವಾಗಿ ಚರ್ಚಿಸಿದ್ದೇವೆ. ಆದರೆ ರಫ್ತು ಹೆಚ್ಚಿ ಸಲು ಈಗ ಮಾಡುತ್ತಿರುವಂತೆ ನಮಗೇ ಅಗತ್ಯವಾಗಿರುವ ವಸ್ತುಗಳ ಮತ್ತು ಕಚ್ಚಾ ವಸ್ತುಗಳ ರಫ್ತನ್ನು ಹೆಚ್ಚಿಸಬಾರದು. ಇಲ್ಲಿಯವರೆಗೆ ನಾವು ಪಾಲಿಸುತ್ತಿದ್ದ

Bilateral ವ್ಯಾಪಾರದಿಂದ ನಮಗೆ ಹೆಚ್ಚಿನ ಅನುಕೂಲವಿಲ್ಲದಿರುವುದನ್ನು ಮನಗಂಡು ಅವನ್ನು ನಿಲ್ಲಿಸುವುದು ಒಳ್ಳೆಯದು. ಒಂದೇ ಸಮನೆ ಇಳಿಯುತ್ತಿರುವ ರಫ್ತಿನ ಪ್ರಮಾಣ, ಏರುತ್ತಿರುವ ರಫ್ತು-ಆಮದು ಅಂತರ ಮತ್ತು ಸಾಲದ ಹೊರೆ ನಾವಿಂದು ಹೊಸ ರಫ್ತು ನೀತಿಯನ್ನು ಆದಷ್ಟು ತುರ್ತಾಗಿ ರೂಪಿಸುವಂತೆ ಮಾಡಿವೆ. ಹೊರದೇಶಗಳ ಸಹಾಯ ಎಷ್ಟೇ ಇದ್ದರೂ ನಮ್ಮ ಭವಿಷ್ಯದ ಆರ್ಥಿಕ ಬೆಳವಣಿಗೆಯನ್ನು ಚುರುಕುಗೊಳಿಸುವಲ್ಲಿ ವಿಫಲವಾಗುವುದರಿಂದ ನಾವಿಂದು ನಮ್ಮ ಕಾಲಮೇಲೆ ನಾವೇ ನಿಲ್ಲಬೇಕಾಗಿದೆ. ಆದ್ದರಿಂದ ನಾವಿಂದು ನಮ್ಮ ಹೊಸ ರಫ್ತು ನೀತಿಯನ್ನು ರೂಪಿಸಿ ಸಾಂಪ್ರದಾಯಿಕ ರಫ್ತಿನಿಂದ ವೇಗದ ರಫ್ತು ಅಭಿವೃದ್ಧಿಯೆಡೆಗೆ ಸಾಗಬೇಕಾಗಿದೆ. ನಮ್ಮ ಸದ್ಯದ ರಫ್ತು ಪರಿಸ್ಥಿತಿಯನ್ನು ಸ್ವಲ್ಪ ಕಾಲದಲ್ಲೇ ಸರಿಪಡಿಸಲಸಾಧ್ಯವಾದರೂ ದಿಟ್ಟ ಹೆಜ್ಜೆ ಹಾಗೂ ವೈಜ್ಞಾನಿಕ ರಫ್ತು ನೀತಿಯಿಂದ ಭವಿಷ್ಯತ್ತಿನಲ್ಲಿ ಸಾಲದ ಋಣವನ್ನು ಇಲ್ಲವಾಗಿಸಲು ಮತ್ತು ರಫ್ತಿನ ಸ್ಥಿತಿಯನ್ನು ಉತ್ತಮಪಡಿಸಿ ಸ್ಥಿರವಾಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ನಾವು ಮೇಲೆ ಕಾಣಿಸಿದ ದಾರಿಯಲ್ಲಿ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಆಸಕ್ತಿಗಳಿಗೆ ಕುಂದು ಬರದಂತೆ ಹೊಸ ರಫ್ತು ನೀತಿಯನ್ನು ರೂಪಿಸಿ ಮುಂದುವರಿಯಬೇಕಾಗಿದೆ.

## ಗ್ರಂಥಋಣ

1. Finance of Foreign Trade and Foreign-Exchange by B. K. Chaudhuri.
2. Foreign Exchange principles and practice by K. K. Andley.
3. Foreign Exchange and Financing Foreign Trade by S. K. Verghese.
4. Business and Government by Francis Cherunilum.
5. Government and business in India by Prof. A. Dasgupta, and Dr. N. K. Sen Gupta.
6. Principles of Foreign Exchange by A. K. Chatterjee.
7. ECGE-News Letter—April-June 1983, Vol. VIII. No. 12-14.
8. Department of Commercial Intelligence anp Statistics—Calcutta, Southern Economists May 1, 1979.

9. Commerce Annual 1979–Vol. 199, No. 3577, page 335.
10. Finance to Foreign Trade and Foreign Exchange by G. S. Lall.
11. The Economic Times, 21–12–83, Wednesday page–5, 17–3–84, Saturday page–1, 25–7–84 Wednesday pages 5, 7, 7, 9, 16–5–84 Wednesday page 5 x 7, 9–3–84, 23–4–84 Thursday page–8, 18–2–84, page–3 & 4, 7–8–84, 21–4–84.
12. Financial Express—11–4–84, page–10 & 12.
13. Hindu 9–3–84.

**ಪಟ್ಟಿ–1**

ಭಾರತದ ಆಮದು ಮತ್ತು ರಫ್ತಿನ ಸ್ಥಿತಿ

[1971–72 ರಿಂದ 1982–83ರ ವರೆಗೆ]

| ವರ್ಷ | ರಫ್ತು | ಆಮದು | [ರೂ. ಕೋಟಿಗಳಲ್ಲಿ] ವ್ಯಾಪಾರ ಸ್ಥಿತಿ |
|---|---|---|---|
| 1970–71 | 1535·16 | 1634·20 | –99.04 |
| 1971–72 | 1608·22 | 1824·54 | –216·32 |
| 1972–73 | 1970·83 | 1867·44 | +103·99 |
| 1973–74 | 2523·40 | 2955·37 | –431·97 |
| 1974–75 | 3228·83 | 4518·78 | –1189·95 |
| 1975–76 | 4042·81 | 5265·22 | –1222·41 |
| 1976–77 | 5145·77 | 5073·95 | +71·83 |
| 1977–78 | 5375·00 | 6069·00 | –694·00 |
| 1978–79 | 5717·00 | 6786·00 | –1069·00 |
| 1979–80 | 3372·00 | 4396·00 | –1024·00 |
| 1980–81 | 6710·71 | 12560·29 | –5849·58 |
| 1981–82 | 7796·18 | 13588·71 | –5792·52 |
| 1982–83 | 8637·68 | 14054·43 | –5416·75 |

ಮೂಲ :
1. Department of Commercial Intelligence and Statistics—Calcutta.
2. Commerce Annual 1979—Vol. 139, No. 3577, page 335.
3. ECGE & S—Calcutta.

## ಯಾಂತ್ರೀಕೃತ ಹಾಲು

ಈಚೆಗೆ ಹಾಲಿನ ಬೆಲೆ ಬಹಳಷ್ಟು ಏರಲು ಕಾರಣಗಳೇನು ?

ಹಿಂದಿನ ಕಾಲದಲ್ಲಿ ಮನೆಯೊಡತಿ ಹಸುಗಳಿಂದ ಹಾಲು ಕರೆಯುತ್ತಿದ್ದಳು ; ಮಗಳು ಹಾಲನ್ನು ಬೋಗುಣಿಯಲ್ಲಿಟ್ಟು ಕೆನೆಯನ್ನು ಬೇರ್ಪಡಿಸುತ್ತಿದ್ದಳು ; ಕುಟುಂಬದಲ್ಲಿ ಮಗನೊಬ್ಬನು ಮಾರುಕಟ್ಟೆಯಲ್ಲಿ ಆ ಹಾಲನ್ನು ಮಾರಲು ಕೊಂಡೊಯ್ಯುತ್ತಿದ್ದನು. ಆದರೆ ಈಗ ಪಶುಸಂಗೋಪನಾ ಇಲಾಖೆ ಕಾರ್ಯಪ್ರವೃತ್ತವಾಗಿದೆ ; ದನಗಳ ದೊಡ್ಡಿಯನ್ನು ಕ್ರಿಮಿನಾಶಕಗಳಿಂದ ರಕ್ಷಿಸಲಾಗಿದೆ, ಹಾಲನ್ನು ಏಕರೂಪಗೊಳಿಸಲಾಗಿದೆ; ಸ್ವಯಂಚಾಲಿತ ವಾಹನಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದೆ; ಹಾಲಿನ ಕೇಂದ್ರಗಳನ್ನು ಸಹಕಾರ ತತ್ವಗಳ ಮೇಲೆ ಕೇಂದ್ರೀಕರಿಸಲಾಗಿದೆ ; ಹಾಲು ಉತ್ಪಾದಕರು ಒಕ್ಕೂಟಗಳನ್ನು ಏರ್ಪಡಿಸಿಕೊಂಡಿದ್ದಾರೆ ; ಹಾಲು ರಕ್ಷಣೆಗೆ ಸರ್ಕಾರದ ನೆರವು ದೊರಕುತ್ತಿದೆ ; ರಾಜಕೀಯ ಧುರೀಣರು ಈ ಪರಿಸ್ಥಿತಿಯ ಲಾಭ ಪಡೆಯುತ್ತಿದ್ದಾರೆ. ಇವೆಲ್ಲದರ ಫಲಿತಾಂಶ ? ಭಾರತೀಯ ಗ್ರಾಹಕನು ಈ ವ್ಯವಸ್ಥೆಗೆ ಬಲಿಯಾಗಿದ್ದಾನೆ.

ಮಾಜಿ ಉಪರಾಷ್ಟ್ರಪತಿ ಎಂ. ಹಿದಾಯತುಲ್ಲಾ
(ರೀಡರ್ಸ್ ಡೈಜೆಸ್ಟ್ ಕೃಪೆಯಿಂದ)

ಎಚ್. ಎನ್. ಆನಂದರಾವ್
ಜಿ. ಕುಮಾರಪ್ಪ

# ಭಾರತ ರಾಷ್ಟ್ರೀಯ ಗ್ರಂಥಸೂಚಿ

ಗ್ರಂಥಗಳು ನಾಡಿನ ಸಾಂಸ್ಕೃತಿಕ ರಾಯಭಾರಿಗಳು. ಒಂದು ದೇಶದ ಕಲೆ, ಇತಿಹಾಸ, ಸಂಸ್ಕೃತಿ, ವೈಜ್ಞಾನಿಕ ಬೆಳವಣಿಗೆ, ಶೈಕ್ಷಣಿಕ ಪ್ರಗತಿ ಇತ್ಯಾದಿಗಳನ್ನು ಆ ನಾಡಿನಲ್ಲಿ ಪ್ರಕಟವಾಗುವ ಕೃತಿಗಳ ಆಧಾರದ ಮೇಲೆ ಗುರುತಿಸಬಹುದು. ಜಗತ್ತಿನಲ್ಲಿ ಪ್ರತಿವರ್ಷ ಇಪ್ಪತ್ತೆರಡು ಲಕ್ಷಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತವೆ. ಭಾರತ ದೇಶ ಒಂದರಲ್ಲಿಯೇ ಸುಮಾರು ಹದಿನೈದು ಸಾವಿರದಷ್ಟು ಗ್ರಂಥಗಳು ಪ್ರಕಟವಾಗುತ್ತಿವೆ. ಈ ಎಲ್ಲಾ ಗ್ರಂಥಗಳನ್ನು ಯಾವುದೇ ಒಂದು ಗ್ರಂಥಾಲಯ ಹೊಂದುವುದು ಕಷ್ಟ ಸಾಧ್ಯದ ಕೆಲಸ. ಹಾಗೆಯೇ ತಮಗೆ ಆಸಕ್ತಿ ಇರುವ ವಿಷಯದ ಬಗೆಗೆ ಪ್ರಕಟವಾಗುವ ಕೃತಿಗಳ ವಿವರಗಳನ್ನು ತಿಳಿಯುವುದೂ ಕಷ್ಟದ ಕೆಲಸ. ಇಂತಹ ಸಂದರ್ಭಗಳಲ್ಲಿ ಗ್ರಂಥಸೂಚಿಗಳು ನೆರವಿಗೆ ಬರುತ್ತವೆ. ಗ್ರಂಥಸೂಚಿಯೆಂದರೆ, "ಗ್ರಂಥದ ಹೆಸರು, ಕರ್ತೃ, ಪ್ರಕಾಶನ ಸ್ಥಳ, ಪ್ರಕಾಶಕನ ಹೆಸರು, ಪ್ರಕಾಶನ ವರ್ಷ, ಬೆಲೆ, ಪುಟಸಂಖ್ಯೆ, ಅಳತೆ ಇತ್ಯಾದಿ ವಿವರಗಳನ್ನು ಯಾವುದಾದರೊಂದು ಕ್ರಮಬದ್ಧ ಜೋಡಣೆಯಲ್ಲಿ ನೀಡುವ ಗ್ರಂಥ". ಈ ಗ್ರಂಥಸೂಚಿಗಳು ಯಾವುದಾದರೂ ವ್ಯಕ್ತಿ, ಲೇಖಕ, ವಿಷಯ, ಅಥವಾ ಪ್ರದೇಶ ಇತ್ಯಾದಿಗಳಿಗೆ ಸೀಮಿತಗೊಂಡಿರಬಹುದು. ಹೀಗೆ ಗ್ರಂಥಸೂಚಿಗಳು ನೀಡುವ ಮಾಹಿತಿಯ ಆಧಾರದ ಮೇಲೆ ಅವುಗಳನ್ನು ವೈಯಕ್ತಿಕ, ಸಾಮಾನ್ಯ, ವಿಷಯಾವಾರು ಇತ್ಯಾದಿ ಬಗೆಗಳಾಗಿ ವಿಂಗಡಿಸಬಹುದು.

"ಯಾವುದೇ ಒಂದು ದೇಶದಲ್ಲಿ ಪ್ರಕಟವಾಗುವ ಎಲ್ಲಾ ಬಗೆಯ ಗ್ರಂಥಗಳ ವಿವರಗಳನ್ನು ಒದಗಿಸುವ ಗ್ರಂಥಸೂಚಿಗಳಿಗೆ ರಾಷ್ಟ್ರೀಯ ಗ್ರಂಥಸೂಚಿಗಳೆಂದು ಹೆಸರು." ಈ ಬಗೆಯ ಗ್ರಂಥಸೂಚಿಗಳು ಕೇವಲ ಪುಸ್ತಕಗಳನ್ನಷ್ಟೇ ಅಲ್ಲದೆ ನಕಾಶೆ, ಭೂಪಟ, ಧ್ವನಿಸುರಳಿ [Tapes], ದೃಕ್ ಶ್ರವಣ ಮಾಧ್ಯಮಗಳು ಇತ್ಯಾದಿ ಮಾಹಿತಿ ಮೂಲಗಳ [Information Sources] ವಿವರಗಳನ್ನೂ ಒಳಗೊಳ್ಳಬಹುದು.

1862ರ ಸುಮಾರಿನಿಂದ ಭಾರತದಲ್ಲಿ ಗ್ರಂಥಸೂಚಿಗಳ ರಚನೆ ಆರಂಭವಾಯಿತಾ

ದರೂ ರಾಷ್ಟ್ರೀಯ ಗ್ರಂಥಸೂಚಿಯ ಬಗೆಗೆ ಆಸಕ್ತಿ ಮೂಡಲು ಮತ್ತೆ ಕೆಲವು ವರ್ಷಗಳವರೆಗೆ ಕಾಯಬೇಕಾಯಿತು. ಡಾ. ಎಸ್. ಆರ್. ರಂಗನಾಥನ್‌ರವರು 1942ರಲ್ಲಿ ನಡೆದ ಭಾರತ ಗ್ರಂಥಾಲಯ ಸಂಘಟನೆಯ ಸಮ್ಮೇಳನದಲ್ಲಿ ಮಾತನಾಡುತ್ತಾ ರಾಷ್ಟ್ರೀಯ ಗ್ರಂಥಸೂಚಿಯ ನಿರ್ಮಾಣಕ್ಕಾಗಿ ಒಂದು 'ಖಾಯಂ ಸಂಘಟನೆ'ಯ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದರು. 1944ರಲ್ಲಿ ಜೈಪುರದಲ್ಲಿ ನಡೆದ ಆರನೆಯ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದಲ್ಲಿ ಜೆ.ಸಿ. ರಾಲೋ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ರಂಗನಾಥನ್‌ರವರ ಮೇಲಿನ ಹೇಳಿಕೆಯ ಬಗ್ಗೆ ಮತ್ತೊಮ್ಮೆ ನಾಡಿನ ಗಮನ ಸೆಳೆದರು.

ಭಾರತದಲ್ಲಿ ಪ್ರಕಟವಾಗುವ ಎಲ್ಲಾ ಭಾಷೆಯ ಗ್ರಂಥಗಳೂ ಒಂದೇ ಕಡೆ ದೊರೆಯುವಂತೆ ಆಗುವವರೆಗೆ ಭಾರತ ರಾಷ್ಟ್ರೀಯ ಗ್ರಂಥಸೂಚಿಯ ರಚನೆ ಸಾಧ್ಯವಾಗುವಂತಿರಲಿಲ್ಲ. 1954ರಲ್ಲಿ ಜಾರಿಗೊಳಿಸಿದ ಗ್ರಂಥ ವಿತರಣ ಕಾಯಿದೆ [Delivery of Books Act 1954] ಯನ್ವಯ ಕಲ್ಕತ್ತದ ರಾಷ್ಟ್ರೀಯ ಗ್ರಂಥಾಲಯ ಭಾರತದಲ್ಲಿ ಪ್ರಕಟವಾಗುವ ಎಲ್ಲಾ ಭಾಷೆಯ, ಎಲ್ಲಾ ಗ್ರಂಥಗಳನ್ನು ಉಚಿತವಾಗಿ ಪಡೆಯುವ ಸೌಲಭ್ಯವನ್ನು ಪಡೆಯಿತು. ಇದರಿಂದ ದೇಶದ ಎಲ್ಲಾ ಭಾಷೆಯ ಗ್ರಂಥಗಳೂ ಒಂದೆಡೆ ದೊರೆಯುವಂತಾಯಿತು. ಭಾರತ ರಾಷ್ಟ್ರೀಯ ಗ್ರಂಥಸೂಚಿಯ [ಭಾ.ರಾ.ಗ್ರಂ.] ರಚನೆಗೆ ಇದು ಭದ್ರ ಬುನಾದಿಯನ್ನೊದಗಿಸಿತು.

1955ರಲ್ಲಿ ಭಾರತ ಸರಕಾರ ಭಾ.ರಾ.ಗ್ರಂ.ಯ ರೂಪುರೇಷೆಗಳನ್ನು ನಿರ್ಧರಿಸಲು ಶ್ರೀ ಬಿ. ಎಸ್. ಕೇಶವನ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಸಲಹೆಯ ಮೇರೆಗೆ ಕೇಂದ್ರೀಯ ಪರಾಮರ್ಶನ ಗ್ರಂಥಾಲಯ [Central Reference Library]ವು ರಾಷ್ಟ್ರೀಯ ಗ್ರಂಥಾಲಯದ ಆವರಣದಲ್ಲಿ ಅಸ್ತಿತ್ವಕ್ಕೆ ಬಂದಿತು ಮತ್ತು ಭಾ.ರಾ.ಗ್ರಂ.ಯ ರಚನೆಯ ಕೆಲಸವನ್ನು ವಹಿಸಿಕೊಂಡಿತು.

## ಪ್ರಾಯೋಗಿಕ ಸಂಚಿಕೆಗಳು

ಬಿ. ಎಸ್. ಕೇಶವನ್ ಸಮಿತಿಯ ಸಲಹೆಗಳಿಗನುಸಾರವಾಗಿ ಈ ಗ್ರಂಥಾಲಯವು ರೋಮನ್ ಲಿಪಿಯಲ್ಲಿ ಎರಡು ಪ್ರಾಯೋಗಿಕ ಸಂಚಿಕೆಗಳನ್ನು — ಒಂದು ದ್ವಿಬಿಂದು ವರ್ಗೀಕರಣವಲ್ಲಿ ಮತ್ತೊಂದು ಡ್ಯೂಯಿ ದಶಮಾನ ವರ್ಗೀಕರಣದಲ್ಲಿ — ಪ್ರಕಟಿಸಿ, ವಿಮರ್ಶೆಗಾಗಿ ದೇಶ ವಿದೇಶಗಳ ವಿದ್ವಾಂಸರಿಗೆ ಕಳುಹಿಸಿ ಕೊಟ್ಟಿತು. ಭಾರತದ ಗ್ರಂಥಸೂಚಿಯ ನಿರ್ಮಾಣವಲ್ಲಿ ಮೊದಲ ಮತ್ತು ಪ್ರಮುಖ ಪ್ರಯತ್ನವಾದ ಈ ಗ್ರಂಥಸೂಚಿಯನ್ನು ದೇಶ ವಿದೇಶಗಳ ವಿದ್ವಾಂಸರು ಸ್ವಾಗತಿಸಿದರಾದರೂ, ಈ ಸಂಚಿಕೆಗಳ ಪರವಾಗಿ ಮತ್ತು ವಿರೋಧವಾಗಿ ಅನೇಕ ವಿಮರ್ಶೆಗಳು ಬಂದವು. ಅವೆಲ್ಲವುಗಳಲ್ಲಿ ಬಹಳ ಮುಖ್ಯವಾದುದು ಭಾರತ ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥನ್‌ರವರದು. ಭಾ.ರಾ.ಗ್ರಂ.ಯ ಪ್ರಕಟಣೆಯ ಸಾಹಸವನ್ನು ಅವರು

ಸ್ವಾಗತಿಸಿದರಾದರೂ, ಅದರ ರೋಮನ್ ಲಿಪಿಯ ಬಗ್ಗೆ ತಮ್ಮ ಆಕ್ಷೇಪಣೆಯನ್ನು ಸೂಚಿಸಿದರು. ಭಾರತದ ಪ್ರತಿಯೊಂದು ಭಾಷೆಗೂ ಆಯಾ ಭಾಷೆಯಲ್ಲಿಯೇ ಗ್ರಂಥ ಸೂಚಿ ಪ್ರಕಟವಾಗಬೇಕೆನ್ನುವುದು ರಂಗನಾಥನ್‌ರವರ ನಿಲುವಾಗಿದ್ದಿತು.

## ಗ್ರಂಥಸೂಚಿಯ ರೂಪುರೇಷೆ

ಶೈಲಿ, ಜೋಡಣೆ, ತಂತ್ರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೇವಲ ಕೆಲವು ಮುಖ್ಯ ಬದಲಾವಣೆಗಳನ್ನುಳಿದು, ಉಳಿದಂತೆ ಭಾ.ರಾ.ಗ್ರಂ.ಯು ಬ್ರಿಟಿಷ್ ರಾಷ್ಟ್ರೀಯ ಗ್ರಂಥ ಸೂಚಿಯನ್ನು ಅನುಸರಿಸುತ್ತದೆ.

## ವ್ಯಾಪ್ತಿ

ಭಾ.ರಾ.ಗ್ರಂ.ಯ ಮುಖ್ಯ ಉದ್ದೇಶ ಭಾರತ ಸಂವಿಧಾನದಲ್ಲಿ ಗುರುತಿಸಿರುವ ಹದಿಮೂರು ಭಾರತೀಯ ಭಾಷೆಗಳು, ಅಸ್ಸಾಮಿ, ಉರ್ದು, ಒರಿಯಾ, ಕನ್ನಡ, ಗುಜರಾತಿ, ತಮಿಳು, ತೆಲುಗು, ಪಂಜಾಬಿ, ಬಂಗಾಲಿ, ಮರಾಠಿ, ಮಲಯಾಳಂ, ಸಂಸ್ಕೃತ ಮತ್ತು ಹಿಂದಿ, ಹಾಗೂ ಇಂಗ್ಲೀಷಿನಲ್ಲಿ ಪ್ರಕಟವಾಗುವ ಗ್ರಂಥಗಳ ವಿವರಗಳನ್ನು ನೀಡುವುದು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಾಗೂ ಸ್ವಾಯತ್ತ ಸಂಘ ಸಂಸ್ಥೆಗಳ ಪ್ರಕಟಣೆಗಳನ್ನು ಸಹ ಇದು ಒಳಗೊಳ್ಳುತ್ತದೆ. ಆದರೆ ಭೂಪಟಗಳು, ಧ್ವನಿ ಸುರಳಿಗಳು, ಪಠ್ಯಪುಸ್ತಕಗಳ ಮಾರ್ಗದರ್ಶಿಗಳು, ವ್ಯಾಪಾರೀ ಸಂಬಂಧದ ಸೂಚಿಗಳು ಮತ್ತು ಕೈಪಿಡಿಗಳು, ಕಂಪನಿ ರಿಪೋರ್ಟುಗಳು ಮತ್ತು ಟೆಲಿಫೋನ್ ಡೈರಕ್ಟರಿಗಳನ್ನು ಇದು ಒಳಗೊಳ್ಳುಗೊಳ್ಳುವುದಿಲ್ಲ.

## ಲಿಪಿ ಮತ್ತು ಭಾಷೆ

ಭಾರತ ಬಹುಭಾಷೀಯ ಮತ್ತು ಬಹುಲಿಪೀಯ ರಾಷ್ಟ್ರ. ಇಂತಹ ಬಹುಭಾಷಾ ದೇಶದಲ್ಲಿ ಗ್ರಂಥಸೂಚಿ ಯಾವ ಭಾಷೆಯಲ್ಲಿರಬೇಕೆನ್ನುವುದು ಬಹಳ ಮುಖ್ಯವಾದ ಸಮಸ್ಯೆಯಾಗಿದ್ದಿತು. ಒಂದೇ ಕಡೆ ಈ ಗ್ರಂಥಸೂಚಿ ಪ್ರಕಟವಾಗಬೇಕಾದ ಕಾರಣ ಮುದ್ರಣದಲ್ಲಿನ ತೊಂದರೆ, ದೇಶೀಯ ಮತ್ತು ವಿದೇಶೀಯ ವಿದ್ವಾಂಸರು ಮತ್ತು ಆಸಕ್ತರ ಬಳಕೆಗೆ ಅನುಕೂಲ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ರೋಮನ್ ಲಿಪಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಬಳಸಲಾಯಿತು. ಉಚ್ಚಾರಣಾ ಸಂಕೇತಗಳನ್ನು (Diacritical Marks) ಲೇಖಕ ಮತ್ತು ಶೀರ್ಷಿಕೆಗಳನ್ನು ರೋಮನ್ ಲಿಪಿಯಲ್ಲಿಯೂ, ವಿವರಗಳು ಮತ್ತು ಟಿಪ್ಪಣಿಗಳನ್ನು ಇಂಗ್ಲೀಷ್ ಭಾಷೆಯಲ್ಲಿಯೂ ನೀಡಲಾಗುತ್ತದೆ.

## ವರ್ಗೀಕರಣ ಮತ್ತು ಜೋಡಣೆ

ಭಾ.ರಾ.ಗ್ರಂ.ಯಲ್ಲಿ ಮೂರು ಭಾಗಗಳಿವೆ. ವರ್ಗೀಕೃತ ಭಾಗ (Classified

Part), ಲೇಖಕ ಮತ್ತು ಶೀರ್ಷಿಕೆ ಸೂಚಿಕೆ (Author and Title Index) ಮತ್ತು ವಿಷಯ ಸೂಚಿಕೆ (Subject Index).

ಆರಂಭದಲ್ಲಿ ಭಾ.ರಾ.ಗ್ರಂ.ಯು, ಸಾಮಾನ್ಯ ಪ್ರಕಟಣೆಗಳು ಹಾಗೂ ಸರಕಾರೀ ಪ್ರಕಟಣೆಗಳು ಎನ್ನುವ ಎರಡು ಭಾಗಗಳಾಗಿ ಪ್ರಕಟವಾಗುತ್ತಿದ್ದಿತು. ಆದರೆ ಈ ಬಗೆಯ ವರ್ಗೀಕರಣ ಕೃತಕವಾದುದು ಮತ್ತು ಪರಾಮರ್ಶೆಗೆ ಕ್ಲಿಷ್ಟಕರ ಎನ್ನುವ ಕಾರಣದಿಂದ 1973 ರಿಂದ ಈ ಎರಡೂ ಭಾಗಗಳನ್ನು ಒಗ್ಗೂಡಿಸಲಾಯಿತು.

### ವರ್ಗೀಕೃತ ಭಾಗ

ವರ್ಗೀಕೃತ ಭಾಗ ಗ್ರಂಥಸೂಚಿಯ ಪ್ರಮುಖ ಭಾಗವಾಗಿದೆ. ಗ್ರಂಥಗಳ ಸಂಪೂರ್ಣ ವಿವರಗಳನ್ನು ಇಲ್ಲಿ ನೀಡಲಾಗುತ್ತದೆ. ಪ್ರತಿಯೊಂದು ಗ್ರಂಥದ ಆಲೇಖವೂ, ಸಾಮಾನ್ಯವಾಗಿ ಲೇಖಕನ ಹೆಸರು, ಹುಟ್ಟಿದ ವರ್ಷ, ಪೂರ್ಣ ಶೀರ್ಷಿಕೆ, ಆವೃತ್ತಿ, ಪ್ರಕಟಣೆಯ ಸ್ಥಳ, ಪ್ರಕಾಶನದ ಹೆಸರು, ಪ್ರಕಟಣೆಯ ತಿಂಗಳು ಮತ್ತು ವರ್ಷ, ಪುಟಸಂಖ್ಯೆ, ಚಿತ್ರ, ನಕ್ಷೆ, ನಕಾಶೆಗಳಿದ್ದರೆ ಅವುಗಳ ವಿವರ, ಪುಸ್ತಕದ ಆಕೃತಿ, ರಟ್ಟು, ಬೆಲೆ, ಪುಸ್ತಕ ಮಾಲೆ ಇತ್ಯಾದಿ ವಿವರಗಳನ್ನು ಒಳಗೊಳ್ಳುತ್ತವೆ. ಇನ್ನು ಹೆಚ್ಚಿನ ವಿವರ ಆವಶ್ಯಕವೆನ್ನಿಸಿದಲ್ಲಿ ಆಲೇಖದ ಕೆಳಗೆ ಇಂಗ್ಲೀಷಿನಲ್ಲಿ ಸಣ್ಣ ಟಿಪ್ಪಣಿಯನ್ನು ನೀಡಲಾಗುತ್ತವೆ. ಈ ಮೇಲಿನ ಯಾವುದೇ ಮಾಹಿತಿ ದೊರೆಯುವದೆ ಹೋದಲ್ಲಿ ಆ ಸ್ಥಳದಲ್ಲಿ ಖಾಲಿ ಚೌಕಾವರಣವನ್ನು ನೀಡಲಾಗುತ್ತದೆ. ಆಲೇಖದ ಕೆಳಗೆ ಎಡ ಮೂಲೆಯಲ್ಲಿ ಪುಸ್ತಕ ಯಾವ ಭಾಷೆಯಲ್ಲಿದೆ ಎನ್ನುವುದನ್ನು ಸೂಚಿಸುವ ಸಂಕೇತಾಕ್ಷರವನ್ನು, ಬಲಮೂಲೆಯಲ್ಲಿ ದ್ವಿಬಿಂದು ವರ್ಗೀಕರಣ ಸಂಖ್ಯೆಯನ್ನು ನೀಡಲಾಗುತ್ತಿದೆ.

ಆಲೇಖಗಳು ರೋಮನ್ ಲಿಪಿಯಲ್ಲಿ ಇರುವುದರಿಂದ ಒಂದೇ ವಿಷಯದ ಮೇಲೆ ಪ್ರಕಟವಾಗುವ ಎಲ್ಲಾ ಭಾಷೆಯ ಗ್ರಂಥಗಳನ್ನು ಒಂದೇ ಕಡೆ ಜೋಡಿಸಲು ಅನುಕೂಲವಾಗಿದೆ. ಅಲ್ಲದೆ ಲೇಖಕರ ನಾಮ ನಿರ್ದೇಶನ (Standardize) ಮಾಡಲು ಸಹ ಇದು ಬಹಳಷ್ಟು ಸಹಕಾರಿಯಾಗಿದೆ. ಗ್ರಂಥಗಳನ್ನು ಡ್ಯೂಯಿ ದಶಮಾನ ಪದ್ಧತಿಯ 16ನೇ ಆವೃತ್ತಿಗೆ ಅನುಸಾರವಾಗಿ ವರ್ಗೀಕರಿಸಿ ಜೋಡಿಸಲಾಗುತ್ತಿದೆ.

### ಲೇಖಕ ಶೀರ್ಷಿಕೆ ಸೂಚಿಕೆ

1973 ರವರೆಗೆ ಲೇಖಕ ಶೀರ್ಷಿಕೆ ಮತ್ತು ವಿಷಯ ಸೂಚಿಕೆಗಳನ್ನು ಒಂದೇ ಕಡೆ, ವರ್ಣಾನುಕ್ರಮದಲ್ಲಿ ನೀಡಲಾಗುತ್ತಿತ್ತು. ಆದರೆ 1974 ರಿಂದ ಈಚೆಗೆ ಹೆಚ್ಚು ಸುಲಭವಾಗಲೆನ್ನುವ ದೃಷ್ಟಿಯಿಂದ ವಿಷಯ ಸೂಚಿಕೆಯನ್ನು ಬೇರೆಯಾಗಿ ನೀಡಲಾಗುತ್ತಿದೆ.

ಲೇಖಕ ಶೀರ್ಷಿಕೆ ಸೂಚಿಕೆಯಲ್ಲಿ ಲೇಖಕ, ಸಹಲೇಖಕ, ಸಂಪಾದಕ, ಅನುವಾದಕ, ಶೀರ್ಷಿಕೆ, ಪುಸ್ತಕ ಮಾಲೆಗಳನ್ನು ವರ್ಣಾನುಕ್ರಮದಲ್ಲಿ ನೀಡಲಾಗುತ್ತಿವೆ

ಮತ್ತು ಈ ಭಾಗದ ಲೇಖಕ ಆಲೇಖಗಳನ್ನು ವರ್ಗೀಕೃತ ಭಾಗದ ಮುಖ್ಯ ಆಲೇಖಗಳನ್ನು ಡ್ಯೂಯಿ ದಶಮಾನ ವರ್ಗೀಕರಣ ಸಂಖ್ಯೆಯ ಮೂಲಕ ಜೋಡಿಸಲಾಗುತ್ತಿದೆ. ಉಳಿದ ಆಲೇಖಗಳನ್ನು ಲೇಖಕ ಆಲೇಖನೊಂದಿಗೆ ಜೋಡಿಸಲಾಗುವುದು.

### ವಿಷಯ ಸೂಚಿಕೆ

ವಿಷಯ ಸೂಚಿಕೆಯಲ್ಲಿ ಆಲೇಖಗಳನ್ನು ಸರಣಿ ಪದ್ಧತಿಯಲ್ಲಿ ಪಡೆಯಲಾಗುತ್ತದೆ. (Chain procedure) "ಈ ಬಗೆಯ ಸೂಚಿಕೆಯು ಎರಡು ಮುಖ್ಯ ಅಂಶಗಳನ್ನು ಒಳಗೊಳ್ಳುತ್ತದೆ. (i) ವರ್ಗೀಕರಣದ ಸ್ಪಷ್ಟತೆ ಮತ್ತು (ii) ವರ್ಗ ವಿಶ್ಲೇಷಣೆಯ ಜ್ಞಾನ, (Knowledge of Facet analysis). ಇದರಿಂದ ಯಾವುದೇ ಭಾಷೆಯ ಮಿತಿಗೆ ಒಳಗಾಗದೆ ವಿಶಾಲ ತಳಹದಿಯ ಮೇಲೆ ವರ್ಗೀಕರಣ ಮಾಡಲು ಸಹಾಯವಾಗುತ್ತದೆ."

### ಪ್ರಕಟಣ ಕಾಲ

1958 ರಿಂದ 1963 ರವರೆಗೆ ಭಾ.ರಾ.ಗ್ರಂ.ಯು ತ್ರೈಮಾಸಿಕವಾಗಿ ಪ್ರಕಟವಾಗುತ್ತಿದ್ದಿತು. 1964ರ ಜನವರಿ ತಿಂಗಳಿನಿಂದ ಇದು ಮಾಸಿಕವಾಗಿ ಪ್ರಕಟವಾಗುತ್ತಿದೆ. ಆದರೆ 1978 ರಿಂದ 1983 ರವರೆಗೆ ಇದು ಕೇವಲ ವಾರ್ಷಿಕ ಸಂಚಿಕೆಯಾಗಿ ಪ್ರಕಟವಾಗಿದೆ. 1984ರ ಜನವರಿಯಿಂದ ಇದು ಮತ್ತೆ ಮಾಸಿಕವಾಗಿ ಪ್ರಕಟವಾಗುತ್ತಿದೆ. ಅಲ್ಲದೆ, ಪ್ರತಿವರ್ಷ ವಾರ್ಷಿಕ ಸಂಚಿತ ಸಂಪುಟಗಳನ್ನು (Annual cumulation) ಪ್ರಕಟಿಸಲಾಗುತ್ತಿದೆ. 1958–62ರ ಭಾ.ರಾ.ಗ್ರಂ.ಯ ಸಂಚಿತ ಸಂಪುಟವನ್ನೂ ಪ್ರಕಟಿಸಲಾಗಿದೆ.

ಭಾ.ರಾ.ಗ್ರಂ. ಪ್ರಕಟಣ ಕಾಲಾವಧಿ ಪದೇ ಪದೇ ಬದಲಾಗಲು ಬಹಳ ಮುಖ್ಯ ಕಾರಣವೆಂದರೆ ಆದರ ಮುದ್ರಣ ವಿನ್ಯಾಸ ಮತ್ತು ಉಚ್ಚಾರಣಾ ಸಂಕೇತಗಳನ್ನುಳ್ಳ ರೋಮನ್ ಅಕ್ಷರಗಳು. ಈ ಸಮಸ್ಯೆಯನ್ನು ಆದಷ್ಟು ಕಡಿಮೆ ಮಾಡಲು ಈಗ ಈ ಗ್ರಂಥಸೂಚಿಯ ಮುದ್ರಣಕ್ಕೆ ಫೋಟೋ ಟೈಪ್ ಸೆಟ್ಟಿಂಗ್ ಯಂತ್ರವನ್ನು ಬಳಸಲಾಗುತ್ತಿದೆ. ಇದರಿಂದ ಗ್ರಂಥಸೂಚಿಯು ಕಾಲಕ್ಕೆ ಸರಿಯಾಗಿ ಪ್ರಕಟವಾಗಲು ಅನುಕೂಲವಾಗುತ್ತಿದೆ.

### ಭಾಷೀಯ ಗ್ರಂಥಸೂಚಿಗಳು

ಭಾ.ರಾ.ಗ್ರಂ.ಯು ಆಯಾ ಭಾಷೆಗಳಲ್ಲಿಯೇ ಪ್ರಕಟವಾಗಬೇಕೆನ್ನುವುದು ಡಾ. ಎಸ್. ಆರ್. ರಂಗನಾಥನ್ ಅವರ ಬಲವಾದ ಆಸೆಯಾಗಿದ್ದಿತು. ರೋಮನ್ ಲಿಪಿ ಮತ್ತು ಇಂಗ್ಲೀಷ್ ಭಾಷೆಗಳು ಪ್ರಾದೇಶಿಕ ಉಪಯೋಗಿಗಳಿಗೆ ಹೆಚ್ಚು ಉಪ

ಯುಕ್ತವಾಗಲಾರವು ಎನ್ನುವುದು ಅವರ ಅಭಿಪ್ರಾಯವಾಗಿದ್ದಿತು. ಎಲ್ಲಾ ಭಾಷೆಗಳನ್ನೂ ಒಳಗೊಳ್ಳುವ ಭಾ.ರಾ.ಗ್ರಂ.ಯು ಒಂದೆರಡು ಭಾಷೆಗಳಲ್ಲಿ ಮಾತ್ರ ಆಸಕ್ತಿ ಹೊಂದಿರುವ ಓದುಗರು, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಗ್ರಂಥಾಲಯಗಳು, ಕಾಲೇಜು ಗ್ರಂಥಾಲಯಗಳು ಇತ್ಯಾದಿಗಳಿಗೆ ಅತಿದೊಡ್ಡ ಹೊರೆಯಾಗುತ್ತದೆ. ಆದುದರಿಂದ ಕೇಂದ್ರೀಯ ಪರಾಮರ್ಶನ ಗ್ರಂಥಾಲಯ ಸಿದ್ಧಪಡಿಸುವ ಆಲೇಖಗಳ ಆಧಾರದ ಮೇಲೆ ಭಾಷೀಯ ಗ್ರಂಥ ಸೂಚಿಗಳನ್ನೂ ಸಿದ್ಧಪಡಿಸುವಂತೆ ಕೇಂದ್ರ ಸರಕಾರ ರಾಜ್ಯ ಸರಕಾರಗಳನ್ನು ಕೇಳಿಕೊಂಡಿತು. ಇದರಂತೆ ಹಿಂದಿ, ಮತ್ತು ಉರ್ದು ಗ್ರಂಥಸೂಚಿಗಳನ್ನು ಉತ್ತರ ಪ್ರದೇಶ ಸರಕಾರವೂ, ಸಂಸ್ಕೃತ, ಅಸ್ಸಾಮಿ ಮತ್ತು ಒರಿಯಾ ಭಾಷೆಯ ಗ್ರಂಥಸೂಚಿಗಳನ್ನು ಕೇಂದ್ರೀಯ ಪರಾಮರ್ಶನ ಗ್ರಂಥಾಲಯವೂ, ಉಳಿದ ಭಾಷೀಯ ಗ್ರಂಥಸೂಚಿಗಳನ್ನು ಆಯಾ ರಾಜ್ಯ ಸರಕಾರಗಳೂ ಪ್ರಕಟಿಸುತ್ತಿವೆ.

ಇದುವರೆಗೆ ಭಾ.ರಾ.ಗ್ರಂ.ಯು ಮೂರು ಲಕ್ಷ ಗ್ರಂಥಗಳನ್ನು ದಾಖಲೆ ಮಾಡಿದೆ. ಈ ಗ್ರಂಥಸೂಚಿ ಕೇವಲ ತತ್ಕಾಲೀನ ಉಪಯೋಗಕ್ಕೆ ಮಾತ್ರವಿರದೆ ನಾಡಿನ ಪುಸ್ತಕ ಪ್ರಕಟಣ ಪ್ರಪಂಚದ ಅಧಿಕೃತ ದಾಖಲೆಯಾಗಿ ಉಳಿಯುತ್ತದೆ. ಗ್ರಂಥಗಳ ಆಯ್ಕೆಯಲ್ಲಿ, ದೇಶ ವಿದೇಶಗಳ ಗ್ರಂಥಪಾಲಕರು, ಸಂಶೋಧಕರು, ಆಸಕ್ತರಿಗೆ ಮಾಹಿತಿ ಮೂಲವಾಗಿ, ದೇಶದ ಗ್ರಂಥ ಪ್ರಕಟಣೆಯ ಅಂಕಿ ಅಂಶಗಳಿಗೆ ಅಧಿಕೃತ ದಾಖಲೆಯಾಗಿ ವರ್ಗೀಕರಣ, ಸೂಚೀಕರಣ ಮತ್ತು ಭಾರತೀಯ ಲೇಖಕರ ಹೆಸರುಗಳ ನಾಮ ನಿರ್ದೇಶನದಲ್ಲಿ ಗ್ರಂಥಪಾಲಕರಿಗೆ ಹೆಚ್ಚಿನ ಸಹಕಾರಿಯಾಗಿದೆ. ಇದೆಲ್ಲದರಿಂದ ಪುಸ್ತಕಗಳ ಪ್ರಕಾಶಕರು ತಮ್ಮ ಕೃತಿಗಳಿಗೆ ಉಚಿತ ಪ್ರಚಾರ ಪಡೆಯುತ್ತಾರೆ. ಸ್ವಿಡ್ಜರ್‌ಲೆಂಡಿನ ರಾಷ್ಟ್ರೀಯ ಗ್ರಂಥಾಲಯದ ಗ್ರಂಥಪಾಲಕ ಪಿ. ಜೊರ್ಗೋಯಿಸ್ ಅವರು ಹೇಳಿದಂತೆ, "ಭಾ.ರಾ.ಗ್ರಂ.ಯು ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳ ಮಧ್ಯೆ ಸಾಂಸ್ಕೃತಿಕ ಕೊಂಡಿಯಾಗಿದೆ."

ಸಿ. ಮಹದೇವ

# ಶ್ರೀ ರಂಗಪಟ್ಟಣದ ಶ್ರೀ ಆದೀಶ್ವರಸ್ವಾಮಿ ಬಸದಿ

ಕಾವೇರಿಯಿಂದ ಸುತ್ತುವರೆದ ಶ್ರೀರಂಗಪಟ್ಟಣ ಸುಂದರವಾದ ಒಂದು ಪುಟ್ಟ ದ್ವೀಪವಾಗಿದೆ. ಈ ದ್ವೀಪದಲ್ಲಿ ಹಲವು ಧರ್ಮಗಳ ಸಂಗಮವೆಂಬಂತೆ ಹಿಂದುಗಳ, ಜೈನರ, ಕ್ರೈಸ್ತರ, ಮುಸ್ಲಿಮರ ದೇವಮಂದಿರಗಳನ್ನು ಕಾಣಬಹುದು. ನೆಲಜಲದಲ್ಲಿ ಶ್ರೀಮಂತವಾಗಿರುವಂತೆ, ಧಾರ್ಮಿಕವಾಗಿಯೂ ಮತ್ತು ಸಾಂಸ್ಕೃತಿಕವಾಗಿಯೂ ಅತ್ಯಂತ ಸಂಪದ್ಭರಿತವಾದ ನೆಲೆ ಶ್ರೀರಂಗಪಟ್ಟಣ. ಇಲ್ಲಿ ಹಿಂದುಗಳಿಗೆ ಆದಿರಂಗ ಅಥವಾ ಶ್ರೀರಂಗನಾಥನಿರುವಂತೆ ಜೈನರಿಗೆ ಶ್ರೀ ಆದೀಶ್ವರ ಅಥವಾ ವೃಷಭನಾಥಸ್ವಾಮಿಯವರ ಬಸದಿ ಇದೆ. ಜೈನಧರ್ಮ ಪರಂಪರೆಯಲ್ಲಿ ಬರುವ 24 ತೀರ್ಥಂಕರರಲ್ಲಿ ವೃಷಭನಾಥನು ಮೊದಲನೆಯ ತೀರ್ಥಂಕರನಾಗಿದ್ದಾನೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಎಷ್ಟೋ ಬಸದಿಗಳು ಜೀರ್ಣೋದ್ಧಾರವನ್ನು ಕಾಣದೆ ಹಾಳು ಬಿದ್ದಿವೆ. ಆದರೆ ಶ್ರೀರಂಗಪಟ್ಟಣದ ಈ ಬಸದಿಯು ಉತ್ತಮಸ್ಥಿತಿಯಲ್ಲಿದ್ದು ಜೈನ, ಹಿಂದು, ಮುಸ್ಲಿಮ್ ಭಕ್ತರನ್ನು ಆಕರ್ಷಿಸುವುದರಲ್ಲಿ ಯಶಸ್ವಿಯಾಗಿದೆ.

ಶ್ರೀ ಆದೀಶ್ವರ ಬಸದಿಯು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ತೆರೆದ ಮಂಟಪ, ಉಯ್ಯಾಲೆ ಮಂಟಪಗಳಿಂದ ಕೂಡಿದೆ. ಗರ್ಭಗೃಹವು 12 ಅಡಿ ಉದ್ದವನ್ನು, 13.1 ಅಡಿ ಅಗಲವನ್ನು ಮತ್ತು 12 ಅಡಿ ಎತ್ತರವನ್ನು ಹೊಂದಿದೆ. ಇಲ್ಲಿ ಇಡೀ ಬಸದಿಯ ಎಲ್ಲಾ ಭಾಗಗಳ ಎತ್ತರ ಒಂದೇ ಆಗಿದೆ. ಗರ್ಭಗೃಹವಲ್ಲಿ 2 ಅಡಿ ಎತ್ತರದ ಪೀಠದ ಮೇಲೆ ಮುಖ್ಯದೇವರಾದ ಶ್ರೀ ಆದೀಶ್ವರ ಅಥವಾ ವೃಷಭನಾಥ ಸ್ವಾಮಿಯವರ ಸುಂದರವಾದ ವಿಗ್ರಹವಿದೆ. ಈ ವಿಗ್ರಹವು 3 ಅಡಿ ಎತ್ತರ ಹೊಂದಿದ್ದು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಮಾಡಲಾಗಿದೆ. ವಿಗ್ರಹವು ಸಮನ ಮನೋಹರವಾಗಿದ್ದು ಆಕರ್ಷಕ ಮತ್ತು ಸೂಕ್ಷ್ಮ ಕೆತ್ತನೆಯ ಪ್ರಭಾವಳಿಯನ್ನು ಹೊಂದಿದೆ. ಪೀಠದ ತಳಭಾಗದಲ್ಲಿ ಐದು ಸಿಂಹಗಳಿದ್ದು ಅವುಗಳು ಪೀಠವನ್ನು ಹೊತ್ತಿರುವಂತೆ ಕಂಡುಬರುತ್ತವೆ. ಪ್ರಭಾವಳಿಗೆ ಹೊಂದಿಕೊಂಡಂತೆ ಎಡಬಲಗಳಲ್ಲಿ ಕ್ರಮವಾಗಿ ಗೋಮುಖ (ಯಕ್ಷ) ಚಕ್ರೇಶ್ವರಿ (ಯಕ್ಷಿ)ಯವರ ವಿಗ್ರಹಗಳಿವೆ. ಇವುಗಳ ಎತ್ತರ 50 ಸೆಂ.ಮೀ.ಗಳಷ್ಟು. ಇವುಗಳ ಮೇಲ್ಭಾಗದಲ್ಲಿ ಚಾಮರಧಾರಿಗಳನ್ನು ನೋಡಬಹುದಾಗಿದೆ. ಅವರ ಮೇಲ್ಭಾಗ

ದಲ್ಲಿ ಶಾರ್ದೂಲಗಳು ಮತ್ತು ಆದರ ಮೇಲೆ ಕುಳಿತ ಸವಾರರು, ಡಮರುಗ ಧಾರಿಗಳು, ಇಂದ್ರರು, ಕೀರ್ತಿಮುಖ, ವೃಷಭನಾಥಸ್ವಾಮಿಯವರ ತಲೆಯ ಮೇಲ್ಭಾಗದಲ್ಲಿರುವ ಮುಕ್ಕೊಡೆ (ಮೂರು ಛತ್ರಿ) ಮತ್ತು ಆದರ ತುದಿಯಲ್ಲಿ ಕಳಶ ಇಷ್ಟೆಲ್ಲಾ ಹೊಂದಿರುವ ಪ್ರಭಾವಳಿಯ ಸೂಕ್ಷ್ಮವಾದ ಕೆತ್ತನೆಯು ಚಿತ್ತಾಕರ್ಷಕವಾಗಿದ್ದು ಶಿಲ್ಪ ಕಲಾತಜ್ಞರಲ್ಲಿ ಕುತೂಹಲವನ್ನು ಮೂಡಿಸುತ್ತದೆ. ಪ್ರಭಾವಳಿಯು ಐದು ಬಿಡಿಯಾದ ಭಾಗಗಳಿಂದ ರಚಿತವಾಗಿದೆ. ಪ್ರಭಾವಳಿಯು ಹಿಂದೆ ಸರಿದಂತೆ, ವಿಗ್ರಹವು ಮುಂದೆ ಸರಿದಂತೆ ಕಂಡುಬರುತ್ತದೆ.

ಅನಂತರ ಅಂತರಾಳವನ್ನು ಅವಲೋಕಿಸುವುದಾದರೆ, ಇದು 10 ಅಡಿ ಉದ್ದವನ್ನು 26 ಅಡಿ ಅಗಲವನ್ನು ಹೊಂದಿದೆ. ಇದರ ಎರಡು ಪಾರ್ಶ್ವಗಳಲ್ಲಿ ಸುಮಾರು 3 ಅಡಿ ಎತ್ತರದ ವೇದಿಕೆಯ ಮೇಲೆ 1 ಅಡಿ ಎತ್ತರವನ್ನು ಹೊಂದಿರುವ 24 ತೀರ್ಥಂಕರರ ವಿಗ್ರಹಗಳನ್ನು ಇಡಲಾಗಿದೆ. ಈ ವಿಗ್ರಹಗಳು ಅತ್ಯಂತ ಸುಂದರವಾಗಿದ್ದು ತಮಗೆ ಸಂಬಂಧಿಸಿದ ಯಕ್ಷಯಕ್ಷಿಯರನ್ನು ಎಡಬಲಗಳಲ್ಲಿ ಹೊಂದಿದ್ದು, ತಳಭಾಗದಲ್ಲಿ ಲಾಂಛನಗಳನ್ನು ಹೊಂದಿವೆ. ಈ 24 ತೀರ್ಥಂಕರರ, ಅವರಿಗೆ ಸಂಬಂಧಿಸಿದ ಯಕ್ಷಯಕ್ಷಿಯರ ಮತ್ತು ಅವರ ಲಾಂಛನಗಳ ಹೆಸರು ಈ ರೀತಿ ಇದೆ.

| ತೀರ್ಥಂಕರರು | ಲಾಂಭನ | ಯಕ್ಷ | ಯಕ್ಷಿ |
|---|---|---|---|
| ವೃಷಭ | ಎತ್ತು | ಗೋಮುಖ | ಚಕ್ರೇಶ್ವರಿ |
| ಅಜಿತ | ಆನೆ | ಮಹಾಯಕ್ಷ | ರೋಹಿಣಿ |
| ಶಂಭವ | ಕುದುರೆ | ತ್ರಿಮುಖ | ಪ್ರಜ್ಞಪ್ತಿ |
| ಅಭಿನಂದನ | ಕಪಿ | ಯಕ್ಷೇಶ್ವರ | ವಜ್ರಶೃಂಬಲಾ |
| ಸುಮತಿ | ಚಕ್ರ | ತುಂಬುರು | ಪುರುಷದತ್ತ |
| ಪದ್ಮಪ್ರಭೆ | ಕಮಲ | ಕುಸುಮ | ಮನೋವೇಗಿ |
| ಸುಪಾರ್ಶ್ವ | ಸ್ವಸ್ತಿಕ | ವರನಂದಿ | ಕಾಳೀ |
| ಚಂಪ್ರಪ್ರಭ | ಚಂದ್ರ | ಶಾಮಯಕ್ಷ | ಜ್ವಾಲಮಾಲಿನೀ |
| ಪುಷ್ಪದಂತ | ಮಕರ | ಅಜಿತ | ಮಹಾಕಾಳಿ |
| ಶ್ರಿತಲ | ವೃಕ್ಷ | ಬ್ರಹ್ಮ | ಮಾನವಿ |
| ಶ್ರೇಯಾಂಸ | ಗಂಡ | ಈಶ್ವರ | ಗೌರಿ |
| ವಾಸುಪೂಜ್ಯ | ಕೋಣ | ಕುಮಾರ | ಗಾಂಧಾರಿ |
| ವಿಮಲ | ಹಂದಿ | ಷಣ್ಮುಖ | ವೈರೋಟಿ |
| ಅನಂತ | ಕರಡಿ | ಪಾತಾಲ | ಅನಂತಮತಿ |
| ಧರ್ಮ | ವಜ್ರ | ಕಿನ್ನರ | ಮಾನಸಿ |
| ಶಾಂತಿ | ಎರಳೆ | ಗರುಡ | ಮಹಾಮಾನಸಿ |

| | | | |
|---|---|---|---|
| ಕುಂಥು | ಟಗರು | ಗಂಧರ್ವ | ಜಯಾ |
| ಅರ | ಮೀನಾ | ಖೇಂದ್ರ | ವಿಜಯಾ |
| ಮಲ್ಲಿ | ಕುಂಭ | ಕುಬೇರ | ಅಪರಾಜಿತಾ |
| ಮುನಿಸುವ್ರತ | ಆಮೆ | ವರುಣ | ಬಹುರೂಪಿಣಿ |
| ನಮಿ | ನೈದಿಲಂ | ಭ್ರುಕುಟಿ | ಚಾಮುಂಡಿ |
| ನೇಮಿ | ಶಂಖ | ಸರ್ವಾಹ್ಣ | ಕೂಷ್ಮಾಂಡಿನಿ |
| ಪಾರ್ಶ್ವನಾಥ | ಸರ್ಪ | ಧರಣೇಂದ್ರ | ಪದ್ಮಾವತಿ |
| ವರ್ಧಮಾನ | ಸಿಂಹ | ಮಾತಂಗ | ಸಿದ್ಧಾಯಿನಿ |

ಅಂತರಾಳ ಮತ್ತು ನವರಂಗಗಳ ನಡುವೆ ಅನ್ಯೃತಶಿಲೆಯಲ್ಲಿ ಮಾಡಿದ ವೃಷಭನಾಥ ತೀರ್ಥಂಕರ ವಿಗ್ರಹ ಇದೆ. (ಹಿಂದೆ ಇದನ್ನು ಉತ್ಸವದಲ್ಲಿ ಕೊಂಡೊಯ್ಯಲಾಗುತ್ತಿತ್ತು.)

ಇಲ್ಲಿನ ನವರಂಗವು 22 ಅಡಿ ಉದ್ದವನ್ನು 26 ಅಡಿ ಅಗಲವನ್ನು ಹೊಂದಿದೆ. ನವರಂಗವು ನಾಲ್ಕು ಪ್ರವೇಶದ್ವಾರಗಳನ್ನು ಹೊಂದಿದೆ. ಪೂರ್ವಕ್ಕೆ ಮೂರು ಮತ್ತು ಉತ್ತರಕ್ಕೆ ಒಂದು ಪ್ರವೇಶ ದ್ವಾರ ಇದೆ. ಉತ್ತರದ ದ್ವಾರದಿಂದ ಹೊರ ಹೋದಾಗ ಉಯ್ಯಾಲೆ ಮಂಟಪ ಸಿಗುತ್ತದೆ. ಈಗ ಇಲ್ಲಿ ಉಯ್ಯಾಲೆ ಇಲ್ಲ. ಪೂರ್ವಕ್ಕೆ ಇರುವ ಮೂರು ಪ್ರವೇಶದ್ವಾರಗಳಲ್ಲಿ ಮಧ್ಯದ ದ್ವಾರ ಮೊದಲಿನಿಂದಲೂ ಇದ್ದು, ಅಕ್ಕಪಕ್ಕದ ಪ್ರವೇಶದ್ವಾರಗಳನ್ನು, ಸುಮಾರು 19ನೆಯ ಶತಮಾನದ ಆದಿಭಾಗದಲ್ಲಿ ಇಲ್ಲಿಗೆ ತಂದು ಪ್ರತಿಷ್ಠಾಪಿಸಿದ ಧರಣೇಂದ್ರ ಮತ್ತು ಪದ್ಮಾವತಿ ಅಮ್ಮನವರ ತೆರೆದ ಗರ್ಭಗೃಹಗಳಿಗೆ ಜೋಡಿಸಲಾಗಿದೆ. ಅಂದರೆ ನವರಂಗದ ಮುಂಭಾಗಕ್ಕೆ ಸೇರಿದಂತೆ ಎರಡೂ ಪಾರ್ಶ್ವಗಳಲ್ಲಿ ಈ ಗರ್ಭಗೃಹಗಳಿವೆ.

ಬಸದಿಯ ಅರ್ಚಕರ ಪ್ರಕಾರ ಧರಣೇಂದ್ರಸ್ವಾಮಿ ವಿಗ್ರಹವನ್ನು, ಶ್ರೀರಂಗಪಟ್ಟಣಕ್ಕೆ ಪಶ್ಚಿಮದಿಕ್ಕಿನಲ್ಲಿ ಕಾವೇರಿನದಿ ದಡದಲ್ಲಿನ ಹಳೇ ಪಾಲಹಳ್ಳಿ ಗ್ರಾಮದ ಪಚ್ಚೆ ಪಾರ್ಶ್ವನಾಥಸ್ವಾಮಿಯವರ ಬಸದಿಯು ಹಾಳಾದ ನಂತರ ಅಲ್ಲಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂದು ತಿಳಿಸುತ್ತಾರೆ. ಬಹುಶಃ ಈ ಹಳೇ ಪಾಲಹಳ್ಳಿ ಗ್ರಾಮವು, ಮೈಸೂರು ಒಡೆಯರಾಳ್ವಿಕೆಯಲ್ಲಿ ನಿರ್ಮಾಣಗೊಂಡ ವಿರಜಾನದಿ ಕಾಲುವೆ ನಿರ್ಮಾಣದಿಂದ ಅಲ್ಲಿಯ ಭೂಮಿಯು ನೀರಾವರಿಗೊಳಪಟ್ಟು ಮತ್ತು ಈ ಹಳೇ ಗ್ರಾಮವು ತಗ್ಗಿನಲ್ಲಿದ್ದುದರ ಪ್ರಯುಕ್ತ ಜನರು ಈ ಸ್ಥಳವನ್ನು ಬಿಟ್ಟು ಎತ್ತರವಾದ ಸ್ಥಳದಲ್ಲಿ ಹೊಸ ಊರನ್ನು (ಈಗಿನ ಪಾಲಹಳ್ಳಿ) ಕಟ್ಟಿಕೊಂಡಿರಬಹುದೆಂದು ಊಹಿಸಬಹುದು. ಆದರೆ ಈಗ ಹಳೆಗ್ರಾಮದ ಅಥವಾ ಬಸದಿಯ ಅವಶೇಷಗಳು ಅಲ್ಲಿ ಕಾಣಸಿಗುವುದಿಲ್ಲ. ಧರಣೇಂದ್ರಸ್ವಾಮಿಯ ವಿಗ್ರಹವನ್ನು ಒಂದು ರೀತಿಯ ವಿಶಿಷ್ಟ ಶಿಲೆಯಲ್ಲಿ ಮಾಡಲಾಗಿದೆ. ಅಂದರೆ ಶಿಲೆಯು ಕಪ್ಪಾಗಿದ್ದು ಅಲ್ಲಲ್ಲಿ ಕಂದುಬಣ್ಣದ ಚುಕ್ಕೆಗಳನ್ನು ಕಾಣಬಹುದು.

ಕಿರೀಟದ ಮುಂಭಾಗದಲ್ಲಿ ಪಾರ್ಶ್ವನಾಥಸ್ವಾಮಿಯವರ ಸೂಕ್ಷ್ಮ ವಿಗ್ರಹವನ್ನು ಕಾಣಬಹುದು. ತಲೆಯ ಮೇಲ್ಭಾಗದಲ್ಲಿ ಐದು ಹೆಡೆಗಳ ಸರ್ಪವನ್ನು ಕಡೆಯಲಾಗಿದೆ. ಈ ವಿಗ್ರಹದ ಎತ್ತರ 5 ಅಡಿ ಇದ್ದು ಎತ್ತರವಾದ ಪೀಠದ ಮೇಲಿದೆ.

ಪದ್ಮಾವತಿ ಅಮ್ಮನವರ ವಿಗ್ರಹವನ್ನು ಗಂಜಾಂನಲ್ಲಿನ ಪಾರ್ಶ್ವನಾಥಸ್ವಾಮಿಯವರ ಮಂದಿರದಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂದು ತಿಳಿಸುತ್ತಾರೆ. ಈ ಬಸದಿ ಈಗ ಹಾಳುಬಿದ್ದಿದ್ದು, ಸ್ಥಳೀಯರು ಅದನ್ನು ಬಸ್ತಿಪಾಳು ಎಂದು ಈಗಲೂ ಕರೆಯುತ್ತಾರೆ. ನಾಲ್ಕು ಅಡಿ ಎತ್ತರವನ್ನು ಹೊಂದಿರುವ ದೇವಿಯ ವಿಗ್ರಹವು ಮನಮೋಹಕವಾಗಿದೆ. ತಲೆಯ ಮೇಲ್ಭಾಗದಲ್ಲಿ ಮೂರು ಹೆಡೆಗಳ ಸರ್ಪವನ್ನು ನಿರ್ಮಿಸಲಾಗಿದೆ. ಕಿರೀಟದ ಮುಂಭಾಗದಲ್ಲಿ ಪಾರ್ಶ್ವನಾಥಸ್ವಾಮಿಯವರ ಸೂಕ್ಷ್ಮ ವಿಗ್ರಹವನ್ನು ಕಾಣಬಹುದು.

ನವರಂಗದ ಮುಂಭಾಗದ ಎರಡು ಪಾರ್ಶ್ವಗಳಲ್ಲಿ ಈ ಎರಡು ದೇವರುಗಳನ್ನು ಪ್ರತಿಷ್ಠಾಪಿಸಿರುವುದು ಮತ್ತು ಈ ಯಕ್ಷ–ಯಕ್ಷಿಯರು ವೃಷಭನಾಥನಿಗೆ ಸಂಬಂಧಿಸಿಲ್ಲದ ಕಾರಣ ಈ ಮೇಲಿನ ಎರಡೂ ವಿಗ್ರಹಗಳನ್ನು ಹೊರಗಡೆಯಿಂದ ತಂದು ಇಲ್ಲಿ ಪ್ರತಿಷ್ಠಾಪಿಸಿರುವುದು ಖಚಿತವಾಗುತ್ತದೆ. ಉತ್ತರ ಭಾರತದಿಂದ ಬಂದಿದ್ದ ಶ್ವೇತಾಂಬರ ಪಂಥದ ಶೀಲವಿಜಯ ಎಂಬ ಜೈನ ಮುನಿಗಳು ಕ್ರಿ.ಶ. 1674ರಲ್ಲಿ ಶ್ರೀರಂಗಪಟ್ಟಣದ ಈ ಬಸದಿಗೆ ಭೇಟಿ ನೀಡಿದ್ದರು. ಅವರು ತಮ್ಮ ಬರಹದಲ್ಲಿ ಈ ರೀತಿ ತಿಳಿಸುತ್ತಾರೆ. "ಶ್ರೀರಂಗಪಟ್ಟಣದಲ್ಲಿ ವೃಷಭನಾಥ, ಪಾರ್ಶ್ವನಾಥ, ವರ್ಧಮಾನರ ಮಂದಿರಗಳಿವೆ. ಇಲ್ಲಿಯ ರಾಜನ ಹೆಸರು ದೇವರಾಯ" ಈ ಮೇಲೆ ತಿಳಿಸಿರುವ ಮಂದಿರಗಳಲ್ಲಿ ವೃಷಭನಾಥನ ಬಸದಿಯೊಂದು ಇದ್ದು ಉಳಿದೆರಡು ಮಂದಿರಗಳು ಇಲ್ಲ. ಪಾರ್ಶ್ವನಾಥನ ಮಂದಿರ ಗಂಜಾಂನಲ್ಲಿನ ಬಸ್ತಿಪಾಳು ಎಂದು ಕರೆಯುವ ಸ್ಥಳದಲ್ಲಿ ಇದ್ದಿತೆಂದು ಹೇಳಬಹುದು. ಆದರೆ ವರ್ಧಮಾನ ಅಥವಾ ಮಹಾವೀರ ಮಂದಿರದ ನೆಲೆ ಗೊತ್ತಿಲ್ಲ. ಇಲ್ಲಿಯ ದೇವರಾಯ ಕ್ರಿ.ಶ. 1673 ರಿಂದ 1704ರವರೆಗೆ ಆಳಿದ ಚಿಕ್ಕದೇವರಾಜ ಒಡೆಯರು ಎಂದು ಗೊತ್ತಾಗುತ್ತದೆ. ಧರಣೇಂದ್ರ ಮತ್ತು ಪದ್ಮಾವತಿ ವಿಗ್ರಹಗಳ ಕೆತ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವುಗಳು ಒಂದೇ ಕಾಲದಲ್ಲಿ ನಿರ್ಮಾಣಗೊಂಡಿರುವುದು ಮತ್ತು ಒಂದೇ ಶೈಲಿಯಲ್ಲಿರುವುದು ಗೋಚರವಾಗುತ್ತದೆ. ಆದುದರಿಂದ ಈ ಎರಡೂ ವಿಗ್ರಹಗಳು ಶೀಲವಿಜಯಮುನಿ ಹೆಸರಿಸಿರುವ ಈಗಿನ ಗಂಜಾಂನಲ್ಲಿನ ಪಾರ್ಶ್ವನಾಥ ಬಸದಿಯಿಂದ ಇಲ್ಲಿಗೆ ಸ್ಥಳಾಂತರವಾಗಿವೆ ಎಂದು ಹೇಳಬಹುದು. ನವರಂಗದ ಮಧ್ಯದ ಚಾವಣಿಯ ಮೇಲ್ಭಾಗದಲ್ಲಿ ಪೂರ್ಣ ಅರಳಿದ ಕಮಲವನ್ನು ಕೆತ್ತಿದ್ದು, ನವರಂಗದವರೆಗಿನ ಭಿತ್ತಿಯನ್ನು ಶಿಲಾ ಚಪ್ಪಡಿಗಳಿಂದ ನಿರ್ಮಿಸಲಾಗಿದೆ.

ನಂತರದಭಾಗ ಮುಖಮಂಟಪ. ಇದು 23 ಅಡಿ ಉದ್ದವನ್ನು 26 ಅಡಿ ಅಗಲವನ್ನು ಹೊಂದಿದೆ. ಇದು ಹಿಂದೆ ಮಣ್ಣಿನ ಭಿತ್ತಿಯನ್ನು ಹೊಂದಿತ್ತು. 1975ರಲ್ಲಿ ಮೈಸೂರಿನ ಆದಿನಾಥ ಧರ್ಮೋದ್ಧಾರಕ ಸಂಸ್ಥೆಯು ಈ ಮಣ್ಣಿನ ಗೋಡೆಯನ್ನು ತೆಗೆದು ಇಟ್ಟಿಗೆಯ ಗೋಡೆಯನ್ನು ಕಟ್ಟಿಸಿದೆ. ಅನಂತರ ಬರುವುದು ತೆರೆದ ಮಂಟಪ. ಇದು

10 ಅಡಿ ಉದ್ದವನ್ನು ಹೊಂದಿದೆ. ಇಲ್ಲಿನ ವಂಯೋವೃದ್ಧ ಅರ್ಚಕರು ಈ ರೀತಿ ತಿಳಿಸುತ್ತಾರೆ. "ನಾನು 1932ರಲ್ಲಿ ಈ ಬಸದಿಗೆ ಬಂದಿದ್ದಾಗ ಇದರ ಕೆಲವು ಭಾಗಗಳು ಬಿದ್ದು ಹೋಗಿದ್ದವು. ಈ ಬಸದಿಯು ಎತ್ತರವಾದ ವೇದಿಕೆಯ ಮೇಲಿದ್ದು ಇದನ್ನು ಏರಲು 9 ಮೆಟ್ಟಿಲುಗಳನ್ನು ಹತ್ತಬೇಕಾಗಿತ್ತು. ಈಗ ಈ ಮೆಟ್ಟಿಲುಗಳು ಮಣ್ಣಿನಲ್ಲಿ ಮುಚ್ಚಿ ಹೋಗಿವೆ. ಅಲ್ಲದೆ ಈಗ ಬಸದಿಯ ಸುತ್ತಲು ಭೂಮಿ ಮಟ್ಟಸವಾಗಿದ್ದು ಅಲ್ಲಿ ಹೂವಿನ ತೋಟವನ್ನು ಕಾಣಬಹುದು. ನಂತರ ಸರಳವಾದ ಪ್ರಾಕಾರವಿದ್ದು ನಾಲ್ಕು ಕಂಬಗಳಿಂದ ರಚಿತವಾದ ಪ್ರವೇಶದ್ವಾರ ಮಂಟಪವೊಂದನ್ನು ನಿರ್ಮಿಸಲಾಗಿದೆ.

ಈ ಮೇಲಿನ ವಿವರಣೆಯಿಂದ ವ್ಯಕ್ತವಾಗುವುದೇನೆಂದರೆ, ಗರ್ಭಗೃಹವನ್ನು ಬಿಟ್ಟು ಬಸದಿಯು ದೀರ್ಘ ಚತುರಸ್ರಾಕಾರದಲ್ಲಿದೆ. ಇಲ್ಲಿ ಕಂಬಗಳೆಲ್ಲವನ್ನು ಚೌಕಾಕಾರದಲ್ಲಿ ಕಡೆಯಲಾಗಿದ್ದು ಒರಟುತನವನ್ನು ಪ್ರದರ್ಶಿಸುತ್ತವೆ. ಕಂಬಗಳ ಮೇಲೆ ಹೇಳಿಕೊಳ್ಳುವಂತಹ ಶಿಲ್ಪ ಚಿತ್ರಗಳಾವುವೂ ಇಲ್ಲ. ಭಿತ್ತಿಯ ಹೊರಮೈಯಲ್ಲಿ ಯಾವ ಅಲಂಕಾರವು ಕಾಣಬರುವುದಿಲ್ಲ. ನಿರ್ಮಾಣಕ್ಕಾಗಿ ಸಂಪೂರ್ಣವಾಗಿ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಶಿಲಾತೊಲೆಗಳ ಮೇಲೆ ಬಸದಿಯ ಭಾಗದ ಹೆಸರು ಮತ್ತು ಸಂಖ್ಯೆಯನ್ನು ನಮೂದಿಸಲಾಗಿದೆ. ಉದಾ : ನವರಂಗ 10, ನ 105 ಎಂದು ಕೆತ್ತಲಾಗಿದೆ. ಅಂದರೆ ಈ ಶಿಲಾತೊಲೆಗಳನ್ನು ದೂರದಲ್ಲೆಲ್ಲೊ ಕಡೆದು ಅವುಗಳಗೆ ಭಾಗದ ಹೆಸರು ಮತ್ತು ಸಂಖ್ಯೆಯನ್ನು ಕೊಟ್ಟು ನಂತರ ಇಲ್ಲಿಗೆ ಸಾಗಿಸಿ ಬಸದಿಯನ್ನು ನಿರ್ಮಿಸಿರಬೇಕೆಂದು ತಿಳಿಯಬಹುದು. ಜೀರ್ಣೋದ್ಧಾರದ ಸಮಯದಲ್ಲಿ ಬಸದಿಯ ಬಹುತೇಕ ತೊಲೆಗಳು ಮತ್ತು ಬಾಗಿಲುವಾಡಗಳು ಸ್ಥಳಾಂತರವಾಗಿರುವುದು ಕಂಡುಬರುತ್ತದೆ. ಉದಾ : ಗರ್ಭಗೃಹದ ದ್ವಾರದ ಮೇಲ್ಭಾಗದ ತೊಲೆಯ ಮೇಲೆ ನವರಂಗ 10 ಎಂದು ಕೆತ್ತಲಾಗಿದೆ. ಅಂದರೆ ನವರಂಗದಲ್ಲಿ ಅಳವಡಿಸಬೇಕಾದ ತೊಲೆಗಳಲ್ಲಿ ಇದು ಹತ್ತನೆಯ ತೊಲೆ ಎಂದು ತಿಳಿಯುತ್ತದೆ. ಆದ್ದರಿಂದ ಈ ತೊಲೆ ಸ್ಥಳಾಂತರಗೊಂಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಗರ್ಭಗೃಹದ ಮೇಲ್ಭಾಗದಲ್ಲಿ ಇಟ್ಟಿಗೆಗಾರೆಗಳಿಂದ ರಚಿತವಾದ ಶಿಖರವಿದ್ದು ಸುಮಾರು 15 ಅಡಿಗಳ ಎತ್ತರ ಹೊಂದಿದೆ. ಇದರ ಮೇಲೆ 3 ಅಡಿ ಎತ್ತರದ ಕಳಸವಿದ್ದು ಇದು ಸಹ ಗಾರೆಯಿಂದ ರಚಿತವಾಗಿದೆ. ಶಿಖರವು ಜಿನ ಪ್ರತಿಮೆಗಳನ್ನು ಹೊಂದಿದೆ.

ಇನ್ನು ಬಸದಿಯ ನಿರ್ಮಾಣ ಕಾಲವನ್ನು ಹೇಳುವುದಾದರೆ ವಿಜಯನಗರ ಕಾಲಕ್ಕೆ ಸೇರಿಸಬಹುದು. ನಿರ್ಮಾಣದ ಬಗ್ಗೆ ಯಾವುದೇ ಶಾಸನಾಧಾರವಿಲ್ಲ. ಸುಮಾರು 12 ಮತ್ತು 13 ನೆಯ ಶತಮಾನಗಳಲ್ಲಿ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿರ್ಮಾಣವಾದ ಬಸದಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಈ ಬಸದಿಗಳಲ್ಲಿ ಹೊಯ್ಸಳ ಶೈಲಿಯನ್ನು ಕಾಣಬಹುದಾಗಿದೆ. ಆದರೆ ಶ್ರೀರಂಗಪಟ್ಟಣದ ಬಸದಿಯಲ್ಲಿ ಹೊಯ್ಸಳ ಶೈಲಿಯ ಯಾವ ಒಂದು ಕುರುಹು ಕಾಣಸಿಗುವುದಿಲ್ಲ. ಅಲ್ಲದೆ

ವಿಗ್ರಹಗಳ ತಳಭಾಗದಲ್ಲಿ ಅವರ ಹೆಸರಾಗಲಿ, ಅಥವಾ ಶಿಲ್ಪಿಯ ಹೆಸರಾಗಲಿ ಇಲ್ಲ. ನಂತರ ಇದೇ ಬಸದಿಯ ಮುಖಮಂಟಪದಲ್ಲಿನ ಎಡಗಡೆ ಕಂಬದ ಮೇಲೆ ಕ್ರಿ.ಶ. 1666ರ ಒಂದು ಶಾಸನವಿದೆ. ಈ ಸಮಯದಲ್ಲಿ ಶ್ರೀರಂಗಪಟ್ಟಣ ಮೈಸೂರು ಒಡೆಯರ ಆಳ್ವಿಕೆಗೊಳಪಟ್ಟಿರುತ್ತದೆ. ಅಂದರೆ ಈ ಶಾಸನದ ಕಾಲಕ್ಕೂ ಮೊದಲೇ ಬಸದಿ ನಿರ್ಮಾಣವಾಗಿದೆ ಎಂಬುದು ಖಚಿತವಾಗುತ್ತದೆ. ಎರಡನೆಯದಾಗಿ ಗರ್ಭಗೃಹದಲ್ಲಿನ ಮುಖ್ಯ ವಿಗ್ರಹವು ಮುಂದೆ ಸರಿದಿದ್ದು ಅವರ ಪ್ರಭಾವಳಿ ಹಿಂದಕ್ಕೆ ಸರಿದಿದೆ. ಈ ಲಕ್ಷಣವನ್ನು ಸಾಮಾನ್ಯವಾಗಿ ವಿಜಯನಗರ ಕಾಲದ ಶಿಲ್ಪಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಆದರೆ ಹೊಯ್ಸಳ ಶೈಲಿಯಲ್ಲಿ ವಿಗ್ರಹ ಮತ್ತು ಪ್ರಭಾವಳಿ ಹೊಂದಿಕೊಂಡಿರುತ್ತವೆ. ಮೂರನೆಯದಾಗಿ ಬಸದಿಯ ಶಿಲಾತೊಲೆಗಳ ಮೇಲೆ ಕೆತ್ತಿರುವ ಅಕ್ಷರಗಳು ಮತ್ತು ಸಂಖ್ಯೆಗಳು ವಿಜಯನಗರ ಕಾಲದ ಅಕ್ಷರ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಈ ಮೇಲಿನ ಅಂಶಗಳಿಂದ ಶ್ರೀ ಆದೀಶ್ವರ ಬಸದಿಯು ವಿಜಯನಗರ ಕಾಲದ ನಿರ್ಮಾಣವೆಂದು ವಿದಿತವಾಗುತ್ತದೆ.

ಶ್ರೀ ಆದೀಶ್ವರ ಬಸದಿಯಲ್ಲಿ ನಡೆಯುವ ವಿಶೇಷ ಪೂಜಾ ಸಮಾರಂಭಗಳಲ್ಲಿ ಪ್ರತಿ ಭಾನುವಾರ ಮತ್ತು ಶುಕ್ರವಾರದ ವಿಶೇಷ ಪೂಜೆಗಳು ಗಮನಾರ್ಹವಾದವು ಆಷಾಢ, ಕಾರ್ತಿಕ, ಫಾಲ್ಗುಣ ಮಾಸಗಳಲ್ಲಿ ನಡೆಯುವ ಅಷ್ಟಾಹ್ನಿಕ ಪರ್ವ ಸಮಾರಂಭ (ನಂದೀಶ್ವರಮಂದಿರಕ್ಕೆ ವಿಶೇಷಸೇವೆ) ಅತ್ಯಂತ ಮುಖ್ಯವಾದುದು. ಮೇಲೆ ಹೇಳಿದ ಕ್ರಿ.ಶ. 1666ರ ಶಾಸನವು ಈ ಅಷ್ಟಾಹ್ನಿಕ ಧರ್ಮಕ್ಕೆ ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯರಿಬ್ಬರು ಕೊಟ್ಟ ದಾನವನ್ನು ತಿಳಿಸುತ್ತದೆ. ಶ್ರಾವಣಮಾಸದಲ್ಲಿ ಪೌರ್ಣಿಮೆಯ ದಿನ ಸುತ್ತಮುತ್ತಲಿನ ಜೈನಧರ್ಮೀಯರು ಆಗಮಿಸಿ ಉಪಾಕರ್ಮ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಾರೆ. ಭಾದ್ರಪದ ಮಾಸದ ಪಂಚಮಿಯಿಂದ ಚತುರ್ದಶಿವರೆಗೆ ದಶಲಕ್ಷಣ ಪರ್ವವನ್ನು ಆಚರಿಸಲಾಗುತ್ತದೆ. (ಜೈನಪರಂಪರೆಯಲ್ಲಿ ಬರುವ ಹತ್ತುಧರ್ಮಗಳ ಆಚರಣೆ) ಆಶ್ವೀಜ ಬಹುಳ ಚತುರ್ದಶಿಯಂದು ಬೆಳಗಿನಜಾವ ಮಹಾವೀರ ತೀರ್ಥಂಕರರ ಮೋಕ್ಷಕಲ್ಯಾಣವನ್ನು ಆಚರಿಸಲಾಗುತ್ತದೆ. ಮಾಘಮಾಸದಲ್ಲಿ 2 ದಿವಸ ಜಿನರಾತ್ರಿಯನ್ನು ಆಚರಿಸಲಾಗುತ್ತದೆ. ಇದು ಸ್ವಲ್ಪಮಟ್ಟಿಗೆ ಹಿಂದುಗಳ ಶಿವರಾತ್ರಿಯನ್ನು ಹೋಲುತ್ತದೆ.

ಶೀಲವಿಜಯ ಮುನಿಗಳು ತಿಳಿಸುವಂತೆ "ದೇವರಾಯರಾಜರು ವರ್ಷಕ್ಕೆ 4 ಲಕ್ಷ ರೂಪಾಯಿಗಳನ್ನು ಜೈನದೇವರಿಗೆ ನೀಡುತ್ತಿದ್ದರು, ಜೈನ ಮಂದಿರಗಳಿಗೆ ನಾಲ್ಕು ಗ್ರಾಮಗಳನ್ನು ಬಿಡಲಾಗಿತ್ತು. ಆ ಗ್ರಾಮಗಳಿಂದ ಧನಧಾನ್ಯಗಳು ಅಧಿಕವಾಗಿ ಬರುತ್ತಿತ್ತು. ವೃಷಭನಾಥ ಅಥವಾ ಆದೀಶ್ವರನ ಪೂಜೆಯು ರಾಜನ ಕಡೆಯಿಂದಲೇ ನಡೆಯುತ್ತಿತ್ತು". ಈ ಮೇಲಿನ ಹೇಳಿಕೆಯಿಂದ ಚಿಕ್ಕದೇವರಾಜ ಒಡೆಯರು ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹ ಮತ್ತು ಸಹಕಾರಗಳು ಕಂಡುಬರುತ್ತವೆ. ಆದರೆ ಇತ್ತೀಚಿಗೆ ಎರಡೂ ಮುಕ್ಕಾಲು ಎಕರೆ ಗದ್ದೆ ಇದ್ದು ಈಗ ಅದು ಭೂಸುಧಾರಣಾಕಾಯ್ದೆ ಅನ್ವಯ ಕೈಬಿಟ್ಟು ಹೋಗಿದೆ. ಬಸದಿಗೆ ಯಾವುದೇ ವಿಧವಾದ

ಆದಾಯವಿಲ್ಲ. ಇತ್ತೀಚೆಗೆ ಬಸದಿಯಲ್ಲಿ ವರ್ಷದಲ್ಲಿ ವಿಶೇಷ ದಿನಗಳಲ್ಲಿ ಆಚರಿಸುವ ಪೂಜೆಗಾಗಿ ಸಾರ್ವಜನಿಕರಿಂದ ದತ್ತಿಯನ್ನು ಸ್ವೀಕರಿಸಲಾಗುತ್ತಿದೆ. ಅಲ್ಲದೆ ಭಕ್ತಾದಿಗಳ ಹೆಸರಿನಲ್ಲಿ ಮಾಸಪೂಜೆಯನ್ನು ನಡೆಸಲಾಗುತ್ತದೆ.

ಬಸದಿಯು ಮುಜರಾಯಿ ಆಡಳಿತಕ್ಕೆ ಒಳಪಟ್ಟಿದೆ. ಧರ್ಮದರ್ಶಿಗಳ ಸಮಿತಿಯೊಂದು ಇದೆ. ಆಶ್ಚರ್ಯವೆಂದರೆ ಈ ಬಸದಿಗೆ ಅರ್ಚಕರೊಬ್ಬರನ್ನು ಬಿಟ್ಟರೆ ಸಿಬ್ಬಂದಿ ವರ್ಗವಿಲ್ಲ. ಈ ರೀತಿ ತನ್ನದೇ ಆದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯುಳ್ಳ ಶ್ರೀ ಆದೀಶ್ವರ ಬಸದಿಯು ದಿಗಂಬರ ಸಂಘಕ್ಕೆ ಸೇರಿದೆ. ಇದು ಶ್ರೀರಂಗಪಟ್ಟಣದ ದಕ್ಷಿಣ ಕೋಟೆ ದ್ವಾರದ ಬಳಿ ಇದೆ. ಬಹುಜನರಿಗೆ ಇದರ ಇರುವು ಗೊತ್ತೇ ಇಲ್ಲ. ಶ್ರೀರಂಗಪಟ್ಟಣದಲ್ಲಿ ಜೈನಗೃಹಸ್ಥರು ಅಧಿಕಸಂಖ್ಯೆಯಲ್ಲಿದ್ದು, ತುಂಬಾ ಶ್ರೀಮಂತರು ಮತ್ತು ದಾನಿಗಳಾಗಿದ್ದರು ಎಂದು ಶೀಲವಿಜಯ ಮುನಿಗಳು ತಿಳಿಸುತ್ತಾರೆ. ಆದರೆ ಈಗ ಇಲ್ಲಿನ ದಿಗಂಬರ ಸಂಘದ ಅರ್ಚಕರೊಬ್ಬರನ್ನು ಬಿಟ್ಟರೆ ಇಡೀ ದ್ವೀಪದಲ್ಲಿ ಬೇರೊಬ್ಬ ಕನ್ನಡ ಜೈನಧರ್ಮೀಯರಿಲ್ಲ. ಬಹುಶಃ ಶ್ರೀರಂಗಪಟ್ಟಣದಲ್ಲಿ ಹೈದರನ ಆಳ್ವಿಕೆ ಪ್ರಾರಂಭಗೊಂಡ ಮೇಲೆ ಇಲ್ಲಿನ ಜೈನರೆಲ್ಲರು ಸಮೀಪದ ಮೈಸೂರಿಗೆ ಬಂದು ನೆಲಸಿರಬಹುದು. ಆದಾಗ್ಯೂ ಬಸದಿಯು ಹೊರಗಿನ ಶ್ರಾವಕರ ಸಹಕಾರ ಪ್ರೋತ್ಸಾಹದಿಂದ ಅಭಿವೃದ್ಧಿಯ ಮಾರ್ಗದಲ್ಲಿದೆ.

**ಆಧಾರಗಳು**


1 ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 6, ಶ್ರೀರಂಗಪಟ್ಟಣ ನಂ. 38
2 ಜೈನ ಸಾಹಿತ್ಯ ಔರ್ ಇತಿಹಾಸ್— ನಾಥೂರಾಮ್ ಪ್ರೇಮಿ (ಹಿಂದಿ)
3 ಚತುರ್ವಿಂಶತಿ ತೀರ್ಥಂಕರ ಆರಾಧನೆ Ed. ಎ. ಶಾಂತರಾಜ್ ಶಾಸ್ತ್ರಿ
4 Annals of the Mysore Royal family


**ಶ್ರೀ ಆದೀಶ್ವರ ಬಸದಿಯಲ್ಲಿರುವ ಶಾಸನ**

1 ಶ್ರೀ ಶಕವರ್ಷ ೧೫೮೬ ತ್ತೆನೆಯ ಪರಾಭ
2 ವಸಂವತ್ಸರದ ಆಷಾಡ ಶು ೭
3 ಲು ಶ್ರೀರಂಗಪಟ್ಟಣದ ಆದೀಶ್ವ
4 ರರ ಭಂಡಾರಕ್ಕೆ ಚಾರುಕೀರ್ತಿ
5 ಪಂಡಿತಾಚಾರ್ಯ್ಯರ ಶಿಷ್ಯರಾದ ಪಾ
6 ಯಂಣಗಳು ಜಯ್ಯನವರು ಕೊ
7 ಟ್ಟದು ನಗ ೨೮೮ಕ್ಕೆ ಬಡ್ಡಿ ಕಗು ೩೮೩ಕ್ಕೆ
8 ಅಷ್ಟಾಹ್ನಿಕದ ಧರ್ಮವನು ಶ್ರೀ
9 ಸಿತಾಳಮಳಿಗೆಯ ಸಮಸ್ತರು ನೆಲತರವಾ

10 ಗಿ ನಡಸಿ ಕೊಡಲುಳ್ಳವರು ಯೆಂದು ಬರಸಿ
11 ಕೊಟ್ಟ ಶಾಸನ ಯಿದಕ್ಕೆ ವಿಘ್ನವ ಮಾಡಿದ
12 ವನು ನರಕಾದಿ ದುರ್ಗತಿಗೆ ಹೋಗುವನು
13 ಶ್ರೀ ಶ್ರೀ ಶ್ರೀ ಶ್ರೀ

ನಗುವನಹಳ್ಳಿ ಪಿ. ರತ್ನ

# ದಿ|| ಎಂ. ಮಹಾಬಲರಾವ್ ಸ್ಮರಣೆ

ವೀರಶೈವ ಸಾಹಿತ್ಯದ ಅಧ್ಯಯನದ ಆದ್ಯ ಪ್ರವರ್ತಕರಾದ ದಿ|| ಎಂ. ಆರ್. ಶ್ರೀನಿವಾಸಮೂರ್ತಿ ಅವರ ಸೋದರರಾದ ಎಂ. ಮಹಾಬಲರಾಯರವರು ತಾ. 12-6-85ರಂದು ಮಂಡ್ಯ ನಗರದಲ್ಲಿ ನಿಧನರಾದರು. ಇವರು ಸುದೀರ್ಘ, ಸಾರ್ಥಕ ಹಾಗೂ ತುಂಬು ಜೀವನ ನಡೆಸಿ ಎಂಬತ್ತೇಳರ ವಯಸ್ಸಿನಲ್ಲಿ ಸಾವನ್ನಪ್ಪಿದರು. ಮಂಡ್ಯ ನಗರದಲ್ಲಿ ಹೆಸರಾಂತ ನ್ಯಾಯವಾದಿಗಳಾಗಿದ್ದರು. 1940-42ರಲ್ಲಿ ಮೈಸೂರು ಕಾಂಗ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದ ಸ್ವಾತಂತ್ರ ಯೋಧರು ಹಾಗೂ ಹಿರಿಯ ನಾಯಕರಾಗಿದ್ದ ಹೆಚ್. ಸಿ. ದಾಸಪ್ಪ, ಟಿ. ಸಿದ್ಧಲಿಂಗಯ್ಯ, ಎಸ್. ನಿಜಲಿಂಗಪ್ಪ ಮುಂತಾದವರ ಜೊತೆಯಲ್ಲಿ ಮೈಸೂರಿನ ಸೆಂಟ್ರಲ್ ಜೈಲಿನಲ್ಲಿ ಸೆರೆಮನೆ ವಾಸವನ್ನನುಭವಿಸಿದ್ದರು. ಇದರ ಸವಿನೆನಪಿಗಾಗಿ ದಿ|| ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರು ಮಹಾಬಲರಾಯರಿಗೆ ತಾಮ್ರದ ಫಲಕವನ್ನು ನೀಡಿದ್ದರು.

ದಿ|| ಮಹಾಬಲರಾಯರು ಜೈಲಿನಲ್ಲಿದ್ದ ವಿಷಯವನ್ನು ತಿಳಿದಾಗ ಅವರ ತಂದೆ ತಾಯಿ ಆಗಲಿ, ಸಹೋದರರಾಗಲಿ ಚಿಂತಿಸುತ್ತಿರಲಿಲ್ಲ. ಅದು ಆತ ರಾಷ್ಟ್ರಕ್ಕಾಗಿ ಮಾಡಿದ ತ್ಯಾಗ ಎಂದು ಮೆಚ್ಚಿದ್ದರು. ಸೆರೆಮನೆಯಲ್ಲಿದ್ದ ಮಹಾಬಲರಾಯರಿಗೆ ಅವರ ತಂದೆ ಪತ್ರ ಬರೆದು ಈ ರೀತಿ ತಿಳಿಸಿದ್ದರು. "ನಾವು ರಾಷ್ಟ್ರ ಪ್ರೇಮ, ದೇಶಭಕ್ತಿ ಎನ್ನುತ್ತಾ ಸುಮ್ಮನೆ ಮಾತನಾಡುತ್ತೇವೆ. ಆದರೆ ನೀನು ಕಾರ್ಯತಃ ಮಾಡಿ ತೋರಿಸಿದ್ದೀಯೇ. ನೀನು ಧನ್ಯ".

ದಿ|| ಮಹಾಬಲರಾವ್ ಅವರಿಗೆ ಸಹಜವಾಗಿಯೇ ಸಾಹಿತ್ಯ ಸಂಸ್ಕೃತಿಗಳಲ್ಲಿ ಅಭಿಮಾನ, ಅಭಿರುಚಿಗಳಿದ್ದವು. ಅವರು ಮಂಡ್ಯ ನಗರದ "ಕರ್ನಾಟಕ ಸಂಘದ" ಪ್ರಪ್ರಥಮ ಸಂಸ್ಥಾಪಕರು. ಆ ಸಂಘದ ಅಧ್ಯಕ್ಷರಾಗಿ, ಅಮೂಲ್ಯವಾದ ಸೇವೆಯನ್ನು ನಿರಂತರವಾಗಿ ಸಲ್ಲಿಸಿದ್ದಾರೆ. ಅಲ್ಲಿನ ಜನರಿಗೆ ಕನ್ನಡ ಸಾಹಿತ್ಯ, ಭಾಷೆ, ಕಲೆ, ಸಂಸ್ಕೃತಿ ಇವುಗಳ ಬಗ್ಗೆ ಅಭಿಮಾನ ಹುಟ್ಟಿಸಲು ಸತತವಾಗಿ ಮತ್ತು ಅತ್ಯಂತ ಪ್ರಾಮಾಣಿಕತೆಯಿಂದ ಶ್ರಮಿಸಿದರು. ಇವರು ಅಧ್ಯಕ್ಷರಾಗಿದ್ದಾಗ ಕನ್ನಡದ ಆಚಾರ್ಯ ಪುರುಷರಾದ ಬಿ.ಎಂ.ಶ್ರೀ, ಡಿ.ವಿ.ಜಿ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಿ. ಕೆ. ವೆಂಕಟ

ರಾಮಯ್ಯ, ಜಿ. ಪಿ. ರಾಜರತ್ನಂ, ರಾಷ್ಟ್ರಕವಿ ಕುವೆಂಪು ಇತರರನ್ನು ಕರ್ನಾಟಕ ಸಂಘ ದಿಂದ ಆಹ್ವಾನಿಸಿ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಉಪನ್ಯಾಸಭಾಷಣವನ್ನು ಮಾಡಿಸಿದರು. ಹಾಗೂ ಕೆಲವಡೆಯಲ್ಲಿ ಮಹಾಬಲರಾಯರು ಕೂಡ ಭಾಷಣ ಮಾಡಿದ್ದರು.

ರಾಷ್ಟ್ರಕವಿ ಕುವೆಂಪುರವರ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ವಾಚನ ಸ್ಪರ್ಧೆಯನ್ನು ಪ್ರಪ್ರಥಮವಾಗಿ ವಿ|| ಮಹಾಬಲರಾಯರು ಕರ್ನಾಟಕದಲ್ಲಿ ಜಾರಿಗೆ ತಂದರು. ಇವರು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ ಮೈಸೂರಿಗೆ ಬರುತ್ತಿದ್ದ ಎಲ್ಲಾ ಪ್ರಸಿದ್ಧ ಸಾಹಿತಿಗಳಿಗೂ, ಗಮಕಿಗಳಿಗೂ, ಕವಿಗಳಿಗೂ ಮಹಾಬಲರಾಯರ ಮನೆ ಯಲ್ಲಿ ಆತಿಥ್ಯ, ವಸತಿ ಸೌಕರ್ಯ ಮತ್ತಿತರ ಸೌಲಭ್ಯಗಳು ಏರ್ಪಾಡಾಗುತ್ತಿದ್ದವು. ಅವರ ಮನೆ ಒಂದು ದೊಡ್ಡ ಛತ್ರವಾಗಿತ್ತು. ಸದಾ ಜನ ಜಂಗುಳಿಯಿಂದ ತುಂಬಿರು ತಿತ್ತು ಎಂಬುದಾಗಿ ಮಹಾಬಲರಾಯರ ಅಳಿಯನವರಾದ ತ್ರಿವಿಕ್ರಮ ಅವರು ತಿಳಿಸಿ ದ್ದಾರೆ. ಈ ಮಾತು ಸತ್ಯ. ನಾನು ಎಂ. ಆರ್. ಶ್ರೀನಿವಾಸಮೂರ್ತಿ ಅವರ ವಿಚಾರ ತಿಳಿಯಲು 10-5-1982ರಂದು ಅವರ ಮನೆಗೆ ಹೋಗಿದ್ದೆ. ನನಗೂ ಮಹಾಬಲ ರಾಯರಿಗೂ ಅಂದೇ ಮೊದಲ ಪರಿಚಯ ಮತ್ತು ಭೇಟಿ. ನನ್ನ ಸಂಶೋಧನೆಯ ವಿಚಾರ ತಿಳಿದಾಗ ಅವರಿಗೆ ಎಲ್ಲಿಲ್ಲದ ಸಂತೋಷ ಉಂಟಾಗಿ ಕಣ್ಣುಗಳಲ್ಲಿ ಆನಂದ ಭಾಷ್ಪ ಸುರಿಯಿತು. "ನನ್ನ ಅಣ್ಣನವರ ವಿಚಾರ ಸಂಶೋಧನೆ ಮಾಡುತ್ತಿರುವುದು ನನಗೆ ಹೆಮ್ಮೆಯ ವಿಚಾರ" ಎಂದಿದ್ದರು. ಅಂದು ಅವರ ಮನೆಯಲ್ಲಿ ಊಟದ ಏರ್ಪಾಟು ಮಾಡಿಸಿದ್ದರು. ಮೂರು, ನಾಲ್ಕು ಬಾರಿ ಅವರ ಮನೆಗೆ ಹೋಗಿ ಬಂದುದರಿಂದ ನಾನು ಅವರ ಮನೆಯ ಸದಸ್ಯರಲ್ಲಿ ಒಬ್ಬಳು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅವರಿಗೆ ತಮ್ಮ ಅಣ್ಣನ ವಿಚಾರವನ್ನೆಲ್ಲ ನನಗೆ ತಿಳಿಸಬೇಕೆಂಬ ಹಂಬಲವಿತ್ತು. ಜೊತೆಗೆ ಅವರಿಗೆ ಜ್ಞಾಪಕಕ್ಕೆ ಬಂದು ವಿಷಯವನ್ನೆಲ್ಲಾ ಗುರುತಿಸಿ ಇಡುತ್ತಿದ್ದರು. ತಿಳಿಸಲೇಬೇಕೆಂದು ಇಚ್ಛೆ ಉಂಟಾದಾಗ ಪತ್ರಬರೆದು ತನ್ನನ್ನ ಕರೆಯಿಸಿಕೊಂಡು ವಿಷಯ ತಿಳಿಸಿದ್ದರು. ಆ ರೀತಿ ತಿಳಿಸಿದ ವಿಷಯಗಳಲ್ಲಿ ಇದೂ ಒಂದು. ಒಮ್ಮೆ ಮಹಾಬಲರಾಯರಿಗೆ ಎಂ. ಆರ್. ಶ್ರೀನಿವಾಸಮೂರ್ತಿ ಪತ್ರ ಬರೆಯುತ್ತಾ

God is an abstract
Parents are concrete

ಎಂದರೆ, "ದೇವರು ಅಗೋಚರ. ಮಾತಾಪಿತೃಗಳು ಪ್ರತ್ಯಕ್ಷ ದೇವತೆಗಳು" ಎಂದು ತಿಳಿಸಿದ್ದರಂತೆ. ಮಹಾಬಲರಾಯರು ಮತ್ತು ಇತರ ಸಹೋದರರು ಎಂ. ಆರ್. ಶ್ರೀನಿವಾಸಮೂರ್ತಿ ಅವರಿಗೆ ಧರ್ಮರಾಯ ಎಂದು ಹೆಸರಿಟ್ಟಿದ್ದರಂತೆ.

ದಿವಂಗತ ಮಹಾಬಲರಾಯರು ದೇಶಪ್ರೇಮ, ಸಾರ್ವಜನಿಕಸೇವೆ, ಇತ್ಯಾದಿ ಕೆಲವು ಉನ್ನತ ಆದರ್ಶಗಳನ್ನು ಬಾಳಿನಲ್ಲಿರಿಸಿಕೊಂಡಿದ್ದ ಹಿರಿಯ ವ್ಯಕ್ತಿತ್ವವುಳ್ಳ ವ್ಯಕ್ತಿ. ಅವರು ಉತ್ತಮ ರೀತಿಯಲ್ಲಿ ಬಾಳಿ ಸುದೀರ್ಘ, ಸಾರ್ಥಕ ಜೀವನ ನಡೆಸಿ ಕೃತಾರ್ಥ ರಾದರು.

ಯಮುನಾಬಾಯಿ ಆರ್. ರಾವ್

# ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರಿದುದು)

## 36 ರೋಮನ್ ಸಾಮ್ರಾಜ್ಯದಲ್ಲಿ ಧಾರ್ಮಿಕ ಬೆಳವಣಿಗೆಗಳು

ಕ್ರಿ.ಶ.ದ ಮೊದಲೆರಡು ಶತಮಾನಗಳ ಲ್ಯಾಟಿನ್-ಗ್ರೀಕ್ ಸಾಮ್ರಾಜ್ಯದ ಮಾನವನ ಚೇತನ ಆತಂಕಪೂರಿತವಾದುದಾಗಿತ್ತು. ಅವರ ಆಸೆ ಆಕಾಂಕ್ಷೆಗಳು ಪೂರ್ಣವಾಗಿರಲಿಲ್ಲ. ಬಲಾತ್ಕಾರ ಕಾರ್ಯಗಳು ತಾಂಡವಾಡುತ್ತಿದ್ದುವು. ಡಂಭ ಮತ್ತು ಆಡಂಬರಗಳಿದ್ದುವು; ಗೌರವಕ್ಕೆ ಸ್ಥಾನವಿರಲಿಲ್ಲ. ಶಾಂತಿ ಮತ್ತು ಸ್ಥಿರವಾದ ಸುಖಗಳಿರಲಿಲ್ಲ. ಬಡಜನರಿಗೆ ಯಾವ ಸ್ಥಾನವೂ ಇರಲಿಲ್ಲ; ಅವರೆಲ್ಲ ಬಹು ಕಷ್ಟದಲ್ಲಿದ್ದರು. ಭಾಗ್ಯವಂತರು ಯಾವಾಗಲೂ ಮುಂದೇನಾಗುತ್ತದೆಯೋ ಎಂಬ ಭಯದಿಂದ ತೊಳಲುತ್ತಾ ಕಾತುರತೆಯಿಂದ ಸುಖಭೋಗಗಳನ್ನು ಹುಡುಕುತ್ತಿದ್ದರು. ಅನೇಕ ಪಟ್ಟಣಗಳಲ್ಲಿ ಜನರ ಆಸಕ್ತಿಯೆಲ್ಲಾ ಪಶುಗಳು ಮತ್ತು ಮನುಷ್ಯರು ಹೋರಾಡುತ್ತಿದ್ದ ಹಿಂಸೆ, ಸಾವುಗಳ ಆಗರವಾಗಿದ್ದ “ಅರೀನಾ”ದಲ್ಲಿ ಕೇಂದ್ರೀಕೃತವಾಗಿತ್ತು. ರೋಮನ್ ಪಾಳುಗಳಲ್ಲಿ ಅತ್ಯಂತ ವಿಶಿಷ್ಟವಾಗಿ ಕಂಡುಬರುವ ಒಂದು ಅಂಶವೆಂದರೆ ಆ್ಯಂಫಿಥಿಯೇಟರುಗಳು. ಜೀವನ ಹಾಗೇ ಮುಂದೆ ಸಾಗುತ್ತಿತ್ತು. ಮಾನವರ ಹೃದಯದ ತೊಳಲಾಟ ಗಹನವಾದ ಧಾರ್ಮಿಕ ಅಶಾಂತಿಯ ರೂಪದಲ್ಲಿ ಹೊರಬಿತ್ತು.

ಪ್ರಾಚೀನ ನಾಗರಿಕತೆಗಳ ಮೇಲೆ ಆರ್ಯರ ಧಾಳಿಕಾರರು ಬಂದು ಬಿದ್ದುದರ ಫಲವಾಗಿ ಅವುಗಳ ಹಳೆಯ ದೇವಸ್ಥಾನಗಳು ದೇವತೆಗಳು ಮತ್ತು ಅರ್ಚಕವರ್ಗ ಮಾಯವಾಗಿ ಹೋಯಿತು ಇಲ್ಲವೇ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಯಿತು. ವ್ಯವಸಾಯಗಾರರಾದ ಕಂದುವರ್ಣದ ಜನರು ನೂರಾರು ತಲೆಮಾರುಗಳ ಕಾಲ ತಮ್ಮ ಜೀವನ ಮತ್ತು ಮನೋಧರ್ಮಗಳನ್ನು ದೇವಸ್ಥಾನವೇ ಕೇಂದ್ರವಾಗಿದ್ದ ಸಮಾಜ ಜೀವನಕ್ಕೆ ಹೊಂದಿಸಿಕೊಂಡಿದ್ದರು. ಬಲಿ ಸಂಪ್ರದಾಯಗಳು, ಪೂಜಾಕ್ರಮಗಳು, ರಹಸ್ಯ ವಿಧಿಗಳಿಂದ, ಇವುಗಳ ವಿರುದ್ಧ ನಡೆದರೆ ಏನಾಗಿಬಿಡುವುದೋ ಎಂಬ ಭಯದಿಂದ ಇವರ ಮನಸ್ಸು ತುಂಬಿರುತ್ತಿತ್ತು. ಇಂದಿನ ನಮಗೆ ಇವರ ದೇವರುಗಳು ಪೈಶಾಚಿಕವಾಗಿ ಅಸಂಬದ್ಧವಾಗಿ ಕಾಣಬಹುದು. ಏಕೆಂದರೆ ನಮ್ಮ ಪ್ರಪಂಚ ಆರ್ಯರ ಪ್ರಭಾವಕ್ಕೊಳ

ಗಾಗಿವೆ. ಆಳವಾದ ಕನಸು ಕಾಣುತ್ತಿರುವಾಗ ಅದರಲ್ಲಿಯ ವಸ್ತುಗಳು ನಿಜವೆಂದೇ ಎನ್ನಿಸುವಂತೆ ಈ ಜನರಿಗೆ ತಮ್ಮ ದೇವರುಗಳು ನೈಜ ಜೀವನದಲ್ಲಿರುವವರೆಂದೇ ಎನಿಸು ತಿತ್ತು. ಸುಮೇರಿಯ ಅಥವಾ ಪುರಾತನ ಈಜಿಪ್ಟಿನಲ್ಲಿ ಒಂದು ನಗರವನ್ನು ಮತ್ತೊಂದು ನಗರದವರು ಜಯಿಸಿದರೆನ್ನೋಣ, ಆಗ ಸೋತ ನಗರವು ತನ್ನದೇವದೇವಿಯರನ್ನು ಬದಲಾಯಿಸಬೇಕಾಗುತ್ತಿತ್ತು ; ಕಡೆಯಪಕ್ಷ ದೇವತೆಗಳ ಹೆಸರನ್ನಾದರೂ ಬದಲಾಯಿಸ ಬೇಕಾಗುತ್ತಿತ್ತು. ಆದರೆ ಪೂಜಾವಿಧಿಗಳು ಮಾತ್ರ ಎಂದಿನಂತೆಯೇ ಇರುತ್ತಿದ್ದವು. ಅವುಗಳ ಮೂಲತತ್ತ್ವದಲ್ಲಿ ಏನೂ ವ್ಯತ್ಯಾಸವಾಗುತ್ತಿರಲಿಲ್ಲ. ಕನಸಿನಲ್ಲಿ ಕಾಣುತ್ತಿದ್ದ ರೂಪಗಳು ಬೇರೆಯಾಗಿರಬಹುದು, ಆದರೆ ಕನಸು ಮಾತ್ರ ಮುಂದುವರಿಯುತ್ತಲೇ ಇತ್ತು. ಈ ಕನಸೂ ಮೊದಲಿನ ಕನಸನ್ನೇ ಹೋಲುತಿತ್ತು. ಸುಮೇರಿಯವನ್ನು ಜಯಿಸಿದ ಮೊದಲ ಸೆಮಿಟಿಕ್ ಜನಕ್ಕೂ ಸುಮೇರಿಯನ್ನರಿಗೂ ಹೆಚ್ಚು ವ್ಯತ್ಯಾಸ ವಿರಲಿಲ್ಲ. ಹೀಗಿದ್ದುದರಿಂದ ಅವರು ಮೆಸಪೋಟೇಮಿಯದ ನಾಗರಿಕತೆಯ ಮತಧರ್ಮ ವನ್ನು ಅಷ್ಟೇನೂ ಆಳವಾಗಿ ಬದಲಾಯಿಸದೆಯೇ ಸ್ವೀಕರಿಸಲು ಸಾಧ್ಯವಾಯಿತು. ಈಜಿಪ್ಟ್ ಪರತಂತ್ರವಾದಾಗ ಸಹ ಯಾವಾಗಲೂ ಅಲ್ಲಿಯ ಧರ್ಮಕ್ಕೆ ಯಾವ ಧಕ್ಕೆಯೂ ಉಂಟಾಗಲಿಲ್ಲ. ಟಾಲೆಮಿಗಳು ಅಲ್ಲಿಯ ಅರಸರಾಗಿದ್ದಾಗಲೂ ರೋಮಿನ ಸೀಸರ್ ಗಳು ಅದನ್ನು ಆಳುತ್ತಿದ್ದಾಗಲೂ ಅಲ್ಲಿಯ ದೇವಾಲಯಗಳು, ಬಲಿಪೀಠಗಳು ಮತ್ತು ಅರ್ಚಕವರ್ಗ ಇವುಗಳ ಮುಖ್ಯ ಅಂಶಗಳು ಈಜಿಪ್ಟ್ ದೇಶದವೇ ಆಗಿ ಉಳಿದಿದ್ದುವು.

ಒಂದೇ ಬಗೆಯ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಗಳನ್ನುಳ್ಳ ಜನಾಂಗ ಗಳಲ್ಲಿ ಹೋರಾಟ ನಡೆದಾಗಲೆಲ್ಲ ಧಾರ್ಮಿಕ ಘರ್ಷಣೆಯನ್ನು ತಡೆಗಟ್ಟುವುದು ಸುಲಭ ಸಾಧ್ಯವಾಗಿತ್ತು. ಒಂದರಧರ್ಮವು ಮತ್ತೊಂದನ್ನು ತನ್ನೊಳಸೇರಿಸಿಕೊಳ್ಳಬಹು ದಾಗಿತ್ತು. ಅಥವಾ ಒಂದೇ ತೆರದ ಧರ್ಮಗಳು ಸೇರಿ ಒಂದು ಸಮುದಾಯವನ್ನು ರಚಿಸುತ್ತಿದ್ದುವು. ಯಾವುದಾದರೂ ಎರಡು ದೇವತೆಗಳು ಒಂದೇ ರೂಪಗುಣಗಳನ್ನು ಪಡೆದಿದ್ದರೆ ಈ ಎರಡೂ ದೇವತೆಗಳೂ ಒಂದೇ, ಹೆಸರು ಮಾತ್ರ ಬೇರೆ ಎಂದು ಜನರೂ ಅರ್ಚಕರೂ ಹೇಳುತ್ತಿದ್ದರು. ಈ ವಿಧದ ದೇವತೆಗಳ ಏಕೀಭಾವವನ್ನು ಥಿಯೋಕ್ರೇಷಿಯ ಎಂದು ಕರೆಯುತ್ತಾರೆ. ಕ್ರಿ.ಶ. ಮೊದಲಾಗುವುದಕ್ಕೆ ಮುಂಚಿನ ಸಾವಿರ ವರ್ಷಗಳಲ್ಲಿ ಮಹಾದಂಡ ಯಾತ್ರೆಗಳು ನಡೆದುವು. ಆ ಯುಗ ಥಿಯೋಕ್ರೇಷಿಯದ ಯುಗವಾಗಿತ್ತು. ವಿಶಾಲವಾದ ಪ್ರದೇಶಗಳಲ್ಲಿದ್ದ ಅನೇಕ ನಗರಗಳ ಸ್ಥಳೀಯ ದೇವತೆಗಳನ್ನು ಒಂದೇ ಸಾಮಾನ್ಯ ದೇವತೆಯೆಂದು ಜನ ಎಣಿಸುತ್ತಿದ್ದರು. ಅಥವಾ ಈ ಎಲ್ಲಾ ದೇವತೆಗಳನ್ನೂ ಒಂದೇ ದೇವರಲ್ಲಿ ಆವಾಹಿಸಿಬಿಟ್ಟರು. ಬೇಬಿಲಾನಿನ ಹೀಬ್ರೂಪ್ರವಾದಿಗಳು "ಪ್ರಪಂಚಕ್ಕೆಲ್ಲಾ ಧರ್ಮಪರನಾದ ಏಕಮಾತ್ರ ದೇವನಿರುವನು" ಎಂದು ಘೋಷಿ ಸಿದಾಗ ಆ ಭಾವನೆಯನ್ನು ಒಪ್ಪಿಕೊಳ್ಳಲು ಹೀಗೆ ಜನತೆ ಸಿದ್ಧವಾಗಿತ್ತು.

ಆದರೆ ಎಷ್ಟೋ ಸಂದರ್ಭಗಳಲ್ಲಿ ದೇವತೆಗಳಲ್ಲಿ ಅನೇಕ ವ್ಯತ್ಯಾಸಗಳಿದ್ದು ಹೀಗೆ ಒಂದು ದೇವತೆಯಲ್ಲಿ ಮತ್ತೊಂದನ್ನು ಆವಾಹಿಸುವುದು ಅಸಾಧ್ಯವಾಗಿತ್ತು. ಆಗ ಈ

ದೇವತೆಗಳಲ್ಲಿ ಏನಾದರೊಂದು ಸಂಬಂಧಕಲ್ಪಿಸಿ ಒಂದು ಸಮೂಹವನ್ನು ರಚಿಸುತ್ತಿದ್ದರು. ಉದಾಹರಣೆಗೆ ಗ್ರೀಕರು ಬರುವುದಕ್ಕೆ ಮುಂಚೆ ಈಜಿಯನ್ ಪ್ರದೇಶದಲ್ಲಿದ್ದ ಸಂಸ್ಕೃತಿಯಲ್ಲಿ ಅನೇಕ ಮಾತೃ ದೇವತೆಗಳಿದ್ದರು. ಇಂತಹ ದೇವಿಯರಲ್ಲಿ ಮತ್ತು ಬೇರೆಯ ದೇವರಲ್ಲಿ ಜನರು ಪತಿಪತ್ನಿ ಸಂಬಂಧವನ್ನು ಕಲ್ಪಿಸುತ್ತಿದ್ದರು. ದೇವರು ಪ್ರಾಣಿ, ನಕ್ಷತ್ರ ಅಥವಾ ಗ್ರಹ ಇಂತಹ ರೂಪದಲ್ಲಿದ್ದರೆ ಈ ದೇವರುಗಳಿಗೆ ಮನುಷ್ಯಾಕೃತಿಯನ್ನು ಕೊಟ್ಟು ಆಯಾ ಪ್ರಾಣಿ, ಗ್ರಹ ಅಥವಾ ನಕ್ಷತ್ರಗಳನ್ನು ಆಯಾ ದೇವರ ಆಭರಣ ಅಥವಾ ಚಿಹ್ನೆಗಳೆಂದು ಎಣಿಸುತ್ತಿದ್ದರು. ಸರ್ಪ, ಸೂರ್ಯ ಮತ್ತು ನಕ್ಷತ್ರಗಳು ಇವುಗಳಿಗೆ ಉದಾಹರಣೆ. ಕೆಲವು ವೇಳೆ ಸೋತುಹೋದ ಜನರ ದೇವತೆ ಗೆದ್ದವರ ದೇವತೆಯ ಶತ್ರುವಾಗಬಹುದಾಗಿತ್ತು. ಹಾಗೆ ಆವಾಗ ಗೆದ್ದವರ ದೇವತೆ "ಪ್ರಕಾಶಮಾನವಾದ ಒಳ್ಳೆದೇವರು" ಆಗಿ ಸೋತವರ ದೇವತೆಗೆ ಕ್ಷುದ್ರದೈವದ ಸ್ಥಾನ ಸಿಗುತ್ತಿತ್ತು. ದೇವತಾಶಾಸ್ತ್ರದ ಚರಿತ್ರೆಯಲ್ಲಿ ತುಂಬ ಪುರಾತನಕಾಲದ ಸ್ಥಳೀಯ ದೇವತೆಗಳ ರೂಪಾಂತರಗಳನ್ನು ಕಾಣುತ್ತೇವೆ.

ಮೊದಲು ನಗರ ಸಂಸ್ಥಾನಗಳಿಂದ ಕೂಡಿದ್ದ ಈಜಿಪ್ಟ್ ಬೆಳೆದು ಒಂದೇ ರಾಜ್ಯವಾದಾಗ ಅಲ್ಲಿ ಈ ರೀತಿಯ ರೂಪಾಂತರಗಳು ಬೇಕಾದಷ್ಟು ಆದುವು. ಸ್ಥೂಲವಾಗಿ ಹೇಳುವುದಾದರೆ ಬಲಿತೆಗೆದುಕೊಳ್ಳುತ್ತಿದ್ದ ಸುಗ್ಗಿಯ ದೇವತೆ ಓಸಿರಿಸ್ಸನು ಅಲ್ಲಿಯ ಮುಖ್ಯ ದೈವವಾಗಿದ್ದನು. ಫ್ಯಾರೋಗಳು ಈ ದೇವರ ಭೌತಿಕರೂಪವೆಂದು ಜನರು ನಂಬುತ್ತಿದ್ದರು. ಓಸಿರಿಸ್ ಮತ್ತೆಮತ್ತೆ ಸತ್ತು ಹುಟ್ಟುವನೆಂದು ಹೇಳಲಾಗುತ್ತಿತ್ತು. ಈತನು ಬೀಜವೂ ಆಗಿದ್ದನು, ಸುಗ್ಗಿಯ ಫಲವೂ ಆಗಿದ್ದನು. ಇದೇ ಭಾವನೆ ಸಹಜವಾಗಿ ಮುಂದೆ ಬೆಳೆದು ಈತನು ಮಾನವನ ಅಮೃತತ್ವದ ಸಾಧನವೆಂದು ಪರಿಗಣಿಸಲಾಯಿತು. ಮಣ್ಣಿನಲ್ಲಿ ಹೂತಿಟ್ಟ ಮೊಟ್ಟೆಗಳಿಂದ ಮೇಲೆ ಏಳುವ ಸ್ಕಾರಾಬಿಯಸ್ ಜಾತಿಯ ಜೀರುಂಡೆ, ಸಂಜೆ ಮುಳುಗಿ ತಿರುಗಿ ಉದಯಿಸುವ ಪ್ರಕಾಶಮಾನನಾದ ಸೂರ್ಯ ಈತನ ಚಿಹ್ನೆಗಳಾದುವು. ಕೆಲವು ಕಾಲಾನಂತರ ಐಸಿಸ್ ಎಂಬ ಪವಿತ್ರ ವೃಷಭ ಮತ್ತು ಓಸಿರಿಸ್ ಒಂದೇ ಎಂದು ಜನರು ಎಣಿಸತೊಡಗಿದರು. ಐಸಿಸ್‌ದೇವಿ ಈತನ ಜೊತೆಗಾರ್ತಿಯಾಗಿದ್ದಳು. ಹಾಥೊರ್ ಎಂಬ ಹಸುವಿನ ರೂಪದ ದೇವತೆ, ಬಾಲಚಂದ್ರ, ಸಮುದ್ರತಾರೆ ಈ ರೂಪಗಳನ್ನು ಈಕೆ ಪಡೆದಿದ್ದಳು. ಓಸಿರಿಸ್ಸನ ಮರಣದ ನಂತರ ಈಕೆ ಹೋರಸ್ ಎಂಬ ಮಗುವಿಗೆ ಜನ್ಮಕೊಡುತ್ತಾಳೆ. ಹೋರಸ್ಸನಿಗೆ ಸೂರ್ಯೋದಯ ಮತ್ತು ಗಿಡುಗ ಈ ರೂಪಗಳು ಉಂಟು. ಹೋರಸ್ಸನೇ ಬೆಳೆದು ಓಸಿರಿಸ್ ಆಗುತ್ತಾನೆ. ಬಾಲಚಂದ್ರನ ಮೇಲೆ ಹೋರಸ್ ಶಿಶುವನ್ನೆತ್ತಿ ಕೊಂಡಿರುವಂತೆ ಐಸಿಸ್ ದೇವಿಯನ್ನು ಚಿತ್ರಿಸಿರುತ್ತಾರೆ. ಈ ಸಂಬಂಧಗಳು ತರ್ಕಬದ್ಧವಾದುವಲ್ಲ. ಮಾನವನ ಯೋಚನಾಕ್ರಮ ದೃಢವಾಗಿ ವ್ಯವಸ್ಥಿತವಾಗುವ ಮೊದಲೇ ಇವುಗಳು ರೂಪುಗೊಂಡಿದ್ದುವು. ಈ ಕಾರಣದಿಂದ ಇವುಗಳಿಗೆ ಏನೋ ಒಂದು ಬಗೆಯ ಕನಸಿನಲ್ಲಿರುವಂತಹ ಸಂಗತಿ ಇದೆ. ಈ ಮಾನವರು ದೇವತೆಗಳ ಕೆಳಗೆ ಬೇರೆ ದೇವತೆಗಳುಂಟು. ಈ ಇತರ ದೇವತೆಗಳು

ಆ ಮಾನವರಿಗಿಂತ ದುಷ್ಟದೇವತೆಗಳೇ : ದುರ್ದೇವತೆಗಳು, ನಾಯಿಮುಖದ ಅನೂಬಿಸ್, ಅಂಧಕಾರಮಯರಾತ್ರಿ, ಎಲ್ಲವನ್ನೂ ಕಬಳಿಸುವ, ಆಸೆ ತೋರಿಸಿ ವಂಚಿಸುವ ದೇವ ಮಾನವರ ಶತ್ರುಗಳಾದ ಘೋರ ದೇವತೆಗಳು.

ಯಾವುದೇ ಧರ್ಮವಾಗಲಿ ಮಾನವನ ಚೇತನದ ಮಟ್ಟಕ್ಕೆ ಎದ್ದೇ ಏಳುತ್ತದೆ. ಮೇಲೆ ಹೇಳಿದ ತರ್ಕ ಬಾಹಿರವಾದ ಒರಟೊರಟಾದ ಸಂಕೇತಗಳಿಂದಲೇ ಈಜಿಪ್ಟಿನ ಜನರು ನೈಜವಾದ ಭಕ್ತಿ ಮತ್ತು ಶಾಂತಿ ಸಮಾಧಾನಗಳ ಮಾರ್ಗಗಳನ್ನು ರೂಪಿಸಿ ಕೊಂಡಿರಬೇಕು. ಈಜಿಪ್ಟಿನಲ್ಲಿ ಅಮೃತತತ್ವದ ಆಸೆ ಬಹು ಆಳವಾಗಿತ್ತು. ಅಲ್ಲಿನ ಧರ್ಮವೂ ಆ ಆಸೆಯ ಜಾಡನ್ನೇ ಹಿಡಿಯಿತು. ಮತ್ತೆ ಯಾವ ಮತವೂ ಅಮೃತತತ್ವಕ್ಕೆ ಇಷ್ಟು ಪ್ರಾಮುಖ್ಯವನ್ನು ಕೊಡಲಿಲ್ಲ. ಈಜಿಪ್ಟ್ ವಿದೇಶಿ ದಂಡನಾಯಕರ ಕೈವಶವಾಗಿ ಅಲ್ಲಿಯ ದೇವತೆಗಳಿಗೆ ರಾಜಕೀಯ ಪ್ರಾಮುಖ್ಯ ತಪ್ಪಿಹೋದ ಮೇಲೆ ಜನರಿಗೆ ದೇವತೆ ಗಳಿಂದ ತೃಪ್ತಿ ಸಿಗದೆ ಮರಣಾನಂತರದ ಜೀವನದಲ್ಲಿ ಈ ಜೀವನಕ್ಕೆ ಪರಿಹಾರ ಪಡೆಯ ಬೇಕೆಂಬ ಆಸೆ ಮತ್ತೂ ಹೆಚ್ಚಿತು.

ಗ್ರೀಕ್ ದಂಡಯಾತ್ರೆಯ ನಂತರ ಸ್ಥಾಪಿತವಾದ ಹೊಸ ಪಟ್ಟಣ ಅಲೆಕ್ಸಾಂಡ್ರಿ ಯವು ಈಜಿಪ್ಟ್ ದೇಶವೊಂದಕ್ಕೇ ಅಲ್ಲದೆ ಸಮಸ್ತ ಗ್ರೀಕ್ ಪ್ರಪಂಚದ ಧಾರ್ಮಿಕ ಕೇಂದ್ರವಾಯಿತು. ಸೆರಾಪಿಯಮ್ ಎಂಬ ಒಂದು ದೊಡ್ಡ ದೇವಸ್ಥಾನವನ್ನು ಒಂದನೆಯ ಟಾಲೆಮಿ ನಿರ್ಮಿಸಿದನು. ಇಲ್ಲಿ ಒಂದು ಬಗೆಯ ತ್ರಿಮೂರ್ತಿ ಪೂಜೆ ನಡೆಯುತ್ತಿತ್ತು. ಸೆರಾಪಿಸ್ (ಓಸಿರಿಸ್–ಏಪಿಸ್ ದೇವತೆಗೆ ಕೊಟ್ಟ ಹೊಸ ಹೆಸರು), ಐಸಿಸ್ ಮತ್ತು ಹೋರಸ್ ಇವರೇ ಈ ಮೂರು ದೇವತೆಗಳು. ಈ ಮೂವರನ್ನು ಒಂದೇ ದೇವರ ಮೂರು ರೂಪಗಳೆಂದು ಪರಿಗಣಿಸುತ್ತಿದ್ದರು. ಪರ್ಷಿಯದಲ್ಲಿ ಸೂರ್ಯದೇವ ಮತ್ತು ಗ್ರೀಸಿ ನಲ್ಲಿ ಜ್ಯೂಪಿಟರ್‌ಗಳಿಗಿದ್ದ ಸ್ಥಾನವೇ ಇಲ್ಲಿ ಸೆರಾಪಿಸ್ ದೇವನಿಗಿತ್ತು. ಈ ತೆರದ ಪೂಜಾ ಪದ್ಧತಿ ಗ್ರೀಕ್ ಪ್ರಭಾವ ಹರಡಿದ್ದಲ್ಲೆಲ್ಲಾ ಉತ್ತರ ಹಿಂದೂಸ್ಥಾನ ಮತ್ತು ಪಶ್ಚಿಮ ಚೈನಾಗಳಿಗೆ ಸಹ–ಹರಡಿತು. ಸಾಮಾನ್ಯ ಜನಜೀವನ ಅತ್ಯಂತ ಕಷ್ಟಕರವಾಗಿ ದಾರಿದ್ರ್ಯ ದಿಂದ ತುಂಬಿದ ಅಂದಿನ ಪ್ರಪಂಚದಲ್ಲಿ ಅಮೃತತತ್ವದ ಭಾವನೆಯನ್ನು–ಅದರಲ್ಲೂ ಇಹ ಲೋಕದ ಕಷ್ಟಗಳಿಗೆ ಮುಂದೆ ಶಾಶ್ವತವಾದ ಪ್ರತಿಫಲ, ಸಮಾಧಾನ ಸಿಗುವುದೆಂಬ ಭರವಸೆಯನ್ನು–ಎಲ್ಲರೂ ಸ್ವಾಗತಿಸಿದರು. ಸೆರಾಪಿಸ್ಸನಿಗೆ "ಆತ್ಮಗಳ ಸಂರಕ್ಷಕ" ನೆಂಬ ಹೆಸರು ಬಂದಿತು. ಅಂದಿನ ಭಕ್ತಿಗೀತೆಗಳು "ಮರಣಾನಂತರವೂ ನಾವು ಆತನ ಕರುಣಾಮಯ ರಕ್ಷಣೆಯಲ್ಲಿರುವೆವು" ಎಂದು ಸೆರಾಪಿಸ್ ದೇವರನ್ನು ಸ್ತುತಿಸುತ್ತಿದ್ದುವು. ಐಸಿಸ್‌ದೇವಿಗೆ ಅನೇಕ ಭಕ್ತರಿರುತ್ತಿದ್ದರು. "ಸ್ವರ್ಗಲೋಕದ ರಾಣಿ"ಯೆಂಬ ಹೆಸರಿದ್ದ ಈಕೆಯ ಮೂರ್ತಿ ಹೋರಸ್ ಶಿಶುವನ್ನು ಎತ್ತಿಕೊಂಡಿದ್ದಂತೆ ನಿರ್ಮಿತವಾಗಿರುತ್ತಿತ್ತು. ಇದರ ಮುಂದೆ ಮೇಣದ ಬತ್ತಿ ಹಚ್ಚಿಟ್ಟು ಕಾಣಿಕೆಗಳನ್ನರ್ಪಿಸುತ್ತಿದ್ದರು. ಬ್ರಹ್ಮಚರ್ಯ ವನ್ನು ಪಾಲಿಸುತ್ತಿದ್ದ ತಲೆಮುಂಡನ ಮಾಡಿಸಿಕೊಂಡ ಅರ್ಚಕರು ದೇವಿಯ ಪೀಠದಲ್ಲಿ ಪೂಜೆಸಲ್ಲಿಸುತ್ತಿದ್ದರು.

ರೋಮನ್ ಸಾಮ್ರಾಜ್ಯ ಹರಡಿದಂತೆ ಹೊಸದಾಗಿ ಬೆಳೆಯುತ್ತಿದ್ದ ಈ ಪೂಜಾ ಪದ್ಧತಿ ಪಶ್ಚಿಮ ಯೂರೋಪನ್ನು ಪ್ರವೇಶಿಸಿತು. "ಸೆರಾಪಿಸ್-ಐಸಿಸ್" ದೇವಾಲಯಗಳು, ಮಂತ್ರೋಚ್ಚಾರಣೆ ಮಾಡುತ್ತಿದ್ದ ಪೂಜಾರಿಗಳು, ಅಮೃತತತ್ವದಲ್ಲಿ ನಂಬಿಕೆ ರೋಮನ್ ಆಡಳಿತ ಹರಡಿದ್ದಲ್ಲೆಲ್ಲಾ ಹರಡಿದುವು. ಆದರೆ ಈ ಮತಕ್ಕೂ ಅನೇಕ ಪ್ರತಿಸ್ಪರ್ಧಿಗಳಿದ್ದುವು. ಇವುಗಳಲ್ಲಿ ಮುಖ್ಯವಾದುದು ಮಿತ್ರ ಪಂಥ. ಪರ್ಷಿಯ ಈ ಮತಕ್ಕೆ ಮೂಲಸ್ಥಾನ. ಇದರ ಕೇಂದ್ರ ಅಂಶವೆಂದರೆ ಮಿತ್ರಾಸ್ ಎನ್ನುವವನು ಒಂದು ಪವಿತ್ರ ಗೂಳಿಯನ್ನು ಬಲಿಕೊಟ್ಟಿದ್ದು. ಈ ರಹಸ್ಯಮಯ ವಿಧಿಯ ಅರ್ಥ ಏನೆಂದು ಈಗ ಯಾರಿಗೂ ಗೊತ್ತಿಲ್ಲ. ಜಟಿಲವೂ ಸೂಕ್ಷ್ಮವೂ ಆದ ಸೆರಾಪಿಸ್-ಐಸಿಸ್ ಮತಕ್ಕಿಂತ ಇದು ಪ್ರಾಚೀನಕಾಲದ ಅಸಂಸ್ಕೃತ ನಂಬಿಕೆಯೆನಿಸುತ್ತದೆ. ಇಲ್ಲಿ ಮಾನವನ ಸಂಸ್ಕೃತಿಯಲ್ಲಿ ಹೆಲಿಯೋಲಿಥಿಕ್ ಯುಗದ ರಕ್ತಬಲಿಗಳ ಹಂತಕ್ಕೆ ನೇರವಾಗಿ ಹಿಂತೆರಳಿದಂತೆ ಎನಿಸುತ್ತವೆ. ಈ ಮತದ ಸ್ಮಾರಕಗಳಾಗಿ ಉಳಿದಿರುವ ಕಟ್ಟಡಗಳ ಮೇಲೆ ಗೂಳಿಯೊಂದರ ಚಿತ್ರವನ್ನು ಕಾಣಬಹುದು. ತನ್ನ ದೇಹದ ಪಕ್ಕದಲ್ಲಿ ಆಗಿರುವ ಗಾಯದಿಂದ ಹೇರಳವಾಗಿ ರಕ್ತ ಸುರಿಯುತ್ತಿರುವಂತೆ, ಈ ರಕ್ತದಿಂದ ಹೊಸಜೀವ ಉದ್ಭವಿಸುತ್ತಿರುವಂತೆ ಗೂಳಿ ಚಿತ್ರಿತವಾಗಿರುತ್ತದೆ. ಈ ಪಂಥದ ಉಪಾಸಕನು ದೀಕ್ಷೆ ಪಡೆಯಬೇಕಾದಾಗ ನಿಜವಾಗಿಯೂ ಬಲಿಯಾದ ಗೂಳಿಯ ರಕ್ತದಲ್ಲಿ ಸ್ನಾನಮಾಡಬೇಕಾಗಿತ್ತು. ಬಲಿಯಾದ ಪಶುವಿನ ರಕ್ತ ಅವನ ಮೇಲೆ ಸುರಿಯುವಂತೆ ಅದನ್ನು ಒಂದು ಅಟ್ಟಣೆಯ ಮೇಲೆ ನಿಲ್ಲಿಸಿ ಬಲಿಕೊಟ್ಟು ಅದರ ಕೆಳಗೆ ದೀಕ್ಷೆ ಪಡೆಯಬೇಕಾದವನನ್ನು ನಿಲ್ಲಿಸುತ್ತಿದ್ದರು.

ಇವೆರಡೂ ಪಂಥಗಳೂ ವ್ಯಕ್ತಿನಿಷ್ಠ ಧರ್ಮಗಳು. ಮೊದಲಿನ ರೋಮನ್ ಚಕ್ರವರ್ತಿಗಳ ಕಾಲದಲ್ಲಿ ಗುಲಾಮರನ್ನು ಮತ್ತು ರೋಮನ್ ನಾಗರಿಕರನ್ನು ಆಕರ್ಷಿಸಿದ ಅನೇಕ ಇತರ ಪಂಥಗಳೂ ಇಂತಹುವೇ. ಬಿಡಿ ವ್ಯಕ್ತಿಗಳ ಆತ್ಮನ ಮೋಕ್ಷ ಮತ್ತು ಚಿರಂಜೀವಿತ್ವಕ್ಕೆ ಇವು ಗಮನ ಕೊಡುತ್ತವೆ, ಹಿಂದಿನ ಧರ್ಮಗಳು ಹೀಗಿರಲಿಲ್ಲ. ಅವುಗಳೆಲ್ಲ ಸಾಂಘಿಕ ಧರ್ಮಗಳು. ಹಳೆಯ ದೇವ ದೇವಿಯರು ಪ್ರಪ್ರಥಮವಾಗಿ ರಾಷ್ಟ್ರದ ಅಥವಾ ನಗರದ ದೇವ ದೇವಿಯರಾಗಿರುತ್ತಿದ್ದರು. ವ್ಯಕ್ತಿಗೆ ಅಲ್ಲಿ ಯಾವಾಗಲೂ ಎರಡನೆಯ ಸ್ಥಾನವಿತ್ತು. ದೇವತೆಗಳಿಗೆ ಅರ್ಪಿಸುವ ಬಲಿ ಮುಂತಾದುವು ಸಾರ್ವಜನಿಕ ಸಮಾರಂಭಗಳಾಗಿರುತ್ತಿದ್ದುವು. ಇಹ ಪ್ರಪಂಚದಲ್ಲಿ ಎಲ್ಲರಿಗೂ ಬೇಕಾಗುವ ವಾಸ್ತವಿಕವಾದ ಸಾಮೂಹಿಕ ಅವಶ್ಯಕತೆಗಳಿಗೆ ಈ ಸಮಾರಂಭಗಳು ಸಂಬಂಧಿಸಿರುತ್ತಿದ್ದುವು. ಆದರೆ ಮೊದಲು ಗ್ರೀಕರು ಬಳಿಕ ರೋಮನ್ನರು ರಾಜಕೀಯದಿಂದ ಮತವನ್ನು ಬೇರೆ ಮಾಡಿದರು. ಈಜಿಪ್ಟಿನ ಸಂಪ್ರದಾಯವನ್ನನುಸರಿಸಿ ಧರ್ಮ ಇಹಲೋಕವನ್ನು ಬಿಟ್ಟು ಪರಲೋಕದ ಕಡೆ ತಿರುಗಿತು.

ವ್ಯಕ್ತಿನಿಷ್ಠವಾದ ಅಮೃತತ್ವ ಪ್ರತಿಪಾದಕವಾದ ಈ ಮತಗಳಿಂದಾಗಿ ಹಳೆಯ ರಾಷ್ಟ್ರೀಯ ಧರ್ಮಗಳಲ್ಲಿ ಜನರಿಗಿರುತ್ತಿದ್ದ ಉದ್ವೇಗ ಮತ್ತು ಭಾವುಕತೆಗಳು ಹೊರಟು

ಹೋದರೂ ಆ ಹಳೆಯ ಧರ್ಮಗಳನ್ನು ಇವು ಸಂಪೂರ್ಣವಾಗಿ ಒತ್ತರಿಸಲಿಲ್ಲ. ಮೊದಲ ರೋಮನ್ ಚಕ್ರವರ್ತಿಗಳ ಕ್ಕೆ ಕೆಳಗಿನ ಒಂದು ನಗರವನ್ನು ಪರಿಶೀಲಿಸಿದರೆ ಅಲ್ಲಿ ಎಲ್ಲಾ ತೆರದ ದೇವ ದೇವಿಯರ ದೇವಾಲಯಗಳಿದ್ದುದು ತೋರಿಬರುತ್ತದೆ. ರೋಂ ನಗರದ ಅತ್ಯುನ್ನತ ದೇವನಾದ ಕ್ಯಾಪಿಟೊಲ್‌ನ ಜ್ಯೂಪಿಟರನ ದೇವಸ್ಥಾನವೊಂದು ಮತ್ತು ಬಹುಶಃ ಅಂದಿನ ಚಕ್ರವರ್ತಿಯದೊಂದು ದೇವಸ್ಥಾನ ಅಲ್ಲಿರುತ್ತಿದ್ದುವು. ತಾವೂ ದೇವರುಗಳೆಂದು ಕರೆಯಿಸಿಕೊಳ್ಳಬಹುದೆಂಬುದು ರೋಮನ್ ಚಕ್ರವರ್ತಿಗಳು ಈಜಿಪ್ಟಿನ ಫ್ಯಾರೋಗಳಿಂದ ಕಲಿತಿದ್ದ ಪಾಠ. ಅಂತಹ ದೇವಸ್ಥಾನಗಳಲ್ಲಿ ಒಂದು ರೀತಿಯ ಗಾಂಭೀರ್ಯ ಪೂರ್ಣವಾದ ಭಾವನಾರಹಿತವಾದ ರಾಜಕೀಯ ದೃಷ್ಟಿಯ ಪೂಜೆ ನಡೆಯುತ್ತಿತ್ತು. ಅಲ್ಲಿ ಜನರು ತಮ್ಮ ರಾಜನಿಷ್ಠೆಯನ್ನು ತೋರುವ ಸಲುವಾಗಿ ಕಾಣಿಕೆ ಒಪ್ಪಿಸಿ ಒಂದು ಚಿಟಿಕೆ ಧೂಪವನ್ನು ಉರಿಸಿ ಹಿಂತಿರುಗುತ್ತಿದ್ದರು. ಆದರೆ ಸಂಕಟಗಳು ಬಂದಾಗ ಜನ ಹೋಗುತ್ತಿದ್ದುದು ತಮ್ಮ ಪ್ರೀತಿಯ ದೇವಿ ಸ್ವರ್ಗದ ರಾಣಿ ಐಸಿಸ್‌ಳ ದೇವಾಲಯಕ್ಕೆ, ಅಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಂಡು ಅದರಿಂದ ಪಾರಾಗುವ ದಾರಿ ತೋರೆಂದು ಕೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದರು.

ಕೆಲವು ಕಡೆಗಳಲ್ಲಿ ವಿಚಿತ್ರವಾದ ಸ್ಥಳದೇವತೆಗಳೂ ಇದ್ದುವು. ಉದಾಹರಣೆಗೆ ಸೆವಿಲ್ ಪಟ್ಟಣದಲ್ಲಿ ಬಹುಕಾಲ ಕಾರ್ಥೇಜಿನ ವೀನಸ್ ದೇವಿಯ ಪೂಜೆ ನಡೆಯುತ್ತಿತ್ತು. ಅಥವಾ ಗವಿಯಲ್ಲೋ ನೆಲದ ಕೆಳಗೆ ಕಟ್ಟಿದ ದೇವಾಲಯದಲ್ಲಿಯೋ ಮಿತ್ರಾಸ್ ದೇವರ ಬಲಿಪೀಠ ಇರುತ್ತಿತ್ತು. ಇಲ್ಲಿ ದೇವರ ಹೆಸರಿನಲ್ಲಿ ಅನೇಕ ಸೇವಕರೂ ಗುಲಾಮರೂ ಇರುತ್ತಿದ್ದರು. ಪ್ರಾಯಶಃ ಯೆಹೂದ್ಯರ ಸಿನಾಗೋಗ್ ಒಂದು ಇರುತ್ತಿತ್ತು. ಇಲ್ಲಿಯ ಯೆಹೂದ್ಯರು ಸೇರಿ ಬೈಬಲ್ ಗ್ರಂಥವನ್ನು ಓದಿ ಪ್ರಪಂಚವನ್ನೆಲ್ಲ ಆಳುವ ಅದೃಶ್ಯ ದೇವನಲ್ಲಿ ತಮ್ಮ ಭಕ್ತಿಯನ್ನು ಸಲ್ಲಿಸುತ್ತಿದ್ದರು. ಕೆಲವು ಸಲ ಸರ್ಕಾರದ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸುವ ಬಗ್ಗೆ ಯೆಹೂದ್ಯರ ಮತ್ತು ಸರ್ಕಾರದ ನಡುವೆ ವಿವಾದ ಏಳುತ್ತಿತ್ತು. ತಮ್ಮ ದೇವರು ಮೂರ್ತಿ ಪೂಜೆಯನ್ನು ಸಹಿಸನೆಂದು ಹೇಳಿ ಇವರು ಸೀಸರನ ಸಾರ್ವಜನಿಕ ಪೂಜೆಯಲ್ಲಿ ಭಾಗವಹಿಸುತ್ತಿರಲಿಲ್ಲ. ಇದೇ ಭಾವನೆಯಿಂದ ಇವರು ಧ್ವಜ ವಂದನೆ ಸಹಾ ಮಾಡುತ್ತಿರಲಿಲ್ಲ.

ಪೌರ್ವಾತ್ಯ ರಾಷ್ಟ್ರಗಳಲ್ಲಿ ಬೌದ್ಧಮತ ಸ್ಥಾಪಿತವಾಗುವ ಮುಂಚೆ ಸಹ ಅನೇಕ ವಿರಕ್ತ ತಪಸ್ವಿಗಳಿರುತ್ತಿದ್ದರು. ಇವರು ಪ್ರಾಪಂಚಿಕ ಸಿದ್ಧಿಗಳಲ್ಲಿ ಅನೇಕವನ್ನು ತ್ಯಜಿಸಿ, ಮದುವೆ, ಆಸ್ತಿಗಳನ್ನು ಧಿಕ್ಕರಿಸಿ ವಿರಕ್ತ ಜೀವನ, ಏಕಾಂತತೆ ಮತ್ತು ಯಾತನಾಪೂರಿತ ಜೀವನಗಳಲ್ಲಿ ಪ್ರಪಂಚದ ಒತ್ತಡ, ನೋವುಗಳಿಂದ ಬಿಡುಗಡೆಯನ್ನೂ ಆಧ್ಯಾತ್ಮಿಕ ಶಕ್ತಿಗಳನ್ನೂ ಅರಸುತ್ತಿದ್ದರು. ಬುದ್ಧನು ಅತಿಕಠಿಣ ತಪಸ್ಸು ಮಾಡುವುದನ್ನು ಒಪ್ಪುತ್ತಿರಲಿಲ್ಲ. ಆದರೂ ಆತನ ಶಿಷ್ಯರಲ್ಲಿ ಅನೇಕರು ಬಹು ಕಠೋರವಾದ ಸಂನ್ಯಾಸ ಜೀವನ ನಡೆಸುತ್ತಿದ್ದರು. ಅಷ್ಟೇನೂ ಬೆಳಕಿಗೆ ಬರದ ಕೆಲವು ಗ್ರೀಕ್ ಸಂಘಗಳು ಇದೇ ಭಾವನೆಯಿಂದ ಕೂಡಿದ್ದು ಇಂತಹ ಕ್ರೂರ ಜೀವನವನ್ನು ಬೋಧಿಸುತ್ತಿದ್ದುವು. [illegible]

ಪಾಲಿಸುವವರು ತಮ್ಮ ಶರೀರಗಳಿಗೆ ತಾವೇ ಗಾಯ ಮಾಡಿಕೊಳ್ಳುತಿದ್ದುದೂ ಉಂಟು. ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಜುಡಿಯ ಮತ್ತು ಅಲೆಕ್ಸಾಂಡ್ರಿಯಲ್ಲಿದ್ದ ಯಹೂದ್ಯರಲ್ಲಿ ಸಹ ದೇಹವನ್ನು ದಂಡಿಸಿ ತಪಸ್ಚರ್ಯೆ ಮಾಡುವ ಪದ್ಧತಿ ಬಂದಿತು. ಅನೇಕ ಜನರು ಪ್ರಾಪಂಚಿಕ ಜೀವನವನ್ನು ತ್ಯಜಿಸಿ ಕಠಿಣ ತಪಸ್ಸು ಮತ್ತು ಆಧ್ಯಾತ್ಮ ಚಿಂತನೆಯಲ್ಲಿ ತಮ್ಮ ಜೀವನವನ್ನು ಕಳೆಯುತ್ತಿದ್ದರು. ಎಸ್ಸೆನೆಸ್ ಪಂಥ ಇಂತಹುದೇ. ಅಂತೂ ಕ್ರಿ.ಶ.ದ ಮೊದಲ ಎರಡು ಶತಮಾನಗಳಲ್ಲಿ ಎಲ್ಲೆಲ್ಲಿಯೂ ಹೀಗೇ ಜನರು ಇಹಲೋಕದ ಜೀವನವನ್ನು ತಿರಸ್ಕರಿಸಿ ಅದರ ಕಷ್ಟನಿಷ್ಠುರಗಳಿಂದ "ಮೋಕ್ಷ"ವನ್ನು ಹುಡುಕುತ್ತಿದ್ದರು. ಪ್ರಾಚೀನಕಾಲದ ದೇವಾಲಯ, ಅರ್ಚಕ ವರ್ಗ, ನ್ಯಾಯಸೂತ್ರಗಳು ಮತ್ತು ಸಂಪ್ರದಾಯಗಳಲ್ಲಿ ಶ್ರದ್ಧೆಯಿದ್ದ ಸುಬದ್ಧವಾದ ಸಮಾಜ ಈಗ ಇರಲಿಲ್ಲ. ಗುಲಾಮಗಿರಿ, ಕ್ರೌರ್ಯ, ಭಯ, ಕಳವಳ, ದುಂದುಗಾರಿಕೆ, ಆಡಂಬರ ಮತ್ತು ಹುಚ್ಚು ಹುಚ್ಚಾದ ಇಂದ್ರಿಯ ಲೋಲುಪತೆಗಳು ತುಂಬಿದ್ದ ಅಂದಿನ ಸಮಾಜದಲ್ಲಿ ಆತ್ಮತಿರಸ್ಕಾರ ಮತ್ತು ಮನಸ್ಸಿನ ಆತಂಕಗಳೂ, ಎಷ್ಟೇ ಕಷ್ಟಪಟ್ಟರೂ ಸರಿ, ಏನೇನನ್ನು ತ್ಯಜಿಸಬೇಕಾದರೂ ಸರಿ, ಶಾಂತಿಯನ್ನು ದೊರಕಿಸಿಕೊಳ್ಳಲೇಬೇಕೆಂಬ ವೇದನಾಪೂರ್ಣ ಅನ್ವೇಷಣೆಯ ಪ್ರವೃತ್ತಿಯೂ ಸಾಂಕ್ರಾಮಿಕ ರೋಗದಂತೆ ಹರಡಿದುವು. ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂಬ ಜನರು ಅಳುತ್ತಾ ಅಳುತ್ತಾ ಸೆರಾಪಿಯಮ್‌ಗೆ ಬರುತ್ತಿದ್ದುದೂ, ಅಂಧಕಾರಮಯ ರಕ್ತ ಭರಿತ ಮಿತ್ರ ಪಂಥದ ಗುಹೆಗಳನ್ನು ಪ್ರವೇಶಿಸುತ್ತಿದ್ದುದೂ ಇವೇ ಕಾರಣದಿಂದಲೇ.

## 37. ಏಸುಕ್ರಿಸ್ತನ ಬೋಧನೆ

ಮೊದಲನೆಯ ರೋಮನ್ ಚಕ್ರವರ್ತಿ ಅಗಸ್ಟಸ್ ಸೀಸರನು ರೋಮಿನಲ್ಲಿ ಆಳುತ್ತಿದ್ದ ಸಮಯದಲ್ಲಿಯೇ ಕ್ರೈಸ್ತಮತೀಯರು ಏಸುಕ್ರಿಸ್ತನೆಂದು ಕರೆಯುವ ಏಸುವು ಜುಡಿಯದಲ್ಲಿ ಜನ್ಮತಾಳಿದನು. ಈತನಿಂದ ಸ್ಥಾಪಿತವಾದ ಮತವೇ ಮುಂದೆ ಸಮಸ್ತ ರೋಂ ಸಾಮ್ರಾಜ್ಯದ ಅಧಿಕೃತ ಧರ್ಮವಾಗಬೇಕೆಂದು ವಿಧಿ ನಿಯಮವಿತ್ತು.

ಈ ಸಂದರ್ಭದಲ್ಲಿ ಕೆಲಸಮಯ ಚರಿತ್ರೆ ಮತ್ತು ಧರ್ಮಶಾಸ್ತ್ರಗಳನ್ನು ಬೇರೆಬೇರೆಯಾಗಿರಿಸುವುದು ಒಳ್ಳೆಯದು. ಕ್ರಿಶ್ಚಿಯನ್ನರಲ್ಲಿ ಬಹುಜನರು ಏಸುವೆಂದರೆ ಯಹೂದ್ಯರು ಮೊದಲು ಪ್ರಪಂಚಕ್ಕೆಲ್ಲಾ ಒಬ್ಬನೇ ದೇವನೆಂದು ಸ್ತುತಿಸಿದ ಭಗವಂತನ ಅವತಾರವೆಂದು ನಂಬುತ್ತಾರೆ. ಚರಿತ್ರಕಾರನು ಚರಿತ್ರಕಾರನಾಗಿಯೇ ಉಳಿಯಬೇಕಾದರೆ ಈ ನಂಬಿಕೆಯನ್ನು ಅಂಗೀಕರಿಸಲೂಲಾರ, ಸಂಪೂರ್ಣವಾಗಿ ಕಡೆಗಣಿಸಲೂಲಾರ. ಆದರೂ ಏಸು ಭೌತಿಕವಾಗಿ ಮನುಷ್ಯನ ರೂಪದಲ್ಲಿ ಕಾಣಿಸಿಕೊಂಡನು. ಚರಿತ್ರಕಾರನು ಅವನನ್ನು ಮನುಷ್ಯನೆಂದೇ ವರ್ಣಿಸಬೇಕು.

ಟೈಬೀರಿಯಸ್ ಸೀಸರನು ಆಳುತ್ತಿದ್ದಾಗ ಜುಡಿಯದಲ್ಲಿ ಏಸುವು ಕಾಣಿಸಿಕೊಂಡನು. ಆತನೂ ಒಬ್ಬ ಪ್ರವಾದಿ. ಇದರ ಹಿಂದೆಯೂ ಇದ್ದ ಯಹೂದ್ಯ ಪ್ರವಾದಿ

ಗಳ ರೀತಿಯಲ್ಲೇ ಈತನೂ ಧರ್ಮ ಬೋಧನೆ ಮಾಡಿದನು. ಹೀಗೆ ಅವನು ಕೋರ್ಟಿಗೆ ಬಂದಾಗ ಅವನಿಗೆ ಮೂವತ್ತು ವರ್ಷ ವಯಸ್ಸು. ಅದಕ್ಕೆ ಮುಂಚೆ ಈತ ಎಲ್ಲಿದ್ದ ಏನು ಮಾಡುತ್ತಿದ್ದ ಎಂದು ಯಾರಿಗೂ ಏನೂ ಸರಿಯಾಗಿ ತಿಳಿದಿಲ್ಲ. ಬೈಬಲ್ಲಿನಲ್ಲಿರುವ ನಾಲ್ಕು ಸುವಾರ್ತೆಗಳೇ ಈತನ ಜೀವನ ಮತ್ತು ಬೋಧನೆಗಳ ಬಗೆಗೆ ತಿಳಿದುಕೊಳ್ಳಲು ನಮಗಿರುವ ನೇರವಾದ ಆಧಾರ. ಇವುಗಳನ್ನು ಓದಿದರೆ ಒಬ್ಬನೇ ನಿರ್ದಿಷ್ಟ ವ್ಯಕ್ತಿಯ ಚಿತ್ರ ನಮ್ಮ ಮುಂದೆ ನಿಲ್ಲುತ್ತದೆ: "ಇಂತಹ ಒಬ್ಬ ಮನುಷ್ಯ ಇದ್ದಿರಬೇಕು, ಇದೆಲ್ಲ ಕಲ್ಪನೆ ಅಲ್ಲ" ಎನಿಸುತ್ತದೆ.

ಗೌತಮಬುದ್ಧನ ನೈಜ ವ್ಯಕ್ತಿತ್ವ ಬರಬರುತ್ತಾ ಈಚಿನ ಬೌದ್ಧ ಮತದ ಬಂಗಾರದ ಬಣ್ಣ ಬಳಿದ ಪೆಡಸಾದ ಪದ್ಮಾಸನದಲ್ಲಿ ಕುಳಿತ ಮೂರ್ತಿಯಿಂದ ಮುಚ್ಚಿಹೋಯಿತೆಂದು ನೋಡಿದೆವಷ್ಟೆ. ಅಂತೆಯೇ ತೆಳುವಾದ ಚಟುವಟಿಕೆ ತುಂಬಿದ ಏಸುವಿನ ಚಿತ್ರ ಸಹ ವಿಕೃತವಾಗಿ ಹೋಗಿದೆ. ಜನರಿಗೆ ಈತನಲ್ಲಿರುವ ಆಳವಾದ ಪೂಜ್ಯಭಾವನೆಯೇ ತಪ್ಪು ತಿಳಿವಳಿಕೆಗೆ ಕಾರಣವಾಗಿ ಕ್ರೈಸ್ತ ಕಲೆಯಲ್ಲಿ ಈತನನ್ನು ಅಸಹಜವಾಗಿ ಕಾಲ್ಪನಿಕ ರೀತಿ ಯಲ್ಲಿ ಚಿತ್ರಿಸುವಂತೆ ಆಗಿದೆ. ಏಸುವು ಜುಡಿಯದ ಬಿಸಿಲಿನಲ್ಲಿ ಧೂಳು ಮುಸುಕಿದ ದಾರಿಗಳಲ್ಲಿ ತಿರುಗುತ್ತಾ, ಅವರಿವರು ನೀಡಿದ ಆಹಾರದ ಮೇಲೆ ಜೀವಿಸುತ್ತಿದ್ದ, ಕೈಯಲ್ಲಿ ಕಾಸಿಲ್ಲದ ಪ್ರವಾದಿ. ಆದರೆ ಕಲಾಕಾರರು ಇವನನ್ನು ಮೈಕೈ ತುಂಬಿಕೊಂಡು ಯಾವಾಗಲೂ ಓರಣವಾಗಿದ್ದ ಶುಭ್ರವಸ್ತ್ರ ಧರಿಸಿ ನೆಲದ ಮೇಲೆ ನಡೆಯುವ ಕಷ್ಟವೇ ಇಲ್ಲದೆ ಗಾಳಿಯಲ್ಲಿ ತೇಲಿಕೊಂಡು ಬರುತ್ತಿದ್ದಂತೆ ಚಿತ್ರಿಸಿದ್ದಾರೆ. ಹೀಗೆ ಭಕ್ತಿ ಮಾತ್ರ ತುಂಬ ಇದ್ದು ವಿಷಯ ಜ್ಞಾನವಿಲ್ಲದವರು ಹೊಂದಿಸಿರುವ ವಿವೇಚನಾರಹಿತ ಅಲಂಕಾರ ಗಳನ್ನು ನಿಜಚರಿತ್ರೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲದೆ ಎಷ್ಟೋ ಜನರಿಗೆ "ಏಸು ಕ್ರಿಸ್ತ" ಎಂದರೆ ಒಬ್ಬ ನಿಜವಾದ ವ್ಯಕ್ತಿಯೆಂದು ನಂಬಲು ಸಾಧ್ಯವಿಲ್ಲದೆ ಹೋಗಿದೆ.

ಇದಲ್ಲ ಹೆಚ್ಚಿನ ಶೋಭೆಯ ಅಲಂಕರಣಗಳನ್ನು ತೆಗೆದು ಹಾಕಿ ಏಸುವಿನ ಚರಿತ್ರೆ ಯನ್ನು ಶೋಧಿಸಿ ನೋಡಿದರೆ ಶ್ರದ್ಧೆಯಿಂದ ತುಂಬಿದ ಬೇಗನೇ ಸಿಟ್ಟಿಗೇಳುತ್ತಿದ್ದ, ಮನುಷ್ಯತ್ವ ತುಂಬಿದ ವ್ಯಕ್ತಿಯೊಬ್ಬನ ಚಿತ್ರಸಿಗುತ್ತದೆ. ಈ ಮನುಷ್ಯನು ಹೊಚ್ಚ ಹೊಸದಾದ, ಸರಳ ಆದರೆ ಬಹು ಆಳವಾದ ತತ್ತ್ವವೊಂದನ್ನು ಬೋಧಿಸಿದನು. ಭಗವಂತನು ಈ ಪ್ರಪಂಚದ ಎಲ್ಲರಿಗೂ ತಂದೆ, ಎಲ್ಲರನ್ನೂ ಅವನು ತನ್ನ ಮಕ್ಕಳೆಂದು ಪ್ರೇಮದಿಂದ ನೋಡುವನು, ಒಂದಲ್ಲ ಒಂದು ದಿನ ಸ್ವರ್ಗದ ರಾಜ್ಯ ಬರುತ್ತದೆ—ಇದೇ ಆ ತತ್ತ್ವ. ಒಂದು ಅತ್ಯಂತ ಪರಿಚಿತವಾದ ಹೇಳಿಕೆಯನ್ನುಪಯೋಗಿಸುವುದಾದರೆ, ಇವನಲ್ಲಿ ಸೂಜಿಗಲ್ಲಿನಂತೆ ಬಲವಾದ ಆಕರ್ಷಣ ಶಕ್ತಿಯಿತ್ತು. ಅನೇಕ ಅನುಯಾಯಿ ಗಳು ಇವನೆಡೆಗೆ ಆಕರ್ಷಿತರಾಗಿ ಬಂದರು. ಅವರೆಲ್ಲರಲ್ಲೂ ಇವನು ಪ್ರೇಮಭಾವನೆ ಮತ್ತು ಕೆಚ್ಚನ್ನು ತುಂಬಿದನು. ಅಶಕ್ತರು ಮತ್ತು ರೋಗಿಗಳಿಗೆ ಇವನ ಹತ್ತಿರ ಬಂದರೆ ಸಂತೋಷವಾಗಿ ಅವರ ನೋವು ದೂರವಾಗುತ್ತಿತ್ತು. ಹೀಗಿದ್ದರೂ ಶಿಲುಬೆಗೇರಿ ಸಿದಾಗ ಅಷ್ಟುಬೇಗ ಪ್ರಾಣಹೋದುದನ್ನು ನೋಡಿದರೆ ಇವನು ಅಶಕ್ತನಾಗಿದ್ದಿರ

ಬಹುದು ಎನಿಸುತ್ತದೆ. ಪದ್ಧತಿಯಂತೆ ವಧಾಸ್ಥಾನಕ್ಕೆ ಶಿಲುಬೆಯನ್ನು ಹೊರಿಸಿ ಕರೆದು ಕೊಂಡುಹೋದಾಗ ಏಸುವು ಮೂರ್ಛೆ ಹೋದನೆಂದು ಪ್ರತೀತಿ ಇದೆ. ಮೂರುವರ್ಷ ಗಳ ಕಾಲ ಇವನು ತನ್ನ ತತ್ತ್ವವನ್ನು ದೇಶದಲ್ಲಿ ಪ್ರಚಾರ ಮಾಡುತ್ತಾ ಹೋದನು. ಜೆರೂಸೆಲಮ್ಮಿಗೆ ಬಂದಾಗ ಜುಡಿಯದಲ್ಲಿ ಏನೋ ವಿಚಿತ್ರವಾದ ಒಂದು ರಾಜ್ಯವನ್ನು ಕಟ್ಟ ಬೇಕೆಂದಿದ್ದಾನೆಂದು ಅಪವಾದನೆ ಹೊರಿಸಿ ಈತನನ್ನು ವಿಚಾರಣೆಗೆ ಗುರಿಮಾಡಿ ಇಬ್ಬರು ಕಳ್ಳರೊಡನೆ ಇವನನ್ನೂ ಶಿಲುಬೆಗೇರಿಸಿಬಿಟ್ಟರು. ಆ ಕಳ್ಳರು ಜೀವ ಬಿಡುವುದಕ್ಕೆ ಬಹು ಮುಂಚೆಯೇ ಈತನು ಜನ್ಮ ನೀಗಿದನು.

ಏಸುವಿನ ಬೋಧನೆಯ ಮುಖ್ಯ ಅಂಗವಾದ "ಪರಲೋಕ ಸಾಮ್ರಾಜ್ಯದ ತತ್ತ್ವ" ಮಾನವನ ಭಾವನಾ ಪ್ರಪಂಚವನ್ನು ಕಲಕಿ ಬದಲಾಯಿಸಿದ ಅತ್ಯಂತ ಕ್ರಾಂತಿ ಕಾರಕ ತತ್ವಗಳಲ್ಲಿ ಒಂದು. ಅಂದಿನ ಜನರು ಇದರ ಪೂರ್ಣ ಮಹತ್ತ್ವವನ್ನು ಗ್ರಹಿಸ ಲಾರದೆ ಹೋದುದೇನೂ ಅಂತಹ ಆಶ್ಚರ್ಯ ಸಂಗತಿಯಲ್ಲ. ಅದನ್ನು ಅರ್ಧಂಬರ್ಧ ಅರ್ಥ ಮಾಡಿಕೊಂಡವರೂ ಸಹ ಆಗ ತಳಊರಿ ನಿಂತಿದ್ದ ಅಂದಿನ ನಡೆವಳಿಕೆಗಳು ಮತ್ತು ಸಂಸ್ಥೆ ಗಳ ಮುಂದೆ ಈ ತತ್ತ್ವ ತಂದಿಟ್ಟ ಪ್ರಶ್ನೆಗಳನ್ನು ಎದುರಿಸಲಾರದೆ ಹಿಂದೆಗೆದರು. ಹೆಣ ಗಾಡುತ್ತಿರುವ ನಮ್ಮ ಮಾನವ ಜನಾಂಗದ ಜೀವನ ಕ್ರಮದಲ್ಲಿ ಒಳಗೆ ಮತ್ತು ಹೊರಗೆ ಸಹ ಸಂಪೂರ್ಣ ಪರಿವರ್ತನೆ ಮತ್ತು ಶುದ್ಧೀಕರಣ ಆಗಲೇಬೇಕೆಂಬ ಯಾವ ಮುಲಾಜು ಇಲ್ಲದ ಬಲವಂತದ ಕೇಳಿಕೆ ಏಸುವು ಬೋಧಿಸಿದ ಈ ತತ್ತ್ವದಲ್ಲಿ ಅಡಕವಾಗಿತ್ತು. ಅತ್ಯಂತ ಮಹತ್ವದ ಈ ಬೋಧನೆಯನ್ನು ಸರಿಯಾಗಿ ಅರಿತುಕೊಳ್ಳಲು ಓದುಗರು ಸುವಾರ್ತೆಗಳನ್ನೇ ಓದಬೇಕು. ಅದುವರೆಗೆ ನೆಲೆಯಾಗಿ ನಿಂತಿದ್ದ ಭಾವನೆಗಳಿಗೆ ಇದರಿಂದ ತಗುಲಿದ ಪೆಟ್ಟನ್ನು ನಾವು ಇಲ್ಲಿ ಪರೀಕ್ಷಿಸೋಣ.

ಪ್ರಪಂಚಕ್ಕೆಲ್ಲ ಒಬ್ಬನೇ ಧರ್ಮಪರನಾದ ದೇವನಿರುವನು ಎಂದು ಯಹೂದ್ಯರು ನಂಬಿದ್ದರು. ಆದರೆ ಈ ನಂಬಿಕೆ ಇಷ್ಟಕ್ಕೇ ನಿಲ್ಲಲಿಲ್ಲ. ಯಹೂದ್ಯ ಜನಾಂಗದವರನ್ನು ಕಟ್ಟಕಡೆಗೆ ಭೂಮಿಯಲ್ಲಿ ಉಳಿದೆಲ್ಲರಿಗಿಂತ ಪ್ರಬಲರನ್ನಾಗಿ ಮಾಡುವೆನು ಎಂದು ದೇವರು ಅಬ್ರಹಾಮನೊಡನೆ ವ್ಯಾವಹಾರಿಕವಾದ ಒಪ್ಪಂದ ಮಾಡಿಕೊಂಡಿದ್ದಂತೆಯೂ ಇವರಲ್ಲಿ ಪ್ರತೀತಿ ಇದ್ದಿತು. ಅವರ ದೃಷ್ಟಿಯಲ್ಲಿ ಇದು ಬಹು ಹಿತಕರವಾದ ಒಪ್ಪಂದವಾಗಿತ್ತು. ಏಸುವು ಒಂದೇ ಮಾತಿನಿಂದ ಈ ಭರವಸೆಯನ್ನು ತಳ್ಳಿಹಾಕುತ್ತಲೂ ಅವರಿಗೆಲ್ಲ ಬಹು ಭಯವೂ ಕೋಪವೂ ಉಂಟಾದುವು. "ದೇವರು ವ್ಯಾಪಾರದ ಕರಾರು ಮಾಡು ವವನಲ್ಲ. ಪರಲೋಕ ಸಾಮ್ರಾಜ್ಯದಲ್ಲಿ ಆಯ್ಕೆಯಾದವರು, ಅಚ್ಚುಮೆಚ್ಚಿನವರು ಎಂದು ಯಾರಿಗೂ ವಿಶೇಷ ಸ್ಥಾನ ಸಲ್ಲುವುದಿಲ್ಲ. ಸೂರ್ಯನು ಎಲ್ಲೆಡೆಯಲ್ಲೂ ಪಕ್ಷಪಾತ ವಿಲ್ಲದೆ ತನ್ನ ಪ್ರಕಾಶವನ್ನು ಬೀರುವವನಲ್ಲವೇ ? ದೇವರೂ ಹಾಗೆಯೇ. ಅವನಲ್ಲಿ ಪಕ್ಷ ಪಾತ ಬುದ್ಧಿಯಿಲ್ಲ. ಜೀವಪ್ರಪಂಚಕ್ಕೆಲ್ಲಾ ಆತನು ಜೀವಂತನಾದ ತಂದೆಯು. ಮಾನವರೆಲ್ಲರೂ ಒಡಹುಟ್ಟಿದವರು ; ಪುಣ್ಯವಂತರು ಪಾಪಿಗಳು ಎಲ್ಲರೂ ಆತನ ಪ್ರೀತಿಯ ಮಕ್ಕಳು" ಎಂದು ಏಸು ಬೋಧಿಸಿದನು. ಸಾಮಾನ್ಯವಾಗಿ ಜನರೆಲ್ಲರೂ ತಮ್ಮ

ತನ್ನನ್ನೇ ಹೆಚ್ಚು ಎಂದುಕೊಂಡು ಉಳಿದ ಜನಾಂಗ ಮತ್ತು ಮತಗಳವರ ಒಳ್ಳೆಯ ಗುಣಗಳನ್ನು ಕಡೆಗಣಿಸುತ್ತಾರೆ. ಈ ಪ್ರವೃತ್ತಿಯನ್ನು "ಕರುಣೆಯುಳ್ಳ ಸಮಾರ್ಯದವನ ದೃಷ್ಟಾಂತ"ದಲ್ಲಿ ಯೇಸುವು ಹಿಯ್ಯಾಳಿಸಿದನು. ಕೂಲಿ ಕೆಲಸದವರ ದೃಷ್ಟಾಂತದಲ್ಲಿ ದೇವರ ಮೇಲೆ ತಮಗೆ ವಿಶೇಷ ಹಕ್ಕಿರುವುದೆಂಬ ಯಹೂದ್ಯರ ಹಟವನ್ನು ತಳ್ಳಿ ಹಾಕಿದನು. ತನ್ನ ರಾಜ್ಯಕ್ಕೆ ಒರವಾಡಿಕೊಳ್ಳುವವರೆಲ್ಲರನ್ನೂ ದೇವರು ಒಂದೇ ರೀತಿಯಾಗಿ ನೋಡುವನು, ಆವನ ಕರುಣೆಗೆ ಎಣೆ ಇಲ್ಲವಾದುದರಿಂದ ಅವನು ಒಬ್ಬರು ಹೆಚ್ಚು ಮತ್ತೊಬ್ಬರು ಕಡಿಮೆ ಎಂದು ಎಣಿಸಲಾರನು ಎಂದು ಏಸು ಸಾರಿದನು. ಇಷ್ಟೇ ಅಲ್ಲ, ಪ್ರತಿಯೊಬ್ಬರೂ ತನಗೆ ಆದೆಷ್ಟು ಸಾಧ್ಯವೋ ಅಷ್ಟನ್ನೂ ಅರ್ಪಿಸಬೇಕೆಂದು ದೇವರ ಅಪೇಕ್ಷೆಯೆಂದು ಹೂತಿಟ್ಟ ನಾಣ್ಯಗಳ ಕಥೆ ಹೇಳುತ್ತದೆ. ಬಿಡಿಗಾಸನ್ನು ದಾನ ಮಾಡಿದ ವಿಧವೆಯ ಕಥೆ ವಿಧಿಸುತ್ತವೆ. ಪರಲೋಕ ಸಾಮ್ರಾಜ್ಯದಲ್ಲಿ ಯಾರಿಗೂ ವಿಶೇಷ ಹಕ್ಕು ರಿಯಾಯಿತಿಗಳಿಲ್ಲ. ಯಾರೂ ಕುಂಟನೆಪಗಳನ್ನೆತ್ತುವಂತಿಲ್ಲ.

ಏಸು ಆಕ್ಷೇಪಿಸಿದ್ದು ಯಹೂದ್ಯರ ಸ್ವಜಾತಿ ಅಭಿಮಾನವೊಂದನ್ನೇ ಅಲ್ಲ. ಅವರಲ್ಲಿ ಕುಟುಂಬ ಭಾವನೆ ಬಹಳ ಬಲವಾಗಿತ್ತು. ಭಗವಂತನ ಮೇಲಿನ ಪ್ರೇಮ ಪ್ರವಾಹದಲ್ಲಿ ಸ್ವಜನ ಪ್ರೇಮದಂತಹ ಸಣ್ಣ ಭಾವನಾಬಂಧಗಳು ಕೊಚ್ಚಿಕೊಂಡು ಹೋಗಬೇಕೆಂಬುದು ಯೇಸುವಿನ ಆಶಯವಾಗಿತ್ತು. "ಪರಲೋಕ ಸಾಮ್ರಾಜ್ಯವು ತನ್ನ ಅನುಯಾಯಿಗಳೆಲ್ಲರನ್ನೂ ಒಳಗೊಂಡಂತಹ ಒಂದೇ ಕುಟುಂಬವಾಗಬೇಕೆಂಬುದೇ ಆತನ ಗುರಿಯಾಗಿತ್ತು. ಒಂದು ದಿನ ಏಸು ಜನರಿಗೆ ಬೋಧನೆ ಮಾಡುತ್ತಿದ್ದಾಗ ಆತನೊಡನೆ ಮಾತನಾಡುವುದಕ್ಕಾಗಿ ಆತನ ತಾಯಿತಮ್ಮಂದಿರು ಹೊರಗೆ ಕಾಯುತ್ತಾ ಇದ್ದರಂತೆ. ಇದನ್ನು ತನ್ನ ಗಮನಕ್ಕೆ ತಂದಾಗ ಏಸು "ನನ್ನ ತಾಯಿ ಯಾರು? ನನ್ನ ತಮ್ಮಂದಿರು ಯಾರು?" ಎಂದು ಹೇಳಿ ತನ್ನ ಶಿಷ್ಯರೆಡೆ ಕೈ ತೋರಿಸಿ "ಇಲ್ಲಿದ್ದಾರೆ ನನ್ನ ತಾಯಿ ತಮ್ಮಂದಿರು, ಪರಲೋಕದಲ್ಲಿರುವ ನನ್ನ ತಂದೆಯ ಮನಸ್ಸಿನಂತೆ ನಡೆಯುತ್ತಾರೋ ಅವರೇ ನನ್ನ ತಾಯಿ, ನನ್ನ ತಂಗಿ, ನನ್ನ ತಮ್ಮಂದಿರು" ಎಂದನಂತೆ.

ಹೀಗೆ ಏಸುವು ದೇಶಾಭಿಮಾನ, ಸ್ವಜನ ಪ್ರೇಮ ಮತ್ತು ಸಂಸಾರ ಬಂಧನಗಳನ್ನು ಸರ್ವಜನ ಭ್ರಾತೃತ್ವದ ಹೆಸರಿನಲ್ಲಿ ಆಕ್ಷೇಪಿಸಿದುದಷ್ಟೇ ಅಲ್ಲದೆ ಸಮಾಜದ ಭಿನ್ನ ವರ್ಗಗಳ ಆರ್ಥಿಕ ಅಸಮಾನತೆ, ಖಾಸಗಿ ಸ್ವತ್ತು, ವೈಯಕ್ತಿಕವಾದ ವಿಶೇಷ ಹಕ್ಕು ಬಾಧ್ಯತೆಗಳು ಎಲ್ಲವನ್ನೂ ಖಂಡಿಸಿದನೆಂಬುದು ಸುಸ್ಪಷ್ಟವಾಗಿದೆ. ಎಲ್ಲರೂ ಪರಲೋಕ ಸಾಮ್ರಾಜ್ಯಕ್ಕೆ ಸೇರಿದವರು. ಎಲ್ಲರ ಸ್ವತ್ತು ಸಹ ಅದಕ್ಕೇ ಸೇರಿದ್ದು. ನಮ್ಮಲ್ಲಿರುವುದೆಲ್ಲವನ್ನೂ, ನಮ್ಮ ವ್ಯಕ್ತಿತ್ವವೆಲ್ಲವನ್ನೂ ದೇವರಿಗೆ ಅರ್ಪಿಸಿ ಆತನ ಇಚ್ಛಾನುಸಾರ ನಡೆದುಕೊಂಡಿರುವುದೊಂದೇ ಸರಿಯಾದ ಜೀವನಮಾರ್ಗ. ಹೀಗೆ ತಿರುತಿರುಗಿ ಏಸುವು ಖಾಸಗಿ ಸ್ವತ್ತು ಮತ್ತು ವೈಯಕ್ತಿಕ ಹಕ್ಕು ಬಾಧ್ಯತೆಗಳನ್ನು ಆಕ್ಷೇಪಿಸಿದನು.

ಆತನು ಹೊರಟು ದಾರಿ ಹಿಡಿದು ಹೋಗುವಾಗ ಒಬ್ಬನು ಓಡುತ್ತಾ ಆತನ ಎದುರಿಗೆ ಬಂದು ಮೊಣಕಾಲೂರಿ—ಒಳ್ಳೆ ಬೋಧಕನೆ ನಾನು ನಿತ್ಯ ಜೀವನಕ್ಕೆ ಬಾಧ್ಯಸ್ಥ

ನಾಗಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಲಾಗಿ ಏಸು ಅವನಿಗೆ— ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ, ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೆಯವನಲ್ಲ. ನರಹತ್ಯ ಮಾಡಬಾರದು; ವ್ಯಭಿಚಾರ ಮಾಡಬಾರದು; ಕದಿಯ ಬಾರದು; ಸುಳ್ಳುಸಾಕ್ಷಿ ಹೇಳಬಾರದು; ಮೋಸಮಾಡಬಾರದು; ನಿನ್ನ ತಂದೆತಾಯಿ ಗಳನ್ನು ಸನ್ಮಾನಿಸಬೇಕು ಎಂಬ ದೇವರಾಜ್ಞೆಗಳು ನಿನಗೆ ಗೊತ್ತಿವೆಯಷ್ಟೆ ಎಂದು ಹೇಳಿದನು. ಅವನು ಆತನಿಗೆ – ಬೋಧಕನೇ, ನಾನು ಚಿಕ್ಕಂದಿನಿಂದಲೂ ಇವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ ಎಂದು ಹೇಳಲು ಏಸು ಅವನನ್ನು ದೃಷ್ಟಿಸಿ ನೋಡಿ ಪ್ರೀತಿಸಿ ಅವನಿಗೆ ನಿನಗೆ ಒಂದು ಕಡಿಮೆಯಾಗಿದೆ; ಹೋಗು; ನಿನ್ನ ಒಡವೆ ಗಳನ್ನೆಲ್ಲಾ ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವುದು; ನೀನು ಬಂದು ನನ್ನನ್ನು ಹಿಂಬಾಲಿಸು ಎಂದು ಹೇಳಿದನು. ಆದರೆ ಅವನು ಬಹಳ ಆಸ್ತಿ ಯುಳ್ಳವನಾಗಿದ್ದರಿಂದ ಈ ಮಾತಿಗೆ ಮೋರೆ ಬಾಡಿದವನಾಗಿ ದುಃಖದಿಂದ ಹೊರಟು ಹೋದನು.

ಆಗ ಏಸು ಸುತ್ತಲೂ ನೋಡಿ ತನ್ನ ಶಿಷ್ಯರಿಗೆ ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ ಎಂದು ಹೇಳಿದನು. ಶಿಷ್ಯರು ಆತನ ಮಾತುಗಳನ್ನು ಕೇಳಿ ಬೆರಗಾದರು. ಏಸು ತಿರುಗಿ ಅವರಿಗೆ ಮಕ್ಕಳಿರಾ, ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗಿ ಹೋಗುವುದು ಸುಲಭ ಎಂದು ಹೇಳಿದನು.26

ಮಾನವ ವರ್ಗವೆಲ್ಲವನ್ನೂ ದೇವರಲ್ಲಿ ಸೇರಿಸಿ ಒಂದುಗೂಡಿಸುವ ಪರಲೋಕ ಸಾಮ್ರಾಜ್ಯ ಬರುವುದೆಂದು ಪ್ರಚಂಡ ಭವಿಷ್ಯ ನುಡಿದ ಏಸುವಿಗೆ ಸಾಂಪ್ರದಾಯಿಕ ಮತಗಳ ವ್ಯಾಪಾರ ದೃಷ್ಟಿಯ ಧಾರ್ಮಿಕತೆ ಎಳ್ಳಷ್ಟೂ ಸರಿಬೀಳಲಿಲ್ಲ. ಈತನ ಉಪದೇಶ ದಲ್ಲಿ ದಾಖಲೆಯಾಗಿರುವುದರಲ್ಲಿ ಒಂದು ಭಾಗ ಪರಲೋಕ ಸಾಮ್ರಾಜ್ಯವನ್ನು ವರ್ಣಿಸಿ ದ್ದರೆ ಉಳಿದಿದ್ದರಲ್ಲಿ ಹೆಚ್ಚಿನ ಭಾಗ ಧರ್ಮವೇ ಜೀವನ ವೃತ್ತಿಯಾಗಿದ್ದವರು ಚಾಚೂ ತಪ್ಪದೆ ನಡೆಸಿಕೊಂಡು ಬರಬೇಕಾಗಿದ್ದ ನಿಯಮಗಳ ಖಂಡನೆಯಾಗಿದೆ. ಒಳಿಕೆ ಫರಿಸಾಯರೂ ಶಾಸ್ತ್ರಿಗಳೂ ಆತನನನ್ನು " ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರ ದಾಯದಂತೆ ಯಾಕೆ ನಡೆದುಕೊಳ್ಳುವುದಿಲ್ಲ ? ಮೈಲಿಗೆಯ ಕೈಯಿಂದ ಯಾಕೆ ಆಹಾರ ತೆಗೆದುಕೊಳ್ಳುತ್ತಾರೆ' ಎಂದು ಕೇಳಿದರು. ಅದಕ್ಕೆ ಆತನು "ಕಪಟಿಗಳಾದ ನಿಮ್ಮ ವಿಷಯದಲ್ಲಿಯೇ ಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ. ಅವನು ಬರೆದದ್ದೇ ನೆಂದರೆ :

"ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ.
ಆದರೆ ಅವರ ಮನಸ್ಸು ನನಗೆ ದೂರವಾಗಿದೆ.
ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು
ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವುದು" ಎಂಬುದೇ

ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ತಟ್ಟೆ ಬಟ್ಟಲುಗಳನ್ನು ತೊಳೆಯುವ ಸಂಪ್ರದಾಯವನ್ನು ಹಿಡಿದಿದ್ದೀರಿ. ಇಂಥದ್ದೇ ಇನ್ನೂ ಅನೇಕ ಕೆಲಸಗಳನ್ನು ಮಾಡುತ್ತೀರಿ." ತಿರುಗಿ ಅವರಿಗೆ ಏಸು ಹೇಳಿದನು, "ನಿಮ್ಮದೇ ಸಂಪ್ರದಾಯವನ್ನು ಹಿಡಿಯುವುದಕ್ಕಾಗಿ ನೀವು ಪೂರ್ತಿಯಾಗಿ ದೇವರ ಆಜ್ಞೆಯನ್ನು ತ್ಯಜಿಸಿದ್ದೀರಿ"

ಏಸು ಘೋಷಿಸಿದ್ದು ಒಳಿಯ ನೈತಿಕ ಅಥವಾ ಸಾಮಾಜಿಕ ಕ್ರಾಂತಿಯನ್ನಲ್ಲ ಈ ಉಪದೇಶ ಒಂದು ರೀತಿಯಲ್ಲಿ ಬಹು ಸರಳವಾದ ರಾಜಕೀಯ ಕ್ರಾಂತಿಯ ಕಡೆ ತಲುಪುತ್ತಿತ್ತೆಂಬುದಕ್ಕೆ ಅನೇಕ ಸೂಚನೆಗಳಿವೆ. ತನ್ನ ರಾಜ್ಯ ಇಹಲೋಕದಲ್ಲಿ, ಅದು ಮಾನವನ ಹೃದಯಗಳಲ್ಲಿದೆ, ಸಿಂಹಾಸನಗಳ ಮೇಲಲ್ಲ ಎಂದು ಏಸು ಹೇಳಿದುದು ನಿಜ. ಆದರೂ ಈ ತತ್ತ್ವ ಎಲ್ಲಿಯೇ ಆಗಲಿ, ಎಷ್ಟರಮಟ್ಟಿಗೆ ಆಗಲಿ ಮಾನವರ ಹೃದಯಗಳಲ್ಲಿ ನೆಲೆಯಾದರೂ ಅಲ್ಲಿ ಅಷ್ಟರ ಮಟ್ಟಿಗೆ ಹೊರಗಣ ಪ್ರಪಂಚದಲ್ಲಿ ಕ್ರಾಂತಿಯಾಗಿ ಸಮಾಜ ಬದಲಾಗುತ್ತದೆಯೆನ್ನುವುದು ನಿಜ.

ಇವನ ಬೋಧನೆಯನ್ನು ಕೇಳಿದವರು ಅದರ ಎಷ್ಟೋ ಅಂಶಗಳನ್ನು ಮನಸ್ಸಿಗೆ ತೆಗೆದುಕೊಳ್ಳದಿದ್ದರೂ ಪ್ರಪಂಚದಲ್ಲಿ ಕ್ರಾಂತಿ ಆಗಬೇಕೆಂಬ ಅವನ ನಿರ್ಧಾರ ಅವರ ಗಮನಕ್ಕೆ ಬರದೆ ಇರಲಿಲ್ಲ. ಇವನ ಎದುರಾಳಿಗಳ ಧೋರಣೆಯನ್ನೂ ಇವನ ವಿಚಾರಣೆ ಮತ್ತು ದಂಡನೆಗಳು ನಡೆದ ರೀತಿಯನ್ನು ಪರಿಶೀಲಿಸಿದರೆ ಏಸು ಜನರೆಲ್ಲರನ್ನೂ ಮಾರ್ಪಡಿಸಿ ಅವರ ಜೀವನಗಳನ್ನು ಬೆಸೆದು, ಅವರ ಭಾವನೆಗಳು ವಿಶಾಲವಾಗುವಂತೆ ಮಾಡಲು ಉದ್ದೇಶಿಸಿದ್ದನೆಂದು ಅವನ ಸಮಕಾಲೀನರಿಗೆ ಅಭಿಪ್ರಾಯವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಹಿಂದುಮುಂದು ನೋಡದೆ ಇವನು ಹೀಗೆ ಉಪದೇಶ ಮಾಡಿದುದರಿಂದ ಅನಿರೀಕ್ಷಿತ ಘಟನೆಗಳು ನಡೆದು ತಮ್ಮ ಪ್ರಪಂಚ ತಲೆಕೆಳಗಾಗುವುದೆಂದು ಅಂದಿನ ಅನುಕೂಲಸ್ಥರು ಮತ್ತು ಐಶ್ವರ್ಯವಂತರಿಗೆ ಭಯವಾದುದರಲ್ಲಿ ಏನೂ ಆಶ್ಚರ್ಯವಿಲ್ಲ. ಸಮಾಜ ಸೇವೆಯ ನೆಪದಲ್ಲಿ ತಮಗೋಸ್ಕರ ಕಾದಿರಿಸಿಕೊಂಡಿದ್ದ ಎಲ್ಲಾ ವಿಶೇಷ ಹಕ್ಕು ಬಾಧ್ಯತೆಗಳನ್ನು ಏಸುವು ಹೊರಗೆ ಎಳೆದು ತೆಗೆದು ಜನರೆಲ್ಲರಿಗೂ ಅಸ್ಪಷ್ಟವಾಗುವ ಧಾರ್ಮಿಕ ಜೀವನದ ಬೆಳಕಿನಲ್ಲಿ ಹಾಕಿದನು. ಬೆಚ್ಚನೆಯ ಬಿಲಗಳಲ್ಲಿ ಬೇರಾವ ಯೋಚನೆಯೂ ಇಲ್ಲದೆ ಜೀವಿಸುವ ಪ್ರಾಣಿಗಳನ್ನು ನಿಷ್ಠುರ ಬೇಟೆಗಾರನು ಹೊರತೆಗೆಯುವಂತೆ ಏಸುವೂ ನೈತಿಕ ಜೀವನದ ಸಲುವಾಗಿ ಮಾನವರನ್ನು ಅವರ ಕಿರಿದಾದ ಪ್ರಪಂಚಗಳಿಂದ ಹೊರಗೆಳೆದನು. ಅವನ ಕಲ್ಪನಾ ರಾಜ್ಯದ ಉಜ್ವಲ ತೇಜಸ್ಸಿನಲ್ಲಿ ಆಸ್ತಿ, ವಿಶೇಷ ಹಕ್ಕು, ಪ್ರತಿಷ್ಠೆ, ಅಗ್ರಸ್ಥಾನ ಯಾವುದಕ್ಕೂ ಮನ್ನಣೆ ಇರಲಿಲ್ಲ. ಅಲ್ಲಿ ಎಲ್ಲದಕ್ಕೂ ಪ್ರೀತಿಯೇ ಪ್ರೇರಕ ಶಕ್ತಿ ಪ್ರೀತಿಯೇ ಪ್ರತಿಫಲವಾಗಿತ್ತು. ಈ ತೇಜಸ್ಸನ್ನು ತಡೆಯಲಾಗದೆ ಕಣ್ಣು ಕೋರೈಸಿ ಹೋಗಿ, ಜನರು ಏಸುವಿನ ವಿರುದ್ಧ ಮೇಲೆದ್ದುದರಲ್ಲಿ ಆಶ್ಚರ್ಯವೇನು ? ಅವನ ಶಿಷ್ಯರಿಗೂ ಈ ಬೆಳಕನ್ನು ಸಹಿಸಲಾಗಲಿಲ್ಲ. ಏಸು ಮತ್ತು ತಾವು ಒಟ್ಟಿಗೆ ಬಾಳುವುದು ಸಾಧ್ಯವಿಲ್ಲ. ಏಸು ಅಳಿಯಬೇಕು ಇಲ್ಲದಿದ್ದರೆ ತಮಗೇ ವಿನಾಶವೆಂದೂ ಯಹೂದ್ಯರ ಅರ್ಚಕ

ವರ್ಗಕ್ಕೆ ಮನನಟ್ಟಾದುದರಲ್ಲಿಯೂ ಏನೂ ಆಶ್ಚರ್ಯವಿಲ್ಲ. ತಮ್ಮ ನಡೆನುಡಿ ನಿಯಮಗಳು ಯಾವುದಕ್ಕೂ ಹೊಂದದ ತಮ್ಮ ಬುದ್ಧಿಮಟ್ಟಕ್ಕಿಂತ ಬಹು ಎತ್ತರದಲ್ಲಿದ್ದ ಆದೇನೋ ಮುಂದೆ ಬಂದು ನಿಂತಾಗ ಹುಚ್ಚು ನಗುವಿನಲ್ಲಿ ತಮ್ಮ ಆತಂಕವನ್ನು ಮರೆಸಿ ಏಸುವಿಗೆ ಮುಳ್ಳಿನ ಕಿರೀಟ ಇಟ್ಟು ಊದಾ ಬಣ್ಣದ ನಿಲುವಂಗಿ ತೊಡಿಸಿ ನೀನು ಸೀಸರ್ ಅಲ್ಲವೇ ಎಂದು ರೋಮನ್ ಸಿಪಾಯಿಗಳು ಅಣಕವಾಡಿದ್ದೂ ಸಹಜವೇ ಅಲ್ಲವೇ? ಏಕೆಂದರೆ ಏಸುವಿನ ಬೋಧನೆಯನ್ನು ಅರ್ಥಪೂರ್ಣವೆಂದು ಒಪ್ಪಿಕೊಳ್ಳಬೇಕಾಗಿದ್ದರೆ ಅಂದಿನವರೆಗೆ ಯಾರೂ ಕಾಣದಿದ್ದ ಆದರಿಂದಲೇ, ಗಾಬರಿಗೊಳಿಸುವ ಜೀವನವನ್ನು ಒಪ್ಪಿಕೊಳ್ಳಬೇಕಾಗಿತ್ತು. ಹಳೆಯ ಅಭ್ಯಾಸಗಳನ್ನು ತ್ಯಜಿಸಿ ಸಹಜ ಮನೋ ಪ್ರವೃತ್ತಿಗಳನ್ನು ಅಂಕೆಯಲ್ಲಿಟ್ಟು ಆಶ್ಚರ್ಯಕರವಾದ ಶಾಶ್ವತ ಸುಖಕ್ಕಾಗಿ ಪ್ರಯತ್ನಿಸ ಬೇಕಾಗಿತ್ತು.

## 38. ಸೈದ್ಧಾಂತಿಕ ಕ್ರೈಸ್ತ ಮತದ ಬೆಳವಣಿಗೆ

ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತೆಗಳಲ್ಲಿ ಏಸುವಿನ ವ್ಯಕ್ತಿ ಪರಿಚಯ ಮತ್ತು ಉಪದೇಶವನ್ನು ಮಾತ್ರ ಕಾಣುತ್ತೇವೆ. ಕ್ರೈಸ್ತ ಸಭೆಯ ಅಧಿಕೃತ ತತ್ವಗಳ ಬಗೆಗೆ ಅಲ್ಲಿ ಹೆಚ್ಚೇನೂ ಇಲ್ಲ. ಏಸುವಿನ ಮರಣದ ನಂತರ ಆತನ ಪಂಥವನ್ನು ಮುಂದುವರಿಸಿದ ಆವನ ಅನುಯಾಯಿಗಳು ಬರೆದಿಟ್ಟಿರುವ ಧರ್ಮ ಪ್ರವರ್ತಕರ "ಪತ್ರ" ಗಳಲ್ಲಿ (epistles) ಕ್ರೈಸ್ತಮತ ತತ್ತ್ವಗಳ ಸ್ಥೂಲರೂಪವನ್ನು ಕಾಣುತ್ತೇವೆ.

ಧರ್ಮ ಪ್ರವರ್ತಕರಲ್ಲಿ ಮುಖ್ಯನಾದವನು ಸೇಂಟ್ ಪಾಲ್. ಇವನು ಏಸುವನ್ನು ನೋಡಿಯೇ ಇರಲಿಲ್ಲ. ಮೊದಲು ಇವನ ಹೆಸರು ಸಾಲ್ ಎಂದಿತ್ತು. ಕ್ರಿಸ್ತನನ್ನು ಶಿಲುಬೆಗೇರಿಸಿದ ನಂತರ ಉಳಿದಿದ್ದ ಕ್ರೈಸ್ತಮತಾನುಯಾಯಿಗಳ ಪುಟ್ಟತಂಡಕ್ಕೆ ಕಿರುಕುಳಕೊಡುವುದರಲ್ಲಿ ನಿರತನಾಗಿ ಪ್ರಖ್ಯಾತನಾಗಿದ್ದನು. ಇದ್ದಕ್ಕಿದ್ದಂತೆ ಇವನ ಮನಸ್ಸು ಬದಲಾಗಿ ಕ್ರೈಸ್ತಮತಕ್ಕೆ ಸೇರಿಕೊಂಡು ಹೆಸರನ್ನು ಪಾಲ್ ಎಂದು ಬದಲಾಯಿಸಿಕೊಂಡನು. ಪ್ರಚಂಡ ಬುದ್ಧಿ ಶಕ್ತಿಯುಳ್ಳ ಇವನಿಗೆ ಅಂದಿನ ಧಾರ್ಮಿಕ ಚಳುವಳಿಗಳಲ್ಲಿ ಆಳವಾದ ತೀವ ವಾದ ಆಸಕ್ತಿಯಿತ್ತು. ಯೆಹೂದ್ಯಧರ್ಮ, ಮಿತ್ರಾ ಪಂಥ ಮತ್ತು ಅಲೆಕ್ಸಾಂಡ್ರಿಯದ ಧರ್ಮಗಳೆಲ್ಲವನ್ನೂ ಅಧ್ಯಯನ ಮಾಡಿ ಚೆನ್ನಾಗಿ ತಿಳಿದುಕೊಂಡಿದ್ದನು. ಈ ಧರ್ಮಗಳ ಭಾವನೆಗಳು ಮತ್ತು ಪಾರಿಭಾಷಿಕ ಶಬ್ದಗಳು ಇವನಿಂದ ಕ್ರೈಸ್ತ ಧರ್ಮಕ್ಕೆ ಬಂದುವು. ಏಸುವಿನ ಮೂಲ ಉಪದೇಶವಾದ ಪರ ಲೋಕ ರಾಜ್ಯತತ್ತ್ವವನ್ನು ಇವನು ಹೆಚ್ಚು ಬೆಳೆಸಲಿಲ್ಲ. ಏಸು ಭಗವಂತನು ಯೆಹೂದ್ಯರಿಗೆ ವಚನ ಕೊಟ್ಟುದರ ಸಲುವಾಗಿ ಹುಟ್ಟಿದ ಯೆಹೂದ್ಯರ ನಾಯಕನೆಂದು ಹೇಳಿದ್ದಲ್ಲದೆ ಪ್ರಾಚೀನ ನಾಗರಿಕತೆಗಳಲ್ಲಿ ಬಲಿಯಾಗುತ್ತಿದ್ದವರ ಸಾವಿನಂತೆ ಏಸು ವಿನ ಮರಣವೂ ಮಾನವ ವರ್ಗದ ಉದ್ಧಾರಕ್ಕಾಗಿ ಆದ ಒಂದು ಬಲಿದಾನವೆಂದೂ ಪಾಲ್ ಸಾರಿದನು.

ಒಂದಕ್ಕಿಂತ ಹೆಚ್ಚು ಮತಧರ್ಮಗಳು ಒಂದೇ ಎಡೆಯಲ್ಲಿ ಏಳಿಗೆಗೆ ಬಂದಾಗ ಒಂದರ ಸಂಪ್ರದಾಯ ಮತ್ತು ವಿಶಿಷ್ಟ ಬಾಹ್ಯ ಲಕ್ಷಣಗಳು ಮತ್ತುಳಿದವುಗಳಿಗೆ ಸೇರಿ ಕೊಳ್ಳುವ ಸಂಭವವುಂಟು. ಲಾವೊ–ತ್ಸೆ ಬೋಧಿಸಿದ ಟಾವೊಧರ್ಮ ಮತ್ತು ಬೌದ್ಧ ಧರ್ಮಗಳ ಮೂಲ ಬೋಧನೆಗಳು ಪರಸ್ಪರ ಸಂಪೂರ್ಣ ವಿರುದ್ಧವಾಗಿವೆ. ಆದರೂ ಚೀನದಲ್ಲಿ ಇವೆರಡು ಮತಗಳ ದೇವಾಲಯಗಳು, ಆಚರಣೆಗಳು ಮತ್ತು ಸಂನ್ಯಾಸಿಗಳು ಹೆಚ್ಚು ಕಡಿಮೆ ಒಂದೇ ವಿಧವಾಗಿದ್ದಾರೆ. ಹೀಗೆಯೇ ಅಲೆಕ್ಸಾಂಡ್ರಿಯದ ಮತ ಮತ್ತು ಮಿತ್ರಾ ಪಂಥಗಳ ಮುಂಡನ ಮಾಡಿಸಿಕೊಂಡ ಅರ್ಚಕರು ಹರಕೆ ಒಪ್ಪಿಸುವಿಕೆ, ಬಲಿ ಪೀಠಗಳು, ಮೇಣದ ಬತ್ತಿಗಳು, ಮಂತ್ರಪಠನ, ಮತ್ತು ಪೂಜಾ ಮೂರ್ತಿಗಳು ಅಷ್ಟೇ ಅಲ್ಲದೆ ಅವುಗಳ ಪ್ರಾರ್ಥನೆಯ ಒಕ್ಕಣೆ, ತಾತ್ತ್ವಿಕ ಭಾವನೆಗಳು ಕೂಡ ಕ್ರೈಸ್ತಧರ್ಮ ದಲ್ಲಿ ಸೇರಿಕೊಂಡುವು. ಇದು ಕ್ರೈಸ್ತ ಧರ್ಮದ ಮೂಲ ತತ್ತ್ವಗಳಲ್ಲಿ ಸಂಶಯ ವನ್ನಾಗಲಿ ಇವುಗಳ ಬಗೆಗೆ ಅಗೌರವವನ್ನಾಗಲೀ ತರುವಂತಹ ಪ್ರಸಂಗವೇನಲ್ಲ. ಈ ಎಲ್ಲಾ ಮತಗಳೂ, ಇನ್ನೂ ಕೆಲವು ಅಷ್ಟು ಹೆಸರಾಗಿಲ್ಲದ ಪಂಥಗಳೂ ಆ ಪ್ರದೇಶದಲ್ಲಿ ಮುಂದಕ್ಕೆ ಬರುತ್ತಿದ್ದುವು. ಇವೆಲ್ಲವೂ ಹೊಸ ಹೊಸ ಶಿಷ್ಯರನ್ನು ಹುಡುಕುತ್ತಿದ್ದುದ ರಿಂದ ಅನೇಕರು ಒಂದು ಮತ ಬಿಟ್ಟು ಮತ್ತೊಂದನ್ನು ಅವಲಂಬಿಸುವುದು ಸರ್ವೇ ಸಾಮಾನ್ಯವಾಗಿದ್ದಿರಬೇಕು. ಒಂದೊಂದು ಬಾರಿ ಒಂದೊಂದು ಮತ ಸರ್ಕಾರಕ್ಕೆ ಒಪ್ಪಿಗೆಯಾಗುತ್ತಿತ್ತು. ಆದರೆ ಯಹೂದ್ಯರಂತೆಯೇ ಕ್ರಿಶ್ಚಿಯನ್ನರೂ ಸೀಸರನನ್ನು ದೇವರಂತೆ ಪೂಜಿಸಲು ಒಪ್ಪುತ್ತಿರಲಿಲ್ಲವಾದುದರಿಂದ ಸರ್ಕಾರಕ್ಕೆ ಇದರ ಮೇಲೆಯೂ ಉಳಿದ ಮತಗಳಗಿಂತ ಹೆಚ್ಚು ಸಂಶಯ ಇರುತ್ತಿತ್ತು. ಏಸುವಿನ ಸಮಾಜಕ್ರಾಂತಿಯ ಬೋಧನೆಯಂತೂ ಸರಿ, ಇದರೊಡನೆ ಈ ಮತಕ್ಕೆ ರಾಜದ್ರೋಹದ ಹೆಸರೂ ಸೇರಿತು.

ಓಸಿರಿಸ್ ದೇವನಂತೆ ಏಸುವೂ ಮಾನವರಿಗೆ ಅಮೃತತ್ವವನ್ನು ನೀಡುವುದಕ್ಕಾಗಿ ತನ್ನ ಜೀವನವನ್ನು ಕೊಟ್ಟು ತಿರುಗಿ ಮೇಲೆದ್ದನೆಂಬ ಭಾವನೆಯನ್ನು ಸೇಂಟ್ ಪಾಲ್ ತನ್ನ ಶಿಷ್ಯರಲ್ಲಿ ಪ್ರಚಾರ ಮಾಡಿದನು. ಬಹು ಬೇಗನೇ ಮಾನವ ವರ್ಗದ ತಂದೆಯಾದ ಭಗವಂತನಿಗೂ ಈ ಹೊಸ ದೇವರು ಏಸುವಿಗೂ ಪರಸ್ಪರ ಸಂಬಂಧ ಏನೆಂದು ದೇವತಾ ಶಾಸ್ತ್ರ ಸಂಬಂಧವಾದ ಜಟಿಲವಾದ ಎದ್ದು ಹರಡಿಕೊಳ್ಳುತ್ತಿದ್ದ ಕ್ರೈಸ್ತ ಸಮಾಜ ಛಿದ್ರ ವಾಗತೊಡಗಿತು. ಏಸುವಿನಲ್ಲಿ ದೇವತ್ವವಿದೆ, ಆದರೆ ದೇವರೇ ಬೇರೆ ಏಸುವೇ ಬೇರೆ, ಏಸು ದೇವರಿಗಿಂತ ಕೆಳಗಿನವನೆಂದು ಏರಿಯನ್ನರು ಬೋಧಿಸುತ್ತಿದ್ದರು. ಏಸು ದೇವರ ಮತ್ತೊಂದು ರೂಪ ಅಷ್ಟೆ, ಒಬ್ಬನೇ ಮನುಷ್ಯ ತನ್ನ ಮಕ್ಕಳಿಗೆ ತಂದೆ ಯಾಗಿದ್ದಂತೆಯೇ ಬೇರೆ ತನ್ನ ವೃತ್ತಿಯನ್ನು ನಡೆಸುತ್ತಾನೆಯೋ ಹಾಗೆಯೇ ದೇವರು ಏಸುವೂ ಹೌದು, ಜಗತ್ತಿನ ತಂದೆಯೂ ಹೌದು ಎಂದು ಸಾಬೆಲಿಯನ್ನರ ಅಭಿಪ್ರಾಯ ವಾಗಿತ್ತು. ಪ್ರೆಸಿಟೇರಿಯನ್ನರ ವಾದ ಇವಕ್ಕಿಂತ ಗಹನವಾಗಿತ್ತು. ದೇವರು ಒಬ್ಬನೇ, ಆದರೂ ಅವನು ದೇವರು, ದೇವಪುತ್ರ ಮತ್ತು ಪವಿತ್ರಾತ್ಮ ಎಂಬ ಮೂರು ರೂಪಗಳಿಂದ ವ್ಯಕ್ತನೆಂದು ಇವರು ಹೇಳುತ್ತಿದ್ದರು. ಕೆಲವುಕಾಲ ಏರಿಯನ್ನರ ವಾದ ಉಳಿದೆರಡು

ವಾದಗಳನ್ನು ಹಿಂಪೆ ಹಾಕುವಂತೆ ಕಾಣುತ್ತಿತ್ತು. ವಿವಾದಗಳು, ಹಿಂಸಾಕೃತ್ಯಗಳು, ಯುದ್ಧಗಳು ನಡೆದು ಕಡೆಗೆ ಟ್ರಿನಿಟೇರಿಯನ್ನರ ವಾದ ಕ್ರೈಸ್ತ ಸಮಾಜದ ಅಂಗೀಕೃತ ಸೂತ್ರವಾಯಿತು. ಅಥನೇಸಿಯನ್ ಪಂಗಡದ ಸಾಹಿತ್ಯದಲ್ಲಿ ಇದು ಪರಿಪೂರ್ಣತೆಯನ್ನು ಪಡೆಯಿತು.

ಈ ವಿವಾದಗಳನ್ನು ಕುರಿತು ನಾವೇನನ್ನೂ ಹೇಳಲು ಇಚ್ಛಿಸುವುದಿಲ್ಲ. ಏಸುವಿನ ವೈಯಕ್ತಿಕ ಬೋಧನೆಯಂತೆ ಇವುಗಳು ಚರಿತ್ರೆಯ ಮೇಲೆ ಪ್ರಭಾವ ಬೀರಲಿಲ್ಲ. ಏಸುವಿನ ಉಪದೇಶ ಮಾತ್ರ ಖಂಡಿತವಾಗಿಯೂ ನಮ್ಮ ಮಾನವ ಜನಾಂಗದ ನೈತಿಕ ಹಾಗೂ ಆಧ್ಯಾತ್ಮಿಕ ಜೀವನವನ್ನು ಒಂದು ಹೊಸ ಘಟ್ಟಕ್ಕೆ ತಂದು ಮುಟ್ಟಿಸಿತು ದೇವರ ಜಗತ್ಪಿತೃತ್ವ. ಅದರ ಫಲವಾದ ಜಗತ್ತಿನ ಜನರೆಲ್ಲರ ಭ್ರಾತೃತ್ವದ ಭಾವನೆ, ಪ್ರತಿ ವ್ಯಕ್ತಿಯೂ ದೇವರ ಜೀವಂತ ದೇಗುಲವಾದುದರಿಂದ ಎಲ್ಲರೂ ಪವಿತ್ರರೆಂದು ತಿಳಿಯಲೇ ಬೇಕೆಂಬ ಒತ್ತಾಯ ಈ ಅಂಶಗಳು ಇನ್ನು ಮುಂದಿನ ಸಾಮಾಜಿಕ ಮತ್ತು ರಾಜಕೀಯ ಜೀವನದ ಮೇಲೆ ಆಳವಾದ ಪರಿಣಾಮವನ್ನುಂಟು ಮಾಡಿದುವು. ಒಬ್ಬ ಮನುಷ್ಯನನ್ನು "ಅವನು ಮನುಷ್ಯ"ನೆಂಬ ಕಾರಣದಿಂದ ಗೌರವಿಸುವುದು ಕ್ರೈಸ್ತಮತ ಮೊದಲಾದಂದಿನಿಂದ ಏಸುವಿನ ಉಪದೇಶ ಹರಡುತ್ತಾ ಹೋದಂತೆ ಪ್ರಪಂಚದಲ್ಲಿ ಕಾಣಬರುತ್ತದೆ. ಕ್ರೈಸ್ತಮತವನ್ನು ಕಂಡರೆ ಆಗದ ವಿಮರ್ಶಕರು ಹೇಳುವಂತೆ ಸೇಂಟ್ ಪಾಲ್ ಗುಲಾಮರು ತಮ್ಮ ಒಡೆಯರಿಗೆ ವಿಧೇಯರಾಗಿರಬೇಕೆಂದು ಉಪದೇಶ ಮಾಡಿದ್ದು ನಿಜ ವಿರಬಹುದು. ಆದರೂ ಮನುಷ್ಯರು ಮನುಷ್ಯರನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವುದು ತಪ್ಪು ಎನ್ನುವುದೇ ಸುವಾರ್ತೆಗಳಲ್ಲಿ ಉಳಿದುಕೊಂಡು ಬಂದಿರುವ ಏಸುವಿನ ಉಪದೇಶದ ಮುಖ್ಯ ಆಶಯ ಎನ್ನುವುದೂ ನಿಜ. ಇದಕ್ಕಿಂತ ಹೆಚ್ಚಾಗಿ ರೋಮನ್ ಅರೀನಾದಲ್ಲಿ ನಡೆಸುತ್ತಿದ್ದ ಮಾನವವರ್ಗದ ಘನತೆಗೆ ಕುಂದು ತರುತ್ತಿದ್ದ ಗ್ಲಾಡಿಯೇಟರುಗಳ ಕಾಳಗಗಳಂತೂ ಕ್ರೈಸ್ತಧರ್ಮಕ್ಕೆ ಖಂಡಿತವಾಗಿಯೂ ಒಪ್ಪಿಗೆಯಾಗಲಿಲ್ಲ.

ಕ್ರಿಸ್ತಶಕೆಯ ಮೊದಲ ಎರಡು ಶತಮಾನಗಳ ಕಾಲ ಕ್ರೈಸ್ತಧರ್ಮ ರೋಮನ್ ಸಾಮ್ರಾಜ್ಯದಾದ್ಯಂತ ಪಸರಿಸಿತು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮತಾಂತರ ಹೊಂದುತ್ತಿದ್ದ ವಿವಿಧ ವ್ಯಕ್ತಿಗಳನ್ನು ಒಂದೇ ಭಾವನೆ, ಉದ್ದೇಶಗಳನ್ನು ಪಡೆದ ಒಂದು ಜನಸಮೂಹವನ್ನಾಗಿ ಈ ಧರ್ಮ ಹೆಣೆಯಿತು. ರೋಮನ್ ಚಕ್ರವರ್ತಿಗಳಲ್ಲಿ ಕೆಲವರು ಇದನ್ನು ಸಂಪೂರ್ಣವಾಗಿ ದ್ವೇಷಿಸಿದರೆ ಮತ್ತೆ ಕೆಲವರು ಇದನ್ನು ಸಹನೆಯಿಂದ ಕಾಣುತ್ತಿದ್ದರು. ಎರಡು ಮತ್ತು ಮೂರನೇ ಶತಮಾನಗಳಲ್ಲಿ ಇದನ್ನು ಪೂರ್ತಿ ತುಳಿದು ಹಾಕುವ ಪ್ರಯತ್ನ ನಡೆಯಿತು ಕಡೆಗೆ ಕ್ರಿ.ಶ. 303ರಲ್ಲಿ ಮತ್ತು ಅವರಿಂದೀಚೆಗೆ ಕೆಲವು ವರ್ಷಗಳು ಡಯೋಕ್ಲೀಷಿಯನ್ ಚಕ್ರವರ್ತಿಯ ಕಾಲದಲ್ಲಿ ಕ್ರೈಸ್ತಮತೀಯರ ವಿರುದ್ಧ ಹಿಂಸಾಕೃತ್ಯಗಳು ಬಹಳ ರಭಸದಿಂದ ನಡೆದುವು. ಕ್ರೈಸ್ತ ಮತಕ್ಕೆ ಸೇರಿದ್ದ ಆಸ್ತಿಯನ್ನೆಲ್ಲಾ ವಶಪಡಿಸಿಕೊಂಡು ಬೈಬಲ್ಲುಗಳು ಮತ್ತಿತರ ಧಾರ್ಮಿಕ ಸಾಹಿತ್ಯವನ್ನೆಲ್ಲಾ

ಕಸಿದುಕೊಂಡು ನಾಶಮಾಡಿ ಕ್ರೈಸ್ತಮತೀಯರಿಗೆ ನ್ಯಾಯಾಂಗದ ರಕ್ಷಣೆ ಇಲ್ಲದಂತೆ ಮಾಡಿ ಅನೇಕರನ್ನು ಮರಣದಂಡನೆಗೆ ಗುರಿಪಡಿಸಲಾಯಿತು. ಇವರಲ್ಲಿ ಪುಸ್ತಕಗಳನ್ನು ನಾಶಮಾಡಿದುದನ್ನು ಮುಖ್ಯವಾಗಿ ಗಮನಿಸಬೇಕು. ಈ ಹೊಸ ಧರ್ಮದಲ್ಲಿ ಏಕತ್ವ ಉಂಟಾಗಲು ಅದರ ಲಿಖಿತ ಸಾಹಿತ್ಯದ ಶಕ್ತಿಯೇ ಪ್ರಮುಖ ಪಾತ್ರವೆಂದು ಅಧಿಕಾರ ವರ್ಗದವರು ಅರ್ಥಮಾಡಿಕೊಂಡಿದ್ದರೆಂದು ಇದರಿಂದ ಗೊತ್ತಾಗುತ್ತದೆ. 'ಗ್ರಂಥ ಧರ್ಮ'ಗಳೆನ್ನಬಹುದಾದ ಯೆಹೂದ್ಯ ಮತ್ತು ಕ್ರೈಸ್ತಧರ್ಮಗಳು ತಮ್ಮ ಅನುಯಾಯಿಗಳು ವಿದ್ಯೆಕಲಿಯುವಂತೆ ಮಾಡುತ್ತಿದ್ದುವು. ಈ ಧರ್ಮಗಳು ಮುಂದುವರಿಯಬೇಕಾಗಿದ್ದಲ್ಲಿ ಜನರು ಇವುಗಳ ತತ್ತ್ವಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು ಅವಶ್ಯವಾಗಿತ್ತು. ಹಳೆಯ ಮತಧರ್ಮಗಳು ಮಾನವರ ವೈಯುಕ್ತಿಕ ಬುದ್ಧಿಶಕ್ತಿಗೆ ಈ ರೀತಿಯ ಪ್ರಚೋದನೆಯನ್ನಿತ್ತಿರಲಿಲ್ಲ. ಇಷ್ಟರಲ್ಲೇ ಪಶ್ಚಿಮ ಯೂರೋಪನ್ನು ಆವರಿಸಿದ ಅನಾಗರಿಕತೆ ಮತ್ತೆ ಅವನತಿಯ ಯುಗ ಕಳೆಯುವವರೆಗೂ ಜ್ಞಾನಾರ್ಜನೆಯ ಸಂಪ್ರದಾಯ ಅಲ್ಲಿ ಉಳಿದುಕೊಂಡು ಬರಲು ಮುಖ್ಯ ಕಾರಣವೆಂದರೆ ಕ್ರೈಸ್ತಮತವೇ.

ಡಯೋಕ್ಲೀಷಿಯನ್ನನ ಹಿಂಸಾಕೃತ್ಯಗಳು ಕ್ರೈಸ್ತಮತದ ಬೆಳವಣಿಗೆಯನ್ನು ತಡೆಯುವುದರಲ್ಲಿ ಏನೂ ಸಫಲವಾಗಲಿಲ್ಲ. ಅನೇಕ ಪ್ರಾಂತ್ಯಗಳಲ್ಲಿ ಜನರು ಮತ್ತು ಅಧಿಕಾರಿಗಳಲ್ಲಿ ಅಧಿಕ ಭಾಗ ಕ್ರೈಸ್ತರಾಗಿದ್ದುದು ಇದಕ್ಕೆ ಕಾರಣವಾಯಿತು. ಕ್ರಿ.ಶ. 317ರಲ್ಲಿ "ಸಹಚಕ್ರವರ್ತಿ" ಗಲೆಯರಿಸ್ಸನು ಕ್ರೈಸ್ತಮತವನ್ನು ಕುರಿತು ಸಹನೆಯ ಶಾಸನವೊಂದನ್ನು ಹೊರಡಿಸಿದನು. ಕ್ರೈಸ್ತಧರ್ಮ ದೀಕ್ಷೆಯನ್ನು ಸ್ವೀಕರಿಸಿದ ಕಾನ್ಸ್ಟೆಂಟೈನ್ ಕ್ರಿ.ಶ. 324ರಲ್ಲಿ ರೋಮಿನ ಏಕೈಕ ಪ್ರಭುವಾದನು. ತಾನು ದೇವತ್ವವುಳ್ಳವನೆಂಬ ನಂಬಿಕೆಯನ್ನು ತ್ಯಜಿಸಿ ತನ್ನ ಸೈನ್ಯದ ಧ್ವಜ ಮತ್ತು ಗುರಾಣಿಗಳ ಮೇಲೆ ಕ್ರೈಸ್ತ ಚಿಹ್ನೆಗಳನ್ನು ಬರೆಸಿದನು.

ಕೆಲವು ವರ್ಷಗಳಲ್ಲಿಯೇ ಕ್ರೈಸ್ತಧರ್ಮ ರೋಮ್ ಸಾಮ್ರಾಜ್ಯದ ಅಧಿಕೃತ ಧರ್ಮವಾಗಿ ಭದ್ರವಾಗಿ ನೆಲೆ ನಿಂತಿತು. ಇದರ ಪ್ರತಿಸ್ಪರ್ಧಿ ಧರ್ಮಗಳು ಕಣ್ಮರೆಯಾಗಿ ಹೋದುವು ಇಲ್ಲವೇ ಬಹುಬೇಗನೇ ಇದರಲ್ಲಿಯೇ ಲೀನವಾಗಿ ಹೋದುವು. ಕ್ರಿ.ಶ. 390ರಲ್ಲಿ ಚಕ್ರವರ್ತಿ ಥಿಯೊಡೊಸಿಯಸ್ ಮಹಾಶಯನು ಅಲೆಕ್ಸಾಂಡ್ರಿಯದಲ್ಲಿದ್ದ ಜೂಪಿಟರ್ ಸೆರಾಪಿಸ್ ದೇವರ ಬೃಹತ್ಪ್ರತಿಮೆಯನ್ನು ಧ್ವಂಸ ಮಾಡಿಸಿದನು. ಕ್ರಿ.ಶ. ಐದನೆಯ ಶತಮಾನದ ಆರಂಭದಿಂದ ರೋಮ್ ಸಾಮ್ರಾಜ್ಯದ ಆದ್ಯಂತ ಕ್ರೈಸ್ತ ದೇವಾಲಯಗಳೂ ಕ್ರೈಸ್ತ ದೇವಾರ್ಚಕರು ಅಲ್ಲದೆ ಬೇರೆ ಯಾವ ಮತದವರೂ ಇರಲಿಲ್ಲ.

## ಅನಾಗರಿಕರಿಂದ ರೋಮ್ ಸಾಮ್ರಾಜ್ಯದ ವಿಚ್ಛೇದ

ಕ್ರಿ.ಶ. 3ನೇ ಶತಮಾನದಾದ್ಯಂತವೂ ರೋಮ್ ಸಾಮ್ರಾಜ್ಯವು ಅನಾಗರಿಕ ಧಾಳಿಕಾರರನ್ನು ಎದುರಿಸಬೇಕಾಯಿತು. ಇದೇ ಕಾಲದಲ್ಲೇ ರೋಮಿನ ಸಮಾಜ ಶಿಥಿಲವಾಗಿ ಜನತೆಯ ನೈತಿಕ ಸ್ಥೈರ್ಯ ಕುಂದಿ ಹೋಗುವುದರಲ್ಲಿತ್ತು. ಆಗ ಆಳುತ್ತಿದ್ದ

ಚಕ್ರವರ್ತಿಗಳಿಗೂ ಸರ್ವಾಧಿಕಾರ ನಡೆಸುತ್ತಿದ್ದ ಸೈನ್ಯ ನಾಯಕರಿಗೂ ಹೋರಾಟ ನಡೆಯುತ್ತಿತ್ತು. ಯುದ್ಧದ ಕಾರ್ಯ ನೀತಿಗನುಸಾರವಾಗಿ ರಾಜಧಾನಿಯನ್ನು ಅಲ್ಲಿಂದಿಲ್ಲಿಗೆ ಬದಲಾಯಿಸುತ್ತಿದ್ದರು. ಚಕ್ರವರ್ತಿಯು ತಾಣ್ಯ ಇಂದು ಉತ್ತರ ಇಟಲಿಯ ಮಿಲಾನಿನಲ್ಲಿದ್ದರೆ ನಾಳೆ ಸರ್ಬಿಯ ಎಂದು ಈಗ ಕರೆಸಿಕೊಳ್ಳುತ್ತಿರುವ ಸಿರ್ಮಿಯಮ್ ಅಥವಾ ನಿಷ್‌ನಲ್ಲಿ ಮತ್ತೊಮ್ಮೆ ಏಷ್ಯ ಮೈನರಿನ ನಿಕೋಡೆಮಿಯದಲ್ಲಿ ಇರುತ್ತಿತ್ತು. ಇಟಲಿಯ ದಕ್ಷಿಣ ಭಾಗದಲ್ಲಿದ್ದು ಎಲ್ಲವಕ್ಕೂ ದೂರವಾಗಿದ್ದ ರೋಮ್ ನಗರ ಚಕ್ರವರ್ತಿ ಇರಲು ತಕ್ಕ ಸ್ಥಳವಾಗಿರಲಿಲ್ಲ. ಅದಕ್ಕೆ ಇಳಿಗಾಲಬಂದಿತ್ತು. ಆದರೂ ಇನ್ನೂ ಕೂಡ ಸಾಮ್ರಾಜ್ಯದ ಬಹುಭಾಗದಲ್ಲಿ ಶಾಂತಿ ಇದ್ದು ಜನರು ನಿರಾಯುಧರಾಗಿ ಓಡಾಡಬಹುದಾಗಿತ್ತು. ಅಧಿಕಾರವಷ್ಟೂ ಸೈನ್ಯದ ಕೈಯಲ್ಲಿತ್ತು. ಸೈನ್ಯವನ್ನು ಅವಲಂಬಿಸಿಕೊಂಡಿರಬೇಕಾಗಿದ್ದ ಚಕ್ರವರ್ತಿಗಳು ಸಾಮ್ರಾಜ್ಯದಲ್ಲಿ ಉಳಿದ ಜನತೆಯನ್ನು ದರ್ಪದಿಂದ ನಡೆಸಿಕೊಳ್ಳಲಾರಂಭಿಸಿದರು. ಅಲ್ಲಿನ ಪರಿಸ್ಥಿತಿ ಪರ್ಷಿಯ ಮತ್ತಿತರ ಪೌರ್ವಾತ್ಯ ರಾಜ್ಯಗಳಂತೆ ಆಯಿತು. ಡಯೋಕ್ಲೀಷಿಯನ್ನನು ರಾಜ ಮುಕುಟ ಮತ್ತು ಪೌರ್ವಾತ್ಯ ಮಾದರಿಯ ಉದ್ದನೆಯ ಮೇಲುಡುಪನ್ನು ಧರಿಸಲು ಮೊದಲು ಮಾಡಿದನು.

ಇಷ್ಟು ಹೊತ್ತಿಗಾಗಲೇ ರ್ಹೈನ್ ಮತ್ತು ಡ್ಯಾನ್ಯೂಬ್ ನದಿಗಳ ಸುಮಾರಿನಲ್ಲಿದ್ದ ಗಡಿಯುದ್ದಕ್ಕೂ ಶತ್ರುಗಳು ಒಳನುಗ್ಗಲು ಯತ್ನಿಸುತ್ತಿದ್ದರು. ಫ್ರಾಂಕರು ಮತ್ತು ಇತರ ಜರ್ಮನ್ ತಂಡಗಳ ಜನರು ರ್ಹೈನ್ ನದಿಯವರೆಗೂ ಬಂದಿದ್ದರು. ಉತ್ತರ ಹಂಗೆರಿಯಲ್ಲಿ ವ್ಯಾಂಡಲರು, ಮುಂಚೆ ಡೇಷಿಯವೆಂದು ಕರೆಯುತ್ತಿದ್ದ ಇಂದಿನ ರುಮೇನಿಯದಲ್ಲಿ ಎಸಿಗಾಥರು (ಪಶ್ಚಿಮ ಗಾಥರು) ಇವರ ಹಿಂದೆ ಪೂರ್ವದಿಕ್ಕಿನ ಗಾಥರು ಅಥವಾ ಆಸ್ಟ್ರೊ ಗಾಥರು, ಇನ್ನೂ ಆಚೆಗೆ ವೋಲ್ಗಾ ನದಿ ಪ್ರದೇಶದಲ್ಲಿ ಅಲನರು ಇದ್ದರು. ಆದರೆ ಇನ್ನು ಮುಂದೆ ಮಂಗೋಲ್ ಬುಡಕಟ್ಟಿನ ಜನರು ಯೂರೋಪಿನ ಕಡೆಗೆ ಒತ್ತಿಕೊಂಡು ಬರಲು ಮೊದಲಿಟ್ಟರು. ಇವರಲ್ಲಿ ಒಬ್ಬರಾದ ಹೂಣರು ಅಲನರು ಮತ್ತು ವಿಸಿಗಾಥರಿಂದ ಆಗಲೇ ಕಪ್ಪ ವಸೂಲು ಮಾಡುತ್ತಿದ್ದು ಅವರನ್ನು ಪಶ್ಚಿಮಕ್ಕೆ ಒತ್ತರಿಸುತ್ತಿದ್ದರು.

ಏಷ್ಯದಲ್ಲಿ ಪುನರುಜ್ಜೀವನಗೊಳುತ್ತಿದ್ದ ಪರ್ಷಿಯದ ಒತ್ತಡಕ್ಕೆ ರೋಮ್ ಸಾಮ್ರಾಜ್ಯದ ಸರಹದ್ದು ಮುರಿದು ಬೀಳುತ್ತಿತ್ತು. ಮುಂದೆ ಮೂರು ಶತಮಾನಗಳು ಸಸೆನಿಡ್ ದೊರೆಗಳ ಆಳ್ವಿಕೆಯಲ್ಲಿದ್ದ ಚೈತನ್ಯಶಾಲಿಯಾದ ಈ ನೂತನ ಪರ್ಷಿಯವು ರೋಮಿಗೆ ಏಷ್ಯದಲ್ಲಿ ಪ್ರಬಲ ಪ್ರತಿಸ್ಪರ್ಧಿಯಾಗಿತ್ತು.

ಅಂದಿನ ಯೂರೋಪ್ ಭೂಪಟವನ್ನು ನೋಡಿದರೆ ರೋಮ್ ಸಾಮ್ರಾಜ್ಯದ ವಿಶೇಷ ದೌರ್ಬಲ್ಯವೇನೆಂದು ಓದುಗರಿಗೆ ತಿಳಿಯುತ್ತದೆ. ಇಂದಿನ ಬಾಸ್ನಿಯ ಮತ್ತು ಸರ್ಬಿಯ ಪ್ರದೇಶದಲ್ಲಿ ಡ್ಯಾನ್ಯೂಬ್ ನದಿಯು ಏಡ್ರಿಯಾಟಿಕ್ ಸಮುದ್ರಕ್ಕೆ ಕೇವಲ ಒಂದೆರಡು ನೂರು ಮೈಲಿ ದೂರದಲ್ಲಿದೆ. ರೋಮನ್ನರು ತಮ್ಮ ಸಮುದ್ರಮಾರ್ಗಗಳನ್ನು ಸರಿಯಾಗಿಟ್ಟುಕೊಂಡಿರಲಿಲ್ಲ. ಗ್ರೀಕ್ ಭಾಷೆ ಬಳಕೆಯಲ್ಲಿದ್ದ, ರೋಮ್ ಸಾಮ್ರಾಜ್ಯದ ಪೂರ್ವ ಭಾಗಕ್ಕೂ, ಲ್ಯಾಟಿನ್ ಮಾತನಾಡುತ್ತಿದ್ದ ಪಶ್ಚಿಮ ಭಾಗಕ್ಕೂ ನಡುವಿನ

ಸಂಪರ್ಕ ಮಾರ್ಗವೆಂದರೆ ಈ 200 ಮೈಲಿ ಅಗಲದ ಪಟ್ಟಿಯಾಕಾರದ ಈ
ಭೂಪ್ರದೇಶವೇ ಆಗಿತ್ತು. ಡ್ಯಾನ್ಯೂಬ್ ನದಿಯು ಈಗ ಯುಗೋಸ್ಲಾವಿಯ ಸಮ
ಕೋನಾಕೃತಿಯ ಈ ಪಾತ್ರ ಭಾಗದ ಮೇಲೆ ಅನಾಗರಿಕ ಜನರ ಧಾಳಿ ಬಲವಾಗಿತ್ತು.
ಅವರು ಈ ಭಾಗದೊಳಗೆ ನುಗ್ಗಿದರೆ ಸಾಮ್ರಾಜ್ಯ ಎರಡು ಹೋಳು ಆಗುವುದು ಖಂಡಿತ
ವಾಗಿತ್ತು.

ರೋಮ್ ಸಾಮ್ರಾಜ್ಯ ಇನ್ನಷ್ಟು ಕಸುವಿನಿಂದ ಕೂಡಿದ್ದಲ್ಲಿ ಮುಂದೆ ನುಗ್ಗಿ
ಡೇಸಿಯವನ್ನು ವಶಪಡಿಸಿಕೊಳ್ಳಬಹುದಾಗಿತ್ತು. ಆದರೆ ಇದಕ್ಕೆ ಈ ಶಕ್ತಿ ಉಳಿದಿರಲಿಲ್ಲ.
ಕಾನ್‌ಸ್ಟಂಟೈನ್ ಮಹಾಶಯನು ಬಹಳ ಬುದ್ಧಿಶಾಲಿಯೂ ಆಸಕ್ತಿಯುತನೂ ಆಗಿದ್ದ
ದೇನೋ ನಿಜ. ಅತಿ ಮುಖ್ಯವಾದ ಈ ಬಾಲ್ಕನ್ ಪ್ರದೇಶಗಳಲ್ಲಿ ಗಾಥರನ್ನು ಇವನು
ಒಂದು ಸಲ ಹೊಡೆದಟ್ಟಿದನು. ಆದರೆ ಸಾಮ್ರಾಜ್ಯದ ಎಲ್ಲೆಯನ್ನು ಡ್ಯಾನ್ಯೂಬ್
ನದಿಯಾಚೆ ವಿಸ್ತರಿಸಲು ಇವನ ಬಳಿ ಸಾಕಾದಷ್ಟು ಬಲ ಇರಲಿಲ್ಲ. ಸಾಮ್ರಾಜ್ಯದ
ಒಳಗಿನ ದೌರ್ಬಲ್ಯಗಳನ್ನು ಸರಿಪಡಿಸುವುದರಲ್ಲೇ ಇವನ ವೇಳೆಯೆಲ್ಲಾ ಹೋಯಿತು.
ಕ್ಷೀಣವಾಗುತ್ತಿದ್ದ ಸಾಮ್ರಾಜ್ಯ ಪುನಶ್ಚೈತನ್ಯಗೊಳ್ಳಲೆಂದು ಕ್ರೈಸ್ತಧರ್ಮದ ನೈತಿಕ
ಬಲ ಮತ್ತು ಐಕ್ಯಮತ್ಯಗಳನ್ನು ತಂದಿತ್ತನು. ಅಲ್ಲದೆ ಹೆಲೆಸ್ಪಾಂಟಿನ ಬೈಜಾಂಟಿ
ಯಮ್ಮಿನಲ್ಲಿ ಒಂದು ಹೊಸ ಖಾಯಂ ರಾಜಧಾನಿಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿ
ದನು. ಈ ಹೊಸ ರಾಜಧಾನಿ ಬೈಜಾಂಟಿಯಮ್ಮನ್ನು ಕಟ್ಟುತ್ತಿರುವಾಗಲೇ ಇವನು
ಮೃತನಾದನು. ಈ ನಗರವನ್ನು ಇವನ ಗೌರವಾರ್ಥವಾಗಿ ಕಾನ್‌ಸ್ಟಾಂಟಿನೋಪಲ್
ಎಂದು ಕರೆಯಲಾಯಿತು. ಇವನ ಆಳ್ವಿಕೆ ಮುಗಿಯುವುದಕ್ಕೆ ಸ್ವಲ್ಪ ಮುಂಚೆ ಒಂದು
ವಿಶೇಷ ಪ್ರಸಂಗ ನಡೆಯಿತು. ಗಾಥರಿಂದ ತೊಂದರೆಗೊಳಗಾಗಿದ್ದ ವ್ಯಾಂಡಲರು ತಾವಾ
ಗಿಯೇ ರೋಮ್ ಸಾಮ್ರಾಜ್ಯಕ್ಕೆ ಸೇರುತ್ತೇವೆಂದು ಬಂದರು. ಇಂದಿನ ಹಂಗೆರಿಯಲ್ಲಿ
ರುವ ಆಗ ಪಾನ್ನೋನಿಯ ಎಂದು ಕರೆಯುತ್ತಿದ್ದ ಡ್ಯಾನ್ಯೂಬ್ ನದಿಯ ಪಶ್ಚಿಮ ಭಾಗದ
ಪ್ರದೇಶದಲ್ಲಿ ಇವರಿಗೆ ಭೂಮಿಯನ್ನು ಕೊಡಲಾಯಿತು. ಇವರ ಯೋಧರು ಹೆಸರಿಗೆ
ರೋಮನ್ ದಳಕ್ಕೆ ಸೇರಿದವರೆನಿಸಿಕೊಂಡರು. ಆದರೂ ಇವರು ತಮ್ಮದೇ ದಂಡ
ನಾಯಕರಿಗೆ ವಿಧೇಯರಾಗಿದ್ದರು. ರೋಮಿಗೆ ಇವರನ್ನು ದಕ್ಕಿಸಿಕೊಳ್ಳಲು ಆಗಲಿಲ್ಲ.

ತನ್ನ ವಿಶಾಲವಾದ ರಾಜ್ಯವನ್ನು ಪುನರ್ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತಿದ್ದಾ
ಗಲೇ ಕಾನ್‌ಸ್ಟಂಟೈನ್ ತೀರಿಕೊಂಡನು. ತಿರುಗಿ ರಾಜ್ಯದ ಎಲ್ಲೆಗಳು ಛಿದ್ರವಾಗಿ
ವಿಸಿಗಾಥರು ಹೆಚ್ಚು ಕಡಿಮೆ ಕಾನ್‌ಸ್ಟಂಟಿನೋಪಲ್ಲಿನವರೆಗೆ ಬಂದರು. ಏಡ್ರಿಯಾ
ನೋಪಲ್ಲಿನಲ್ಲಿ ವ್ಯಾಲೆನ್ಸ್ ಚಕ್ರವರ್ತಿಯನ್ನು ಸೋಲಿಸಿ ಪ್ಯಾನ್ನೋನಿಯದಲ್ಲಿ ವ್ಯಾಂಡ
ಲರು ಮಾಡಿದ್ದಂತೆಯೇ ಇಂದಿನ ಬಲ್ಗೇರಿಯದಲ್ಲಿ ನೆಲೆಸಿದರು. ಹೆಸರಿಗೆ ಮಾತ್ರ ಇವರು
ಚಕ್ರವರ್ತಿಯ ಪ್ರಜೆಗಳಾಗಿದ್ದರೂ ನಿಜವಾಗಿ ಇವರೇ ವಿಜಯಿಗಳಾಗಿದ್ದರು.

ಕ್ರಿ.ಶ. 379 ರಿಂದ 395 ರವರೆಗೂ ಥಿಯೋಡೋಸಿಯಸ್ ಮಹಾಶಯನು
ಚಕ್ರವರ್ತಿಯಾಗಿದ್ದನು. ಅಷ್ಟು ದಿನ ಸಾಮ್ರಾಜ್ಯವು ಮೇಲ್ನೋಟಕ್ಕಂತೂ ಅಖಂಡ

ವಾಗಿತ್ತು. ಇಟಲಿ ಮತ್ತು ಪ್ಯಾನ್ನೊನಿಯದ ಸೈನ್ಯಗಳು ಸ್ಟಿಲಿಜೊ ಎಂಬ ವ್ಯಾಂಡಲನ ಅಧಿಕಾರದಲ್ಲಿದ್ದುವು. ಬಾಲ್ಕನ್ ಪರ್ಯಾಯ ದ್ವೀಪದ ಸೈನ್ಯಗಳಿಗೆ ಅಲ್ಲಾರಿಕ್ ಎಂಬ ಗಾಥನು ಅಧಿಪತಿಯಾಗಿದ್ದನು. ನಾಲ್ಕನೆಯ ಶತಮಾನದ ಅಂತ್ಯದಲ್ಲಿ ಥಿಯೋಡೋಸಿಯಸ್ ಮರಣ ಹೊಂದಿದನು. ಇವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ಇವರಲ್ಲಿ ಆರ್ಕೇಡಿಯಸ್ಸನಿಗೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಅಲ್ಲಾರಿಕ್ಕನ ಬೆಂಬಲವೂ, ಇನ್ನೊಬ್ಬ ಮಗ ಹಾನೋರಿಯಸ್ಸನಿಗೆ ಇಟಲಿಯಲ್ಲಿ ಸ್ಟಿಲಿಜೊವಿನ ಬೆಂಬಲವೂ ಸಿಕ್ಕಿದುವು. ನಿಜ ಹೇಳುವುದಾದರೆ ಇಬ್ಬರು ರಾಜಕುಮಾರರನ್ನು ಕೈ ಗೊಂಬೆಗಳನ್ನಾಗಿಟ್ಟುಕೊಂಡು ಅಲ್ಲಾರಿಕ್ ಮತ್ತು ಸ್ಟಿಲಿಜೊ ಸಾಮ್ರಾಜ್ಯಕ್ಕೋಸ್ಕರ ಹೋರಾಡಿದರು. ಈ ಸೆಣಸಾಟದಲ್ಲಿ ಅಲ್ಲಾರಿಕ್ ಇಟಲಿಗೆ ನುಗ್ಗಿ ರೋಮಿಗೆ ಮುತ್ತಿಗೆ ಹಾಕಿ ಬೇಗನೆ ಅದನ್ನು ಗೆದ್ದುಕೊಂಡನು. (ಕ್ರಿ.ಶ. 410)

ಐದನೆ ಶತಮಾನದ ಮೊದಲ ಕಾಲ. ರೋಮ್ ಸಾಮ್ರಾಜ್ಯದ ಐರೋಪ್ಯ ಭಾಗವೆಷ್ಟೂ ಅನಾಗರಿಕರ ಸುಲಿಗೆಕೋರ ಸೈನ್ಯಗಳ ತುತ್ತಾಯಿತು. ಆಗ ಪ್ರಪಂಚದ ಪರಿಸ್ಥಿತಿ ಹೇಗಿತ್ತೆಂದು ಊಹಿಸಿಕೊಳ್ಳುವುದು ಕಷ್ಟ. ಫ್ರಾನ್ಸ್, ಸ್ಪೇನ್, ಇಟಲಿ ಮತ್ತು ಬಾಲ್ಕನ್ ಪರ್ಯಾಯ ದ್ವೀಪಗಳಲ್ಲಿ ರೋಮಿನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೆ ಬಂದಿದ್ದ ದೊಡ್ಡ ದೊಡ್ಡ ನಗರಗಳು ಇನ್ನೂ ಇದ್ದರೂ ಅವುಗಳ ಐಶ್ವರ್ಯ ಕುಂದಿ ಜನ ಸಂಖ್ಯೆ ಕಡಿಮೆಯಾಗಿ ಕ್ಷಯಿಸಿ ಹೋಗುತ್ತಿದ್ದುವು. ಇವುಗಳಲ್ಲಿ ಜನಜೀವನ ನಾಳೆ ಹೇಗೆ ಎನ್ನುವ ಭರವಸೆ ಇಲ್ಲದೆ ಹುರುಳೇ ಇಲ್ಲದೆ ಕೀಳ್ಮಟ್ಟದಲ್ಲಿ ನಡೆಯುತ್ತಿದ್ದಿರಬೇಕು.

ಎಲ್ಲಿಯೋ ಅತಿದೂರದಲ್ಲಿದ್ದು ಜನತೆಯ ಸಂಪರ್ಕವೇ ಇಲ್ಲದೆ ಇರುತ್ತಿದ್ದ ಚಕ್ರವರ್ತಿಯ ಹೆಸರಿನಲ್ಲಿ ಸ್ಥಳೀಯ ಅಧಿಕಾರಿಗಳು ತಮ್ಮ ಕರ್ತವ್ಯ ಜ್ಞಾನವಿದ್ದಷ್ಟು ಮಟ್ಟಿಗೆ ಕೆಲಸ ನಡೆಸುತ್ತಾ ಅಧಿಕಾರ ಚಲಾಯಿಸುತ್ತಿದ್ದರು. ಚರ್ಚುಗಳಿದ್ದರೂ ಅವುಗಳ ಪಾದ್ರಿಗಳು ಸಾಮಾನ್ಯವಾಗಿ ನಿರಕ್ಷರ ಕುಕ್ಷಿಗಳಾಗಿರುತ್ತಿದ್ದರು. ಓದು ಬರೆಹಕ್ಕಿಂತ ಮೂಢನಂಬಿಕೆ ಮತ್ತು ಭಯ ಹೆಚ್ಚಾಗಿತ್ತು. ಆದಾಗ್ಯೂ ಲೂಟಿಕೋರರು ಹಾಳು ಮಾಡದಿದ್ದಂತಹ ಕಡೆಗಳಲ್ಲೆಲ್ಲಾ ಪುಸ್ತಕಗಳು ಚಿತ್ರಗಳೂ ಪ್ರತಿಮೆಗಳು ಮತ್ತು ಇತರ ಕುಶಲಕಲಾ ವಸ್ತುಗಳು ಇನ್ನೂ ಕಂಡುಬರುತ್ತಿದ್ದುವು.

ಹಳ್ಳಿಗಾಡಿನಲ್ಲೂ ಜೀವನ ಕೀಳ್ದೆಸೆಗಿಳಿದಿತ್ತು. ಸಮಗ್ರ ರೋಮನ್ ಪ್ರಪಂಚ ಮೊದಲಿನದ್ದುದಕ್ಕಿಂತ ಅವ್ಯವಸ್ಥಿತವಾಗಿ ಕಳೆ ಬೆಳೆದ ತೋಟದಂತಿತ್ತು. ಕೆಲವು ಪ್ರದೇಶಗಳು ಯುದ್ಧ ಮತ್ತು ಉಪದ್ರವಗಳಿಂದಾಗಿ ಪೂರ್ತಿ ಪಾಳು ಬಿದ್ದಿದ್ದುವು. ರಸ್ತೆಗಳು ಕಾಡುಗಳಲ್ಲಿ ಕಳ್ಳರು ತುಂಬಿದ್ದರು. ಅಂತಹ ಕಡೆಗಳಲ್ಲೆಲ್ಲಾ ಅನಾಗರಿಕರು ಪ್ರತಿಭಟನೆಯನ್ನೇ ಕಾಣದೆ ಮುನ್ನುಗ್ಗಿ ತಮ್ಮ ಮುಂದಾಳುಗಳನ್ನು ಅಲ್ಲಿಯ ಅಧಿಪತಿಗಳನ್ನಾಗಿ ನೇಮಿಸಿದರು. ಎಷ್ಟೋ ವೇಳೆ ಈ ಅಧಿಪತಿಗಳಿಗೆ ರೋಮನ್ ನಾಮಧೇಯವೇ ಇರುತ್ತಿತ್ತು. ಈ ಜನರು ಸ್ವಲ್ಪವಾದರೂ ನಾಗರಿಕರಾಗಿದ್ದಲ್ಲಿ ತಾವು ಗೆದ್ದ ಪ್ರದೇಶಗಳೊಂದಿಗೆ ತಕ್ಕಮಟ್ಟಿಗೆ ಸರಿಯಾದ ರೀತಿಯಲ್ಲಿ ಒಪ್ಪಂದ ಮಾಡಿಕೊಂಡು ಅಲ್ಲಿಯ

ನಗರಗಳನ್ನು ವಶಪಡಿಸಿಕೊಂಡು ಸ್ಥಳೀಯ ನಿವಾಸಿಗಳೊಡನೆ ಕಲೆತು ವಿವಾಹ ಸಂಪರ್ಕ ಬೆಳೆಸುತ್ತಿದ್ದರು. ಲ್ಯಾಟಿನ್ ಭಾಷೆಯನ್ನೂ ಇಂತಹ ಜನ ಕಲಿಯುತ್ತಿದ್ದರು. ಆದರೆ ಆದರ ಉಚ್ಚಾರಣೆ ಬದಲಾಗುತ್ತಿತ್ತು. ಆದರೆ ರೋಮಿನ ಪ್ರಾಂತ್ಯವಾಗಿದ್ದ ಬ್ರಿಟನ್ನನ್ನು ಗೆದ್ದುಕೊಂಡ ಜೂಟರು, ಆಂಗ್ಲರು ಮತ್ತು ಸ್ಯಾಕ್ಸನ್ನರು ಒಕ್ಕಲುತನ ಮಾಡುವವರಾಗಿದ್ದು ಅವರಿಗೆ ಪಟ್ಟಣಗಳು ಬೇಕೆನಿಸಲಿಲ್ಲ. ದಕ್ಷಿಣ ಬ್ರಿಟನ್ನಿನಲ್ಲಿ ವಾಸವಾಗಿದ್ದ ರೋಮನೀಕರಣ ಹೊಂದಿದ್ದ ಜನತೆಯನ್ನು ಇವರು ಸಂಪೂರ್ಣವಾಗಿ ತೊಡೆದು ಹಾಕಿದಂತೆ ತೋರುತ್ತದೆ. ಲ್ಯಾಟಿನ್ ಭಾಷೆಯ ಬದಲು ತಮ್ಮದೇ ಆದ ಟ್ಯೂಟಾನಿಕ್ ಜಾತಿಯ ಭಾಷೆಗಳನ್ನು ಬಳಕೆಗೆ ತಂದರು. ಇವುಗಳೇ ಮುಂದೆ ಇಂಗ್ಲಿಷ್ ಭಾಷೆಯಾದುವು.

ಹದಗೆಟ್ಟು ಹೋಗಿದ್ದ ರೋಂ ಸಾಮ್ರಾಜ್ಯದಲ್ಲಿ ಕೊಳ್ಳೆ ಹೊಡೆಯುವುದಕ್ಕಾಗಿಯೋ ನೆಲಸಲು ಚೆನ್ನಾಗಿರುವ ಸ್ಥಳ ಹುಡುಕಿಕೊಂಡು ಅನೇಕ ಜರ್ಮನ್ ಮತ್ತು ಸ್ಲಾವೊನಿಕ್ ಪಂಗಡಗಳ ಜನ ಅಲ್ಲಿಂದಿಲ್ಲಿಗೆ ಚಲಿಸುತ್ತಲೇ ಇದ್ದರು. ಈ ಎಲ್ಲಾ ಚಲನವಲನಗಳನ್ನು ವರ್ಣಿಸಲು ಇಲ್ಲಿ ಸ್ಥಳ ಸಾಲದು. ಇಂತಹ ತಂಡಗಳಲ್ಲಿ ಒಂದಕ್ಕೆ ಸೇರಿದ ವಾಂಡಲರನ್ನು ದೃಷ್ಟಾಂತವಾಗಿದ್ದುಕೊಂಡು ನೋಡೋಣ. ಚರಿತ್ರೆಯಲ್ಲಿ ಮೊಟ್ಟ ಮೊದಲು ಇವರು ಕಾಣಿಸಿಕೊಳ್ಳುವುದು ಪೂರ್ವ ಜರ್ಮನಿಯಲ್ಲಿ. ಮುಂಚೆ ಹೇಳಿದಂತೆ ಇವರು ಆದರ ನಂತರ ಪ್ಯಾನ್ನೋನಿಯದಲ್ಲಿ ನೆಲೆಸಿದರು. ಅಲ್ಲಿಂದ ಕ್ರಿ.ಶ. 425 ರ ಹೊತ್ತಿಗೆ ನಡುವೆ ಇರುವ ಪ್ರಾಂತ್ಯಗಳನ್ನು ಹಾದು ಸ್ಪೇನಿಗೆ ಹೋದರು. ಸ್ಪೇನಿನಲ್ಲಿ ಆಗಲೇ ದಕ್ಷಿಣ ರಷ್ಯದ ವಿಸಿಗಾಥರು ಮತ್ತಿತರ ಜರ್ಮನ್ ಕುಲಗಳ ಜನರು ನೆಲೆಸಿ ತಮ್ಮದೇ ದೊರೆಗಳನ್ನು ದಂಡನಾಯಕರನ್ನೂ ನೇಮಿಸುತ್ತಿದ್ದರು. ಸ್ಪೇನಿನಿಂದ ವ್ಯಾಂಡಲರು ಕ್ರಿ.ಶ. 429ರಲ್ಲಿ ಗೆನ್ಸೆರಿಕನ ನೇತೃತ್ವದಲ್ಲಿ ಉತ್ತರ ಆಫ್ರಿಕಕ್ಕೆ ಹೋಗಿ ಕ್ರಿ. ಶ. 439ರಲ್ಲಿ ಕಾರ್ಥೇಜನ್ನು ವಶಪಡಿಸಿಕೊಂಡು ಒಂದು ನೌಕಾದಳವನ್ನು ಕಟ್ಟಿದರು. ಹೀಗೆ ಇವರು ಸಮುದ್ರ ಮಾರ್ಗವನ್ನು ಸ್ವಾಧೀನ ಮಾಡಿಕೊಂಡರು. ಇದಕ್ಕೆ ಅರ್ಧ ಶತಮಾನಕ್ಕೆ ಹಿಂದೆ ಅಲ್ಲಾರಿಕನು ರೋಮನ್ನು ವಶಪಡಿಸಿಕೊಂಡು ಚೆನ್ನಾಗಿ ಲೂಟಿ ಮಾಡಿದ್ದನಷ್ಟೆ. ಆದರಿಂದ ಇನ್ನೂ ರೋಮ್ ಚೇತರಿಸಿಕೊಂಡಿರಲಿಲ್ಲ. ಈಗ ವ್ಯಾಂಡಲರು ಅದನ್ನು ತಿರುಗಿ ಸೋಲಿಸಿ ಕೊಳ್ಳೆ ಹೊಡೆದರು. ಸಿಸಿಲಿ, ಕಾರ್ಸಿಕ, ಸಾರ್ಡಿನಿಯ, ಪಶ್ಚಿಮ ಮೆಡಿಟರೇನಿಯನ್ನಿನ ಇನ್ನೂ ಅನೇಕ ದ್ವೀಪಗಳು ಇವರ ವಶವಾದುವು. ಏಳುನೂರು ವರ್ಷಗಳ ಹಿಂದೆ ಕಟ್ಟಿದ್ದ ಸಮುದ್ರಸಾಮ್ರಾಜ್ಯವನ್ನು ಇವರು ಕಟ್ಟಿದ್ದ ರಾಜ್ಯ ಬಹುಮಾಗಿ ಹೋಲುತ್ತಿತ್ತು. ಕ್ರಿ.ಶ. 477 ರ ಹೊತ್ತಿಗೆ ಇವರ ಪ್ರಾಬಲ್ಯ ಪರಾಕಾಷ್ಠೆಯನ್ನು ಮುಟ್ಟಿತು. ಈ ಎಲ್ಲಾ ಪ್ರದೇಶಗಳನ್ನು ಗೆದ್ದು ಹಿಡಿಟ್ಟುಕೊಂಡಿದ್ದವರು ಕೇವಲ ಕೆಲವು ಜನಮಾತ್ರ. ಮುಂದಿನ ಶತಮಾನದಲ್ಲಿ ಒಂದನೆಯ ಜಸ್ಟಿನಿಯನ್ನನ ಕಾಲದಲ್ಲಿ ಕಾನ್‌ಸ್ಟಂಟಿನೋಪಲಿನ ಸಾಮ್ರಾಜ್ಯ ಇದ್ದಕ್ಕಿದ್ದಂತೆ ತಾತ್ಕಾಲಿಕ ಚೈತನ್ಯಭರಿತವಾಗಿ ಹೆಚ್ಚು ಕಡಿಮೆ ಈ ಎಲ್ಲಾ ರಾಜ್ಯಗಳನ್ನೂ ವ್ಯಾಂಡಲರಿಂದ ತಿರುಗಿ ಗೆದ್ದುಕೊಂಡಿತು.

ಅಂದಿನ ಅನೇಕ ಸಾಹಸಭರಿತ ವೃತ್ತಾಂತಗಳಲ್ಲಿ ವ್ಯಾಂಡಲರ ಕಥೆಯೂ ಒಂದು ಆದರೆ ಈಗ ಇಂತಹ ವಿನಾಶಕಾರಿ ಜನರನ್ನೆಲ್ಲಾ ಜಯಿಸಲು ಅತ್ಯಂತ ದುಸ್ಸಾಧ್ಯರೂ ಯೂರೋಪಿಯನ್ನರಿಗೆ ಸಂಬಂಧಪಡದವರೂ ಆದ ಮಂಗೋಲಿಯದ ಹಳದಿ ಬಣ್ಣದ ಹೂಣರು ಅಥವಾ ಟಾಟರರು ಯೂರೋಪನ್ನು ಪ್ರವೇಶಿಸಿದರು. ಇಷ್ಟು ಚಟುವಟಿಕೆಯಾದ ಕಾರ್ಯದಕ್ಷ ಜನರನ್ನು ಪಾಶ್ಚಿಮಾತ್ಯ ಪ್ರಪಂಚ ಇದಕ್ಕೆ ಮುಂಚೆ ನೋಡಿಯೇ ಇರಲಿಲ್ಲ.

(ಮುಂದುವರೆಯುತ್ತದೆ)

## ಅಡಿಟಿಪ್ಪಣಿ

26 ಮಾರ್ಕನ ಸುವಾರ್ತೆ. 10

'ಅನಂತವೆಂಬ ಹಿನ್ನೆಲೆಯಲ್ಲಿ, ಸೂರ್ಯಚಂದ್ರರ ಬೆಳಕಿನಲ್ಲಿ ಕಾಲವೆಂಬ ರಂಗ ಮಂಟಪದ ಮೇಲೆ ಆಡಿದ ನಾಟಕ ಇತಿಹಾಸ'

'ಇತಿಹಾಸ ಒಂದು ಸಾಮಾಜಿಕ ಪ್ರವೃತ್ತಿ. ಮಾನವ ಸಮಾಜದ ವಿಕಾಸ ಹೇಗೆ ತುಂಬಾ ಸರಳ ರೀತಿಯಿಂದ ಪ್ರಾರಂಭವಾಗಿ ಸಂಕೀರ್ಣವಾದ ಅನೇಕತೆಯಲ್ಲಿ ಕೊನೆಗೊಂಡಿವೆ ಎಂಬ ಸ್ಪಷ್ಟವಾದ ಚಿತ್ರ ನಮಗೆ ಇಲ್ಲಿ ದೊರೆಯುತ್ತದೆ.'

ಇತಿಹಾಸ ಯಾವ ತೀರ್ಪನ್ನೂ ಕೊಡುವುದಿಲ್ಲ ; ಮೇಲಾಗಿ ನೀಡಲು ಅದರಲ್ಲಿ ಯಾವ ತೀರ್ಪೂ ಇಲ್ಲ, ಮಾನವನ ಪ್ರತಿಯೊಂದು ಪೀಳಿಗೆಯೂ ತಪ್ಪದೇ ಅದ ಒಂದು ದೃಷ್ಟಿಕೋನವನ್ನು ಹೊಂದಿರುತ್ತದೆ. ಹಿಂದಿನ ಪೀಳಿಗೆಯೊಡನೆ ಅದರ ಪ್ರತಿಕ್ರಿಯೆಯು ಬೇರೆ ಬೇರೆಯಾಗಿರುತ್ತದೆ. ಈ ಕಾರಣದಿಂದ ಕಾಲವನ್ನು ಅಧ್ಯಯನಕ್ಕೆ ಆಯ್ದು ಕೊಳ್ಳುವಲ್ಲಿ ಮತ್ತು ಅದರ ವಿವರಣೆಯಲ್ಲಿ ವಿಭಿನ್ನತೆ ಕಂಡುಬರುತ್ತದೆ. ಅರ್ನಾಲ್ಡ್ ಜೆ. ಟಾಯ್ನ್‌ಬಿ ತಿಳಿಸಿರುವಂತೆ "ಇದು ಪ್ರತಿ ಮಾನವನಿಗೂ ಮತ್ತು ದೇವರಿಗೂ ನಡೆದ ಹೋರಾಟಗಳ ಶೃಂಖಲೆ. ಈ ಹೋರಾಟದಲ್ಲಿ ಪ್ರತಿಯೊಬ್ಬ ಪುರುಷ ಅಥವ ಮಹಿಳೆ ಅಥವ ಮಗು ದೇವರ ಸವಾಲನ್ನೆದುರಿಸಿ ದೇವ ಸಂಕಲ್ಪವನ್ನು ಆಹ್ವಾನಿಸುವ ಅಥವ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಪಡೆದಿದ್ದಾರೆ."................

ಕಾಲಗರ್ಭದಲ್ಲಿ ಹುದುಗಿಹೋದ ಅಪೂರ್ವ ಘಟನೆಗಳನ್ನು ಹುಡುಕಿ ಸಂಶೋಧನೆಯ ಕುಲುಮೆಯಲ್ಲಿ ಸರ್ವವಿಧದಲ್ಲಿಯೂ ವೈಜ್ಞಾನಿಕ ರೀತಿಯಲ್ಲಿ ಶೋಧಿಸಿ, ಅಸತ್ಯವನ್ನು ತುಳಿದು, ಸತ್ಯವನ್ನು ಸಾರುವುದೇ ಇತಿಹಾಸ"

ಎಚ್. ವಿ. ಶ್ರೀನಿವಾಸಮೂರ್ತಿ

# ವಸ್ತುಕೋಶ

## ಭಗ್ನಗ್ರಾಮ ಕುಳಿಲಂಗೇಶ್ವರ

ಕರ್ನಾಟಕದ ಗ್ರಾಮಗ್ರಾಮಕ್ಕೂ ಒಂದು ಚರಿತ್ರೆಯಿದೆ. ಯಾವುದೇ ಪ್ರಾಚೀನ ಗ್ರಾಮಕ್ಕೆ ಹೋದರೂ ಅಲ್ಲಿನ ಭಗ್ನ, ಕ್ವಚಿದ್ ಉತ್ತಮ, ಅವಶೇಷಗಳು ಇತಿಹಾಸದ ಪುಟಗಳನ್ನು ನಮ್ಮೆದುರು ತೆರೆದಿಡುತ್ತವೆ. 28–11–85ರಂದು ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಹಳ್ಳಿ ಕುಳಿಗೇರಿಗೆ ಹೋಗಿದ್ದೆ. ಕುಳಿಗೇರಿ ಎಷ್ಟು ಪ್ರಾಚೀನ ಎಂದು ಯಾರಾದರೂ ಪ್ರಶ್ನಿಸಬಹುದು. ಪ್ರಶ್ನೆಯಷ್ಟು ಉತ್ತರ ಸುಲಭವಾದುದಲ್ಲ. ಸದ್ಯ ಮೇಲ್ಪದಿಯಲ್ಲಿ ದೊರೆಯುವ (surface level) ಅವಶೇಷಗಳನ್ನು ನಿಮ್ಮ ಮುಂದೆ ಇಡುವೆ.

ಗುಲ್ಬರ್ಗ–ಸಿಂದಗಿ ಮಾರ್ಗದಲ್ಲಿ ಮಳ್ಳಿಗ್ರಾಮದ ಬಳಿ ಇಳಿದು ನಾಗರಹಳ್ಳಿ ಕ್ರಾಸ್ ಮೂಲಕ ಕುಳಿಗೇರಿಗೆ ರಸ್ತೆ. ಬಸ್ ಏನೋ ಉಂಟು. ಆದರೆ ಸಮಯಕ್ಕೆ ದೊರೆಯುವುದು ಸ್ವಲ್ಪ ಅಪರೂಪ! ಮಳ್ಳಿಯಿಂದ ಸುಮಾರು ಐದು–ಆರು ಕಿಲೋಮೀಟರ್ ಅಂತರದಲ್ಲಿ ಕುಳಿಗೇರಿ ಊರು. ಊರ ಅಗಸೆಗಿಂತ ಮುಂಚಿತವೇ ಶಾಲೆ. ಏಳನೆಯ ಕ್ಲಾಸಿನವರೆಗೆ ಇದರಲ್ಲಿ ಅಧ್ಯಯನ. ಆಯಾ ಊರ ಬಗ್ಗೆ ಮೊದಲು ಆ ಊರಿನ ಶಾಲೆಯ ಶಿಕ್ಷಕರೇ ಕಿಂಚಿತ್ ತಿಳಿಸುವ, ಹೊಸದಾಗಿ ಬಂದವರಿಗೆ ಸ್ಥಳಗಳನ್ನು ತೋರಿಸುವ ಗೈಡುಗಳು. ತಮ್ಮ ಸ್ವಲ್ಪ ಸಂಬಳದಲ್ಲಿಯೆ ಇನಿತು ಖರ್ಚು ಮಾಡುವ ಉದಾರಿಗಳು. ನನಗೂ ಅವರ ಸಹಾಯ ದೊರೆಯಿತು. ಅವಲೋಕನಕ್ಕೆ ಕರೆದುಕೊಂಡು ಹೊರಟರು– ಬಸ್ಸಣ್ಣ ದೇವೂರ್.

1. ಊರ ಮುಂದೆ ಹನುಮಂತದೇವರ ಗುಡಿ. ಚೌಕಾಕಾರದ ಕಟ್ಟಡ. ಒಳಗಿನ ಕಂಬಗಳು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಮಾಡಿದವು. ನಿಂತ ಆಂಜನೇಯನ ಮೂರ್ತಿಯೂ ಅದೇ ಕಾಲದ್ದು. ಕುಸುರಿಗೆಲಸ ಹೆಚ್ಚಿಲ್ಲದಿದ್ದರೂ ಕಂಬಗಳ ಆಕಾರವೇ ಆಕರ್ಷಿಸುತ್ತದೆ ಈ ದೇವಸ್ಥಾನದಲ್ಲಿ.

2. ನಾಗಲಿಂಗೇಶ್ವರ ದೇವಾಲಯ, ದ್ವಾರದಲ್ಲಿಯೆ ಗೋಡೆಯಲ್ಲಿ ಶಾಸನ. ಮೊದಲು ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲನ ಶಾಸನ, ಮಧ್ಯದಲ್ಲಿ ಈಶ್ವರ ಮೂರ್ತಿ ಅನಂತರ ಸೇಉಣ ಚಕ್ರವರ್ತಿ ಮಹದೇವನ ಕಾಲದ ಶಾಸನ. ಇದರ ಕಾಲ ಶಾ.ಶ. 1187, ಕ್ರೋಧನ ಸಂವತ್ಸರ ಅರ್ಥಾತ್ ಕ್ರಿ.ಶ. 1265ರ ಕ್ರೋಧನ. ನಾಗಲಿಂಗೇಶ್ವರ ದೇವಾಲಯದ ಅಂಗರಂಗಭೋಗಕ್ಕೆ ಬಿಟ್ಟ ದತ್ತಿ ಶಾಸನ. ಈಗಲೂ ಈ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯ ನಡೆಯುತ್ತಿದೆ. ಈ ದೇವಾಲಯ ತುಂಬ ಸುಂದರ

ವಾಗಿದೆ. ರಂಗಮಂಟಪ; ಶುಕನಾಶಿ ಹಾಗೂ ಗರ್ಭಗುಡಿ ಇದರ ಯೋಜನೆ. ಹೊರ ಭಿತ್ತಿ, ಗರ್ಭಗುಡಿಯ ನಕ್ಷತ್ರಾಕಾರ,—ಇವುಗಳಲ್ಲಿಯ ಕುಸುರಿಗೆಲಸ ನೋಡುವ ಪ್ರೇಕ್ಷಕನನ್ನು ಕಿಂಚಿತ್ ಕಾಲ ಸೆರೆಹಿಡಿದು ನಿಲ್ಲಿಸುತ್ತವೆ. ಸುತ್ತಣ ವೃಕ್ಷರಾಜಿ ನೆರಳಿತ್ತು ಕಾಪಾಡುತ್ತವೆ. ಅದರ ಆವಾರದಲ್ಲಿಯೇ ಒಂದು ಮನೆ; ಕುರಿ, ಕೋಳಿ, ಕೃಷಿ ಮನೆಯವರ ಚಟುವಟಿಕೆಯ ಹರಹು. ಈ ಮನೆಯ ಪಕ್ಕದಲ್ಲಿ ಎಲ್ಲಿಂದಲೊ ಸುಮಾರು ವರ್ಷಗಳ ಹಿಂದೆ ೬-೭ ಶಾಸನಗಳನ್ನು ತಂದಿಟ್ಟಿದ್ದಾರೆ. ಅವುಗಳಲ್ಲಿ ನಾಲ್ಕು ನಿಷಧಿ ಶಾಸನಗಳು, ಮಿಕ್ಕ ಮೂರು ದತ್ತಿ ಶಾಸನಗಳು. ಇವುಗಳಲ್ಲಿ ಒಂದು ದೊಡ್ಡ ಶಿಲಾಶಾಸನ: ಚಾಲುಕ್ಯ ವಿಕ್ರಮನ 13ನೆಯ ವರ್ಷದ ಶಿಲಾಶಾಸನವಿದು. ಇದರ ಅವಸ್ಥೆ ಮಾತ್ರ ಕಣ್ಣೀರು ಸುರಿಸುವಂತಹ ಸ್ವರೂಪದ್ದು. ಸುಮಾರು 6 ಅಡಿ ಎತ್ತರ 2 ಅಡಿ ಅಗಲ ಆಕಾರದ ಸೇದೀಕಲ್ಲಿನ ಈ ಕಲ್ಲಚಪ್ಪಡಿ ಕನ್ನಡ ಸಾಹಿತ್ಯದ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ನೋಡುವ ಕಣ್ಣು, ಮಿಡಿಯುವ ಹೃದಯ ಬೇಕು.

ದಿವಂಗತ ಎಚ್. ಶೇಷಯ್ಯಂಗಾರರು ಕರ್ಣಪಾರ್ಯನ ನೇಮಿನಾಥ ಪುರಾಣಕ್ಕೆ (1940ರ ಆವೃತ್ತಿ) ಉಪೋದ್ಘಾತ (Introduction) ಬರೆಯುತ್ತ ಗ್ರಂಥದ ಪುಟ xviiiರಲ್ಲಿ ಮದ್ರಾಸ್ ಪ್ರಾಚ್ಯಕೋಶಾಗಾರದಲ್ಲಿರುವ ಲೋಕಲ್ ರಿಕಾರ್ಡ್ಸ್ ಸಂಪುಟ-26, ಪುಟ 521 ರಿಂದ ಉಲ್ಲೇಖವೊಂದನ್ನು ಅಡಿ ಟಿಪ್ಪಣಿಯಾಗಿ ಉಲ್ಲೇಖಿಸಿದ್ದಾರೆ. ಅದು ಒಂದು ಶಾಸನದ ಭಾಗವಾಗಿದೆ. ಒಕ್ಕಣೆ ಹೀಗಿದೆ:

. . . . . . . . . . ಶ್ರೀಮತ್ರಿಭುವನಮಲ್ಲ ದೇವರಣುಗಿಯರಪ್ಪ ಶ್ರೀಮನ್ಮಾಳಲ ದೇವಿಯರು ಶಕವರ್ಷ ೧೦೨೭ ಪಾರ್ಥಿವ ಸಂವತ್ಸರದ ಫಾಲ್ಗುಣ ಪೂರ್ಣಿಮಾ ಆದಿವಾರ ಪರ್ವನಿಮಿತ್ತ ಬಾ . . . . . . . . . . ಸರೋವರ . . . . . ಶ್ರೀಮನ್ಮಾಳಲ ದೇವಿಯರು ತಮ್ಮಾಳ್ಕೆ ಭತ್ತಗ್ರಾಮ ಕುಣಿಲಂಗೆಱೆಯ ಹಂಪಕವಿಯ ಮಗ ದೇವಣ್ಣನ ವಕ್ಕರಣೆಯ ಧರ್ಮ್ಮಕ್ಕೆ ಧಾರಾಪೂರ್ವ್ವಕ . . . . . . . . . ಇತ್ಯಾದಿ.

ಕನ್ನಡ ಸಾಹಿತ್ಯಚರಿತ್ರೆಯ ಅಭ್ಯಾಸಿಗಳಿಗೆ ಇಲ್ಲೊಂದು ಅದ್ಭುತ ಸಂಗತಿ ಕಾದಿದೆ. ಅದೆಂದರೆ ಶಾ.ಶ. 1027, ಪಾರ್ಥಿವ, ಫಾಲ್ಗುಣ ಪೂರ್ಣಿಮಾ ಆದಿವಾರ (ಕ್ರಿ.ಶ. 1106, ಫೆಬ್ರವರಿ 18)ದಂದು ಹಂಪಕವಿಯ ಮಗ ದೇವಣ್ಣನು ಇದ್ದುದು. ಹಂಪಕವಿ < ಪಂಪಕವಿ ಶಬ್ದದ ಇನ್ನೊಂದು ರೂಪ. ಹಾಗಾದರೆ ಈ ಪಂಪಕವಿ ಯಾರು? ಮಲ್ಲಿನಾಥಪುರಾಣವನ್ನು ಬರೆದ ನಾಗಚಂದ್ರ ವಿಜಯಪುರದಲ್ಲಿ ಸುಂದರವಾದ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿದನು. ಇವನು ಕ್ರಿ.ಶ. 1080ರ ಎಡಬಲದಲ್ಲಿ ಇದ್ದನು ಮತ್ತು ಇವನನ್ನೂ ಪಂಪ, ಹಂಪ ಎಂದು ಮುಂತಾಗಿ ಜನ ಕರೆಯುತ್ತಿದ್ದರು. ಈತ ತನ್ನನ್ನು 'ಅಭಿನವ ಪಂಪ' ಎಂದೇ ಹೇಳಿಕೊಂಡಿದ್ದಾನೆ. ವಿಜಯಪುರಕ್ಕೆ ಸುಮಾರು ಮೂವತ್ತೈದು ಮೈಲಿಗಳ ಅಂತರದಲ್ಲಿರುವ ಈಗ 'ಕುಳಿಗೇರಿ' ಎಂದು ಕರೆಯಲ್ಪಡುವ ಆಗಿನ ಕಾಲದ 'ಭತ್ತಗ್ರಾಮ ಕುಣಿಲಂಗೆಱೆ' ಊರೇ ನಾಗಚಂದ್ರನ ಊರೆಂದರೆ

ತಪ್ಪಾಗುವುದಿಲ್ಲ. ಆತ ಹಾಗೂ ಆತನ ಮಗ ದೇವಣ್ಣ ಚಾಳುಕ್ಯರ ಆಡಳಿತದಲ್ಲಿ ಅಧಿಕಾರಿಗಳಾಗಿ–ಪ್ರಜೆಗಳಾಗಿ–ಆದರೂ ಬದುಕಿದ್ದರೆಂದು ಹೇಳಿದರೆ ಏನೇನೂ ತಪ್ಪಿಲ್ಲ.

ಈಗಿನ ಕುಳಿಗೇರಿಯನ್ನು 'ಭತ್ತಗ್ರಾಮ ಕುಣಿಲಂಗೆರೆ' ಎಂದು ಮೇಲೆ ಸೂಚಿಸಿದ ಶಾಸನವಲ್ಲದೆ ಇಲ್ಲಿಯೆ ಇರುವ ಇನ್ನೂ ಕೆಲವು ಶಾಸನಗಳಲ್ಲಿಯೂ ಸ್ಪಷ್ಟವಾಗಿ ಬರೆದಿರುವುದನ್ನು ಯಾರಾದರೂ ಕಾಣಬಹುದು. ಈ ಭತ್ತಗ್ರಾಮ ಕುಣಿಲಂಗರೆ > ಕುಳಿಗೆರೆ > ಕುಳಿಗೆರಿ > ಕುಳಿಗೇರಿ ಆಗಿವೆ. ಈಗಾಗಲೇ ನಾಗಚಂದ್ರನು ಕ್ರಿ.ಶ. ೧೧ನೆಯ ಶತಮಾನದ ಉತ್ತರಾರ್ಧ ಕಾಲದಲ್ಲಿ ಬದುಕಿದ್ದನೆಂಬ ಸಂಗತಿಯನ್ನು ಡಾ|| ಡಿ. ವಿಜಯಾ, ಡಾ|| ಎಂ. ಎಂ. ಕಲ್ಬುರ್ಗಿ, ಸೀತಾರಾಮ ಜಾಗೀರ್‌ದಾರ್ ಮುಂತಾಗಿ ಹಲವರು ತೀರ್ಮಾನಿಸಿದ್ದಾರೆ. ಆ ತೀರ್ಮಾನಕ್ಕೆ ಈ ಶಾಸನವು ಇನ್ನಷ್ಟು ಪುಷ್ಟಿಯನ್ನು ಕೊಡುತ್ತದಲ್ಲದೆ ಗ್ರಾಮ ಇತ್ಯಾದಿಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುತ್ತದೆ. ಇದುವರೆಗೆ ನಾಗಚಂದ್ರನ ಊರು ವಿಜಾಪುರಗಳ ಸುಳಿಯಲ್ಲಿ ಸಿಕ್ಕು ಬಿದ್ದುದನ್ನು ಇನ್ನು ಮುಂದೆ ಕೈಬಿಟ್ಟು ಭತ್ತಗ್ರಾಮಕುಣಿಲಂಗೆರೆ ಆತನ ಊರೆಂದು ನಿಶ್ಚಿತವಾಗಿ ಹೇಳಬಹುದು. ನಾಗಚಂದ್ರ, ಆತನ ಮಕ್ಕಳು, ಮೊಮ್ಮಕ್ಕಳು ಮುಂತಾದವರ ಬಗ್ಗೆ ವಿವರಗಳು ನನ್ನ ಬೇರೆ ಲೇಖನಗಳಲ್ಲಿ ಬಂದಿದೆ. ಅವು ಮಾಸಿಕ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಮುಂತಾದುವುಗಳಲ್ಲಿ ಪ್ರಕಟಗೊಂಡಿವೆ.

3. ನಾಯಕೋಡಿಯವರ ಓಣಿಯಲ್ಲಿ ಒಂದು ಪಾಳುದೇಗುಲ, ಆದರಲ್ಲಿ ಇಂದು ಪೂಜನೀಯ ಮೂರ್ತಿಗಳಲ್ಲಿ ಒಂದೂ, ಭಿನ್ನವಾಗಿಯೂ, ನಿಂತಿಲ್ಲ. ಒಳಕ್ಕೆ ಪ್ರವೇಶಿಸಿದ ಕೂಡಲೇ ಎಡಬದಿಯಲ್ಲಿ ವಿಷ್ಣುವಿನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದರೆಂದು ಗೊತ್ತಾಗುತ್ತದೆ. ಮಂಟಪದಲ್ಲಿಯ ಕೆತ್ತನೆ ಹಿರಣ್ಯಕಶ್ಯಪುವಿನ ವಧೆಗೈಯ್ಯುತ್ತಿರುವ ನೃಸಿಂಹನ ಮೂರ್ತಿ ಅತ್ಯಂತ ಅದ್ಭುತವಾಗಿದೆ. ಅದರ ಸೌಂದರ್ಯ ಮೂಕ ವಿಸ್ಮಿತನನ್ನಾಗಿಸುತ್ತದೆ—ಪ್ರೇಕ್ಷಕನನ್ನು! ಮೂಲತಃ ಅದೊಂದು ತ್ರೈಪುರುಷ ದೇವಾಲಯವಾಗಿರಬೇಕು. ಈಗಂತು ಒಂದೂ ಮೂರ್ತಿಯಿಲ್ಲ!! ಕಳ್ಳಕಾಕರ ಕೈಗೆ ಬಿದ್ದು ಹೋಗಿರಲೂ ಬಹುದು. ಈ ಹಾಳು ದೇವಾಲಯವನ್ನು ನೋಡಿ ಮುಂದಕ್ಕೆ ಹೇಲೀಕೇರಿಯುತ್ತ ಹೋದರೆ ಅಲ್ಲೊಂದು ಗೋಡೆಯ ಕೆಳಗೆ ಸಂದು, ಬಾಗಿ ನೋಡಿದರೆ ಕೆಳಗೆ ದೇವಾಲಯದ ಕಂಬಗಳು ಕಾಣುತ್ತವೆ. ಏನಿದೆಯೆಂದು ಪರೀಕ್ಷಿಸಬೇಕಾದರೆ ಉತ್ಖನನ ಅತ್ಯಗತ್ಯ.

4. ಅಲ್ಲಿಂದ ಮುಂದಕ್ಕೆ ಹೋದರೆ ಭೀಮಾಶಂಕರ ದೇವಾಲಯ. ಆ ಹಾಳು ದೇವಾಲಯದ ಮುಂದೆ ಒಂದು ಶಾಸನವಿದೆ. ಅದರಲ್ಲಿ ಭೀಮೇಶ್ವರ ದೇವರ ಉಲ್ಲೇಖವಿದೆ; ಆ ದೇವಸ್ಥಾನಕ್ಕೆ ಬಿಟ್ಟ ದತ್ತಿಗಳ ವಿವರವಿದೆ. ಇದು ಸೇದೀಕಲ್ಲ ಶಾಸನ. ದೇವಾಲಯವಾದರೊ ಕರಿಯ ಕಲ್ಲಿನಲ್ಲಿ ಕಟ್ಟಲ್ಪಟ್ಟಿದೆ. ರಾಷ್ಟ್ರಕೂಟರ ಕಾಲದ್ದೆಂದು ತೋರುತ್ತದೆ.

5. ಹಳ್ಳದ ಆಚೆಯ ದಂಡೆಯಲ್ಲಿ ಮೂರು ಬಾವಿಗಳ ಅವಶೇಷಗಳು ಈಗ ಕಣ್ಣೆದುರಿಗೆ ಕಾಣಿಸುತ್ತವೆ. ಮೂರೂ ಚಾಳುಕ್ಯರ ಕಾಲದ ಕಟ್ಟಡಗಳು. ಇವುಗಳು

ಏತದ ಬಾವಿಗಳಾಗಿದ್ದವೆಂದು ತೋರುತ್ತದೆ. ಒಂದು ಬಾವಿಯ ಬಳಿ ನಾಲ್ಕು ಮೂಲೆಗೂ ನಾಲ್ಕು ಸಣ್ಣ ಗುಡಿಗಳಿವೆ. ಈಗ ಹಾಳು ಬಿದ್ದಿರುವುದರಿಂದ ಅವುಗಳಲ್ಲಿ ಯಾವ ಯಾವ ದೇವತೆಗಳನ್ನು ಪ್ರತಿಷ್ಠಾಪಿಸಿದ್ದರೊ ಹೇಳಲು ಬರುವುದಿಲ್ಲ. ಒಂದು ಗಣಪತಿಯ ಮೂರ್ತಿ ಸಾಕಷ್ಟು ದೊಡ್ಡ ಗಾತ್ರದ್ದಾಗಿದ್ದು ಭಗ್ನಸ್ವರೂಪದಲ್ಲಿ ಬಿಸಿಲಿನಲ್ಲಿ ಕೂತಿದೆ. ಅದು ಪ್ರಾಚೀನ ಕಾಲದಲ್ಲಿ ಅಲ್ಲಿನ ಯಾವ ದೇವಸ್ಥಾನದಲ್ಲಿ ಇದ್ದಿತೊ ತಿಳಿಯದು. ಹಳೆಯಬೀಡಿನ ಬಳಿಯಲ್ಲಿಯ ಹುಲಿಕೆರೆಯಲ್ಲಿ ಹೊಯ್ಸಳರ ಕಾಲದ ಒಂದು ಬಾವಿಯಿದ್ದು ಇದರ ತಟದಲ್ಲೂ ಚಿಕ್ಕ ಚಿಕ್ಕ ದೇವಾಲಯಗಳಿವೆ. ಅವು ಪ್ರಾಯಃ ಅಷ್ಟದಿಕ್ಪಾಲಕರನ್ನು ಪ್ರತಿನಿಧಿಸುತ್ತಿರಬಹುದು. ಹಾಗೆಯೆ ಇಲ್ಲಿನ ದೇವಾಲಯಗಳು ಚತುರ್ದಿಶೆಯ ದೇವತೆಗಳನ್ನು ಸೂಚಿಸುತ್ತಿರಬಹುದು.

6. ಬೆಣ್ಣೆ ಬಸವೇಶ್ವರನಹೊಲ ಹಳ್ಳದ ಆಚೆಗಿದ್ದು ದೇವಸ್ಥಾನವು ಹಳ್ಳದ ಈಚೆಗಿದೆ. ಒಂದಾನೊಂದು ಕಾಲದಲ್ಲಿ ಅದು ದೊಡ್ಡ ದೇವಸ್ಥಾನವಾಗಿದ್ದಿತು. ಈಗ ಮತ್ತೆ ಹೊಸ ದೇವಸ್ಥಾನವನ್ನೇ ಕಟ್ಟುತ್ತಿದ್ದಾರೆ. ಹಳೆಯ ಕಟ್ಟಡದ ರೂಪರೇಷೆಗಳನ್ನು ಗುರುತಿಸಲು ಕಷ್ಟವಾಗಿದೆ. ಹಳೆಯ ಕಟ್ಟಡ ಕಲ್ಯಾಣ ಚಾಳುಕ್ಯರ ಕಾಲದ್ದೆಂಬುದು ವಾಸ್ತುಶೈಲಿಯಿಂದ ಸ್ಪಷ್ಟ.

7. ಹಳ್ಳದ ಈಚೆಗೆ ಕೂಡ ಊರಿಗೆ ಆನಿಕೊಂಡು ಹಲವು ದೊಡ್ಡ ದೊಡ್ಡ ಬಾವಿಗಳಿದ್ದವು. ಭಗ್ನಾವಶೇಷಗಳು ಇನ್ನೂ ಸಾಕ್ಷಿಯಾಗಿವೆ. ಇಂತಹ ಬಾವಿಯೊಂದರ ಬಳಿಯಿಂದಲೇ ಶಾಸನಗಳನ್ನು ಎತ್ತಿಕೊಂಡು ಹೋಗಿ ಈಗ ನಾಗಲಿಂಗೇಶ್ವರ ದೇವಾಲಯದ ಬಳಿ ಇಟ್ಟುದಾಗಿ ಕೆಲವರು ಹೇಳಿದರು. ಪ್ರಾಯಃ ಈ ಭಾಗದಲ್ಲೇ ಒಂದು ಜೈನ ಬಸದಿ ಪ್ರಾಚೀನ ಕಾಲದಲ್ಲಿ ಇದ್ದಿತು. ಸದ್ಯ ಅದರ ವಿಶೇಷ ಕುರುಹು ಮೇಲ್ನೋಟಕ್ಕೆ ಸಿಗುತ್ತಿಲ್ಲ. ನಾಗಲಿಂಗೇಶ್ವರ ದೇವಾಲಯದಲ್ಲಿ ತಂದಿಟ್ಟ ಶಾಸನಗಳಲ್ಲಿ ನಾಲ್ಕು ನಿಷಧಿ ಶಾಸನಗಳು ಇದ್ದು ಒಂದೊಮ್ಮೆ ಇಲ್ಲಿ ಜೈನಧರ್ಮ ಊರ್ಜಿತಾವಸ್ಥೆಯಲ್ಲೇ ಇದ್ದಿತೆಂದು ಹೇಳಬಹುದು. ಅವುಗಳನ್ನು ಈ ಭೂಪ್ರದೇಶದಿಂದ ಎತ್ತಿಕೊಂಡು ಹೋಗಿರುವುದರಿಂದ ಜೈನ ಬಸದಿ ಇತ್ಯಾದಿಗಳ ಕುರುಹು ಉತ್ಖನನಗೈದರೆ ಇಲ್ಲೇ ಎಲ್ಲಾದರೂ ದೊರೆಯಬಹುದು. ಇಲ್ಲಿದ್ದ ಬಾವಿಗಳು ಕುಡಿಯುವ ನೀರನ್ನು ಊರಿಗೆ ಒದಗಿಸುತ್ತಿರಬಹುದು. ಸದ್ಯಕ್ಕಂತೂ ಅವು ಹೂಣಿಹೋಗಿವೆ ಮತ್ತೆ ಕೆಲವಲ್ಲಿ ಹಂದಿಗಳು ಬಿದ್ದು ಹೊರಳಾಡುತ್ತವೆ. ಇಂತಹ ಬಾವಿಗಳಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಜನತಾ ಕ್ವಾರ್ಟರ್ಸ್ ಬಳಿಯಲ್ಲಿಯ ಬಾವಿಯೂ ಒಂದು.

8. ಮಳೆಪ್ಪಗೌಡರ ಹಳೆಮನೆಯ ಜಾಗದಲ್ಲಿ 'ಲಕ್ಷ್ಮಿ' ಎಂದು ಪೂಜಿಸಲ್ಪಡುವ ಶಾಸನವೊಂದಿದೆ. ಇದೂ ೧೧–೧೨ನೆಯ ಶತಮಾನದ್ದೇ ಆಗಿರಬಹುದು. ಅಕ್ಷರಗಳೆಲ್ಲ ಅಳಿಸಿಹೋಗಿವೆ.

"ಭತ್ತಗ್ರಾಮ ಕುಣಿಲುಂಗೆಜ್ಜಿತೆ" ಊರೇ ನಾಗಚಂದ್ರನ ಊರು ಎಂಬ ನಿರ್ಣಯವನ್ನು ಅಲ್ಲಿನ ಹೆಡ್‌ಮಾಸ್ಟರ್ ಕಿಶನ್‌ರಾವ್, ಕಲ್ಲಪ್ಪಮಾಸ್ತರರು ಹಾಗೂ ಬಸಣ್ಣ

ಮುಂತಾದವರೆಲ್ಲರೊಂದಿಗೆ ತಿಳಿಸಿದಾಗ ಕುತೂಹಲದಿಂದ ಆ ಶಾಸನಗಳನ್ನು ನೋಡಲು, ತಮ್ಮ ಊರಿನ ನಿಜವಾದ ಹೆಸರನ್ನು ತಿಳಿದುಕೊಳ್ಳಲು, ಮತ್ತೊಮ್ಮೆ ಶಾಸನಗಳತ್ತ ಬಂದರು "ಕುಣಿಲಂಗೆಱೆ" "ಭತ್ತಗ್ರಾಮ ಕುಣಿಲಂಗೆಱೆ" ಇತ್ಯಾದಿ ಶಬ್ದ ಸಮೂಹಗಳನ್ನು ಕಣ್ಣಾರೆಕಂಡು ಸಂತಸಪಟ್ಟರು, ಶಾಸನಗಳನ್ನು ಇನ್ನು ಮುಂದೆ ಸಂರಕ್ಷಿಸುವುದಾಗಿ ತಿಳಿಸಿದರು. ಶಾಸನ ಪಾಠಗಳು ದೊಡ್ಡದೊಡ್ಡವಾಗಿರುವುದರಿಂದ ಲೇಖನ ರೂಪದಲ್ಲಿ ಅವನ್ನು ಬೇರೆಡೆ ಪ್ರಕಟಿಸಲಾಗುವುದು. ಕುಣಿಲಂಗೆಱೆ, ತ್ರಿಭುವನಮಲ್ಲ ೬ನೆಯ ವಿಕ್ರಮಾದಿತ್ಯನ ರಾಣಿಗೆ ಭತ್ತಗ್ರಾಮವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. 'ಕುಣಿಲಂಗೆಱೆ' ಕೆರಿಹೊಲ ಎಂಬ ಹೊಲವೆ ಎಂದು ಇತ್ತೀಚೆಗೆ ತಿಳಿದು ಬಂದಿತು. 'ಆನೆಮಡು' ಎಂಬ ಸ್ಥಳ ಇಲ್ಲಿ ರಾಜಮನೆತನ ಇತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಬಿಜಾಪುರ (ವಿಜಯಪುರ)ದೊಂದಿಗೇನೆ ಇಂದಿಗೂ ಎಲ್ಲ ವ್ಯವಹಾರವನ್ನು ಇಲ್ಲಿನ ಜನತೆ ಸಾಗಿಸುವುದು. ಚಾಳುಕ್ಯರ ಮನೆಯಲ್ಲಿ ಅಧಿಕಾರಿಯಾಗಿದ್ದ ನಾಗಚಂದ್ರ ಈ ಭತ್ತಗ್ರಾಮ ಕುಣಿಲಂಗೆಱೆಯಲ್ಲಿ ಇದ್ದನೆಂದರೆ ಆಚ್ಚರಿಪಡಬೇಕಾಗಿಲ್ಲ. ನಾಗಚಂದ್ರ ಈ ಊರಿನವನು ಎನ್ನುವುದು ಈಗ ಆದಕ್ಕೊಂದು ಬಾವುಟ.

ಶೈಲಿಯಲ್ಲಿ ಮೃದುತ್ವ ಲಾಲಿತ್ಯ ಮಾಧುರ್ಯಗಳನ್ನು ಅನುಭವಿಸಿ ಆನಂದಪಡಬೇಕಾದರೆ ನಾಗಚಂದ್ರನ ಕಾವ್ಯಾರಾಮದಲ್ಲಿ ಒಂದು ಸಲ ನಡೆದು ನೋಡಬೇಕು. ಇತರ ಕವಿಗಳಲ್ಲಿ ಈ ಗುಣಗಳಿಲ್ಲವೆಂದಲ್ಲ. ರೇಷ್ಮೆಯ ಸೀರೆಯ ಮೇಲೆ ಅಲ್ಲೊಂದು ಇಲ್ಲೊಂದು ಇರುವ ಜರತಾರಿ ಹೂಗಳಂತೆ ಇವು ಅವರ ಕಾವ್ಯಗಳಲ್ಲಿ ಕಂಗೊಳಿಸುತ್ತಿದ್ದರೂ ಮಧುಧಾರೆಯಂತೆ ನಿರಂತರವಾದ ನಾದಮಾಧುರ್ಯವು ಮೊದಲಿಂದ ತುದಿಯವರೆಗೂ ಕಂಡು ಬರುತ್ತಿರುವುದು ಬಹುಮಟ್ಟಿಗೆ ನಾಗಚಂದ್ರನ ಕಾವ್ಯಗಳಲ್ಲಿ ಮಾತ್ರ.

— ಪ್ರೊ. ಡಿ. ಎಲ್. ಎನ್ : ಪಂಪರಾಮಾಯಣ ಸಂಗ್ರಹ, ಪೀಠಿಕೆ–63

ಶ್ರೀಯುಂ ವಿತರಣದೊಳ್, ವಾಕ್  
ಶ್ರೀಯಂ ರಾಜ್ಯನ್ಯವೃತ್ತಿಯೊಳ್, ವಿಮಲಯಶ  
ಶ್ರೀಯಂ ಜಿನಪ್ರವಚನ  
ಶ್ರೀಯದೊಳತಿಶಯಿಸಿ ನೆಗಟ್ದನಭಿನವಪಂಪಂ ||

—ಪಂಪರಾಮಾಯಣ, ಆ. 2–1

## ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

# ಮಾನವಿಕ ಕರ್ಣಾಟಕ

# ವಿಜ್ಞಾನ ಕರ್ಣಾಟಕ

# ಪ್ರಬುದ್ಧ ಕರ್ಣಾಟಕ

**ವಾರ್ಷಿಕ ಚಂದಾ**

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

| | | |
|---|---|---|
| ವಿದ್ಯಾರ್ಥಿಗಳಿಗೆ | .... | ಐದು ರೂಪಾಯಿ |
| ಇತರರಿಗೆ | .... | ಹತ್ತು ರೂಪಾಯಿ |
| ಸಂಸ್ಥೆಗಳಿಗೆ | .... | ಹದಿನೈದು ರೂಪಾಯಿ |

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬